ಮಂಗಳವಾರ, ಅಕ್ಟೋಬರ್ 31, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 301 | ಪುಟ 16

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ: ವಾರದಲ್ಲಿ 70 ಗಂಟೆ ದುಡಿಮೆ

ಸಿಂಗೂರು: ಟಾಟಾಗೆ ₹766 ಕೋಟಿ ಪರಿಹಾರ 11

ಶಾಸಕರ ಅನರ್ಹತೆ ಇತ್ಯರ್ಥಕ್ಕೆ ಗಡುವು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,112 ▲	19,140 ▲	₹63,340 (ಬೆಂಗಳೂರು)	₹74,000 (ಬೆಂಗಳೂರು)	83.26 ▼

ಲೋಕಾಯುಕ್ತ ಕಾರ್ಯಾಚರಣೆ: 69 ಸ್ಥಳಗಳಲ್ಲಿ ಶೋಧ ● ₹14 ಲಕ್ಷಕ್ಕೂ ಹೆಚ್ಚು ನಗದು ವಶ

ಅಪಾರ ಆಸ್ತಿ, ಅಧಿಕಾರಿಗಳಿಗೆ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕೂ ಮೀರಿ ಆಸ್ತಿ ಸಂಪಾದಿಸಿದ್ದಾರೆಂಬ ದೂರಿನ ಮೇಲೆ ಸೋಮವಾರ ಬೆಳಿಗ್ಗೆಯೇ ಕಾರ್ಯಾಚರಣೆ ಆರಂಭಿಸಿದ ಲೋಕಾಯುಕ್ತ ಪೊಲೀಸರು, 17 ಅಧಿಕಾರಿಗಳು ಹೊಂದಿರುವ ಅಪಾರ ಪ್ರಮಾಣದ ಚಿನ್ನಾಭರಣ, ನಗದು ಹಾಗೂ ಆಸ್ತಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರು ನಗರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ 69 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ಶುರುವಿಟ್ಟ ಲೋಕಾಯುಕ್ತ ಪೊಲೀಸರಿಗೆ ಭಾರಿ ಅಚ್ಚರಿಯೇ ಕಾದಿತ್ತು. ದೊಡ್ಡ ಮೊತ್ತದ ನಗದು ವಶವಾದ ಮಾಹಿತಿ ಇಲ್ಲವಾದರೂ ಕೆಲವು ಅಧಿಕಾರಿಗಳು ಏಳೆಂಟು ನಿವೇಶನ, ಐಷಾರಾಮಿ ತೋಟದ ಮನೆಗಳನ್ನು ಹೊಂದಿರುವುದು ಪತ್ತೆಯಾಗಿದೆ.

4ನೇ ಪುಟ ನೋಡಿ

ಶೋಧಕ್ಕೆ ಒಳಗಾದ ಅಧಿಕಾರಿಗಳು

- **ಕೆ.ಬಿ. ಚಂದ್ರಪ್ಪ**, ಎಆರ್‌ಒ, ಹೆಗ್ಗನಹಳ್ಳಿ ಉಪವಿಭಾಗ, ದಾಸರಹಳ್ಳಿ ವಲಯ, ಬಿಬಿಎಂಪಿ
- **ಎಸ್.ಆರ್. ಶ್ರೀನಿವಾಸ್**, ಉಪ ನಿರ್ದೇಶಕ, ಬಾಯ್ಲರ್ಸ್ ಅಂಡ್ ಫ್ಯಾಕ್ಟರೀಸ್, ದಾವಣಗೆರೆ. ಮೈಸೂರು ಮತ್ತು ಶಿವಮೊಗ್ಗ ಉಸ್ತುವಾರಿ
- **ಎಂ.ಪಿ. ನಾಗೇಂದ್ರ ನಾಯ್ಕ**, ಡಿಸಿಎಫ್, ಚಿತ್ರದುರ್ಗ
- **ವಿ. ಕೃಷ್ಣಮೂರ್ತಿ**, ಸಹಾಯಕ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ
- **ಎಂ. ನಾಗೇಂದ್ರಪ್ಪ**, ಸಹಾಯಕ ಎಂಜಿನಿಯರ್, ಶಿರಾ, ತುಮಕೂರು
- **ಶರಣಪ್ಪ ಪಟ್ಟೇದ**, ಯೋಜನಾ ನಿರ್ದೇಶಕ, ನಿರ್ಮಿತಿ ಕೇಂದ್ರ, ಶಕ್ತಿನಗರ, ರಾಯಚೂರು
- **ಕೆ. ಮಂಜುನಾಥ್**, ಕಂದಾಯ ಅಧಿಕಾರಿ, ತಹಶೀಲ್ದಾರ್ ಕಚೇರಿ, ಬಳ್ಳಾರಿ
- **ಎಚ್. ರಾಜೇಶ್**, ಸಹಾಯಕ ಆಯುಕ್ತ, ವಾಣಿಜ್ಯ ತೆರಿಗೆ ಇಲಾಖೆ, ಉಡುಪಿ
- **ಎನ್.ಪಿ. ಬಾಲರಾಜು**, ಮುಖ್ಯ ಎಂಜಿನಿಯರ್, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು
- **ಟಿ.ಎಂ.ಶಶಿಕುಮಾರ್**, ಕಾರ್ಯಪಾಲಕ ಎಂಜಿನಿಯರ್, ನಗರ ಯೋಜನೆ, ಕೆಐಎಡಿಬಿ, ಬೆಂಗಳೂರು
- **ತಿಪ್ಪನಗೌಡ ಅನ್ನದಾನಿ**, ಕಾರ್ಯಪಾಲಕ ಎಂಜಿನಿಯರ್, ಕೆಬಿಜೆಎನ್‌ಎಲ್(ಹುದ್ದೆ ನಿರೀಕ್ಷೆಯಲ್ಲಿ)
- **ಬಸವರಾಜ**, ಆರ್‌ಎಫ್‌ಒ, ಬೀದರ್
- **ಅಪ್ಪಾಸಾಹೇಬ ಸಿದ್ಲಿಂಗ್**, ಜಂಟಿ ನಿರ್ದೇಶಕ, ನಗರ ಮತ್ತು ಗ್ರಾಮೀಣ ಯೋಜನಾ ಇಲಾಖೆ, ಕಲಬುರಗಿ
- **ಮಹದೇವ**, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಾಲ್ಲೂಕು ಪಂಚಾಯಿತಿ, ಕಲಬುರಗಿ
- **ಎಚ್.ಇ. ನಾರಾಯಣ**, ಕಿರಿಯ ಎಂಜಿನಿಯರ್, ಕೆಪಿಟಿಸಿಎಲ್, ಗೊರೂರು, ಹಾಸನ
- **ಪರಮೇಶ್ವರಪ್ಪ ಪೇಲನವರ**, ಆರ್‌ಎಫ್‌ಒ, ಹಾವೇರಿ
- **ಮಹಂತೇಶ್ ನ್ಯಾಮತಿ**, ಆರ್‌ಎಫ್‌ಒ, ಹಾವೇರಿ

ಯಾರ ಮನೆಯಲ್ಲಿ ಏನು ಸಿಕ್ಕಿತು

ನಾಗೇಂದ್ರ ನಾಯ್ಕ, ಡಿಸಿಎಫ್

₹ **2** ಲಕ್ಷ ನಗದು, **650** ಗ್ರಾಂ ಚಿನ್ನ ಹಾಗೂ **4** ಕೆ.ಜಿ. ಬೆಳ್ಳಿ ಆಭರಣ, **11** ನಿವೇಶನ, ಇನ್ನೋವಾ ಸೇರಿ ಎರಡು ಕಾರು

ವಿ.ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ

600 ಗ್ರಾಂ ಚಿನ್ನ, **2** ಕೆ.ಜಿ. ಬೆಳ್ಳಿ, ಎರಡು ಕಾರು ಹಾಗೂ **10** ನಿವೇಶನ

ಪರಮೇಶ್ವರಪ್ಪ ಪೇಲನವರ, ಆರ್‌ಎಫ್‌ಒ, ಹಾವೇರಿ

₹**6** ಲಕ್ಷ ನಗದು, **8** ಎಕರೆಗೂ ಹೆಚ್ಚು ಜಮೀನು. ₹**3** ಲಕ್ಷ ಮೌಲ್ಯದ ಪುಸ್ತಕಗಳು, **3** ಎಕರೆ ಜಮೀನಿನಲ್ಲಿ ಐಷಾರಾಮಿ ಸೌಲಭ್ಯವಿರುವ ಫಾರ್ಮ್‌ಹೌಸ್, ವಿದೇಶಿ ನಾಯಿಗಳು ಮತ್ತು **2** ಲೀಟರ್ ವಿದೇಶಿ ಮದ್ಯ.

ಮಹಾಂತೇಶ ನ್ಯಾಮತಿ, ಆರ್‌ಎಫ್‌ಒ, ಹಾವೇರಿ

₹**6.50** ಲಕ್ಷ ನಗದು, **3** ಮನೆ, **2** ನಿವೇಶನ ಮತ್ತು **5** ಎಕರೆ ಹೊಲ. **650** ಗ್ರಾಂ ಚಿನ್ನಾಭರಣ, **2** ಕೆಜಿ ಬೆಳ್ಳಿ

ಎಂ.ನಾಗೇಂದ್ರಪ್ಪ, ಸಹಾಯಕ ಎಂಜಿನಿಯರ್, ಶಿರಾ, ತುಮಕೂರು

ಎರಡು ಮನೆ, ವಿವಿಧ ಕಡೆಗಳಲ್ಲಿ ಎಂಟು ನಿವೇಶನ, **18** ಎಕರೆ **8** ಗುಂಟೆ ಕೃಷಿ ಜಮೀನು

1 ಕೆ.ಜಿ **300** ಗ್ರಾಂ ಚಿನ್ನಾಭರಣ, **2** ಕೆ.ಜಿ **400** ಗ್ರಾಂ ಬೆಳ್ಳಿ ಸಾಮಗ್ರಿ

ಎಲ್ಲೆಲ್ಲಿ ದಾಳಿ: • ಬೆಂಗಳೂರು ನಗರ • ತುಮಕೂರು • ಮಂಡ್ಯ • ಚಿತ್ರದುರ್ಗ • ಉಡುಪಿ • ಹಾಸನ • ಬಳ್ಳಾರಿ • ರಾಯಚೂರು • ಕಲಬುರ್ಗಿ • ಬೆಳಗಾವಿ • ಹಾವೇರಿ

ಬಸ್‌ಗೆ ಬೆಂಕಿ ಬೆಂಗಳೂರಿನ ಬನಶಂಕರಿಯಲ್ಲಿರುವ ಎಸ್.ವಿ.ಕೋಚ್ ವರ್ಕ್ಸ್ ಹಾಗೂ ಬಸ್ ವರ್ಕ್‌ಶಾಪ್‌ನಲ್ಲಿ ಸೋಮವಾರ ಬೆಂಕಿ ಅವಘಡ ಸಂಭವಿಸಿದ್ದು, ಬೆಂಕಿ ನಂದಿಸುವ ಕಾರ್ಯದಲ್ಲಿ ಅಗ್ನಿ ಶಾಮಕ ದಳದ ಸಿಬ್ಬಂದಿ ತೊಡಗಿದ್ದರು. ದುರಂತದಲ್ಲಿ 19 ಖಾಸಗಿ ಬಸ್‌ಗಳು ಸುಟ್ಟು ಕರಕಲಾಗಿವೆ –ಪಿಟಿಐ ಚಿತ್ರ

ನಿತ್ಯ 2,600 ಕ್ಯೂಸೆಕ್ ನೀರು ಹರಿಸಲು ಶಿಫಾರಸು

ಕಾವೇರಿ: ರಾಜ್ಯಕ್ಕೆ ಮತ್ತೆ ಆಘಾತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕವು ತಮಿಳುನಾಡಿಗೆ ನವೆಂಬರ್ 15ರವರೆಗೆ ಪ್ರತಿದಿನ 2,600 ಕ್ಯೂಸೆಕ್ (ಒಟ್ಟು 3.5 ಟಿಎಂಸಿ ಅಡಿ) ಕಾವೇರಿ ನೀರು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿಯು ಸೋಮವಾರ ಶಿಫಾರಸು ಮಾಡಿದೆ. ಈ ಮೂಲಕ ರಾಜ್ಯಕ್ಕೆ ಮತ್ತೆ ಹಿನ್ನಡೆಯಾಗಿದೆ.

ಸಮಿತಿಯ ಅಧ್ಯಕ್ಷ ವಿನೀತ್ ಗುಪ್ತ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಮಿತಿಯ 89ನೇ ಸಭೆಯಲ್ಲಿ ರಾಜ್ಯದ ಅಧಿಕಾರಿಗಳ ವಾದಕ್ಕೆ ಮನ್ನಣೆ ಸಿಗಲಿಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಬುಧವಾರ ನಡೆಯುವ ಸಾಧ್ಯತೆ ಇದೆ.

ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ಒಳಹರಿವು ಶೂನ್ಯಕ್ಕೆ ತಲುಪಿದೆ. ಈ ಜಲಾಶಯಗಳಲ್ಲಿ 58.95 ಟಿಎಂಸಿ ಅಡಿ ನೀರು ಮಾತ್ರ ಲಭ್ಯವಿದೆ. ಇಂತಹ ಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ. ಹಿಂಗಾರಿನಲ್ಲಿ ಉತ್ತಮ ಮಳೆಯಾದರೆ ನೀರು ಬಿಡುವ ಬಗ್ಗೆ ಆಲೋಚನೆ ನಡೆಸಬಹುದು ಎಂದು ಕರ್ನಾಟಕ ಜಲ ಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದರು.

‘ಕಳೆದ ವರ್ಷ ಇದೇ ಅವಧಿಯಲ್ಲಿ ನಾಲ್ಕು ಜಲಾಶಯಗಳಲ್ಲಿ 110.80 ಟಿಎಂಸಿ ಅಡಿ ನೀರು ಇತ್ತು. ಈಗ ಜಲಾಶಯಗಳಲ್ಲಿ ಶೇ 51ರಷ್ಟು ನೀರಿದೆ. ರಾಜ್ಯದ ಕೈಗಾರಿಕೆಗಳಿಗೆ ಹಾಗೂ ಕುಡಿಯುವ ನೀರು ಪೂರೈಸಲು ಸಹ ಈ ನೀರು ಸಾಲದು’ ಎಂದು ಹೇಳಿದರು.

5ನೇ ಪುಟ ನೋಡಿ

ಜಲಾಶಯಗಳ ಸ್ಥಿತಿಗತಿ

ಜಲಾಶಯ	ಜಲಾಶಯದ ಸಾಮರ್ಥ್ಯ (ಟಿಎಂಸಿ)	ಈಗಿರುವ ನೀರು (ಟಿಎಂಸಿ)	ಒಳಹರಿವು (ಕ್ಯೂಸೆಕ್)	ಹೊರಹರಿವು (ಕ್ಯೂಸೆಕ್)
ಹಾರಂಗಿ	8.50	5.82	139	1700
ಹೇಮಾವತಿ	37.10	17.43	315	5970
ಕೆಆರ್‌ಎಸ್	49.45	22.41	531	567
ಕಬಿನಿ	19.52	13.29	196	300

ಕಾವೇರಿ ಕೊಳ್ಳದಲ್ಲಿ 51 ಟಿಎಂಸಿ ಅಡಿ ನೀರು ಮಾತ್ರ ಲಭ್ಯವಿದೆ. ಕುಡಿಯಲು ಬೇಕಾದಷ್ಟು ನೀರನ್ನು ಉಳಿಸಿಕೊಳ್ಳಬೇಕಿದೆ. ತಮಿಳುನಾಡಿಗೆ ಹರಿಸಲು ನೀರೇ ಇಲ್ಲ

ಡಿ.ಕೆ. ಶಿವಕುಮಾರ್
ಉಪಮುಖ್ಯಮಂತ್ರಿ

ಒಳ ಪುಟಗಳು

ಜಗ್ಗೇಶ್ ವಿರುದ್ಧದ ವಿಚಾರಣೆಗೆ ತಡೆ 5

ಬಿಆರ್‌ಎಸ್ ಅಭ್ಯರ್ಥಿಗೆ ಚೂರಿ ಇರಿತ 6

ಪೊಲೀಸರಿಗೆ ಶರಣಾಗಿದ್ದ ಆರೋಪಿ ಬಂಧನ 6

ಮಾಹಿತಿ ಆಯೋಗ: ಖಾಲಿ ಇರುವ ಹುದ್ದೆಗಳಭರ್ತಿಗೆ ‘ಸುಪ್ರೀಂ’ ಸೂಚನೆ 10

‘ಹಠಾತ್ ಸಾವಿಗೆ ಕೋವಿಡ್ ಲಸಿಕೆ ಕಾರಣವಲ್ಲ’

ನವದೆಹಲಿ (ಪಿಟಿಐ): ‘ಕೋವಿಡ್ ಲಸಿಕೆಯಿಂದ ದೇಶದಲ್ಲಿ 18ರಿಂದ 45 ವರ್ಷದ ವಯೋಮಾನದವರಲ್ಲಿ ಹಠಾತ್ ಸಾವಿನ ಅಪಾಯದ ಸಾಧ್ಯತೆ ಹೆಚ್ಚಿಲ್ಲ’ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ ಅಧ್ಯಯನ ಹೇಳಿದೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಚುನಾವಣಾ ಬಾಂಡ್: ಹೇಳಿಕೆ ಸಲ್ಲಿಸಿರುವ ಕೇಂದ್ರ

‘ದೇಣಿಗೆ ಮೂಲ: ಮಾಹಿತಿ ಪಡೆಯುವ ಹಕ್ಕು ಜನರಿಗಿಲ್ಲ’

ನವದೆಹಲಿ (ಪಿಟಿಐ): ರಾಜಕೀಯ ಪಕ್ಷಗಳಿಗೆ ದೇಣಿಗೆಯಾಗಿ ನೀಡುವ ಹಣದ ಮೂಲ ಕುರಿತು ಮಾಹಿತಿ ಪಡೆದುಕೊಳ್ಳುವ ಹಕ್ಕನ್ನು ಜನರು ಹೊಂದಿಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಹೇಳಿಕೆಯಲ್ಲಿ ಈ ಮಾಹಿತಿ ನೀಡಿದ್ದಾರೆ. ಆ ಮೂಲಕ ಚುನಾವಣಾ ಬಾಂಡ್ ಯೋಜನೆಯನ್ನು ಸಮರ್ಥಿಸಿಕೊಂಡಿದ್ದಾರೆ. ‘ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯು ‘ಚೊಕ್ಕ ಹಣ’ವಾಗಿದ್ದು, ಸಂವಿಧಾನದ 19(1)(ಎ) ವಿಧಿಯಡಿ ಮಾಹಿತಿ ಪಡೆಯುವ ಹಕ್ಕನ್ನು ಜನರು ಹೊಂದಿಲ್ಲ. ಎಲ್ಲವನ್ನೂ ತಿಳಿದುಕೊಳ್ಳುವ ಅನಿರ್ಬಂಧಿತ ಹಕ್ಕು ಎಂಬುದು ಇರುವುದಿಲ್ಲ’ ಎಂದು ವಿವರಿಸಿದ್ದಾರೆ.

5ನೇ ಪುಟ ನೋಡಿ

ಬಿಜೆಪಿ ವಿರುದ್ಧ ಚಿದಂಬರಂ ಟೀಕೆ

ಚುನಾವಣಾ ಬಾಂಡ್ ಯೋಜನೆ ವಿಚಾರವಾಗಿ ಬಿಜೆಪಿ ವಿರುದ್ಧ ಟೀಕಾಪ್ರಹಾರ ಮಾಡಿರುವ ಕಾಂಗ್ರೆಸ್ ನಾಯಕ ಪಿ.ಚಿದಂಬರಂ, ‘ದೊಡ್ಡ ಕಾರ್ಪೊರೇಟ್ ಸಂಸ್ಥೆಗಳಿಂದ ಪಾರದರ್ಶಕವಲ್ಲದ ರೀತಿಯಲ್ಲಿ, ರಹಸ್ಯವಾಗಿ ಹಾಗೂ ಪಿತೂರಿ ಮೂಲಕ ದೇಣಿಗೆಯನ್ನು ಸಂಗ್ರಹಿಸುವ ತನ್ನ ಉದ್ದೇಶವನ್ನು ಬಿಜೆಪಿ ಸ್ಪಷ್ಟಪಡಿಸಿದೆ’ ಎಂದಿದ್ದಾರೆ.

ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ನೀಡುವ ಹಣವು ಅಕ್ರಮವೆನಿಸುವುದಿಲ್ಲ ಎಂಬುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿರುವ ಬೆನ್ನಲ್ಲೇ, ಚಿದಂಬರಂ ಅವರು ಬಿಜೆಪಿ ವಿರುದ್ಧ ಈ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಕೂಡ ಚಿದಂಬರಂ ಅವರಿಗೆ ತೀಕ್ಷ್ಣವಾದ ತಿರುಗೇಟು ನೀಡಿದೆ. ‘ಪಾರದರ್ಶಕತೆ ಹಾಗೂ ಪ್ರಜಾತಾಂತ್ರಿಕ ರೀತಿಯಲ್ಲಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ವ್ಯವಸ್ಥೆಯನ್ನು ರೂಪಿಸುವ ಯಾವುದೇ ಪ್ರಯತ್ನಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿರುವುದು ಶೋಚನೀಯ’ ಎಂದು ಟೀಕಿಸಿದೆ.

ದೆಹಲಿ ಸಿ.ಎಂ ಕೇಜ್ರಿವಾಲ್‌ಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ.2ರಂದು ವಿಚಾರಣೆಗೆ ಹಾಜರಾಗಲು ಸೂಚಿಸಿ ಜಾರಿ ನಿರ್ದೇಶನಾಲಯವು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಮನ್ಸ್ ಜಾರಿ ಮಾಡಿದೆ.

ಪಿಎಂಎಲ್‌ಎ ಕಾಯ್ದೆಯಡಿ ಕೇಜ್ರಿವಾಲ್ ಅವರಿಗೆ ಸಮನ್ಸ್ ನೀಡಲಾಗಿದೆ. ತನಿಖಾ ಸಂಸ್ಥೆಯು ಅಂದು ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಮೀಸಲಾತಿಗೆ ಮರಾಠ ಸಮುದಾಯದ ಆಗ್ರಹ

ಹಿಂಸೆಗೆ ತಿರುಗಿದ ಹೋರಾಟ

ಛತ್ರಪತಿ ಸಂಭಾಜಿನಗರ (ಪಿಟಿಐ): ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ ಮಹಾರಾಷ್ಟ್ರದಲ್ಲಿ ಹಿಂಸಾಚಾರಕ್ಕೆ ತಿರುಗಿದೆ. ಪ್ರತಿಭಟನಕಾರರು ಸೋಮವಾರ, ಎನ್‌ಸಿಪಿ ಶಾಸಕ ಪ್ರಕಾಶ್ ಸೋಲಂಕಿ ನಿವಾಸ ಮತ್ತು ಮಾಜಲಗಾವ್ ಪುರಸಭೆ ಕಟ್ಟಡದ ಮೇಲೆ ಕಲ್ಲು ತೂರಾಟ ನಡೆಸಿ ಬೆಂಕಿ ಹಚ್ಚಿದ್ದಾರೆ.

‘ಬಿಜೆಪಿ ಶಾಸಕ ಪ್ರಶಾಂತ್ ಬಂಬ್ ಅವರ ಛತ್ರಪತಿ ಸಂಭಾಜಿನಗರದಲ್ಲಿರುವ ಕಚೇರಿಯನ್ನು ಧ್ವಂಸಗೊಳಿಸಲಾಗಿದೆ. ಇಲ್ಲಿ ಯಾರೂ ಗಾಯಗೊಂಡಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಎನ್‌ಸಿಪಿ ಶಾಸಕ ಸಂದೀಪ್ ಕ್ಷೀರಸಾಗರ ಅವರ ಕಚೇರಿ ಮತ್ತು ಅವರ ಸಂಬಂಧಿಕರೂ ಆದ ಮಾಜಿ ಸಚಿವ, ಶಿವಸೇನಾ ನಾಯಕ ಜಯದತ್ ಕ್ಷೀರಸಾಗರ್ ಅವರ ನಿವಾಸ ಹಾಗೂ ಕಚೇರಿಗೂ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ ಎಂದು ತಿಳಿಸಿದ್ದಾರೆ.

ಎನ್‌ಸಿಪಿ ಶಾಸಕ ಪ್ರಕಾಶ್ ಸೋಲಂಕಿ ಅವರ ನಿವಾಸಕ್ಕೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದರು —ಪಿಟಿಐ ಚಿತ್ರ

₹100 ಕೋಟಿ ಮೌಲ್ಯದ ನಿವೇಶನ, ಕಟ್ಟಡ ಮರಳಿಸಿದ ಕಂದಾಯ ಇಲಾಖೆ

ಚಿಕ್ಕಪೇಟೆ ಸರ್ಕಾರಿ ಶಾಲೆಗೇ ದಕ್ಕಿದ ಸ್ವತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ₹100 ಕೋಟಿ ಮೌಲ್ಯದ ನಿವೇಶನ, ಕಟ್ಟಡ ಒಳಗೊಂಡ ಚಿಕ್ಕಪೇಟೆ ಸರ್ಕಾರಿ ಶಾಲೆಯ ಸ್ವತ್ತನ್ನು ಶಾಲೆಗೇ ಮರಳಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಪೇಟೆ ಒಟಿಸಿ ರಸ್ತೆಯ 13,735 ಚದರಡಿ ವಿಸ್ತೀರ್ಣದ ಮೈದಾನದಲ್ಲಿ 1945ರಲ್ಲೇ ಪ್ರಾಥಮಿಕ, ಮಾಧ್ಯಮಿಕ ಶಾಲೆ ಆರಂಭಿಸಲಾಗಿತ್ತು. ಸ್ವಾತಂತ್ರ್ಯಾನಂತರ ಅದೇ ಜಾಗದಲ್ಲಿ ಪ್ರೌಢ ಶಾಲೆಯನ್ನೂ ತೆರೆಯಲಾಗಿತ್ತು. 1979ರ ವೇಳೆಗೆ ಶಿಥಿಲಾವಸ್ಥೆ ತಲುಪಿದ್ದ ಶಾಲಾ ಕೊಠಡಿಗಳನ್ನು ಕೆಡವಿ, ಹೊಸ ಕೊಠಡಿ ನಿರ್ಮಿಸಿಕೊಡಲು ಅವಕಾಶ ಕೋರಿ ರಜತಾ ಎಂಟರ್ ಪ್ರೈಸಸ್ ಎಂಬ ಖಾಸಗಿ ಸಂಸ್ಥೆಯೊಂದು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಸಂಸ್ಥೆಯ ಮನವಿ ಪುರಸ್ಕರಿಸಿದ ಸರ್ಕಾರ, ನೆಲ ಹಾಗೂ ಮೊದಲ ಮಹಡಿಯಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಲು, ಎರಡನೇ ಮಹಡಿಯಲ್ಲಿ ಶಾಲೆಗಳಿಗೆ ಕೊಠಡಿ ನಿರ್ಮಿಸಿಕೊಡಲು ಒಪ್ಪಂದ ಮಾಡಿಕೊಂಡು ತಿಂಗಳಿಗೆ ₹16,350ರಂತೆ 26 ವರ್ಷಗಳಿಗೆ ಶಾಲಾ ಜಾಗವನ್ನು ಗುತ್ತಿಗೆ ನೀಡಿತ್ತು. ಗುತ್ತಿಗೆ ಅವಧಿ 2005ಕ್ಕೆ ಮುಕ್ತಾಯವಾಗಿತ್ತು.

ನಂತರ ರಜತಾ ಕಾಂಪ್ಲೆಕ್ಸ್ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಸಂಘಕ್ಕೆ 2011ರಲ್ಲಿ ಪ್ರತಿತಿಂಗಳು ₹6.41 ಲಕ್ಷ ಬಾಡಿಗೆಗೆ 10 ವರ್ಷಗಳಿಗೆ ಗುತ್ತಿಗೆ ನೀಡಲಾಗಿತ್ತು. ಈ ಅವಧಿಯೂ 2021 ಜೂನ್‌ಗೆ ಮುಕ್ತಾಯವಾಗಿತ್ತು. ಬಳಿಕ ಸಂಘದ ಕೋರಿಕೆಯನ್ನು ಪರಿಗಣಿಸಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ, ನಾಲ್ಕು ಮಹಡಿಗಳ ಕಟ್ಟಡವನ್ನು ಮಾರಾಟ, ಗುತ್ತಿಗೆ ಅಥವಾ ಹರಾಜು ಹಾಕಲು ಅನುಮತಿ ನೀಡುವಂತೆ ಕೋರಿ ಕಳೆದ ವರ್ಷದ ಆಗಸ್ಟ್‌ನಲ್ಲಿ ಕಂದಾಯ ಇಲಾಖೆಗೆ ಪತ್ರ ಬರೆದಿದ್ದರು.

ಈ ಕುರಿತು ‘ಪ್ರಜಾವಾಣಿ’ 2022, ಆ.18ರ ಸಂಚಿಕೆಯಲ್ಲಿ ‘ಸರ್ಕಾರಿ ಶಾಲೆ ಮಾರಾಟಕ್ಕಿದೆ!’ ಎಂಬ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು. ವರದಿಯ ನಂತರ ಶಾಲಾ ಆಸ್ತಿ ಪರಭಾರೆ ಪ್ರಕ್ರಿಯೆಗಳು ಸ್ಥಗಿತವಾಗಿದ್ದವು.

ಸ್ವತ್ತನ್ನು ಶಾಲಾ ಶಿಕ್ಷಣ ಇಲಾಖೆ ಹೆಸರಿಗೆ ನೋಂದಣಿ ಮಾಡಿಕೊಳ್ಳಬೇಕು. ಹಿಂದೆ ಗುತ್ತಿಗೆ ಪಡೆದಿದ್ದ ಸಂಘದಿಂದ ಬರಬೇಕಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಬೇಕು. ನಿವೇಶನದ ಒಳಗಿನ ಅತಿಕ್ರಮಣ ತೆರವುಗೊಳಿಸಬೇಕು ಎಂದು ಕಂದಾಯ ಇಲಾಖೆ ಹೊರಡಿಸಿದ ಆದೇಶದಲ್ಲಿ ಸೂಚಿಸಿದೆ.

ಪ್ರಜಾವಾಣಿ

ಸರ್ಕಾರಿ ಶಾಲೆ ಮಾರಾಟಕ್ಕಿದೆ!

ಪ್ರಕಟವಾದ ಸಂಚಿಕೆ

ಮುಖ್ಯ ಶಿಕ್ಷಕಿ ಶ್ರಮಕ್ಕೆ ಇಲಾಖೆ ಶ್ಲಾಘನೆ

ಶಾಲಾ ಆಸ್ತಿ ಕೈತಪ್ಪುತ್ತಿರುವ ವಿಷಯವನ್ನು ಇಲಾಖೆಯ ಗಮನಕ್ಕೆ ತಂದು ಕೆಲಸದ ಮಧ್ಯೆಯೂ ಶಾಲೆಯ ಆಸ್ತಿ ಉಳಿಸಲು ಶ್ರಮಿಸಿದ ಚಿಕ್ಕಪೇಟೆ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಎಂ.ಶೀಲಾರಾಣಿ ಹಾಗೂ ಅವರಿಗೆ ಬೆನ್ನೆಲುಬಾಗಿ ನಿಂತು ಅವರ ಜತೆಗೆ ಎರಡು ವರ್ಷ ಕಚೇರಿಗಳಿಗೆ ಅಲೆದ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್.ಗಿರಿಜಮ್ಮ ಅವರ ಕಾರ್ಯವನ್ನು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಆಯುಕ್ತೆ ಬಿ.ಬಿ.ಕಾವೇರಿ ಸೇರಿದಂತೆ ಉನ್ನತಾಧಿಕಾರಿಗಳು ಶ್ಲಾಘಿಸಿದ್ದಾರೆ.

ಶೀಲಾರಾಣಿ



ಅಕ್ರಮ ನೇಮಕಾತಿ ಖಂಡಿಸಿ 4ರಂದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿದ್ದರೂ ನೇಮಕಾತಿಯನ್ನು ರದ್ದು ಪಡಿಸದಿರುವುದನ್ನು ಖಂಡಿಸಿ ನವೆಂಬರ್ 4ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ದಲಿತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ದಲಿತ ವಿದ್ಯಾರ್ಥಿಗಳ ಒಕ್ಕೂಟ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕ ಎಂ. ವೆಂಕಟಸ್ವಾಮಿ, 'ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು 2014ರಲ್ಲಿ ಸಹಾಯಕ ಪ್ರಾಧ್ಯಪಕ ಹುದ್ದೆಗಳ ನೇಮಕಾತಿಗಾಗಿ ಹೊರಡಿಸಿದ ಅಧಿಸೂಚನೆಯಲ್ಲಿ ವಿಷಯವಾರು ಮೀಸಲಾತಿಯನ್ನು ಅನುಸರಿಸಲಾಗಿತ್ತು. ಆದರೆ, ವಿಶ್ವವಿದ್ಯಾಲಯವು ಈ ಅಧಿಸೂಚನೆಯನ್ನು ಹಿಂಪಡೆದು, 2019ರಲ್ಲಿ ಹೊಸ ಅಧಿಸೂಚನೆ ಪ್ರಕಟಿಸಿತ್ತು. ಇದರಲ್ಲಿ ಸರ್ಕಾರದ ಆದೇಶದಂತೆ ವಿಷಯವಾರು ಮೀಸಲಾತಿಯನ್ನು ಅನುಸರಿಸಿಲ್ಲ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ' ಎಂದು ಆರೋಪಿಸಿದರು.

'ಸರ್ಕಾರ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ನೇಮಕಾತಿಯಲ್ಲಿ ರೋಸ್ಟರ್ ನಿಯಮಗಳನ್ನು ಉಲ್ಲಂಘಿಸಿದೆ. ಈ ನೇಮಕಾತಿಯನ್ನು ಕೂಡಲೇ ಹಿಂಪಡೆದು ವಿಷಯವಾರು ರೋಸ್ಟರ್ ನಿಯಮಗಳನ್ನು ಅನುಸರಿಸಿ ಹೊಸ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಕರ್ನಾಟಕ ಹೈಕೋರ್ಟ್‌ಗೆ ಅಫಿಡೆವಿಟ್ ಸಲ್ಲಿಸಿದೆ. ಆದರೂ, ವಿಶ್ವವಿದ್ಯಾಲಯ ನೇಮಕಾತಿ ಆದೇಶವನ್ನು ಸರ್ಕಾರ ಹಿಂಪಡೆದಿಲ್ಲ' ಎಂದು ಅವರು ದೂರಿದರು.

'ಅಕ್ರಮ ನೇಮಕಾತಿ ಮಾಡಿಕೊಂಡಿರುವ ವಿಶ್ವವಿದ್ಯಾಲಯದ ಕುಲಪತಿ ಆರ್.ಸಿ. ಜಗದೀಶ್, ಕುಲಸಚಿವ ಕೆ. ಸಿ. ಶಶಿಧರ್ ಮತ್ತು ಆಡಳಿತ ಮಂಡಳಿ ಸದಸ್ಯರನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಾಯ್ದೆ ಅಡಿಯಲ್ಲಿ ಕೂಡಲೇ ಬಂಧಿಸಬೇಕು ಎಂದು ಇದೇ ವೇಳೆ ಅವರು ಆಗ್ರಹಿಸಿದರು.

ನಟ ಚೇತನ್ ಅಹಿಂಸ, ವಕೀಲ ಹರಿರಾಮ್, ಬಿ.ಆರ್. ಭಾಸ್ಕರ್ ಪ್ರಸಾದ್, ಪತ್ರಕರ್ತ ಹರ್ಷಕುಮಾರ್ ಕುಗ್ವೆ ಇದ್ದರು.

ಚಿರತೆ ಪತ್ತೆಗಾಗಿ ಡ್ರೋನ್

ಸ್ಥಳೀಯ ನಿವಾಸಿಗಳ ಆತಂಕ: ಎಚ್ಚರವಹಿಸುವಂತೆ ಅರಣ್ಯ ಇಲಾಖೆ ಸೂಚನೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಹೊಸೂರು ರಸ್ತೆ ಕೂಡ್ಲುಗೇಟ್ ಬಳಿಯ ಎಇಸಿಎಸ್ ಬಡಾವಣೆಯಲ್ಲಿ ಕಾಣಿಸಿಕೊಂಡಿದ್ದ ಚಿರತೆಯನ್ನು ಪತ್ತೆ ಮಾಡಲು ಅರಣ್ಯಾಧಿಕಾರಿಗಳು ಸೋಮವಾರ ಡ್ರೋನ್ ಕಾರ್ಯಾಚರಣೆ ನಡೆಸಿದರು.

ಕಳೆದ ಎರಡು ದಿನಗಳಿಂದ ಅರಣ್ಯ ಇಲಾಖೆ ಚಿರತೆ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿಸಿದೆ.

ಎಇಸಿಎಸ್ ಬಡಾವಣೆಯ 'ಬಿ' ಬ್ಲಾಕ್ ನಲ್ಲಿರುವ ಎಂ.ಎಸ್. ಧೋನಿ ಇಂಟರ್ ನ್ಯಾಷನಲ್ ಸ್ಕೂಲ್ ಬಳಿ ಶನಿವಾರ ರಾತ್ರಿ 10.20ರ ಹೊತ್ತಿಗೆ ಚಿರತೆ ಓಡಾಡಿರುವುದು ಹತ್ತಿರದ ಸಿಸಿಟಿವಿಯಲ್ಲಿ ಸೆರೆಯಾಗಿತ್ತು. ಅಲ್ಲಿಂದ ರಾತ್ರಿ 11.30ಕ್ಕೆ ಮುನೇಶ್ವರ ಬಡಾವಣೆಯಲ್ಲಿ ಕಾಣಿಸಿಕೊಂಡಿದ್ದು, ಹೊಸಪಾಳ್ಯ ಮತ್ತು ಬಂಡೆಪಾಳ್ಯ ಮತ್ತಿತರ ಕಡೆ ತಿರುಗಾಡಿರುವ ಸಾಧ್ಯತೆ ಇದ್ದು, ಸ್ಥಳೀಯ ನಿವಾಸಿಗಳು ಆತಂಕಗೊಂಡಿದ್ದರು.

ಕೂಡ್ಲುಗೇಟ್, ಬಂಡೇಪಾಳ್ಯ, ಹೊಸಪಾಳ್ಯ ಗಾರ್ವೆಬಾವಿಪಾಳ್ಯ, ಮಂಗಮ್ಮನಪಾಳ್ಯ ಪ್ರದೇಶಗಳು ಅತಿ ಹೆಚ್ಚು ಜನಸಾಂದ್ರತೆ ಹೊಂದಿವೆ. ಇಲ್ಲಿ ತಡರಾತ್ರಿವರೆಗೂ ಜನ ಸಂಚಾರ ಸಹಜವಾಗಿರುತ್ತದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಶನಿವಾರ ರಾತ್ರಿ ಮತ್ತು ಭಾನುವಾರ ಈ ಭಾಗದಲ್ಲಿ ಸುಮಾರು 2 ಕಿ.ಮೀ. ಸುತ್ತಮುತ್ತ ಚಿರತೆಗಾಗಿ ಶೋಧ ನಡೆಸಿದ್ದಾರೆ. ಚಿರತೆ, ನೀಲಗಿರಿ ತೋಪುಗಳು ಹೆಚ್ಚಿರುವ ಸರ್ಜಾಪುರದ ಕಡೆ ಹೋಗಿರುವ ಸಾಧ್ಯತೆ ಇದ್ದು, ಅಲ್ಲಿಯೂ ಪತ್ತೆ ಕಾರ್ಯವನ್ನು ಮುಂದುವರಿಸಿದ್ದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್. ಲಿಂಗರಾಜ, ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರ ಸೋಮವಾರ ಕೂಡ್ಲು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಹೊಸೂರು ರಸ್ತೆ ಕೂಡ್ಲುಗೇಟ್ ಬಳಿಯ ಎಇಸಿಎಸ್ ಬಡಾವಣೆಯಲ್ಲಿ ಚಿರತೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಬೋನು ಇರಿಸಿದರು

'ಚಿರತೆ ಪತ್ತೆಗಾಗಿ ಐದು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ರಾತ್ರಿ ಹಗಲು ಈ ತಂಡಗಳು ಶೋಧಕಾರ್ಯ ನಡೆಸಲಿವೆ. ಎರಡು ಬೋನ್‌ಗಳನ್ನು ಇಡಲಾಗಿದ್ದು, ಅಗತ್ಯ ಬಿದ್ದಲ್ಲಿ ಹೆಚ್ಚಿನ ಬೋನ್‌ಗಳನ್ನು ಇಡಲಾಗುವುದು. ಸಾರ್ವಜನಿಕರು ಭಯಪಡಬೇಕಿಲ್ಲ, ಆದರೆ ಎಚ್ಚರಿಕೆಯಿಂದ ಇರಬೇಕು' ಎಂದು ಎಸ್.ಎಸ್. ಲಿಂಗರಾಜ ತಿಳಿಸಿದರು.

'ಈ ಹಿಂದೆಯೂ ಹಲವು ಬಾರಿ ಚಿರತೆಗಳು ವಸತಿ ಪ್ರದೇಶಗಳಲ್ಲಿ ಕಾಣಿಸಿಕೊಂಡಿವೆ. ಬನ್ನೇರುಘಟ್ಟ ಅರಣ್ಯ ಪ್ರದೇಶ ಕುಗ್ಗುತ್ತಿರುವುದು ಮತ್ತು ಅರಣ್ಯಕ್ಕೆ ಹೊಂದಿಕೊಂಡಂತಿರುವ ನೈಸ್ ರಸ್ತೆ ನಿರ್ಮಾಣದಲ್ಲಿ ನಿಯಮಾವಳಿಗಳನ್ನು ಗಾಳಿಗೆ ತೂರಿದ್ದು ಕಾರಣ. ಅನಿವಾರ್ಯವಾಗಿ ಪ್ರಾಣಿಗಳು ಕಾಡಿನಿಂದ ಜನ ವಸತಿ ಪ್ರದೇಶಗಳತ್ತ ಬರುತ್ತಿವೆ' ಎಂದು ಕೂಡ್ಲು ಗ್ರಾಮದ ನಿವಾಸಿ ಆರ್.ಎಂ.ಎನ್. ರಮೇಶ್ ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the general public that the project namely BENGALURU LIFE SCIENCES PARK, a Commercial Development with Hospital with a total built-up area of 149,625.58 Sq mtr at Survey Nos. 53/5P, 54, 55/2, 59/3A, 73, 74/1, 74/2, 74/3, 74/4P, 74/5P, 74/7, 75/1P, 76/1,76/2, 76/3, 76/4, 77/1, 77/2, 77/3, 77/4, 78/1P, 78/2, 78/3, 82/1, 82/2, 82/3, 83/1, 83/2, 83/3 of Doddathoguru Village, Electronics City Phase 1,Begur Hobli, Bangalore South Taluk has been accorded Modification and Expansion of Environmental Clearance by the State Level Environment Impact Assessment Authority-Karnataka, vide Order No. SEIAA 145 CON 2023 Dated 17.10.2023. Copies of the clearance certificates are available on the website of the Environment & Ecology Department at **https://environmentclearance.nic.in**

Labzone – Electronics City Private Limited
Opp.Wipro Gate No.14,Electronics City West Avenue-7, Bangalore-560100

ಸಾರ್ವಜನಿಕ ಪ್ರಕಟಣೆ

ನೆಲಮಂಗಲ ಪಟ್ಟಣದಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಸರ್ವೆ ನಂ.152 ರ ವಿಸ್ತೀರ್ಣ 1 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 2 ರಿಟ್ ಅರ್ಜಿಗಳು ಸಂಖ್ಯೆ: 14699/20-21 ಮತ್ತು 9473/21 ವಿಲೇವಾರಿಗೆ ಬಾಕಿ ಇದ್ದು, ಸದರಿ ಜಮೀನನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ದಿ.ಮಾರೇಗೌಡ ಬಿನ್ ನರಸಿಂಹಯ್ಯ ಇವರ ಮಗ ಮತ್ತು ಸಹೋದರಿಯರು ಮಾರಾಟ ಮಾಡಲು ಯತ್ನಿಸುತ್ತಿದ್ದು. ಸಾರ್ವಜನಿಕರು ಸದರಿ ಜಮೀನನ್ನು ಕೊಳ್ಳಬಾರದು ಎಂದು ಈ ಮೂಲಕ ವಿನಂತಿಸುತ್ತಿದ್ದೇವೆ.

ಅಧ್ಯಕ್ಷರು ಮತ್ತು ಸದಸ್ಯರು
ಶ್ರೀ ಚನ್ನಕೇಶ್ವರಸ್ವಾಮಿ ದೇವಸ್ಥಾನ ಕ್ಷೇಮಾಭಿವೃದ್ಧಿ ಸಂಘ(ರಿ)
ಆರ್ಯವೈಶ್ಯ ಮಂಡಳಿ(ರಿ) ನೆಲಮಂಗಲ
ದೇವಸ್ಥಾನ ವ್ಯವಸ್ಥಾಪನಾ ಸಮಿತಿ

ಫಾರಂ ಸಂಖ್ಯೆ URC-2

ಅಧ್ಯಾಯ XXI-1 ಭಾಗ 1ರ ಅಡಿಯಲ್ಲಿ ನೋಂದಣೆ ಕುರಿತು ಸೂಚನೆ ನೀಡುವ ಜಾಹೀರಾತು (**Section 374(b) of the companies Act, 2013** ಮತ್ತು **rule 4(1) of the companies Authorised to Register), Rules, 2014]**

1. ಕಂಪನಿ ಕಾಯಿದೆ, 2013ರ ಸೆಕ್ಷನ್ 366ರ ಉಪವಿಭಾಗ (2)ರ ಅನುಸಾರವಾಗಿ, LGS ರಿಸರ್ಚ್ ಫೌಂಡೇಶನ್ ಟಸ್ಟ್ ಅನ್ನು ಕಂಪನಿಗಳ ಕಾಯಿದೆ 2013ರ XXI ಅಧ್ಯಾಯದ ಭಾಗ 1ರ ಅಡಿಯಲ್ಲಿ ಗ್ಯಾರಂಟಿಯಿಂದ ಸೀಮಿತವಾದ ಕಂಪನಿಯನ್ನಾಗಿ ರಿಜಿಸ್ಟ್ರಾರ್, ಕಂಪನಿ ಗಳ ರಿಜಿಸ್ಟ್ರಾರ್, 'E' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು –560034ನಲ್ಲಿ ನೋಂದಾಯಿಸುವ ಬಗ್ಗೆ ಸೂಚಿಸುತ್ತಿದ್ದೇವೆ.
2. ಕಂಪನಿಯ ಪ್ರಮುಖ ಉದ್ದೇಶಗಳು ಕೆಳಕಂಡಂತಿವೆ: ಭಾರತೀಯ ಸಮಾಜದಲ್ಲಿನ ಯಾವುದೇ ಪ್ರಕ್ರಿಯೆ / ವ್ಯವಸ್ಥೆಗೆ ಇಂಜಿನಿಯರಿಂಗ್ ಪರಿಹಾರವನ್ನು ಅಳವಡಿಸುತ್ತಾ; ಮಾನವ ಒಳಗೊಳ್ಳುವಿಗೆ ಕಡಿವೆ ಮಾಡುವ ಹಾಗೂ ಉತ್ಪಾದಕತೆ ವರ್ಧನೆ ಮಾಡುವ; ಯಾಂತ್ರಿಕತೆ ಹೆಚ್ಚಿಸುತ್ತಾ ದಕ್ಷತೆ, ಅರ್ಥಿಕತೆ, ಬೆಳವಣಿಗೆ, ಉಪಯುಕ್ತತೆ ಇರುವ ವ್ಯವಸ್ಥೆಯ ಸಂಶೋಧನೆ, ತರಬೇತಿ, ಹಾಗೂ ಪ್ರಾಯೋಗಿಕತೆ ನಡೆಸುವುದು.
3. ಪ್ರಸ್ತಾವಿಕ ಕಂಪನಿಯ ಕರಡು ಮೆಮೊರಾಂಡಮ್ & ಲೇಖನಗಳ ಪ್ರತಿಯನ್ನು # 126, 1ನೇ ಮಹಡಿ, ಆದ್ರಿ, 7ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಹೊಯ್ಸಳನಗರ, ಸುಂಕದಕಟ್ಟೆ, ಬೆಂಗಳೂರು–560091 ಕಛೇರಿಯಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು ಈ ಸೂಚನೆ ಪ್ರಕಟವಾದ ದಿನಾಂಕದಿಂದ 21 ದಿನಗಳೊಳಗೆ ಅದರ ನೋಂದಾಯಿತ ಕಂಪನಿಗೆ ಅದರ ಪ್ರತಿಯೊಂದಿಗೆ ಮೇಲೆ ತಿಳಿಸಿದ ವಿಳಾಸದಲ್ಲಿರುವ ರಿಜಿಸ್ಟ್ರಾರ್‌ಗೆ ಲಿಖಿತವಾಗಿ ತಿಳಿಸಬಹುದೆಂದು ಸೂಚಿಸಲಾಗಿದೆ.

ಹರ್ಷ ಎಸ್,
ಸೆಕ್ರೆಟರಿ– 126, ಆದ್ರಿ, 7ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಹೊಯ್ಸಳನಗರ, ಸುಂಕದಕಟ್ಟೆ, ಬೆಂಗಳೂರು–560091
ದಿ.31–10–2023

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

RENTAL PROPERTIES

Accommodation Wanted

Commercial

REQUIRE FOR Rent Built Floor Space 1200Sft, in Prime Locations of Basaveshwaranagar, Rajajajinagara, Malleswara, Nelamangala For ALead Cooperative Society. Owners Only Call: 9886019240

PERSONAL

Change of Name

I, SNEHA N R, residing at Flat No. 104, Sapthagiri Janardhan Suncity Apartments, Seenappa Layout, RMV 2nd Stage, New BEL Road, Bangalore 560094, have changed my name from SNEHA N R to SNEHA R NANAIAH, vide Affidavit dated 16/10/2023, sworn before KUNDAN BABU M, Notary, Bangalore.

RAJ NATH SINGH, Father/o, JC681882F, SUB/HONY LT, BHAI LAL SINGH, Vill- Kailawar, Mahuari, Sakaldiha, Chandauli, Uttar Pradesh changed name RAJ NATH SINGH to RAJNATH YADAV, 28/10/2023 Notary K.V. Mani, Bangalore

CHANGE OF NAME
I, **SHASHIKALA S. P.**, is legally wedded wife of No. JC-126985X, Rank: sub-major Shanmukha B.K., R/at # 81D, Shree Nilaya, 6th Cross, Tirumala Nagar, Attur Layout, Yelahanka 2nd Stage, Bangalore-64, have changed my name to **SHASHIKALA SHIVANI PUTTASWAMY** vide affidavit dated 30-10-2023, before Notary C.V. Earappa, Bangalore.

I,HARRY PRAKASH, changed my name-to HARRY PRAKASH YESUDASS dated: 26-10-2023. Sworn_before notary H.S.Sakalesh Aradhya, Bengaluru.

CHANGE OF NAME
I, **L.LOKESH NAG, LOKESH NAG L & LAKSHMAN LOKESHNAG,** R/at # 39, 2nd Cross, Golden Green Layout, Thurahalli, Bangalore-61, have changed my name to **LOKESH NAG** vide affidavit dated 30-10-2023, before Notary Aravind Patil G G, Bangalore. Henceforth I shall be called **LOKESH NAG** only.

I,SAVITHA TERESA MENEZES Residing-at No.4, Dsilva Mansion,2nd Cross, Defence Colony,Horamavu Agara, Bangalore-560043 have changed-my Name-to SAVITHA DSILVA vide_Affidavit Dtd:30.10.2023 Sworn Before_Notary Uday Kumar.K, Bangalore

I, AHMED ZOBAIR AYUBI Aged about 28 years S/o Mohammad Zobair Ayubi R/a, Flat #404, 'MIMS HABITAT', Chikkagubbi Road Bairathi Village, Kothanur, Bangalore-77 have changed/ corrected my Name from Ahmad Zobair Ayubi to Ahmed Zobair Ayubi Affidavit dated 26/10/2023, before Notary N Thulasi.

I, SIVASHANKAR S/o.DEVENDRAPPA Aged 63years, R/a Sy.No.97, Plot No.16, Kanakapura Main Road, Kaggalipura, Bangalore (Ramanagara District) have changed my Name to SIVASHANKAR KOLKONDIKAR vide affidavit dated 30.10.2023 sworn before Notary L.Puttaraju, Bengaluru.

EDUCATION SUCCESS

ಅಭಿನಂದನೆಗಳು

ಸೇಂಟ್ ಮದರ್ ಥೆರೇಸಾ ವಿಶ್ವವಿದ್ಯಾಲಯವು (ಎಸ್.ಎಂ.ಟಿ.ಯು) 30.09.2023 ರಂದು @KL, ಮಲೇಷ್ಯಾದಲ್ಲಿ ಗೌರವ ಪಿ.ಹೆಚ್.ಡಿ (ಡಾಕ್ಟರ್ ಆಫ್ ಫಿಲಾಸಫಿ) ಯನ್ನು

"ರೇಷ್ಮಾ ಅಮೃತ್ ಪವಾರ್ ಡಾ. ಚಂದ್ರಕಾಂತ್ ರಾಠೋಡ್ ಕರಹರಿ"

ಇವರು ಡಾ.ಆರ್.ವಿಜಯ ಸರಸ್ವತಿ ಸಂಸ್ಥಾಪಕ ಪ್ರೊ-ವೈಸ್-ಚಾನ್ಸಲರ್ ಅವರ ಮಾರ್ಗದರ್ಶನದಲ್ಲಿ ಪ್ರಶಸ್ತಿಯನ್ನು ನೀಡಲಾಗಿರುತ್ತದೆ.

"ಇಸಿಇ ಯಲ್ಲಿ ಬಿ.ಇ., ಮತ್ತು ಎಂ.ಟೆಕ್, ಐ.ಐ.ಟಿ. ಮದ್ರಾಸ್ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ನಿಂದ ಅರ್ಹತೆ ಪಡೆದಿರುತ್ತಾರೆ. ಡಾಟಾ ಸೈಂಟಿಸ್ಟ್‌ಗಾಗಿ ಪ್ರಮಾಣೀಕರಿಸಲ್ಪಟ್ಟ 5 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲಾಗಿದೆ. Web of Science, IEEE, IJESC, IJARST ಮತ್ತು ಇನ್ನೂ ಅನೇಕ ಅಂತರರಾಷ್ಟ್ರೀಯ ನಿಯತಕಾಲಿಕಗಳಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

ಅವರು ಕೃಷಿ ಕುಟುಂಬದ ಹಿನ್ನಲೆಯಿಂದ ಬಂದವರಾಗಿದ್ದು, ಹಾಗೂ ಕನ್ನಡ ಮಾಧ್ಯಮದಲ್ಲಿ ಓದಿದ್ದಾರೆ. ತನ್ನ ವೃತ್ತಿ ಜೀವನದಲ್ಲಿ ಅವರು ಐಟಿ ಉದ್ಯಮದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಡೇಟಾ ವಿಜ್ಞಾನಿ, ಉತ್ಪನ್ನ ಮಾಲೀಕರು (ಪಿ.ಒ) ವಿಭಿನ್ನ ಸಂಸ್ಥೆಗಳಾದ ಕಾಗ್ನಿಜೆಂಟ್, ಎಲ್.ಜಿ ಸಾಫ್ಟ್ ಇಂಡಿಯಾ, ಆರ್ ಅಂಡ್ ಮತ್ತು ಇಂಟೆಲ್ ಆರ್ ಮತ್ತು ಡಿ ನಂತಹ ವಿಭಿನ್ನ ಸಾಫ್ಟ್‌ವೇರ್ ಸಂಸ್ಥೆಗಳಲ್ಲಿ ರಿಸರ್ಚ್ ಲೇಖಕರಂತಹ ವಿವಿಧ ಪಾತ್ರಗಳನ್ನು ನಿರ್ವಹಿಸಿರುತ್ತಾರೆ.

DH DECCAN HERALD Classifieds More value, more impact
ಪ್ರಜಾವಾಣಿ JOB HUNT
Get your HIRING NEEDS answered
JOB
Get the right people for your company...
Book your Ad with us now !
www.dhclassifieds.com BOOK NOW
For more details contact:
+91 9901641752 | +91 9731810277 |
+91 9900428036 | +91 9886213331 |
+91 9845114560 | 080-45557163/164

ಸುಧಾ ಮತ್ತು ಮಯೂರ ಓದಿರಿ

SAD DEMISE

We deeply regret to inform the Demise of our beloved mother
Smt. Sarojamma Dasappa
Wife of late Sri D. Dasappa
Excise contractor Bangalore.
On Monday, 30-10-2023
The cortege will leave her residence, 421 3rd Cross, Wilson Garden, Bengaluru-560027 at 2 pm on Tuesday 31-10-2023.
The Funeral will take place at Yellamma Dasappa Institute of Technology, Raghuvanahalli Kanakapura Main Road, Bengaluru- 560062 at 4.30 pm.
Deeply mourned by family

ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ ನ.2 ರಿಂದ

ಪೀಣ್ಯ ದಾಸರಹಳ್ಳಿ: ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ನ. 2ರಿಂದ ಮೂರು ದಿನಗಳ ಕಾಲ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ ಐಎಂಎಸ್-2023 ಆಯೋಜನೆ ಮಾಡಲಾಗಿದೆ. ಏರೋಸ್ಪೇಸ್ ಮತ್ತು ಡಿಫೆನ್ಸ್ ಎಂಜಿನಿಯರಿಂಗ್ ಸಂಬಂಧಿತ ವಸ್ತುಗಳ ಪ್ರದರ್ಶನ ನಡೆಯಲಿದೆ.

ಕೇಂದ್ರ ರಕ್ಷಣಾ ಸಚಿವಾಲಯ ಮತ್ತು ಡಿಫೆನ್ಸ್ ಪ್ರೊಡಕ್ಷನ್ ಇಲಾಖೆ ಪ್ರೋತ್ಸಾಹದಡಿಯಲ್ಲಿ ಲಘು ಉದ್ಯೋಗ ಭಾರತಿ ಮತ್ತು ಐಎಂಎಸ್ ಫೌಂಡೇಷನ್ ಸಹಭಾಗಿತ್ವದಲ್ಲಿ ನಡೆಯಲಿರುವ ಬೃಹತ್ ಪ್ರದರ್ಶನವನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಲಿದ್ದಾರೆ ಎಂದು ಐಎಂಎಸ್ ಫೌಂಡೇಷನ್ ಛೇರ್ಮನ್ ಎಚ್.ವಿ.ಎಸ್. ಕೃಷ್ಣ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ದೇಶ, ವಿದೇಶಗಳ ಪ್ರತಿನಿಧಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳು, ರಾಜ್ಯ ಸರ್ಕಾರದ ಇಲಾಖೆಗಳು, ಕಾರ್ಪೊರೇಟ್‌ಗಳು ಭಾಗವಹಿಸಲಿವೆ.

ನಗರಸಭಾ ಕಾರ್ಯಾಲಯ, ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123
ದೂರವಾಣಿ : 080–27722135, ಸಹಾಯವಾಣಿ : 080–27723627
Email : itstaff_ulb_nelamangala@yahoo.com

ಸಂಖ್ಯೆ: ನಸನೆ/ತಾಂ.ಶಾ(ವಿ)ಟೆಂಡರ್/139/2023–24 ದಿನಾಂಕ: 27.10.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, 2023–24 ನೇ ಸಾಲಿನ ನೆಲಮಂಗಲ ನಗರಸಭೆಯ ಅನುದಾನದಲ್ಲಿ ಬೋರ್ ವೆಲ್ ಕೊರೆದು ಪಂಪು ಮೋಟಾರ್ ಅಳವಡಿಸಲು ಹಾಗೂ ನೀರು ಸರಬರಾಜು ವಿಭಾಗಕ್ಕೆ ಸರಬರಾಜು ಸಾಮಗ್ರಿಗಳನ್ನು ಸರಬರಾಜು ಮಾಡುವ ಕಾಮಗಾರಿಗಳ ಒಟ್ಟು ಮೊತ್ತ ರೂ: 383.97 ಲಕ್ಷಗಳಿಗೆ ಐಟಾಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್; https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/1908/2023–24

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ/ವಿ.ತ-4/2023-24 ದಿನಾಂಕ: 02.09.2023

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಹಿಂದಿನ ಸಿಐಟಿಬಿ) ದಿಂದ ಶ್ರೀ ಶಂಕರ್ ಜಾವ್ಲಿ ರವರಿಗೆ ದಿನಾಂಕ: 27.05.1960 ರಂದು ಜಯಲಕ್ಷ್ಮಿಪುರಂ 4ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ 46 ರ ಅಳತೆ 100x150 = 15,000 ಚ.ಅಡಿಗಳು ನಿವೇಶನವು ಮಂಜೂರಾಗಿರುತ್ತದೆ. ನಂತರ ಸದರಿ ನಿವೇಶನವು ದಿನಾಂಕ: 25.01.1961 ರಂದು ಎಸ್.ಪಿ. ವೀರಭದ್ರ ಶೆಟ್ಟಿ ರವರಿಗೆ ವರ್ಗಾವಣೆಯಾಗಿದ್ದು, ಸದರಿಯವರು ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟಿರುತ್ತಾರೆ.

ವರ್ಗಾವಣೆದಾರರಾದ ಎಸ್.ಪಿ. ವೀರಭದ್ರ ಶೆಟ್ಟಿ ರವರು ದಿನಾಂಕ: 26.04.1974 ರಂದು ಮೃತರಾಗಿದ್ದು, ಸದರಿಯವರ ಪತ್ನಿಯಾದ ಭಾಗ್ಯಲಕ್ಷ್ಮಮ್ಮ ಹಾಗೂ ಮಕ್ಕಳುಗಳಾದ 1). ಲೇಟ್. ಎಸ್.ವಿ. ಗೋವಿಂದಶೆಟ್ಟಿ 2). ಲೇಟ್ ಎಸ್.ವಿ. ಗೋಪಾಲ್ ಶೆಟ್ಟಿ, 3). ಲೇಟ್. ಎಸ್.ವಿ. ರಂಗನಾಥ್ (ಮಗ) 4) ಲೇಟ್. ಮಂದಾರವಲ್ಲಿ (ಮಗಳು), 5). ಲೇಟ್ ಎಸ್.ವಿ. ವಿಶ್ವನಾಥ್, (ಮಗ), 6). ಲೇಟ್. ಎಂ.ವಿ. ರಾಮಕೃಷ್ಣಮ್ಮ 7). ಲೇಟ್. ಎಸ್.ವಿ. ಜಗದೀಶ್ ಇವರುಗಳು ಮೃತರಾಗಿರುತ್ತಾರೆ.

ವರ್ಗಾವಣೆದಾರರು ಮೃತರಾಗಿರುವುದರಿಂದ ಅವರ ಕುಟುಂಬದ ವಾರಸುದಾರರುಗಳಾದ ಸೊಸೆಯಂದಿರು 1). ಶ್ರೀಮತಿ. ಎಲ್ಲಮ್ಮ .ಎಸ್ (ಸೊಸೆ), 2). ಶ್ರೀಮತಿ ಚಂದ್ರಲಕ್ಷ್ಮಿ (ಸೊಸೆ), 3). ಶ್ರೀಮತಿ ಎಸ್.ವಿ. ಸುಮಿತ್ರ (ಸೊಸೆ), 4). ಶ್ರೀಮತಿ ಸುಜಾತ ಜಗದೀಶ್ (ಸೊಸೆ), ಮತ್ತು ಮೊಮ್ಮಕ್ಕಳುಗಳಾದ 5). ಶರತ್ ಶಿವಪೂಜ ಚಂದ್ರ, 6). ನಂದಕುಮಾರ್ ಜಿ. ಶಿವಪೂಜ 7). ಪ್ರಸನ್ನ ಕುಮಾರ್ ಶಿವಪೂಜ 8). ಎಸ್.ಜಿ. ರಾಮಕುಮಾರ್ 9). ಎಸ್.ಜಿ ಶ್ರೀನಿವಾಸ್, 10). ಶ್ರೀ. ಎಸ್.ಜಿ. ಸುರೇಶ್ ಬಾಬು 11). ಎಸ್.ಜಿ. ಅಜಿತ್, 12). ಎಸ್.ಆರ್. ದೇವದತ್ತ ಕುಮಾರ್ 13). ಎಸ್.ಕೆ. ರಾಮಪ್ರಸಾದ್, 14). ಎಸ್.ಕೆ. ರಾಮದ್ಯಾನಿ, 15). ಜಯಲಕ್ಷ್ಮಿ ಕುಪ್ಪರಾಜ್, 16). ಎಸ್.ವಿ. ಶ್ರೀಧರ್, 17). ಎಂ.ವಿ. ನಾಗರಾಜ, 18). ಎಂ.ವಿ. ಸರೋಜಮ್ಮ 19). ಬಿಂದು ಜಗದೀಶ್, 20). ಚೈತ್ರ ಜಗದೀಶ್ ರವರುಗಳು ಸೇರಿ **ತಮ್ಮಗಳ ಪರವಾಗಿ** ವ್ಯವಹರಿಸಲು ಶ್ರೀ. ಎಸ್.ಜಿ. ಸುರೇಶ್ ಬಾಬು ಮತ್ತು ಎಸ್.ಆರ್. ದೇವದತ್ತ ಕುಮಾರ್ ರವರುಗಳಿಗೆ ಅಧಿಕಾರ ನೀಡುವ ಬಗ್ಗೆ **4ನೇ ಅಡಿಷನಲ್ ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ರಲ್ಲಿ ಪಿ & ಎಸ್.ಸಿ. ನಂ. 25012/2014** ಅರ್ಜಿ ಸಲ್ಲಿಸಿ, ದಿನಾಂಕ: 14.06.2016 ರಂದು ನ್ಯಾಯಾಲಯದಿಂದ Letters of Administration ಪತ್ರ ಪಡೆದಿರುತ್ತಾರೆ.

ಮೇಲ್ಕಂಡ ನಿವೇಶನದ ಬಗ್ಗೆ ವ್ಯವಹರಿಸಲು ನ್ಯಾಯಾಲಯದಿಂದ Letters of Administration ಪತ್ರ ಪಡೆದಿರುವ ಶ್ರೀ. ಎಸ್.ಜಿ. ಸುರೇಶ್ ಬಾಬು ಮತ್ತು ಎಸ್.ಆರ್. ದೇವದತ್ತ ಕುಮಾರ್ ರವರುಗಳು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ನಿವೇಶನದ ವರ್ಗಾವಣೆ / ಕ್ರಯಪತ್ರ ಕೋರಿದ್ದು, ಸಂಬಂಧಿಸಿದಂತೆ ಕೆಲವು ದಾಖಲಾತಿಗಳಾದ ವಂಶವೃಕ್ಷ ಮರಣ ಸಮರ್ಥನ ಪತ್ರಗಳು, ಗುರುತಿನ ಚೀಟಿ, ನ್ಯಾಯಾಲಯದ ಆದೇಶದ ಪ್ರತಿ, ವರ್ಗಾವಣೆ ಪತ್ರ, ದಿನಾಂಕ: 04.09.2015 ರ ರಾಜ್ಯ ಪತ್ರದ ಪ್ರತಿ, ನಗರ ಪಾಲಿಕೆ ಖಾತಾ ಪತ್ರ, ಹಾಗೂ ಕಂದಾಯ ರಶೀದಿ ಸಲ್ಲಿಸಿದ್ದು, ನಿವೇಶನದ **ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಹಣ ಪಾವತಿಸಿರುವ ರಶೀದಿ ಹಾಗೂ ಮೂಲ ಮಂಜೂರಾತಿದಾರರ ಖಾತಾ ಪತ್ರ ಸಲ್ಲಿಸಿರುವುದಿಲ್ಲ.**

ಪ್ರಸ್ತುತ, ಮೇಲ್ಕಂಡ ವಾರಸುದಾರರುಗಳಿಗೆ ಪೈಕಿ **1) ಶ್ರೀ. ಎಸ್.ಜಿ. ಸುರೇಶ್ ಬಾಬು, ವಿಳಾಸ ನಂ.12/2, ಲಾವೆಲ್ ರಸ್ತೆ, ಮ್ಯೂಸಿಯಂ ರಸ್ತೆ, ಬೆಂಗಳೂರು. ಮತ್ತು 2). ಎಸ್.ಆರ್. ದೇವದತ್ತ ಕುಮಾರ್ ರವರ ವಿಳಾಸ ನಂ.16/36, 1ನೇ ಕ್ರಾಸ್, ವಸಂತನಗರ, ಬೆಂಗಳೂರು ಇಲ್ಲಿ ವಾಸಿಸುವ ಇವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಜಯಲಕ್ಷ್ಮಿಪುರಂ 4ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ 46 ಅಳತೆ 100x150 = 15,000 ಚ.ಅಡಿಗಳ ನಿವೇಶನವನ್ನು ಎಸ್.ಪಿ. ವೀರಭದ್ರ ಶೆಟ್ಟಿ ರವರ ಎಲ್ಲಾ ವಾರಸುದಾರರುಗಳಿಗೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡುವಂತೆ ಕೋರಿರುವುದರಿಂದ,** ವರ್ಗಾವಣೆ ಕೋರಿರುವ ಸ್ವತ್ತು ಖಾಲಿ ನಿವೇಶನವಾಗಿದ್ದು, ಗುಡಿಸಲುಗಳು ಇರುವ ಸ್ವತ್ತಾಗಿದ್ದು, ಸದರಿ ಸ್ವತ್ತಿನ ವರ್ಗಾವಣೆ/ಕ್ರಯಪತ್ರ ನೀಡುವ ಸಂಬಂಧಪಟ್ಟಂತೆ ಹಿತಾಸಕ್ತಿದಾರರಿಂದ ಅಥವಾ ಇತರೆ ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಹಾಗೂ ಮೇಲ್ಕಂಡ ನಿವೇಶನದ ಮೂಲ ಮಂಜೂರಾತಿ ಪತ್ರ, ಸ್ವಾಧೀನ ಪತ್ರ. ಹೊಂದಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮಹಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ವಿಶೇಷ ತಹಸೀಲ್ದಾರ್
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

'ರಂಗಭೂಮಿ ಕ್ಷೇತ್ರಕ್ಕೆ ಸರ್ಕಾರ ಪ್ರೋತ್ಸಾಹ ನೀಡಲಿ'

'ಹವ್ಯಾಸಿರಂಗದ ಮುತ್ತು ರತ್ನಗಳು' ಪುಸ್ತಕವನ್ನು ನಟ ಶ್ರೀನಾಥ್ ಭಾನುವಾರ ಬಿಡುಗಡೆಗೊಳಿಸಿದರು. (ಎಡದಿಂದ) ಧೀರೇಂದ್ರ ಎಸ್, ಬಿ.ಆರ್. ಜಯರಾಂ, ಗಿರಿಜಾ ಲೋಕೇಶ್, ಬೆಂ ಶ್ರೀ ರವೀಂದ್ರ, ಜಿ.ಎನ್. ನರಸಿಂಹಮೂರ್ತಿ ಇದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವ್ಯಾಸಿ ರಂಗಭೂಮಿ ಕ್ಷೇತ್ರಕ್ಕೆ ಸರ್ಕಾರ ಹೆಚ್ಚು ಪ್ರೋತ್ಸಾಹ ನೀಡಬೇಕು' ಎಂದು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಸಂಚಾಲಕ ಬೆಂ.ಶ್ರೀ.ರವೀಂದ್ರ ಹೇಳಿದರು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಭಾನುವಾರ ಆಯೋಜಿಸಿದ್ದ ಲೇಖಕ ಧೀರೇಂದ್ರ ಎಸ್ ಅವರ 'ಹವ್ಯಾಸಿರಂಗದ ಮುತ್ತು ರತ್ನಗಳು-40 ಕನ್ನಡದ ಕಲಾವಿದರ ರಂಗಸಂಕಥನ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಂಗಾಯಣಗಳು ಇಂದು ಬಿ.ವಿ. ಕಾರಂತರ ಆಶಯದಂತೆ ಕಾರ್ಯನಿರ್ವಹಿಸುತ್ತಿಲ್ಲ. ಧಾರವಾಡ, ಮೈಸೂರು, ಕಲಬುರಗಿಯಲ್ಲಿ ದೊಡ್ಡ-ದೊಡ್ಡ ರಂಗಾಯಣಗಳನ್ನು ನಿರ್ಮಿಸಲಾಗಿದೆ. ಆದರೆ, ಅಲ್ಲಿ ರಂಗಭೂಮಿಗೆ ಪ್ರಯೋಗಗಳು ನಡೆಯದೇ ವಿವಾದಗಳಲ್ಲೇ ಕಳೆದು ಹೋಗುತ್ತಿವೆ. ಈ ಸಂಸ್ಥೆಗೆ ಪುನಶ್ಚೇತನ ಮತ್ತು ಸಾಂಸ್ಕೃತಿಕ ಮೆರಗು ನೀಡಿ ಪ್ರಯೋಗಶೀಲತೆಯನ್ನು ಮೈಗೂಡಿಸಿಕೊಂಡು ಮುನ್ನಡೆಸಬೇಕು. ಅದಕ್ಕೆ ವೃತ್ತಿನಿರತ, ಹವ್ಯಾಸಿರಂಗದ ಕಲಾವಿದರನ್ನು ರಂಗಾಯಣಗಳಿಗೆ ನೇಮಕ ಮಾಡಬೇಕು' ಎಂದು ಒತ್ತಾಯಿಸಿದರು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ನಟ ಶ್ರೀನಾಥ್, 'ನಾಟಕ ರಂಗ ನಮಗೆ ಸಿಗದೇ ಹೋಗಿದ್ದರೆ ನಮ್ಮ ಪರಿಸ್ಥಿತಿ ಏನಾಗು ತ್ತಿತ್ತು ಎಂಬು ದನ್ನು ಈಗಲೂ ಯೋಚಿಸುತ್ತೇನೆ. ಹವ್ಯಾಸಿ ರಂಗದ ಮುತ್ತು ರತ್ನಗಳು ಪುಸ್ತಕದಲ್ಲಿ ಧೀರೇಂದ್ರ ಎಸ್ ಅವರು ಪ್ರತಿಯೊಬ್ಬ ಕಲಾವಿದನ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ' ಎಂದು ಶ್ಲಾಘಿಸಿದರು.

ಕಲಾವಿದರಾದ ಬಿ.ಆರ್. ಜಯರಾಂ, ಎಂ.ಪಿ. ವೆಂಕಟರಾವ್ ಮತ್ತು ಟಿ.ಎಸ್ ಶಿವಶಂಕರ್ ಅವರನ್ನು ಸನ್ಮಾನಿಸಲಾಯಿತು.

ನಟರಂಗದ ಸದಸ್ಯರು ರಂಗಗೀತೆಗಳನ್ನು ಪ್ರಸ್ತುತ ಪಡಿಸಿದರೆ, ನಟಿ ಗಿರಿಜಾ ಲೋಕೇಶ್ ಹೆಜ್ಜೆ ಹಾಕಿ ಸಭಿಕರನ್ನು ರಂಜಿಸಿದರು.

ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ ಅವರು ಪುಸ್ತಕ ಪರಿಚಯ ಮಾಡಿದರು. ಸ್ನೇಹ ಬುಕ್‌ಹೌಸ್ ಪ್ರಕಾಶನದ ಪರಶಿವಪ್ಪ ಇದ್ದರು.

ಪುಸ್ತಕ ಪರಿಚಯ
- ಪುಸ್ತಕ: ಹವ್ಯಾಸಿರಂಗದ ಮುತ್ತು ರತ್ನಗಳು
- ಲೇಖಕ: ಧೀರೇಂದ್ರ ಎಸ್.,
- ಪ್ರಕಾಶನ: ಸ್ನೇಹ ಬುಕ್‌ಹೌಸ್
- ಪುಟ:304 • ಬೆಲೆ:₹375

ವಿದ್ಯಾರ್ಥಿವೇತನ: ಅರ್ಜಿ ಆಹ್ವಾನ

ಬೆಂಗಳೂರು: ವಿಜಯಲಕ್ಷ್ಮಿ ಆರ್. ಎಲ್. ಜಾಲಪ್ಪ ಎಜುಕೇಷನ್ ಫೌಂಡೇಷನ್‌ನಿಂದ 2023–24ನೇ ಸಾಲಿನ ಶೈಕ್ಷಣಿಕ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಬಿಪಿಎಲ್ ಕಾರ್ಡ್ ಹೊಂದಿರುವ, ಅತಿ ಸಣ್ಣ ರೈತ, ಕೂಲಿ ಕಾರ್ಮಿಕರ ಕುಟುಂಬಗಳ ಪದವಿಪೂರ್ವ, ಐಟಿಐ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಅಧ್ಯಯನ ಮಾಡುತ್ತಿರುವ ಆರ್ಯ ಈಡಿಗ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳು ನವೆಂಬರ್ 30ರೊಳಗೆ ಅರ್ಜಿ ಸಲ್ಲಿಸಬಹುದು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ಆರ್ಯ ಈಡಿಗ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಿದೆ. ಅರ್ಜಿಗಳನ್ನು www.jalappaedufoundation.org ನಿಂದ ಪಡೆದು ಸೂಕ್ತ ದಾಖಲೆಗಳೊಂದಿಗೆ ನವೆಂಬರ್ 30ರೊಳಗೆ ಸಲ್ಲಿಸಬೇಕು.

ವಿಳಾಸ: ವಿಜಯಲಕ್ಷ್ಮಿ ಆರ್.ಎಲ್. ಜಾಲಪ್ಪ ಎಜುಕೇಷನ್ ಫೌಂಡೇಷನ್, ನಂ.126, ಸಿಲ್ವರ್ ಸ್ಟಾರ್ ಹೋಟೆಲ್, 6ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು 560009. ಮಾಹಿತಿಗೆ: 9900355995 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗ್ರೋ ಕೇರ್ ಇಂಡಿಯಾ ಪ್ರತಿಷ್ಠಾಪಿಸಿರುವ ಗ್ರೋ ಕೇರ್ ಇಂಡಿಯಾ ಬೆಸ್ಟ್ ಸ್ಟ್ರಾಟರ್ಜಿ ಪ್ರಶಸ್ತಿಗೆ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದ್ದು, ಲಖನೌನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಾಸನ ವಿಭಾಗೀಯ ನಿಯಂತ್ರಣಾಧಿಕಾರಿ ಎಂ. ದೀಪಕ್ ಕುಮಾರ್, ಶಿವಮೊಗ್ಗ ವಿಭಾಗೀಯ ನಿಯಂತ್ರಣಾಧಿಕಾರಿ ಜಿ. ವಿಜಯ್ ಕುಮಾರ್ ಪ್ರಶಸ್ತಿ ಸ್ವೀಕರಿಸಿದರು

ಕರ್ನಾಟಕ ರಾಜ್ಯೋತ್ಸವ ವಿಶೇಷ ರೀತಿಯಲ್ಲಿ ಆಚರಿಸಲು ಬಿಬಿಎಂಪಿ ಸಿದ್ಧತೆ

ಮೈದಾನಗಳಲ್ಲಿ ಕೆಂಪು–ಹಳದಿ ಗಾಳಿಪಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾಗಿ 50 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ ಈ ವರ್ಷ ಕರ್ನಾಟಕ ರಾಜ್ಯೋತ್ಸವವನ್ನು ವಿಶೇಷವಾಗಿ ಆಚರಿಸಲು ಬಿಬಿಎಂಪಿ ನಿರ್ಧರಿಸಿದೆ.

ಈ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಎಲ್ಲಾ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರಿಗೆ ಆದೇಶಿಸಿದ್ದಾರೆ.

ನ.1ರಂದು ರಾಜ್ಯೋತ್ಸವ ಕಾರ್ಯಕ್ರಮದ ವೇಳಾಪಟ್ಟಿಯಲ್ಲಿರುವಂತೆ ಧ್ವಜಾರೋಹಣ, ರಾಷ್ಟ್ರಗೀತೆ, ನಾಡಗೀತೆ ಹಾಡಿ, ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಬೇಕು. ನಂತರ, ಕ್ರಮವಾಗಿ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು', 'ಎಲ್ಲಾದರು ಇರು ಎಂತಾದರು ಇರು', 'ಒಂದೇ ಒಂದೇ ಕರ್ನಾಟಕ ಒಂದೇ', 'ಹೊತ್ತಿತೋ ಹೊತ್ತಿತೋ ಕನ್ನಡದ ದೀಪ', 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಗೀತೆಗಳನ್ನು ಕಡ್ಡಾಯವಾಗಿ ಹಾಡುವ ಮೂಲಕ ನುಡಿ ನಮನ

ಸಲ್ಲಿಸಬೇಕು.

'ಕರ್ನಾಟಕ ಸಂಭ್ರಮ-50– 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಘೋಷ ವಾಕ್ಯವನ್ನು ಮನೆಗಳ ಮುಂದೆ ಕೆಂಪು ಮತ್ತು ಹಳದಿ ಬಣ್ಣದ ರಂಗೋಲಿಗಳ ಮೂಲಕ ಬಿಡಿಸುವಂತೆ ನಾಗರಿಕರಲ್ಲಿ ಮನವಿ ಮಾಡಬೇಕು. ಎಲ್ಲಾ ಆಕಾಶವಾಣಿ ಕೇಂದ್ರಗಳಿಂದ (ರೇಡಿಯೊ) ಬೆಳಿಗ್ಗೆ 9 ಕ್ಕೆ ನಾಡಗೀತೆ ಪ್ರಸಾರವಾಗಲಿದ್ದು, ಎಲ್ಲರೂ ರಾಷ್ಟ್ರಗೀತೆಗೆ ಗೌರವ ಸಲ್ಲಿಸುವಂತೆ ನಾಡಗೀತೆಗೂ ಗೌರವ ಸಲ್ಲಿಸಲು ಮನವಿ ಮಾಡುವುದು.

ಸಂಜೆ 5ಕ್ಕೆ ನಗರದ ಎಲ್ಲಾ ಮೈದಾನಗಳಲ್ಲಿ ಕೆಂಪು-ಹಳದಿ ಬಣ್ಣದ ಗಾಳಿಪಟಗಳನ್ನು ಆಕಾಶಕ್ಕೆ ಹಾರಿ ಬಿಡುವ ಮೂಲಕ 'ಸುವರ್ಣ ಸಂಭ್ರಮ ಗಾಳಿಪಟ ಉತ್ಸವ' ಆಚರಿಸಬೇಕು.

ಸಂಜೆ 7ಕ್ಕೆ ನಗರದ ಎಲ್ಲಾ ಮನೆ, ಕಚೇರಿ ಹಾಗೂ ಅಂಗಡಿಗಳ ಮುಂದೆ ಹಣತೆ (ದೀಪ) ಹಚ್ಚುವ ಮೂಲಕ 'ಕನ್ನಡ ಜ್ಯೋತಿ' ಬೆಳಗುವಂತೆ ಬಿಬಿಎಂಪಿ ಸಿಬ್ಬಂದಿ ನಾಗರಿಕರಲ್ಲಿ ಮನವಿ ಮಾಡಿಕೊಳ್ಳಬೇಕು.

ನಗರದ ಆಟದ ಮೈದಾನಗಳು, ಉದ್ಯಾನಗಳು, ಕೆರೆ ಆವರಣ, ಅಪಾರ್ಟ್‌ಮೆಂಟ್, ಮಾಲ್‌ಗಳಲ್ಲಿ ಹಾಗೂ ಪ್ರಮುಖ ಸ್ಥಳಗಳಲ್ಲಿ ಎಲ್ಲ ಕಾರ್ಯಕ್ರಮಗಳನ್ನು ಆಚರಿಸಬೇಕು. ಸಂಘ ಸಂಸ್ಥೆಗಳು, ಅಪಾರ್ಟ್‌ಮೆಂಟ್ ಸಂಘಗಳು, ಹೋಟೆಲ್ ಯೂನಿಯನ್‌ಗಳು ಹಾಗೂ ಇತರ ಸಂಘ ಸಂಸ್ಥೆಗಳ ಸಹಯೋಗ ಪಡೆದು ಕಾರ್ಯಕ್ರಮ ಆಯೋಜಿಸಬೇಕು ಎಂದು ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

'ಹೆಸರಾಯಿತು ಕರ್ನಾಟಕ–50' ಕಾರ್ಯಕ್ರಮ ನಾಳೆ

ಬೆಂಗಳೂರು: ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿ 50 ವರ್ಷಗಳು ತುಂಬಿರುವ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು ನ.1ರಂದು 'ಹೆಸರಾಯಿತು ಕರ್ನಾಟಕ–50' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಕಸಾಪದ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ನಡೆಯಲಿರುವ ಈ ಕಾರ್ಯಕ್ರಮವನ್ನು ಮುಖ್ಯ ಮಾಹಿತಿ ಆಯುಕ್ತ ಎನ್.ಸಿ. ಶ್ರೀನಿವಾಸ ಉದ್ಘಾಟಿಸುವರು. ವಿದ್ವಾಂಸ ವೆಂಕಟಾಚಲಶಾಸ್ತ್ರಿ ಆಶಯ ನುಡಿಗಳನ್ನಾಡಲಿದ್ದಾರೆ. ಏಕೀಕರಣಕ್ಕಾಗಿ ಹುತಾತ್ಮರಾದ ರಂಜಾನ್‌ಸಾಬ್ ಅವರ ಮೊಮ್ಮಗ ಶರ್ಮಾಸ್ ವಲಿ ಅವರನ್ನು ಸನ್ಮಾನಿಸಲಾಗುವುದು ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ 'ಒಂದೇ ಒಂದೇ ಕರ್ನಾಟಕ ಒಂದೇ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ. ಮಧ್ಯಾಹ್ನ 1ರಿಂದ ಕವಯಿತ್ರಿ ಪಿ. ಚಂದ್ರಿಕಾ ಅಧ್ಯಕ್ಷತೆಯಲ್ಲಿ 'ಚಿರಂತನ ಕರ್ನಾಟಕ' ಕವಿಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3ರಿಂದ ಭಾಗ್ಯಶ್ರೀ ಗೌಡ ಮತ್ತು ತಂಡದಿಂದ 'ಹಚ್ಚೇವು ಕನ್ನಡದ ದೀಪ' ಗೀತ ಗಾಯನ ನಡೆಯಲಿದೆ. ಸಂಜೆ 4.30ಕ್ಕೆ ಸಾಹಿತಿ ದೊಡ್ಡರಂಗೇಗೌಡ ಸಮಾರೋಪ ಭಾಷಣ ಮಾಡುವರು ಎಂದು ತಿಳಿಸಿದರು.

3ಕ್ಕೆ ದತ್ತಿ ಪ್ರಶಸ್ತಿ ಪ್ರದಾನ: ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನ. 3ರಂದು ಬೆಳಿಗ್ಗೆ 10.30ಕ್ಕೆ ಜವಹರಲಾಲ್ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರದ ನೆವಿಲ್ ಮೊಟ್ ಸಭಾಂಗಣದಲ್ಲಿ ನಡೆಯಲಿದೆ. ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರಿಗೆ ವಿಜ್ಞಾನಿ ಸಿ.ಎನ್.ಆರ್. ರಾವ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಲಾಂಛನದಲ್ಲಿಲ್ಲ ಕನ್ನಡ ಅಂಕಿ: ಕರ್ನಾಟಕದ ಸುವರ್ಣ ಸಂಭ್ರಮ ಆಚರಣೆಗಾಗಿ ರಾಜ್ಯ ಸರ್ಕಾರ ಮಾಡಿರುವ ಲಾಂಛನದಲ್ಲಿ ಕನ್ನಡ ಅಂಕಿಯನ್ನು ಯಾರಿಗೂ ಕಾಣದಷ್ಟು ಚಿಕ್ಕದಾಗಿ ಕೆಳಗೆ ಹಾಕಿದ್ದಾರೆ. ಆಂಗ್ಲ ಸಂಖ್ಯೆಯನ್ನು (ಇಂಡೋ ಅರಬಿಕ್) ದೊಡ್ಡದಾಗಿ ಹಾಕಲಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದರೂ ಪ್ರತಿಕ್ರಿಯೆ ಬಂದಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

5 ಹೊಸ ಪ್ರಶಸ್ತಿ

ಕರ್ನಾಟಕದ ಸುವರ್ಣ ಮಹೋತ್ಸವದ ಅಂಗವಾಗಿ ಐದು ಹೊಸ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಮಹೇಶ ಜೋಶಿ ತಿಳಿಸಿದರು.

ಕನ್ನಡಕ್ಕಾಗಿ ಕೆಲಸ ಮಾಡಿದ 50 ಗಣ್ಯರಿಗೆ ಪ್ರಶಸ್ತಿ, ಏಕೀಕರಣಕ್ಕಾಗಿ ಹುತಾತ್ಮರಾದ ಏಕೈಕ ವ್ಯಕ್ತಿ ರಂಜಾನ್‌ಸಾಬ್ ಹೆಸರಲ್ಲಿ ಪ್ರಶಸ್ತಿ, ಸಂತ ಶಿಶುನಾಳ ಷರೀಫ್–ಗುರು ಗೋವಿಂದ ಭಟ್ ಪ್ರಶಸ್ತಿ, ಕನ್ನಡದ ಮೊದಲ ನಿಘಂಟು ತಜ್ಞ ರೆವರೆಂಡ್ ಫರ್ಡಿನೆಂಡ್ ಕಿಟೆಲ್ ಪ್ರಶಸ್ತಿ ಹಾಗೂ ವಿದೇಶದಲ್ಲಿ ಕನ್ನಡದ ಕೆಲಸ ಮಾಡುವ ಸಂಘಟನೆ/ವ್ಯಕ್ತಿಗೆ ಪ್ರಶಸ್ತಿ ನೀಡಲಾಗುವುದು ಎಂದರು.

ವಿಧಾನಸೌಧದಲ್ಲಿ ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿ ಭ್ರಷ್ಟಾಚಾರಮುಕ್ತ ಆಡಳಿತ ನೀಡುವ ಪ್ರತಿಜ್ಞಾ ವಚನ ಸ್ವೀಕರಿಸಿದರು –ಪ್ರಜಾವಾಣಿ ಚಿತ್ರ

ಭ್ರಷ್ಟಾಚಾರ ರಹಿತ ಆಡಳಿತದ ಪ್ರತಿಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಸೋಮವಾರ ನಡೆದ ಜಾಗೃತಿ ಅರಿವು ಸಪ್ತಾಹದಲ್ಲಿ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭ್ರಷ್ಟಾಚಾರದ ವಿರುದ್ಧ ಪ್ರತಿಜ್ಞಾ ವಚನ ಬೋಧಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯಕ್ರಮ ಆಯೋಜಿಸಿತ್ತು. 'ಸಾರ್ವಜನಿಕರಿಂದ ಯಾವುದೇ ಹಣ ಪಡೆಯದೇ ಕೆಲಸ ಮಾಡುತ್ತಿದ್ದೇವೆ. ಭ್ರಷ್ಟಾಚಾರಕ್ಕೆ ಆಸ್ಪದ ನೀಡುವುದಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತ ನೀಡಲು ಬದ್ಧರಾಗಿರುತ್ತೇವೆ' ಎಂದು ಸಚಿವಾಲಯದ ನೌಕರರು ಪ್ರತಿಜ್ಞೆ ಸ್ವೀಕರಿಸಿದರು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಉಪಸ್ಥಿತರಿದ್ದರು.

ತುಮಕೂರು– ಬೆಂಗಳೂರಿಗೆ ವಿಶೇಷ ಮೆಮು ರೈಲು

ತುಮಕೂರು: ಇದೇ ತಿಂಗಳ 31ರಿಂದ ಮೂರು ದಿನಗಳ ಕಾಲ ಅರಸೀಕೆರೆ ಪ್ಯಾಸೆಂಜರ್ ರೈಲು ಸಂಚಾರ ರದ್ದುಪಡಿಸಿದ್ದು, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ತುಮಕೂರು ರೈಲು ನಿಲ್ದಾಣದಿಂದ ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ವಿಶೇಷ ಮೆಮು ರೈಲು ಸಂಚರಿಸಲಿದೆ.

ಅ.31, ನ.1 ಮತ್ತು 2ರಂದು ಅರಸೀಕೆರೆ ಪ್ಯಾಸೆಂಜರ್ ರೈಲು ಸಂಚರಿಸುವ ಸಮಯಕ್ಕೆ ಸರಿಯಾಗಿ ತುಮಕೂರು ನಿಲ್ದಾಣದಿಂದ ಮೆಮು ರೈಲು ಸಂಚರಿಸಲಿದೆ. ತುಮಕೂರು–ಬೆಂಗಳೂರು ಮಧ್ಯದ ಎಲ್ಲ ನಿಲ್ದಾಣಗಳಲ್ಲಿ ನಿಲ್ಲಿಸಲಿದೆ ಎಂದು ರೈಲು ಪ್ರಯಾಣಿಕರ ವೇದಿಕೆ ತಿಳಿಸಿದೆ. ವಿಶೇಷ ರೈಲು ಸಂಚಾರಕ್ಕೆ ವ್ಯವಸ್ಥೆ ಮಾಡಿರುವುದಕ್ಕೆ ರೈಲು ಪ್ರಯಾಣಿಕರ ವೇದಿಕೆಯು ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದೆ.

ಬಿಬಿಎಂಪಿ: ಪ್ಯಾಕೇಜ್ ಟೆಂಡರ್‌ಗೆ ವಿರೋಧ

ಬೆಂಗಳೂರು: ಕಾಮಗಾರಿಗಳನ್ನು ಪ್ಯಾಕೇಜ್ ಮೂಲಕ ಟೆಂಡರ್ ಆಹ್ವಾನಿಸುವ ಆದೇಶವನ್ನು ಸರ್ಕಾರ ವಾಪಸ್ ಪಡೆಯಬೇಕು ಎಂದು ರಾಜ್ಯ ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಆಗ್ರಹಿಸಿದ್ದಾರೆ.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದಂತೆ ಮತ್ತು ಮೀಸಲಾತಿಯಿಂದ ವಂಚಿಸಲು ಪ್ಯಾಕೇಜ್ ಮೂಲಕ ಟೆಂಡರ್ ಕರೆಯಲು ಅನುವು ಮಾಡಿಕೊಡಲಾಗಿದೆ. ಈ ಆದೇಶ ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತದೆ' ಎಂದು ಎಚ್ಚರಿಸಿದ್ದಾರೆ.

'ಸಿಎಂ ಅಮೃತ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಯಲ್ಲಿ ₹485 ಕೋಟಿ ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆ ಮಾರ್ಪಾಟು ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಈ ಕಾಮಗಾರಿಗಳ ಕೋಷ್ಟಕ -2ರಲ್ಲಿ ₹ 1 ಕೋಟಿ ಮೊತ್ತದ ಒಳಗಿನ ಕಾಮಗಾರಿಗಳಿವೆ. ಆದರೆ, ಈ ಎಲ್ಲ ಕಾಮಗಾರಿಗಳನ್ನು ಒಟ್ಟುಗೂಡಿಸಿ ಪ್ಯಾಕೇಜ್‌ನಲ್ಲಿ ನಿರ್ವಹಿಸಲು ಸರ್ಕಾರ ಅನುಮೋದನೆ ನೀಡಿದೆ. ಇದರಿಂದ ಟೆಂಡರ್‌ನಲ್ಲಿ ಸ್ಪರ್ಧೆ ಏರ್ಪಡುವುದಿಲ್ಲ. ಸರ್ಕಾರದ ಕಾಯ್ದೆಯನ್ನು ಸರ್ಕಾರವೇ ಅನುಸರಿಸದಿರುವುದು ಸಂವಿಧಾನಕ್ಕೆ ಮಾಡಿದ ಅವಮಾನ' ಎಂದರು.

ಇಬ್ಬರು ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆ

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಎಂ.ಎಸ್. ಶ್ರೀಕರ ಅವರಿಗೆ ಅದೇ ಇಲಾಖೆಯ ಆಡಳಿತ ಸುಧಾರಣೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಏಡ್ಸ್ ಪ್ರಿವೆನ್ಷನ್ ಸೊಸೈಟಿಯ ಯೋಜನಾ ನಿರ್ದೇಶಕ ಎನ್.ಎಂ. ನಾಗರಾಜ ಅವರಿಗೆ ಸುವರ್ಣ ಆರೋಗ್ಯ ಟ್ರಸ್ಟ್‌ನ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೇಸರಿ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ 2ನೇ ವರ್ಷದ 'ನಮ್ಮ ಬ್ಯಾಟರಾಯನಪುರ ದಸರಾ ಉತ್ಸವ' ಹಾಗೂ ವಿವಿಧ ದೇವರ ಮೂರ್ತಿಗಳ ಶೋಭಾಯಾತ್ರೆ ಭಾನುವಾರ ವಿಜೃಂಭಣೆಯಿಂದ ನಡೆಯಿತು.

'ನಮ್ಮ ಬ್ಯಾಟರಾಯನಪುರ–ದಸರಾ' ಸಂಭ್ರಮ

ಯಲಹಂಕ: ಕೇಸರಿ ಫೌಂಡೇಶನ್ ವತಿಯಿಂದ ವಿದ್ಯಾರಣ್ಯಪುರದ ಎನ್.ಟಿ.ಐ ಮೈದಾನದಲ್ಲಿ ಆಯೋಜಿಸಿದ್ದ 2ನೇ ವರ್ಷದ 'ನಮ್ಮ ಬ್ಯಾಟರಾಯನಪುರ-ದಸರಾ ಉತ್ಸವ' ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ವಿವಿಧ ಗ್ರಾಮಗಳ 100ಕ್ಕೂ ಹೆಚ್ಚು ದೇವರ ಮೂರ್ತಿಗಳನ್ನು ಕೂರಿಸಿದ್ದ ಪಲ್ಲಕ್ಕಿಗಳನ್ನು ಮೈದಾನಕ್ಕೆ ತರಲಾಯಿತು. ನೂರಾರು ಮಹಿಳೆಯರು ಲಲಿತ ಸಹಸ್ರನಾಮ ಪಾರಾಯಣ ಮಾಡಿದರು. ಸಂಸದ ಡಿ.ವಿ. ಸದಾನಂದಗೌಡ, ಮಾಜಿ ಸಚಿವ ರಾಜುಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಕೇಸರಿ ಫೌಂಡೇಶನ್ ಅಧ್ಯಕ್ಷ ಎಚ್.ಸಿ. ತಮ್ಮೇಶ್ ಗೌಡ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಬಿ. ನಾರಾಯಣ, ಬಿಜೆಪಿ ಮುಖಂಡರಾದ ಪಿ.ಕೆ.ರಾಜಗೋಪಾಲ್, ತಿಂಡ್ಲು ಜಿ.ಶ್ರೀನಿವಾಸ್, ಟಿ.ಪಿ.ಪ್ರಕಾಶ್ ಇದ್ದರು.

ಪಿಇಎಸ್ ವಿ.ವಿ: ಸಮರ್ಪಣಾ ಓಟ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯ ಭಾನುವಾರ ನಗರದಲ್ಲಿ ಸಮರ್ಪಣಾ ಓಟ ಆಯೋಜಿಸಿತ್ತು.

ವಿದ್ಯಾರ್ಥಿಗಳು, ಪೋಷಕರು, ಸಾರ್ವಜನಿಕರು, ಪಿಇಎಸ್ ಸಂಸ್ಥೆಯ ಹಳೇ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕರ್ನಲ್ ಎಸ್.ಎಸ್.ರಾಜನ್ ಅವರು ಓಟಕ್ಕೆ ಚಾಲನೆ ನೀಡಿದರು. ಹುತಾತ್ಮ ಯೋಧರ ತ್ಯಾಗವನ್ನು ಸ್ಮರಿಸುವ ಹಾಗೂ ದೇಶಭಕ್ತಿಯನ್ನು ಜಾಗೃತಿಗೊಳಿಸುವ ಉದ್ದೇಶದಿಂದ ಈ ಓಟ ಆಯೋಜಿಸಲಾಗಿತ್ತು. 1,100 ಮಂದಿ ಓಟದಲ್ಲಿ ಪಾಲ್ಗೊಂಡಿದ್ದರು. ಹುತಾತ್ಮ ಯೋಧರ 20 ಕುಟುಂಬ ಗಳ ಸದಸ್ಯರನ್ನು ಗೌರವಿಸಲಾಯಿತು. ಪ್ರತಿ ಕುಟುಂಬಕ್ಕೆ ₹ 25 ಸಾವಿರ ನಗದು ಹಾಗೂ ಸ್ಮರಣಿಕೆ ನೀಡಲಾಯಿತು. ಮೇಜರ್ ಜನರಲ್ ಅನುಜ್ ಮಾಥುರ್, ಮೆಟಾಮಾರ್ಫೋಸ್ ಫೌಂಡೇಶನ್ ನಿರ್ದೇಶಕಿ ಶಕುಂತಲಾ ಭಂಡಾರ್ಕರ್, ಜೀವನ್ ಶೆಟ್ಟಿ, ರಿಜಿಸ್ಟ್ರಾರ್ ಕೆ.ಎಸ್.ಶ್ರೀಧರ್, ಡೀನ್ ವಿ.ಕೃಷ್ಣ, ಸಿವಿಲ್ ವಿಭಾಗದ ಮುಖ್ಯಸ್ಥ ಎಸ್.ವಿ.ವೆಂಕಟೇಶ್ ಇದ್ದರು.

'ಸುಳ್ಳು ಹೇಳುವ ಮುನ್ನ ಆತ್ಮವಿಮರ್ಶೆ ಮಾಡಿಕೊಳ್ಳಿ'

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಾನ್ ಸುಳ್ಳುಗಾರ. 15 ನೇ ಹಣಕಾಸು ಮಧ್ಯಂತರ ವರದಿಯಲ್ಲಿ ಕರ್ನಾಟಕಕ್ಕೆ ₹5495 ಕೋಟಿ ವಿಶೇಷ ಅನುದಾನ ತಿರಸ್ಕರಿಸಿದ್ದಾರೆಂದು ಹೇಳಿರುವ ಸುಳ್ಳು ನಿಮ್ಮ ಘನತೆಗೆ ತಕ್ಕುದಲ್ಲ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

'15 ನೇ ಹಣಕಾಸು ವರದಿಯಲ್ಲಿ ಈ ರೀತಿಯ ಅಂಶಗಳೇ ಪ್ರಸ್ತಾಪವಾಗಿಲ್ಲದಿರುವಾಗ ತಿರಸ್ಕರಿಸುವ ಮಾತೆಲ್ಲಿ ಬರುತ್ತದೆ? ನಿಮ್ಮ ಎಟಿಎಂ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದ ಆರ್ಥಿಕ ಸ್ಥಿತಿ ಹಳ್ಳ ಹಿಡಿದಿದೆ. ಅಭಿವೃದ್ಧಿಯ ಎಂಜಿನ್ ಕೆಟ್ಟು ನಿಂತಿದೆ. ಔದ್ಯಮಿಕ ಅವಕಾಶಗಳು ಪರ ರಾಜ್ಯಗಳ ಪಾಲಾಗುತ್ತಿವೆ' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಕರ್ನಾಟಕವನ್ನು ಪಂಚ ರಾಜ್ಯ ಚುನಾವಣೆಯ ಎಟಿಎಂ ಮಾಡಿಕೊಂಡಿರುವ ನಿಮ್ಮ ಸರ್ಕಾರದ ಭ್ರಷ್ಟಾಚಾರ, ಕಮಿಷನ್ ದಂಧೆಗಳು ಒಂದೊಂದಾಗಿ ಹೊರಬೀಳುತ್ತಿವೆ. ಸುಳ್ಳು ಭರವಸೆಗಳು ಬುಡಮೇಲಾಗುತ್ತಿದ್ದಂತೆ ಜನ ಸಾಮಾನ್ಯರ ಬೈಗುಳದಿಂದ ಬಚಾವಾಗಲು ಮೋದಿಯವರನ್ನು ಟೀಕಿಸುತ್ತಿದ್ದೀರಿ. ಸುಳ್ಳು ಹೇಳುವ ಮುನ್ನ ಆತ್ಮ ವಿಮರ್ಶೆ ಮಾಡಿಕೊಳ್ಳಿ' ಎಂದಿದ್ದಾರೆ.

ASTER DM HEALTHCARE SINCE 1987

ಆಸ್ಟರ್ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್ ಇದೀಗ ವೈಟ್‌ಫೀಲ್ಡ್‌ನಲ್ಲಿ

ಭವಿಷ್ಯದ ದೂರದೃಷ್ಟಿಯ 500 ಹಾಸಿಗೆಯ ಆಸ್ಪತ್ರೆ ಅತ್ಯಾಧುನಿಕ ಆರೋಗ್ಯ ಸುರಕ್ಷತಾ ತಂತ್ರಜ್ಞಾನದೊಂದಿಗೆ

ಆಸ್ಟರ್ ವೈಟ್ ಫೀಲ್ಡ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಭವಿಷ್ಯದ ಆರೋಗ್ಯ ರಕ್ಷಣೆಗೆ ಸ್ವಾಗತ. ಇಲ್ಲಿ ನಾವು ಅತ್ಯಾಧುನಿಕ ಆರೈಕೆ ವಿಧಾನವನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡಿದ್ದೇವೆ. ಏಳು ದೇಶಗಳಲ್ಲಿ ಮೂರೂವರೆ ದಶಕಗಳ ಪರಿಣತಿಯೊಂದಿಗೆ, ಆಸ್ಟರ್ ಡಿಎಂ ಹೆಲ್ತ್ ಕೇರ್ ದೀರ್ಘಕಾಲದಿಂದ ಆರೋಗ್ಯ ರಕ್ಷಣೆಯಲ್ಲಿ ತನ್ನ ನಾವೀನ್ಯತೆಗೆ ಹೆಸರಾಗಿದೆ. ಆಸ್ಟರ್ ಸಿಎಂಐ ಮತ್ತು ಆಸ್ಟರ್ ಆರ್ ವಿ ನಂತರ ಬೆಂಗಳೂರಿನಲ್ಲಿ ವೈಟ್ ಫೀಲ್ಡ್‌ನಲ್ಲಿ ನಮ್ಮ ಮೂರನೇ ಆಸ್ಪತ್ರೆಯನ್ನು ಹೆಮ್ಮೆಯಿಂದ ಪ್ರಸ್ತುತಪಡಿಸಿದ್ದೇವೆ. ಸುಧಾರಿತ ಆರೋಗ್ಯ ತಂತ್ರಜ್ಞಾನ, ವಿಶ್ವದರ್ಜೆಯ ಕ್ಲಿನಿಕಲ್ ಪರಿಣತಿ ಮತ್ತು ಆಸ್ಟರ್ ಅನ್ನು ಅದರ ಪ್ರಾರಂಭದಿಂದಲೂ ವ್ಯಾಖ್ಯಾನಿಸಿದ ಅತ್ಯುತ್ತಮ ಆರೈಕೆಯನ್ನು ಸಾದರಪಡಿಸುತ್ತಿದ್ದೇವೆ.

ಭಾರತದ ಮೊದಲ ಇಂಟ್ರಾಆಪರೇಟಿವ್ ಎಲೆಕ್ಟ್ರಾನ್ ವಿಕಿರಣ ಚಿಕಿತ್ಸೆ (ಐಒಇಆರ್‌ಟಿ)

4 ನೇ ತಲೆಮಾರಿನ ಡಾ ವಿನ್ಸಿ ರೊಬೊಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆ

ಎಲ್‌ಐಎನ್ ಎಸಿ ಸಮಗ್ರ ಎಸ್ ಜಿಆರ್ ಟಿ ಪರಿಹಾರಗಳು

ಬೈಪ್ಲೇನ್ ಹೈಬ್ರಿಡ್ ಕ್ಯಾಥ್ ಲ್ಯಾಬ್

ಡಿಜಿಟಲ್ ಪಿಇಟಿ-ಸಿಟಿ

128 ಚಾನೆಲ್ ಎಂಆರ್‌ಐ

Aster WHITEFIELD HOSPITAL
We'll Treat You Well

Aster International Institute of ONCOLOGY Complete Cancer Care | Aster MULTISPECIALITY HOSPITAL We'll Treat You Well | Aster WOMEN & CHILDREN We'll Treat You Well

ಸಮಯ ನಿಗದಿಗಾಗಿ
080-4510-8888

ಪ್ಲಾಟ್ ನಂ. 2, 3 ಮತ್ತು 4, ಸಾದರಮಂಗಲ ಕೈಗಾರಿಕಾ ಪ್ರದೇಶ, ಐಟಿಪಿಎಲ್ ಮುಖ್ಯರಸ್ತೆ, ವೈಟ್ ಫೀಲ್ಡ್ ಬೆಂಗಳೂರು, ಕರ್ನಾಟಕ - 560066, ಇಂಡಿಯಾ

www.asterhospitals.in

1. ನಗರದ ಬನಶಂಕರಿಯ ವೀರಭದ್ರನಗರದಲ್ಲಿರುವ ಎಸ್‌ವಿ ಕೋಚ್ ವರ್ಕ್ಸ್ ಹಾಗೂ ಬಸ್ ವರ್ಕ್‌ಶಾಪ್‌ನಲ್ಲಿ ಸೋಮವಾರ ಬಸ್‌ಗಳಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ನಂದಿಸಿದರು
2. ಅಗ್ನಿ ಅವಘಡದಲ್ಲಿ ಖಾಸಗಿ ಬಸ್‌ಗಳು ಕರಕಲಾಗಿರುವುದು –ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ

ವೀರಭದ್ರ ನಗರದಲ್ಲಿ ಬೆಂಕಿ ಅವಘಡ: ಸುಟ್ಟು ಕರಕಲಾದ 19 ಬಸ್‌ಗಳು • ಸುರಕ್ಷತಾ ಕ್ರಮ ನಿರ್ಲಕ್ಷ್ಯ ಆರೋಪ

ವರ್ಕ್‌ಶಾಪ್‌ನಲ್ಲಿ ಬಸ್‌ಗಳು ಧಗಧಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬನಶಂಕರಿ 3ನೇ ಹಂತದ ವೀರಭದ್ರನಗರದ ಎಸ್‌.ವಿ. ಕೋಚ್ ವರ್ಕ್ಸ್ ಹಾಗೂ ಬಸ್ ವರ್ಕ್‌ಶಾಪ್‌ನಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಅಗ್ನಿ ಅವಘಡಕ್ಕೆ 19 ಖಾಸಗಿ ಬಸ್‌ಗಳು ಸುಟ್ಟು ಕರಕಲಾಗಿವೆ.

10 ಬಸ್‌ಗಳಿಗೆ ಬೆಂಕಿ ತಗುಲಿ ಒಳಭಾಗದಲ್ಲಿದ್ದ ಸೀಟುಗಳಿಗೆ ಹಾಗೂ ಹೊರಭಾಗಕ್ಕೆ ಹಾನಿಯಾಗಿದೆ. ಶ್ರೀನಿವಾಸ್ ಎಂಬುವರಿಗೆ ಸೇರಿದ ವರ್ಕ್‌ಶಾಪ್‌ನಲ್ಲಿ ಬೆಂಕಿ ದುರಂತ ಸಂಭವಿಸಿದೆ. ಹವಾನಿಯಂತ್ರಿತ, ಸಾಮಾನ್ಯ ಹಾಗೂ ಮಿನಿ ಬಸ್‌ಗಳು ರಿಪೇರಿಗೆ ಬಂದಿದ್ದವು. ಅವುಗಳಲ್ಲಿ ಕೆಲವು ಬಸ್‌ಗಳನ್ನು ಶೆಡ್‌ನಲ್ಲಿ ನಿಲುಗಡೆ ಮಾಡಲಾಗಿತ್ತು. ಉಳಿದ ಬಸ್‌ಗಳನ್ನು ಶೆಡ್ ಎದುರಿನ ಖಾಲಿ ಪ್ರದೇಶದಲ್ಲಿ ಅಕ್ಕಪಕ್ಕವೇ ನಿಲುಗಡೆ ಮಾಡಲಾಗಿತ್ತು.

ಸೋಮವಾರ ಬೆಳಿಗ್ಗೆ ಎಂದಿನಂತೆ ಕೆಲಸಕ್ಕೆ ಬಂದಿದ್ದ ಸಿಬ್ಬಂದಿ, ರಿಪೇರಿ ಕೆಲಸದಲ್ಲಿ ಮಗ್ನರಾಗಿದ್ದರು. ಬಸ್‌ವೊಂದರ ವೆಲ್ಡಿಂಗ್ ವೇಳೆ ಒಂದು ಬಸ್‌ಗೆ ಬೆಂಕಿ ತಗುಲಿದೆ. ಬೆಂಕಿಯ ರಭಸ ಹೆಚ್ಚಾಗಿ ಖಾಲಿ ಪ್ರದೇಶ ಹಾಗೂ ಶೆಡ್ ಒಳಭಾಗದಲ್ಲಿದ್ದ ಎಲ್ಲ ಬಸ್‌ಗಳಿಗೆ ಬೆಂಕಿ ವ್ಯಾಪಿಸಿದೆ ಎಂದು ಪೊಲೀಸರು ತಿಳಿಸಿದರು.

ಸ್ಥಳಕ್ಕೆ ಬಂದ ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳದ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ ಸಂಜೆ ವೇಳೆಗೆ ಬೆಂಕಿ ನಿಯಂತ್ರಣಕ್ಕೆ ತರಲು ಯಶಸ್ವಿಯಾದರು. ಮಾಲೀಕ ಶ್ರೀನಿವಾಸ್ ನಾಪತ್ತೆಯಾಗಿದ್ದಾರೆ.

ಸುಟ್ಟು ಕರಕಲಾದ ಬಸ್

50 ಮಂದಿ ಪಾರು?: ಬೆಂಕಿ ಅವಘಡ ಸಂಭವಿಸಿದ ವೇಳೆ ವರ್ಕ್‌ಶಾಪ್‌ನಲ್ಲಿ 50 ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಅವರೆಲ್ಲರೂ ಹೊರಬಂದು ಅಪಾಯದಿಂದ ಪಾರಾಗಿದ್ದಾರೆ.

ಬಸ್‌ಗಳ ಕವಚ ನಿರ್ಮಾಣದ ಕೆಲಸಕ್ಕೆಂದು 12 ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿತ್ತು. ಆ ಸಿಲಿಂಡರ್‌ಗಳಿಗೆ ಬೆಂಕಿ ತಗುಲಿದ್ದರೆ ಬೆಂಕಿ ಜ್ವಾಲೆ ಮತ್ತಷ್ಟು ವ್ಯಾಪಿಸುತ್ತಿತ್ತು. ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸುವ ಸಾಧ್ಯತೆಯಿತ್ತು. ರಿಪೇರಿಗೆ ಬಂದಿದ್ದ ಕೆಲವು ಬಸ್‌ಗಳಲ್ಲಿ ಬ್ಯಾಟರಿ ಸಹ ತೆಗೆದು ಇಡಲಾಗಿತ್ತು. ಇದಕ್ಕೆ ಬೆಂಕಿ ತಗುಲಿಲ್ಲ. ಎ.ಸಿ ಬಸ್‌ಗಳನ್ನು ಗುರುತಿಸಲು ಸಾಧ್ಯವಿಲ್ಲದಂತೆ ಸುಟ್ಟಿವೆ. ಎ.ಸಿ ಬಸ್‌ಗಳಲ್ಲಿ ಸೀಟು ಹಾಗೂ ವಿಂಡೊ ಸ್ಕ್ರೀನ್‌ಗಳು ಇರುವುದರಿಂದ ಬೆಂಕಿ ಬೇಗನೆ ವ್ಯಾಪಿಸಿತು ಎಂದು ಕಾರ್ಮಿಕರು ತಿಳಿಸಿದರು.

'ಸುರಕ್ಷಿತ ಕ್ರಮ ಇರಲಿಲ್ಲ': ವರ್ಕ್‌ಶಾಪ್‌ನಲ್ಲಿ ಯಾವುದೇ ಸುರಕ್ಷತಾ ಕ್ರಮ ಇರಲಿಲ್ಲ. ಘಟನೆ ಕುರಿತು ತನಿಖೆ ನಡೆಸಲಾಗುವುದು ಎಂದು ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳದ ಸಿಬ್ಬಂದಿ ತಿಳಿಸಿದರು.

ಬಸ್ ಮಾಲೀಕರಿಗೆ ನಷ್ಟ: ಸಣ್ಣಪುಟ್ಟ ರಿಪೇರಿ ಹಾಗೂ ಬಸ್‌ಗಳ ಹೊರಭಾಗದ ಕವಚ ನಿರ್ಮಾಣಕ್ಕೆ ಬಸ್‌ಗಳನ್ನು ವರ್ಕ್‌ಶಾಪ್‌ಗೆ ಬಿಡಲಾಗಿತ್ತು. ಕೆಲವು ಬಸ್‌ಗಳು ತಿಂಗಳಿಂದಲೂ ಇಲ್ಲೇ ಇದ್ದವು.

'ಅಪಘಾತದಲ್ಲಿ ಬಸ್‌ಗೆ ಹಾನಿಯಾಗಿತ್ತು. ಹೊಸದಾಗಿ ಕವಚ ನಿರ್ಮಾಣಕ್ಕೆಂದು ಬಸ್ ಅನ್ನು ವರ್ಕ್‌ಶಾಪ್‌ಗೆ ಬಿಡಲಾಗಿತ್ತು. ಅವರು ರಿಪೇರಿ ಮಾಡಿಕೊಟ್ಟಿರಲಿಲ್ಲ. ಈಗ ಅಗ್ನಿ ಅವಘಡದಿಂದ ನಷ್ಟವಾಗಿದೆ' ಎಂದು ನಿದಾ ಟ್ರಾವೆಲ್ಸ್ ಮಾಲೀಕ ಮಹಮದ್ ಜಬೀ ಉಲ್ಲಾ ಹೇಳಿದರು.

ಪ್ರತ್ಯೇಕ ವರದಿಗೆ ಸೂಚನೆ: ಡಿ.ಕೆ. ಶಿವಕುಮಾರ್

ಅಗ್ನಿ ದುರಂತ ಸ್ಥಳಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

'ಹಾನಿ ಪ್ರಮಾಣ ಇನ್ನೂ ಗೊತ್ತಾಗಿಲ್ಲ. ಮೊದಲು ವರದಿ ಬರಲಿ, ಆನಂತರ ಕ್ರಮ ತೆಗೆದುಕೊಳ್ಳಲಾಗುವುದು. ವೆಲ್ಡಿಂಗ್ ಮಾಡುವ ವೇಳೆ ಕಿಡಿ ಹಾರಿ ಒಂದು ಬಸ್‌ಗೆ ಬೆಂಕಿ ಬಿದ್ದು, ಅದು ಹರಡಿಕೊಂಡಿದೆ. ಪ್ರಾಣಹಾನಿ ಸಂಭವಿಸಿಲ್ಲ. ಅಗ್ನಿಶಾಮಕ ದಳದವರು ಅತ್ಯಂತ ಶೀಘ್ರವಾಗಿ ಬೆಂಕಿ ನಂದಿಸಿದ್ದಾರೆ. ಪೊಲೀಸ್ ಮತ್ತು ಅಗ್ನಿಶಾಮಕದಳದ ಉನ್ನತ ಅಧಿಕಾರಿಗಳಿಗೆ ಈ ವಿಚಾರವಾಗಿ ಪ್ರತ್ಯೇಕ ವರದಿ ನೀಡುವಂತೆ ಸೂಚನೆ ನೀಡಿದ್ದೇನೆ' ಎಂದು ಶಿವಕುಮಾರ್ ಹೇಳಿದರು.

'ದುರಂತ ನಡೆದ ಸ್ಥಳ ಖಾಸಗಿಯವರಿಗೆ ಸೇರಿದ್ದು, ಇವರು ಸಹ ಸಣ್ಣ ಪ್ರಮಾಣದ ಅಗ್ನಿ ನಿಯಂತ್ರಣ ವ್ಯವಸ್ಥೆ ಇಟ್ಟುಕೊಂಡಿದ್ದಾರೆ. ಆದರೂ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಲು ಸೂಚನೆ ನೀಡಿದ್ದೇನೆ. ಇಂತಹ ಸೂಕ್ಷ್ಮ ಕೆಲಸಗಳು ನಡೆಯುವ ಜಾಗಗಳಲ್ಲಿ ಕಟ್ಟೆಚ್ಚರ ಅಗತ್ಯ' ಎಂದರು.

ಪಟಾಕಿ ದುರಂತ ನಡೆದ ನಂತರ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ಇಂತಹ ಸೂಕ್ಷ್ಮ ವಲಯಗಳಲ್ಲಿ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ ಎಂದರು.

ವರುಣನ ನೆರವು

ಬೆಂಕಿ ಅವಘಡ ಸಂಭವಿಸಿದ ವೇಳೆಯಲ್ಲೇ ಈ ಭಾಗದಲ್ಲಿ ಜೋರು ಮಳೆ ಸುರಿಯಿತು. ಇದು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿ ಸ್ವಲ್ಪ ನೆರವಾಯಿತು.

ಅಕ್ಟೋಬರ್‌ನಲ್ಲಿ ಸರಣಿ ಬೆಂಕಿ ಅವಘಡಗಳು

ಅ.7: ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಪಟಾಕಿ ದಾಸ್ತಾನು ಮಳಿಗೆಯಲ್ಲಿ ಅಗ್ನಿ ಅವಘಡ ಸಂಭವಿಸಿತ್ತು. ಈ ದುರಂತದಲ್ಲಿ 17 ಮಂದಿ ಮೃತಪಟ್ಟಿದ್ದರು.

ಅ.14: ಲಗ್ಗೆರೆಯ ಚಾಮುಂಡಿ ನಗರದ ಹೈಟೆನ್ಶನ್ ಲೈನ್ ಸ್ಟ್ರೀಟ್‌ನಲ್ಲಿ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಸ್ಫೋಟಗೊಂಡು ಬೆಂಕಿ ಹೊತ್ತಿದ್ದರಿಂದ ಗುಜರಿ ಅಂಗಡಿ, ಅಕ್ಕ–ಪಕ್ಕದ ಮನೆಗಳಿಗೆ ಬೆಂಕಿ ವ್ಯಾಪಿಸಿ ಹಲವು ವಸ್ತುಗಳು ಸುಟ್ಟಿದ್ದವು.

ಅ.14: ವಿಜಯನಗರ ಬಳಿಯ ಪೈಪ್‌ಲೈನ್ ರಸ್ತೆಯ ಅಗರಬತ್ತಿ ತಯಾರಿಕೆ ಘಟಕದಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ 8 ದ್ವಿಚಕ್ರ ವಾಹನಗಳು ಸುಟ್ಟು ಕರಕಲಾಗಿದ್ದವು.

ಅ.18: ಕೋರಮಂಗಲ ಬಳಿಯ ತಾವರಕೆರೆ ಜಂಕ್ಷನ್‌ನ ಮಡ್‌ಪೈಪ್ ಕೆಫೆಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿತ್ತು. ಇಡೀ ಕೆಫೆ ಬೆಂಕಿಗೆ ಆಹುತಿಯಾಗಿತ್ತು. ಪ್ರಾಣ ಉಳಿಸಿಕೊಳ್ಳಲು ಅಡುಗೆ ಸಿಬ್ಬಂದಿಯೊಬ್ಬರು ನಾಲ್ಕು ಅಂತಸ್ತಿನ ಕಟ್ಟಡದಿಂದ ಜಿಗಿದಿದ್ದರು.

ಅ.28: ಹೆಗಡೆ ನಗರ ಬಳಿಯ ತಿರುಮೇನಹಳ್ಳಿಯ ಹಜ್ ಭವನದಲ್ಲಿ ಬೆಂಕಿ ಅವಘಡ ಸಂಭವಿಸಿ ಭವನಕ್ಕೆ ಹಾನಿಯಾಗಿತ್ತು.

ಸುದ್ದಿ 2 ನಿಮಿಷ

ಅಗ್ನಿದುರಂತ ತಡೆಗೆ ಮುನ್ನೆಚ್ಚರಿಕೆ ಸಚಿವ ಕೃಷ್ಣಬೈರೇಗೌಡ ಸೂಚನೆ

ಬೆಂಗಳೂರು: ನಗರ ಪ್ರದೇಶದಲ್ಲಿ ಹೆಚ್ಚುತ್ತಿರುವ ಅಗ್ನಿ ದುರಂತಗಳಿಂದ ಪ್ರಾಣಾಪಾಯಗಳು ಹೆಚ್ಚುತ್ತಿವೆ. ಅಗ್ನಿ ದುರಂತಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮವಹಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ಅಗ್ನಿ ಶಾಮಕದಳದ ಅಧಿಕಾರಿಗಳ ಜೊತೆಗಿನ ಸಭೆಯಲ್ಲಿ ಮಾತನಾಡಿದ ಕೃಷ್ಣ ಬೈರೇಗೌಡ, ಕಳೆದ 20 ದಿನಗಳ ಅವಧಿಯಲ್ಲಿ ಬೆಂಗಳೂರಿನಲ್ಲೇ ಮೂರು ಕಡೆಗಳಲ್ಲಿ ಅಗ್ನಿ ಅನಾಹುತಗಳು ಸಂಭವಿಸಿವೆ. ಅಗ್ನಿ ದುರಂತಗಳಿಂದ ಜನರೂ ಭಯಭೀತರಾಗಿದ್ದಾರೆ. ಹೀಗಾಗಿ ಬೆಂಗಳೂರು ನಗರದ ಭಾಗಗಳೂ ಸೇರಿ ರಾಜ್ಯಾದ್ಯಂತ ಅಗ್ನಿ ದುರಂತಗಳು ಸಂಭವಿಸದಂತೆ ತಡೆಯುವಂತಾಗಬೇಕು ಎಂದು ಅವರು ಸಲಹೆ ನೀಡಿದರು.

ಅಗ್ನಿಶಾಮಕ ದಳದ ಉನ್ನತೀಕರಣಗಳ ಬಗ್ಗೆಯೂ ಗಮನವಹಿಸಬೇಕಿದೆ. ಇದರ ಜೊತೆಗೆ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವಾಗಲೇ ಅಗ್ನಿ ದುರಂತ ತಡೆಗೆ ತೆಗೆದುಕೊಳ್ಳಲಾಗಿರುವ ಕ್ರಮಗಳ ಬಗ್ಗೆಯೂ ಪರಿಶೀಲಿಸಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಬೇಕು ಎಂದೂ ಸೂಚಿಸಿದರು.

ಅಗ್ನಿಶಾಮಕ ದಳದ ಉನ್ನತೀಕರಣ ಹಾಗೂ ಹೊಸ ಅಗ್ನಿಶಾಮಕ ದಳಗಳನ್ನು ಸ್ಥಾಪಿಸುವ ಕುರಿತ ಕ್ರಿಯಾ ಯೋಜನೆ ಮಂಡಿಸಿದ ಅಗ್ನಿ ಶಾಮಕದಳ ಪೊಲೀಸ್ ಮಹಾ ನಿರ್ದೇಶಕ ಕಮಲ್ ಪಂತ್, ಉಡುಪಿ ಜಿಲ್ಲೆಯ ಮಣಿಪಾಲ, ದಾವಣಗೆರೆಯ ನ್ಯಾಮತಿ, ವಿಜಯಪುರ ಜಿಲ್ಲೆಯ ನಿಡಗುಂದಿ– ಬಬಲೇಶ್ವರ, ರಾಯಚೂರಿನ ಮಸ್ಕಿ, ಬೆಳಗಾವಿಯ ಮೂಡಲಗಿ, ಬಳ್ಳಾರಿಯ ಕಂಪ್ಲಿ ಹಾಗೂ ಕಲಬುರಗಿಯ ಶಹಬಾದ್ ಭಾಗದಲ್ಲಿ ನೂತನ ಅಗ್ನಿಶಾಮಕ ದಳ ಸ್ಥಾಪಿಸುವ ವಿವರ ನೀಡಿದರು.

ಬೆಂಗಳೂರು ಸೇರಿ ನಗರ ಪ್ರದೇಶಗಳಲ್ಲಿ ಸಂಭವಿಸುತ್ತಿರುವ ಅಗ್ನಿ ಅವಘಡಗಳ ತಡೆಗೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬ ಕುರಿತು ಶೀಘ್ರದಲ್ಲೇ ಇಲಾಖೆಗೆ ವರದಿ ನೀಡುವುದಾಗಿಯೂ ಅವರು ತಿಳಿಸಿದರು.



ಯುವತಿ ಜತೆಗೆ ಅಸಭ್ಯ ವರ್ತನೆ ಆರೋಪಿ ಪತ್ತೆಗೆ ತನಿಖೆ

ಬೆಂಗಳೂರು: ನಗರದ ಪ್ರತಿಷ್ಠಿತ ಮಾಲ್‌ವೊಂದರಲ್ಲಿ ವ್ಯಕ್ತಿಯೊಬ್ಬ ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದು, ಪೊಲೀಸರು ಆರೋಪಿ ಪತ್ತೆಗೆ ಮುಂದಾಗಿದ್ದಾರೆ.

ಯುವತಿ ಜತೆಗೆ ವ್ಯಕ್ತಿ ಅಸಭ್ಯವಾಗಿ ವರ್ತನೆ ಮಾಡಿದ್ದ ದೃಶ್ಯವನ್ನು ಮಾಲ್‌ಗೆ ಬಂದಿದ್ದ ಯುವಕ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ. ಬಳಿಕ ಘಟನೆಯ ಮಾಹಿತಿಯನ್ನು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದರು. ಆತನ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಆಗ್ರಹಿಸಿದ್ದರು. ಮಾಹಿತಿ ಆಧರಿಸಿ ಮಾಗಡಿ ರಸ್ತೆಯ ಪೊಲೀಸರು ವಿಡಿಯೊವನ್ನು ಪರಿಶೀಲನೆ ನಡೆಸಿದ್ದಾರೆ.

'ಘಟನೆ ಕುರಿತು ಇದುವರೆಗೂ ಯಾರೂ ದೂರು ನೀಡಿಲ್ಲ' ಎಂದು ಪೊಲೀಸರು ತಿಳಿಸಿದರು.

'ಅ.29ರಂದು ಸಂಜೆ 6.30ರ ಸುಮಾರಿಗೆ ಕುಟುಂಬಸ್ಥರ ಜತೆಗೆ ಮಾಲ್‌ಗೆ ತೆರಳಿದ್ದೆ. ಅದೇ ವೇಳೆಗೆ ವ್ಯಕ್ತಿಯೂ ಬಂದಿದ್ದ. ಇಡೀ ಮಾಲ್‌ನಲ್ಲಿ ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿದ್ದ. ಆತನನ್ನೇ ಹಿಂಬಾಲಿಸಿದೆ. ಆಗ ಯುವತಿಯರೊಂದಿಗೆ ಅನುಚಿತವಾಗಿ ವರ್ತನೆ ಮಾಡುತ್ತಿದ್ದ. ಬಳಿಕ ಮಾಲ್‌ನ ಆಡಳಿತ ಮಂಡಳಿ ಹಾಗೂ ಭದ್ರತಾ ಸಿಬ್ಬಂದಿಗೂ ಮಾಹಿತಿ ನೀಡಿದೆ. ಭದ್ರತಾ ಸಿಬ್ಬಂದಿ ಆ ವ್ಯಕ್ತಿಯನ್ನು ಹುಡುಕುವಷ್ಟರಲ್ಲಿ ಅಲ್ಲಿಂದ ನಾಪತ್ತೆಯಾಗಿದ್ದ' ಎಂದು ವಿಡಿಯೊ ಮಾಡಿದ ಯುವಕ ತಿಳಿಸಿದ್ದಾರೆ.

ಕೆಕೆಆರ್‌ಟಿಸಿ ಬಸ್‌ಗೆ ಬೆಂಕಿ: ಮಹಾರಾಷ್ಟ್ರಕ್ಕೆ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಾರಾಷ್ಟ್ರದಲ್ಲಿ ಮೀಸಲಾತಿ ಸಂಬಂಧ ಹೋರಾಟ ನಡೆಯುತ್ತಿದ್ದು, ಕರ್ನಾಟಕಕ್ಕೆ ಸೇರಿದ ಕೆಕೆಆರ್‌ಟಿಸಿ ಬಸ್‌ಗೆ ಸೋಮವಾರ ಬೆಂಕಿ ಹಚ್ಚಿದ ಪರಿಣಾಮ ಅಂತರ ರಾಜ್ಯ ಬಸ್ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪ ತಿಳಿಸಿದ್ದಾರೆ.

'ಬೀದರ್ ಜಿಲ್ಲೆಯ ಭಾಲ್ಕಿಯಿಂದ ಪುಣೆಗೆ ಸೋಮವಾರ ಹೊರಟಿದ್ದ ಬಸ್ (ಕೆಎ–38 ಎಫ್–1201) ಅನ್ನು ಮಹಾರಾಷ್ಟ್ರದ ಉಮರ್ಗಾ ಬಳಿಯ ತರುರಿ ಗ್ರಾಮದಲ್ಲಿ ಪ್ರತಿಭಟನಾಕಾರರು ತಡೆದು ಪ್ರಯಾಣಿಕರನ್ನು ಕೆಳಗಿಳಿಸಿ ಬಸ್‌ಗೆ ಬೆಂಕಿ ಹಚ್ಚಿದ್ದಾರೆ. ಈ ಹಿನ್ನೆಲೆಯಲ್ಲಿ ತುಳಜಾಪುರ ಯಾತ್ರೆ ಸೇರಿದಂತೆ ಮಹಾರಾಷ್ಟ್ರಕ್ಕೆ ಅಂತರರಾಜ್ಯ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ' ಎಂದು ಅವರು ಹೇಳಿದರು.

'ಬಸ್‌ನಲ್ಲಿದ್ದ 39 ಪ್ರಯಾಣಿಕರಿಗೆ ಸ್ಥಳೀಯ ಪೊಲೀಸರ ನೆರವಿನಿಂದ ಸುರಕ್ಷಿತವಾಗಿ ಪ್ರಯಾಣಿಸಲು ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಮಹಾರಾಷ್ಟ್ರದಲ್ಲಿ ಕಾರ್ಯಾಚರಣೆಯಲ್ಲಿರುವ ಬಸ್‌ಗಳನ್ನು ಹತ್ತಿರದ ಪೊಲೀಸ್ ಠಾಣೆ, ಬಸ್ ಡಿಪೊಗಳಲ್ಲಿ ಪಾರ್ಕ್ ಮಾಡಲು ಸಂಸ್ಥೆ ಸಿಬ್ಬಂದಿಗೆ ನಿರ್ದೇಶನ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಮಹಾರಾಷ್ಟ್ರದ ಉಮರ್ಗಾ ಬಳಿಯ ತರುರಿ ಗ್ರಾಮದಲ್ಲಿ ಸೋಮವಾರ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದರಿಂದ ಸುಟ್ಟು ಕರಕಲಾಗಿರುವ ಬಸ್

ಇಬ್ಬರು ಸಂಸದರ ರಾಜೀನಾಮೆ

ಛತ್ರಪತಿ ಸಂಭಾಜಿನಗರ/ನಾಸಿಕ್ (ಪಿಟಿಐ): ಮರಾಠ ಮೀಸಲಾತಿ ಬೇಡಿಕೆಗೆ ಬೆಂಬಲಿಸಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ನಿಷ್ಠರಾದ, ಶಿವಸೇನೆಯ ಇಬ್ಬರು ಸಂಸದರು ರಾಜೀನಾಮೆಯನ್ನು ನೀಡಿದ್ದಾರೆ.

ಹಿಂಗೋಳಿ ಸಂಸದ ಹೇಮಂತ ಪಾಟೀಲ್ ನವದೆಹಲಿಯಲ್ಲಿ ಲೋಕಸಭೆಯ ಸಚಿವಾಲಯಕ್ಕೆ ರಾಜೀನಾಮೆ ಪತ್ರ ಸಲ್ಲಿಸಿದ್ದರೆ, ನಾಸಿಕ್ ಕ್ಷೇತ್ರದ ಸಂಸದ ಹೇಮಂತ್ ಗೋಡ್ಸೆ ಶಿಂಧೆ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿದ್ದಾರೆ.

ಮಹಾರಾಷ್ಟ್ರ ಸಂಸದ, ಸಚಿವರಿಗೆ ಪ್ರವೇಶ ನಿರ್ಬಂಧ

ಬೆಳಗಾವಿ: ಮಹಾರಾಷ್ಟ್ರದ ಮೂವರು ಸಚಿವರು ಹಾಗೂ ಒಬ್ಬ ಸಂಸದ ಬೆಳಗಾವಿ ನಗರ ಅಥವಾ ಜಿಲ್ಲೆಯ ಗಡಿ ಪ್ರವೇಶಿಸದಂತೆ ನಿರ್ಬಂಧ ಹೇರಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವಕ್ಕೆ ವಿರುದ್ಧವಾಗಿ ಎಂಇಎಸ್ ಕರಾಳ ದಿನಾಚರಣೆಗೆ ಸಿದ್ಧತೆ ನಡೆಸಿದೆ. ಇದರಲ್ಲಿ ಪಾಲ್ಗೊಳ್ಳಲು ಮಹಾರಾಷ್ಟ್ರ ಗಡಿ ಉಸ್ತುವಾರಿ ಸಚಿವರಾದ ಶಂಭುರಾಜೆ ದೇಸಾಯಿ, ಚಂದ್ರಕಾಂತ ಪಾಟೀಲ, ಸಚಿವ ದೀಪಕ ಕೇಸರಕರ ಹಾಗೂ ಸಂಸದ ಧೈರ್ಯಶೀಲ ಮಾನೆ ಅವರಿಗೆ ಆಹ್ವಾನ ನೀಡಲಾಗಿದೆ.

ಈ ನಾಯಕರು ಬೆಳಗಾವಿಗೆ ಬಂದರೆ ಪ್ರಚೋದನಕಾರಿ ಭಾಷಣ ಮಾಡುವ ಸಾಧ್ಯತೆ ಇದೆ. ಅಲ್ಲದೇ, ಕನ್ನಡ ಸಂಘಟನೆಗಳು ಮುತ್ತಿಗೆ ಹಾಕುವ ಎಚ್ಚರಿಕೆ ನೀಡಿವೆ. ರಾಜ್ಯೋತ್ಸವ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿನ್ನೆಲೆಯಲ್ಲಿ ಈ ನಾಲ್ವರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅ.31ರ ಬೆಳಿಗ್ಗೆ 6ರಿಂದ ನವೆಂಬರ್ 2ರ ಸಂಜೆಯವರೆಗೂ ಈ ನಾಯಕರು ಜಿಲ್ಲೆಯ ಗಡಿ ಪ್ರವೇಶಿಸಬಾರದು ಎಂದು ಆದೇಶಿಸಿದ್ದಾರೆ.

'ಕಬ್ಬಿಣ ಅದಿರು' ಹೆಸರಿನಲ್ಲಿ ₹1.05 ಕೋಟಿ ವಂಚನೆ

ದುಪ್ಪಟ್ಟು ಲಾಭದ ಆಮಿಷ • ಠಾಣೆಗೆ ದೂರು ನೀಡಿದ ಉದ್ಯಮಿ– ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಬ್ಬಿಣದ ಅದಿರು ಗಣಿಗಾರಿಕೆಯಲ್ಲಿ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡುವುದಾಗಿ ಆಮಿಷವೊಡ್ಡಿ ₹ 1.05 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಚಂದ್ರಾಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನಗರದ ನಿವಾಸಿಯಾಗಿರುವ 68 ವರ್ಷದ ಉದ್ಯಮಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. 'ಗುಡ್ ಚಾಯ್ಸ್ ಮತ್ತು ಪದ್ಮಾವತಿ ಇಂಪೆಕ್ಸ್' ಮಾಲೀಕರಾದ ರಾಜಸ್ಥಾನದ ಗಣಪತ್‌ಲಾಲ್ ಸಾಲೇಚಾ (72) ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2008ರ ಜನವರಿ 31ರಿಂದ 2023ರ ಅಕ್ಟೋಬರ್ 26ರವರೆಗೆ ನಡೆದಿರುವ ವ್ಯವಹಾರದಲ್ಲಿ ವಂಚನೆ ಆಗಿರುವುದಾಗಿ ದೂರುದಾರರು ಆರೋಪಿಸುತ್ತಿದ್ದಾರೆ. ವಂಚನೆ ಸಂಬಂಧ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದ್ದು, ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಗಣಪತ್‌ಲಾಲ್, ಕುಟುಂಬ ಸಮೇತ ಬೆಂಗಳೂರಿಗೆ ಬಂದು ಹಲವು ವರ್ಷ ವಾಸವಿದ್ದರು. 2009ರಲ್ಲಿ ಬೆಂಗಳೂರು ತೊರೆದು ತಮ್ಮ ಸ್ವಂತ ಊರು ರಾಜಸ್ಥಾನದಲ್ಲಿ ಉಳಿದುಕೊಂಡಿದ್ದಾರೆ. ಅವರನ್ನು ದೂರುದಾರರು ಹಲವು ಬಾರಿ ಸಂಪರ್ಕಿಸಿ, ಹಣ ವಾಪಸು ನೀಡುವಂತೆ ಕೋರಿದ್ದರು. ಆದರೆ, ಆರೋಪಿ ಇದುವರೆಗೂ ಹಣ ನೀಡಿಲ್ಲ' ಎಂದು ಮೂಲಗಳು ಹೇಳಿವೆ.

ದೂರಿನ ವಿವರ: 'ಸ್ನೇಹಿತನ ಪಾಲುದಾರಿಕೆಯಲ್ಲಿ ಕಂಪನಿಯೊಂದನ್ನು ನಡೆಸುತ್ತಿದ್ದೆ. 2008ರಲ್ಲಿ ರಾಜಾಜಿನಗರದಲ್ಲಿದ್ದ 'ಗುಡ್ ಚಾಯ್ಸ್ ಮತ್ತು ಪದ್ಮಾವತಿ ಇಂಪೆಕ್ಸ್' ಮಾಲೀಕ ಗಣಪತ್‌ಲಾಲ್ ಪರಿಚಯವಾಗಿತ್ತು. ಕಬ್ಬಿಣದ ಅದಿರು ಗಣಿಕಾರಿಕೆ ನಡೆಸುವ ಕಂಪನಿ ತಮ್ಮದೆಂದು ಹೇಳಿದ್ದ ಗಣಪತ್‌ಲಾಲ್, ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುವುದಾಗಿ ತಿಳಿಸಿದ್ದರು' ಎಂದು ಉದ್ಯಮಿ ದೂರಿನಲ್ಲಿ ತಿಳಿಸಿದ್ದಾರೆ.

'ಗಣಪತ್‌ಲಾಲ್ ಮಾತು ನಿಜವೆಂದು ನಂಬಿ, 2008ರಿಂದ ಹಂತ ಹಂತವಾಗಿ ₹ 1.05 ಕೋಟಿ ಹಣ ಹೂಡಿಕೆ ಮಾಡಿದ್ದೆ. 'ಗಣಿಗಾರಿಕೆಯಲ್ಲಿ ಲಾಭ ಬರುತ್ತಿದೆ' ಎಂಬುದಾಗಿ ಹೇಳಿದ್ದ ಆರೋಪಿ, ಆರಂಭದಲ್ಲಿ ಚೆಕ್ ನೀಡಿದ್ದ. ಇದಾದ ನಂತರ ಆರೋಪಿ, ಯಾವುದೇ ಹಣವನ್ನು ನೀಡಿಲ್ಲ. 2009ರಲ್ಲಿ ಗಣಿಗಾರಿಕೆ ಪರವಾನಗಿ ರದ್ದಾಯಿತೆಂದು ಹೇಳಿದ್ದ ಆರೋಪಿ, ರಾಜಸ್ಥಾನಕ್ಕೆ ಸ್ಥಳಾಂತರಗೊಂಡರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'2009ರಿಂದ ಇಲ್ಲಿಯವರೆಗೂ ಹಲವು ಬಾರಿ ಗಣಪತ್‌ಲಾಲ್ ಅವರಿಗೆ ಕರೆ ಮಾಡಿ, ಹಣ ವಾಪಸು ನೀಡುವಂತೆ ಕೋರಿಕೊಂಡಿದ್ದೆ. ರಿಯಲ್ ಎಸ್ಟೇಟ್ ಹಾಗೂ ಇತರೆ ವ್ಯವಹಾರ ಮಾಡುತ್ತಿದ್ದು, ಅದರಿಂದ ಹಣ ಬಂದ ನಂತರ ವಾಪಸು ನೀಡುವುದಾಗಿ ಆರೋಪಿ ಹೇಳಿದ್ದ. 2014ರಲ್ಲಿ ಮದುವೆಯೊಂದರಲ್ಲಿ ಪಾಲ್ಗೊಳ್ಳಲು ರಾಜಸ್ಥಾನಕ್ಕೆ ಹೋಗಿದ್ದ. ಈ ವೇಳೆ ಭೇಟಿಯಾಗಲು ಹೋದಾಗ ಆರೋಪಿ ಕೈಗೆ ಸಿಕ್ಕಿರಲಿಲ್ಲ.'

'ಹಣ ನೀಡಲು ಆರೋಪಿ ಸತಾಯಿಸುತ್ತಿದ್ದಾರೆ. ನಾನು ಈಗ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದೇನೆ. ಆರೋಪಿಯನ್ನು ಪತ್ತೆ ಮಾಡಿ ಹಣ ವಾಪಸು ಕೊಡಿಸಿ' ಎಂದೂ ದೂರಿನಲ್ಲಿ ತಿಳಿಸಿದ್ದಾರೆ.

ರಾಕ್‌ಲೈನ್ ವೆಂಕಟೇಶ್ ಸಹೋದರನ ಮನೆಯಲ್ಲಿ ಕಳವು

ಬೆಂಗಳೂರು: ಮಹಾಲಕ್ಷ್ಮಿಲೇಔಟ್‌ನ ನಾಗಪುರ ರಸ್ತೆಯ ನಿವಾಸಿ, ಉದ್ಯಮಿ ಭ್ರಮರೇಶ್ ಅವರ ಮನೆಯಲ್ಲಿ ₹4 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳವು ಮಾಡಲಾಗಿದೆ.

ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರ ಸಹೋದರ ಭ್ರಮರೇಶ್ ಅವರು ಕುಟುಂಬದ ಸದಸ್ಯರ ಜೊತೆಗೆ ಯುರೋಪ್ ಪ್ರವಾಸಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ ಕಳ್ಳರು ಕೃತ್ಯ ಎಸಗಿದ್ದಾರೆ. ಭಾನುವಾರ ಮನೆಗೆ ವಾಪಸ್ ಬಂದು ನೋಡಿದಾಗ ಕಳವು ನಡೆದಿರುವುದು ಗೊತ್ತಾಗಿದೆ.

ಮನೆಯ ಕಾವಲುಗಾರ ನಾಪತ್ತೆಯಾಗಿದ್ದು, ಆತ ಕೆಲವರೊಂದಿಗೆ ಸೇರಿಕೊಂಡು ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ. ಮಹಾಲಕ್ಷ್ಮಿ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಆರೋಪಿಗಳ ಪತ್ತೆಗೆ ನಾಲ್ಕು ತಂಡಗಳು ವಿವಿಧ ರಾಜ್ಯಗಳಿಗೆ ತೆರಳಿವೆ. ನೇಪಾಳದ ವ್ಯಕ್ತಿಯನ್ನು ಕಾವಲುಗಾರ ಕೆಲಸಕ್ಕೆ ನೇಮಿಸಿಕೊಂಡಿದ್ದರು. ಸುಳಿವು ಸಿಕ್ಕಿದೆ. ಸದ್ಯದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

'ಮನೆಯ ಚಾವಣಿಯ ಬಾಗಿಲು ಒಡೆದು ಒಳಗೆ ನುಗ್ಗಿದ ಕಳ್ಳರು 5 ಕೆ.ಜಿ ಚಿನ್ನ, ಕೆಲವು ವಜ್ರದ ಆಭರಣ ಹಾಗೂ ₹6 ಲಕ್ಷ ನಗದು ಕಳವು ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಒಂದು ಅಡಿ ಜಾಗಕ್ಕೆ ಜಗಳ: ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ರಮೇಶ್

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ಭಾನುವಾರ ರಾತ್ರಿ ಮನೆ ಕಟ್ಟುವ ಸಂಬಂಧ ಒಂದು ಅಡಿ ಜಾಗದ ವಿಚಾರವಾಗಿ ಆರಂಭವಾದ ಜಗಳ ವ್ಯಕ್ತಿಯೊಬ್ಬರ ಕೊಲೆಯಲ್ಲಿ ಅಂತ್ಯವಾಗಿದೆ.

ರಮೇಶ್ (27) ಕೊಲೆಯಾದ ವ್ಯಕ್ತಿ. ಮೋಸೆಸ್, ಜಗದೀಶ್ ಮತ್ತು ಜೋಸೆಫ್ ಕೊಲೆ ಆರೋಪಿಗಳು. ಆರೋಪಿ ಜೋಸೆಫ್‌ನನ್ನು ಬಂಧಿಸಿದ್ದು, ಇನ್ನಿಬ್ಬರು ಆರೋಪಿಗಳ ಪತ್ತೆಗಾಗಿ ಹುಡುಕಾಟ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ರಮೇಶ್, ಪತ್ನಿ ಮತ್ತು ಮಕ್ಕಳೊಂದಿಗೆ ಹೆಬ್ಬಗೋಡಿಯಲ್ಲಿ ವಾಸವಾಗಿದ್ದರು.ಇವರ ಪಕ್ಕದ ಮನೆಯಲ್ಲಿದ್ದ ಆರೋಪಿಗಳಾದ ಮೋಸೆಸ್, ಜಗದೀಶ್, ಜೋಸೆಫ್ ಅವರು ರಮೇಶ್‌ನೊಂದಿಗೆ ಆಗಾಗ ಕ್ಷುಲ್ಲಕ ಕಾರಣಗಳಿಗಾಗಿ ಜಗಳ ಮಾಡುತ್ತಿದ್ದರು ಎಂದಿದ್ದಾರೆ.

'ಈ ಸಂಬಂಧ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ರಮೇಶ್ ನೀಡಿದ ದೂರಿನ ಹಿನ್ನೆಲೆಯಲ್ಲಿ ಜೈಲಿಗೆ ಸಹ ಕಳುಹಿಸಲಾಗಿತ್ತು. ರಮೇಶ್ ತನ್ನ ಹಳೆ ಮನೆ ಕೆಡವಿ, ಹೊಸ ಮನೆ ಕಟ್ಟಲು ಅಡಿಪಾಯ ಹಾಕುತ್ತಿದ್ದರು. ಆಗ ಒಂದು ಅಡಿ ಜಾಗದ ಸಂಬಂಧ ಆರೋಪಿಗಳು ಗಲಾಟೆ ತೆಗೆದಿದ್ದಾರೆ. ಮನೆಯ ಮುಂದೆ ಸಿಮೆಂಟ್ ಮತ್ತು ಧೂಳು ಹಾಕುತ್ತಿರಿ ಎಂದು ಜಗಳ ಪ್ರಾರಂಭಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಜಗದೀಶ್, ಮೋಸೆಸ್ ಅವರು ಲಾಂಗ್ ಹಿಡಿದು ಮನಸೋ ಇಚ್ಛೆ ರಮೇಶ್ ಮೇಲೆ ಹಲ್ಲೆ ನಡೆಸಿದ್ದರಿಂದ ರಮೇಶ್ ಮೃತಪಟ್ಟಿದ್ದಾರೆ' ಎಂದು ರಮೇಶ್ ಪತ್ನಿ ಕಾವ್ಯ ದೂರಿನಲ್ಲಿ ತಿಳಿಸಿದ್ದಾರೆ.

ಸವಿತಾ ಸಮಾಜದ ವೃತ್ತಿಪರ ಕಿಟ್ ಪೂರೈಕೆ ಹಣ ಬಾಕಿ

ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸವಿತಾ ಸಮಾಜದ ಆರ್ಥಿಕ ಉತ್ತೇಜನಕ್ಕೆ ನೆರವಾಗುವ ಯೋಜನೆಯಡಿ ಪೂರೈಸಲಾಗಿದ್ದ 98 ಕಿಟ್‌ಗಳ ₹ 6 ಲಕ್ಷಕ್ಕೂ ಹೆಚ್ಚಿನ ಬಾಕಿ ಪಾವತಿ ಮಾಡದ ಆರೋಪದಡಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮೆಸರ್ಸ್ ಮ್ಯಾಕ್ಸ್ ಟ್ರೇಡರ್ಸ್ ಮಾಲೀಕರಾದ ಪ್ರಿಯಾ ಬಿರಾದಾರ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ, ಕಲ್ಯಾಣ ವಿಭಾಗದ ವಿಶೇಷ ಆಯುಕ್ತ, ಜಂಟಿ ಆಯುಕ್ತ ಸೇರಿದಂತೆ ಒಟ್ಟು ಆರು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?

ಹಿಂದುಳಿದ ವರ್ಗಗಳ ಆರ್ಥಿಕ ಉತ್ತೇಜನಕ್ಕೆ ನೆರವಾಗುವ ಯೋಜನೆಯಡಿ ಕರೆಯಲಾಗಿದ್ದ ಕಿಟ್ ಪೂರೈಕೆ ಟೆಂಡರ್ ಪ್ರಕ್ರಿಯೆಯಲ್ಲಿ ಮ್ಯಾಕ್ಸ್ ಟ್ರೇಡರ್ಸ್ ಪಾಲ್ಗೊಂಡಿತ್ತು. ಪ್ರತಿಯೊಂದು ಕಿಟ್‌ನ ಮೌಲ್ಯ ₹ 6,786ಕ್ಕೆ ನಿಗದಿಯಾಗಿ ಅದರಂತೆ ಬಿಬಿಎಂಪಿಗೆ 98 ವೃತ್ತಿಪರ ಕಿಟ್ ಪೂರೈಸಿತ್ತು. ಈ 98 ಕಿಟ್‌ಗಳ ಬಾಕಿ ಮೊತ್ತವಾದ ₹ 6.60 ಲಕ್ಷವನ್ನು ಬಿಬಿಎಂಪಿ ಪಾವತಿ ಮಾಡಿರಲಿಲ್ಲ.

ಈ ಕುರಿತಂತೆ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿದಾರರ ಮನವಿಯನ್ನು ಎರಡು ತಿಂಗಳಲ್ಲಿ ಪರಿಗಣಿಸುವಂತೆ ಆದೇಶಿಸಿತ್ತು. 'ಏಕಸದಸ್ಯ ನ್ಯಾಯಪೀಠದ ಆದೇಶ ಪಾಲನೆ ಮಾಡಿಲ್ಲ' ಎಂದು ಆಕ್ಷೇಪಿಸಿ ಕಂಪನಿ ಈ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದೆ.

ನಗರದಲ್ಲಿ ಇಂದು

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಶ್ರೀದೇವಿ ಅನ್ನಪೂರ್ಣ ಸಿಂಗ್, ಡಾ.ಸಿ. ಎನ್. ಅಶ್ವತ್ಥನಾರಾಯಣ, ಜಯಕರ ಎಸ್. ಎಂ., ಆಯೋಜನೆ ಮತ್ತು ಸ್ಥಳ: ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಕೆಂಗೇರಿ, ಬೆಳಿಗ್ಗೆ 10

ಆಸ್ಟರ್ ಆಸ್ಪತ್ರೆಯ ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಯು.ಟಿ. ಖಾದರ್, ಡಾ. ಶರಣಪ್ರಕಾಶ್ ಪಾಟೀಲ, ಪಿ.ಸಿ. ಮೋಹನ್, ಮಂಜುಳಾ ಅರವಿಂದ್ ಲಿಂಬಾವಳಿ, ಆಯೋಜನೆ ಮತ್ತು ಸ್ಥಳ: ಆಸ್ಟರ್ ಆಸ್ಪತ್ರೆ, ವೈಟ್‌ಫೀಲ್ಡ್, ಬೆಳಿಗ್ಗೆ 10.30

'ಕರುನಾಡ ಚೇತನ' ಪ್ರಶಸ್ತಿ ಪ್ರದಾನ: ಎ.ವಿ. ನಾವಡ, ಅಧ್ಯಕ್ಷತೆ: ಸೈಮನ್ ಬರ್ತಲೋಮಿಯೋ, ಅತಿಥಿಗಳು: ಎಲ್. ಅರಳಪ್ಪ, ಮೈಕೆಲ್ ಅಂತೋನಿ, ಪ್ರದೀಪ್ ಕುಮಾರ್ ಜೆಡ್, ಪ್ರಶಾಂತ್ ಪ್ರೇಮ್ ಕುಮಾರ್, ರಫಾಯಲ್ ರಾಜ್, ಪ್ರಶಸ್ತಿ ಪುರಸ್ಕೃತರು: ಎಂ. ಅಬ್ದುಲ್ ರೆಹಮಾನ್ ಪಾಷಾ, ಸ್ಮಿತಾರೆಡ್ಡಿ, ಅಂತೋಣಿರಾಜ್, ಆಲ್ಫ್ರೆಡ್ ಟೆನ್ನಿಸನ್, ರಾಮಸ್ವಾಮಿ, ಎ. ಜೋಸೆಫ್, ಕಾಣಿಕೆರಾಜ್, ಪೂಂಡಿ ಸೆಲ್ವಿ ಎಸ್., ರಫೇಲ್, ಥಾಮಸ್ ಪುಷ್ಪರಾಜ್, ಕಿರೀಟಪ್ಪ, ಡೇವಿಡ್ ರಾಜ್ ಸಿ., ಪ್ರಭು ಬಾಸ್ಕೊ, ಜಾನ್ ಸೆಲೆಸ್ಟಿನ್, ಹೃದಯರಾಜ್, ಆಯೋಜನೆ: ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ: ಫಾದರ್ ಕಿಟೆಲ್ ಪ್ರತಿಮೆ ಮುಂಭಾಗ, ಎಂ.ಜಿ. ರಸ್ತೆ, ಬೆಳಿಗ್ಗೆ 11

ಸಮಾಲೋಚನಾ ಸಭೆ: ಆಯೋಜನೆ: ಮಲೆನಾಡು ಕರಾವಳಿ ಜನಪರ ಒಕ್ಕೂಟ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 11.30

ಕಾವ್ಯನಂದ ಸ್ಮರಣಾರ್ಥ ಪದವಿ ವಿದ್ಯಾರ್ಥಿಗಳಿಗೆ ಅಂತರ ಕಾಲೇಜು ಸ್ವರಚಿತ ಕವನ ವಾಚನ ಸ್ಪರ್ಧೆ: ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಅತಿಥಿಗಳು: ವಿಜಯಾ ನಂದೀಶ್ವರ, ಪ್ರೇಮಾ ಸಿದ್ಧರಾಜು, ಬೇಲೂರು ರಘುನಂದನ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಳಿಗ್ಗೆ 10

ಎಚ್.ಎಸ್. ಶಿವಪ್ರಕಾಶ್

ಡಾಕ್ಟರೇಟ್ ಪದವಿ ಪ್ರದಾನ: ಥಾವರಚಂದ್ ಗೆಹಲೋತ್, ಪದವಿ ಪುರಸ್ಕೃತರು: ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ನಾಗೇಶ್ ವಿ. ಬೆಟ್ಟಕೋಟೆ, ಆಯೋಜನೆ: ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆ ವಿಶ್ವವಿದ್ಯಾಲಯ, ಸ್ಥಳ: ಬ್ಯಾಂಕ್ವೆಟ್ ಹಾಲ್, ರಾಜಭವನ, ಮಧ್ಯಾಹ್ನ 12.30

ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ, ಪ್ರಶಸ್ತಿ ಪ್ರದಾನ: ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ, ಸಿ.ಎಚ್. ಹನುಮಂತರಾಯ, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಸ್ಮರಣ ಸಂಚಿಕೆ ಬಿಡುಗಡೆ: ವಸುಂಧರಾ ಭೂಪತಿ, ಪ್ರಶಸ್ತಿ ಪುರಸ್ಕೃತರು: ಎಲ್. ಶಿವಶಂಕರ್, ಎಚ್.ಎಲ್. ಯಮುನಾ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ. ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಪ್ಯಾಲೆಸ್ಟೀನ್ ಸಮಸ್ಯೆಯ ಒಂದು ಅವಲೋಕನ: ಭಾಷಣಕಾರರು: ಶಿವಸುಂದರ್, ಮೊಹಮ್ಮದ ಸಾದ್ ಬೆಳಗಾಮಿ, ಬಿ.ಟಿ. ವೆಂಕಟೇಶ್, ಲಬೀದ್ ಶಾಫಿ, ಆಯೋಜನೆ: ಸಾಲಿಡಾರಿಟಿ ಯೂಥ್ ಮೂವ್‌ಮೆಂಟ್, ಸ್ಥಳ: ಬಿಫ್ಟ್ ಸಭಾಂಗಣ, ಕ್ವೀನ್ಸ್ ರಸ್ತೆ, ಸಂಜೆ 6.30

53ನೇ ಸಂಗೀತ ಸಮ್ಮೇಳನದ ಸಂಗೀತ ಕಛೇರಿ: ಗಾಯನ: ಹರಿಹರನ್ ಎಂ.ಬಿ., ಅಶೋಕ ಎಸ್., ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಕೆ.ವಿ. ಪ್ರಸಾದ್, ಘಟ: ಎಸ್.ಎನ್. ನಾರಾಯಣ ಮೂರ್ತಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮಳೆಗಾಲದಲ್ಲಿ ಜಾರುಬಂಡೆಯಾಗುವ ಪಾದಚಾರಿ ಮಾರ್ಗಗಳಲ್ಲಿ ವಾಯುವಿಹಾರಿಗಳ ನಡಿಗೆ

ಲಾಲ್‌ಬಾಗ್: ಹಾಳಾದ ನಡಿಗೆ ಪಥ!

• ಖಲೀಲಅಹ್ಮದ ಶೇಖ

ಬೆಂಗಳೂರು: ಹಾಳಾದ ನಡಿಗೆ ಪಥಗಳು, ಮಳೆಗೆ ಕೊಚ್ಚಿಹೋಗಿರುವ ಪಾದಚಾರಿ ಮಾರ್ಗದಲ್ಲಿ ಆತಂಕದಿಂದಲೇ ಸಂಚರಿಸುವ ವಾಯುವಿಹಾರಿಗಳು... ಇದು ಲಾಲ್‌ಬಾಗ್ ಉದ್ಯಾನದಲ್ಲಿ ಕಂಡು ಬರುವ ದೃಶ್ಯಗಳು.

ದಶಕಗಳಿಂದ ದುರಸ್ತಿ ಕಾಣದ ಈ ನಡಿಗೆ ಪಥಗಳು ಕಿತ್ತು ಹೋಗಿ, ಸಾಲು ಗುಂಡಿಗಳು ಬಿದ್ದಿವೆ. ಪಾದಚಾರಿ ಮಾರ್ಗಗಳು ಸಮತಟ್ಟಾಗಿಲ್ಲದ ಕಾರಣ ವಾಯು ವಿಹಾರಿಗಳು, ಪ್ರವಾಸಿಗರು ನಡೆಯುವಾಗ ಎಲ್ಲಿ ಬೀಳುತ್ತೇವೋ ಎಂಬ ಆತಂಕದಲ್ಲೇ ಹೆಜ್ಜೆ ಹಾಕುತ್ತಾರೆ. ಮಳೆಗಾಲದಲ್ಲಂತೂ ಪಾದಚಾರಿ ಮಾರ್ಗಗಳೆಲ್ಲ ಜಾರು ಬಂಡಿಗಳಾಗುತ್ತವೆ.

ಲಾಲ್‌ಬಾಗ್‌ನ ಬೆಟ್ಟದ ಸುತ್ತಲೂ ಇರುವ 2 ಕಿ.ಮೀ. ಪಾದಚಾರಿ ಮಾರ್ಗ, ಕೆರೆಯ ಸುತ್ತಲೂ ಇರುವ 1 ಕಿ.ಮೀ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಈ ನಡಿಗೆ ಪಥಗಳಿಗೆ ಹಾಕಲಾಗಿದ್ದ ಮಣ್ಣು ಮಳೆಗೆ ಕೊಚ್ಚಿಕೊಂಡು ಹೋಗಿದೆ. ಹದಗೆಟ್ಟಿರುವ ಪಾದಚಾರಿ ಮಾರ್ಗಗಳಲ್ಲಿಯೇ ವಾಯುವಿಹಾರಿಗಳು ಸಂಚರಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಆದ್ದರಿಂದ ಓಟಕ್ಕೆ ಪ್ರತ್ಯೇಕ ಪಥ, ಕೆರೆಯ ಉದ್ದಕ್ಕೂ ಜಾಗಿಂಗ್ ಟ್ರ್ಯಾಕ್ ನಿರ್ಮಾಣ ನಿರ್ಮಿಸಬೇಕು ಎಂಬುದು ವಾಯುವಿಹಾರಿಗಳು ಒತ್ತಾಯ.

‘240 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಲಾಲ್‌ಬಾಗ್ ಉದ್ಯಾನದಲ್ಲಿ 11.5 ಕಿ.ಮೀ ನಡಿಗೆ ಪಥವಿದೆ. ಅದರಲ್ಲಿ ರಾಜಾ ಪ್ರತಿಮೆ, ಗುಲಾಬಿ ವನ ಹಾಗೂ ಡಿಎಚ್‌ಒ ಲಾನ್ ಹತ್ತಿರದ ಪಾದಚಾರಿ ಮಾರ್ಗಗಳಿಗೆ ಸದ್ಯ ಹೊಸಕೋಟೆ ಮಣ್ಣು ಹಾಕಲಾಗಿದೆ. ಮುಂದಿನ ದಿನಗಳಲ್ಲಿ ಹಂತ–ಹಂತವಾಗಿ ಎಲ್ಲ ನಡಿಗೆ ಪಥಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕಿ (ಲಾಲ್‌ಬಾಗ್) ಕುಸುಮಾ ಜಿ. ಮಾಹಿತಿ ನೀಡಿದರು.

‘ಲಾಲ್‌ಬಾಗ್ ಅನ್ನು ನವದೆಹಲಿಯ ನೆಹರೂ ಪಾರ್ಕ್ ರೀತಿ ಅಭಿವೃದ್ಧಿ ಪಡಿಸಬೇಕು. ಉದ್ಯಾನದಲ್ಲಿ ದೂಳು ಮತ್ತು ನೀರು ನಿರೋಧಕ ಸಿಂಥೆಟಿಕ್ ವಾಕಿಂಗ್ ಟ್ರ್ಯಾಕ್ ನಿರ್ಮಿಸಬೇಕು. ಇದರ ನಿರ್ವಹಣೆ ಸುಲಭವಾಗಲಿದೆ’ ಎಂದು ಲಾಲ್‌ಬಾಗ್ ಹಾಪ್‌ಕಾಮ್ಸ್ ಅಧ್ಯಕ್ಷ ಎಂ ಬಾಬು ಹೇಳಿದರು.

‘ಲಾಲ್‌ಬಾಗ್‌ನಲ್ಲಿ ಪಾದಚಾರಿ ಮಾರ್ಗಗಳಲ್ಲಿ ಅಲ್ಲಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಬಿಸಾಡಿ ಪರಿಸರವನ್ನು ಹಾಳು ಮಾಡಲಾಗುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯ ಎಲ್ಲೆಂದರಲ್ಲಿ ಬಿದ್ದಿದೆ. ಇದನ್ನು ತಪ್ಪಿಸಲು ಭದ್ರತೆ ಬಿಗಿಗೊಳಿಸಬೇಕು ಮತ್ತು ಪ್ಲಾಸ್ಟಿಕ್ ಬಿಸಾಡುವವರಿಗೆ ದಂಡ ವಿಧಿಸಬೇಕು. ಲಾಲ್‌ಬಾಗ್ ಅನ್ನು ಪ್ಲಾಸ್ಟಿಕ್ ಮುಕ್ತಗೊಳಿಸಬೇಕು’ ಎಂದು ವಾಯುವಿಹಾರಿ ಜಯಪ್ರಕಾಶ್ ಒತ್ತಾಯಿಸಿದರು.

ಲಾಲ್‌ಬಾಗ್‌ನಲ್ಲಿ 15 ವರ್ಷಗಳ ಹಿಂದೆ ಎಲ್ಲ ವಾಕಿಂಗ್ ಪಥಗಳನ್ನು ನಿರ್ಮಿಸಲಾಗಿದೆ. ಇದಕ್ಕೆ ಹಾಕಿದ್ದ ಮಣ್ಣು ಮಳೆಗೆ ಕೊಚ್ಚಿಹೋದ ಕಾರಣ ಈ ಪಥಗಳಲ್ಲಿ ವೃದ್ಧರು ಮತ್ತು ಮಹಿಳೆಯರು ನಡೆಯಲು ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ತುರ್ತಾಗಿ ಈ ನಡಿಗೆ ಪಥಗಳು ದುರಸ್ತಿಗೊಳಪಡಬೇಕು ಎಂಬು ವಾಯುವಿಹಾರಿಗಳ ಆಗ್ರಹವಾಗಿದೆ.

ಲಾಲ್‌ಬಾಗ್‌ನ ಪಾದಚಾರಿಗಳ ಮಾರ್ಗಗಳ ಸ್ಥಿತಿ. –ಪ್ರಜಾವಾಣಿ ಚಿತ್ರಗಳು/ಕಿಶೋರ್ ಕುಮಾರ್ ಬೋಳಾರ್

ಸಸ್ಯಕಾಶಿ ಲಾಲ್‌ಬಾಗ್ ಉದ್ಯಾನದಲ್ಲಿರುವ ಎಲ್ಲ ನಡಿಗೆ ಪಥಗಳಿಗೆ ಹಾಕಿದ್ದ ಮಣ್ಣು ಮಳೆಗೆ ಕೊಚ್ಚಿಕೊಂಡು ಹೋಗಿದೆ. ಎಲ್ಲ ನಡಿಗೆ ಪಥಗಳನ್ನು ಅಭಿವೃದ್ಧಿ ಪಡಿಸುವಂತೆ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಲಾಗಿದೆ.

ಸಿ.ಕೆ. ರವಿಚಂದ್ರ,
ರಾಜ್ಯ ನಡಿಗೆದಾರರ ಒಕ್ಕೂಟದ ಅಧ್ಯಕ್ಷ

ಲಾಲ್‌ಬಾಗ್‌ನ ಸೌಂದರ್ಯ ಹೆಚ್ಚಿಸಲು ಮತ್ತು ವಾಯುವಿಹಾರಿಗಳು ಹಾಗೂ ಪ್ರವಾಸಿಗರಿಗೆ ಅನುಕೂಲವಾಗುವಂತೆ ಇಲ್ಲಿನ ಪಾದಚಾರಿಗಳ ಮಾರ್ಗಗಳನ್ನು ಅಭಿವೃದ್ಧಿಗೊಳಿಸಿಬೇಕು.

ಜಯಕುಮಾರ್,
ವಾಯುವಿಹಾರಿ

ನಗರದ ಸೋಮವಾರ ಸಂಜೆ ಮಳೆಯಾಗಿದ್ದು, ಮಹಾತ್ಮಗಾಂಧಿ ರಸ್ತೆಯಲ್ಲಿ ಬೈಕ್ ಸವಾರರು ಮಳೆಯಲ್ಲಿಯೇ ಸಾಗಿದರು.

‘ತುಳುವಿಗೆ ಅಧಿಕೃತ ಭಾಷೆ ಸ್ಥಾನಕ್ಕಾಗಿ ಕಂಬಳ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ರಾಜ್ಯದಲ್ಲಿ ಕನ್ನಡದ ಜೊತೆಗೆ ತುಳುವನ್ನೂ ಅಧಿಕೃತ ಭಾಷೆ ಎಂದು ಪರಿಗಣಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು ಹಾಗೂ ತುಳು ಭವನಕ್ಕೆ ಸರ್ಕಾರದಿಂದ ಜಾಗ ಪಡೆಯುವುದು ಬೆಂಗಳೂರಿನಲ್ಲಿ ನ.25 ಮತ್ತು ನ.26ರಂದು ಕಂಬಳ ಆಯೋಜಿಸುವ ಉದ್ದೇಶಗಳಲ್ಲೊಂದು’ ಎಂದು ಶಾಸಕ ಹಾಗೂ ಬೆಂಗಳೂರು ಕಂಬಳ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ರೈ ಸೋಮವಾರ ಹೇಳಿದರು.

ಪ್ರೆಸ್ ಕ್ಲಬ್ ಇಲ್ಲಿ ಏರ್ಪಡಿಸಿದ್ದ ಗೌರವ ಅತಿಥಿ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಅಶೋಕ್ ಕುಮಾರ್ ರೈ

‘ತುಳುವಿಗೆ ಅಧಿಕೃತ ಭಾಷೆ ಸ್ಥಾನಮಾನ ನೀಡುವ ಪ್ರಸ್ತಾಪಕ್ಕೆ ಒಂದು ಇಲಾಖೆ ನಿರಾಕ್ಷೇಪಣ ಪತ್ರ ನೀಡಿದೆ. ನಾಲ್ಕು ಇಲಾಖೆಗಳಿಂದ ಇನ್ನಷ್ಟೇ ಸಿಗಬೇಕಿದೆ. ಗೃಹ ಇಲಾಖೆ, ಕಾನೂನು ಇಲಾಖೆಗಳು ಈ ಪ್ರಸ್ತಾವಕ್ಕೆ ಅಭಿಪ್ರಾಯ ನೀಡಬೇಕಿದೆ’ ಎಂದರು.

‘ಬೆಂಗಳೂರಿನಲ್ಲಿ ತುಳುಭವನಕ್ಕೆ ಕನಿಷ್ಠ 1 ಎಕರೆ ಬೇಕಿದೆ. ಜಾಗ ಮಂಜೂರು ಮಾಡಲು ಉಪಮುಖ್ಯ-ಮಂತ್ರಿ ಡಿ.ಕೆ.ಶಿವಕುಮಾರ್ ಸಮ್ಮತಿಸಿದ್ದಾರೆ. ಇಷ್ಟು ಜಾಗಕ್ಕೆ ಸರ್ಕಾರಕ್ಕೆ ಸುಮಾರು ₹ 13 ಕೋಟಿ ಹಣ ಪಾವತಿಸಬೇಕಾಗುತ್ತದೆ. ಬೆಂಗಳೂರು ಕಂಬಳ ಆಯೋಜನೆಯಿಂದ ಹಣ ಉಳಿದರೆ, ಅದನ್ನು ಇದಕ್ಕೆ ಬಳಸುತ್ತೇವೆ’ ಎಂದರು.

‘ಕರಾವಳಿಯಲ್ಲಿ ಗರಿಷ್ಠ 147 ಮೀ ಉದ್ದದ ಕಂಬಳದ ಕರೆ ಇದೆ. ಬೆಂಗಳೂರು ಕಂಬಳ ದಾಖಲೆ ಆಗಬೇಕೆಂಬ ಕಾರಣಕ್ಕೆ ಕರೆಯ ಉದ್ದ ಇದಕ್ಕಿಂತ ಹೆಚ್ಚು (155 ಮೀ) ಇಟ್ಟಿದ್ದೇವೆ. ಮೊದಲ ಸ್ಥಾನ ಪಡೆದವರಿಗೆ ₹ 1.5 ಲಕ್ಷ ನೀಡುತ್ತೇವೆ. ಕೋಣಗಳ ಯಜಮಾನರಿಗೆ 16 ಗ್ರಾಂ ಚಿನ್ನ, ಕೋಣಗಳಿಗೆ ಶೀಲ್ಡ್, ಓಡಿಸುವವರಿಗೆ ಚಿನ್ನದ ಪದಕ, 5 ಸಾವಿರ ಹಣ ನೀಡಲಾಗುವುದು’ ಎಂದರು.

‘ಬೆಂಗಳೂರಿನಲ್ಲಿ ನಡೆಯುವ ಕಂಬಳಕ್ಕೆ ಈವರೆಗೆ 116 ಯಜಮಾನರು ಈವರೆಗೆ ಕೋಣಗಳ ನೋಂದಣಿ ಮಾಡಿದ್ದಾರೆ. ಕರೆ ನಿರ್ಮಾಣ ಪ್ರಗತಿಯಲ್ಲಿದೆ’ ಎಂದು ತಿಳಿಸಿದರು.

‘ಕಂಬಳ ವೀಕ್ಷಣೆಗೆ ಶುಲ್ಕ ನಿಗದಿ-ಪಡಿಸಿದರೆ ನಿಧಿ ಸಂಗ್ರಹಿಸಬಹುದು. ಆದರೆ, ನಾವು ಇದನ್ನು ಹಣಕ್ಕಾಗಿ ನಡೆಸುತ್ತಿಲ್ಲ. ಚೆಕ್, ಆರ್‌ಟಿಜಿಎಸ್ ಅಥವಾ ಡಿಜಿಟಲ್ ಮೂಲಕ ದೇಣಿಗೆ ಪಡೆಯುತ್ತೇವೆ. ಹಾಗಾಗಿ ರಸೀದಿ ಪುಸ್ತಕವನ್ನೇ ಮುದ್ರಿಸಿಲ್ಲ’ ಎಂದರು.

‘ಮಣಿಪಾಲ ಆಸ್ಪತ್ರೆಗೆ ಗಿನ್ನೆಸ್ ದಾಖಲೆ ಮಾನ್ಯತೆ’

ಮಣಿಪಾಲ್ ಹಾಸ್ಪಿಟಲ್ಸ್ ಚೇರ್ಮನ್ ಡಾ. ಎಚ್. ಸುದರ್ಶನ್ ಬಲ್ಲಾಳ್ ಅವರಿಗೆ ಗಿನ್ನೆಸ್ ದಾಖಲೆಯ ಪ್ರಮಾಣಪತ್ರವನ್ನು ಗಿನ್ನೆಸ್ ಪ್ರತಿನಿಧಿ ಹಸ್ತಾಂತರಿಸಿದರು. ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಇದ್ದರು.

ಬೆಂಗಳೂರು: ಕಾರ್ಡಿಯೋಪಲ್ಮನರಿ ರಿಸಸಿಟೇಷನ್ (ಸಿಪಿಆರ್) ಕಲಿಯುವುದಾಗಿ ಮಣಿಪಾಲ ಆಸ್ಪತ್ರೆಯಲ್ಲಿ (24 ಗಂಟೆಗಳಲ್ಲಿ) ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದ್ದಕ್ಕಾಗಿ ಆಸ್ಪತ್ರೆಗೆ ಗಿನ್ನೆಸ್ ದಾಖಲೆ ಪ್ರಮಾಣಪತ್ರ ಲಭಿಸಿದೆ.

ಮಣಿಪಾಲ್ ಹಾಸ್ಪಿಟಲ್ಸ್ ಚೇರ್ಮನ್ ಡಾ. ಎಚ್. ಸುದರ್ಶನ್ ಬಲ್ಲಾಳ್ ಅವರಿಗೆ ಗಿನ್ನೆಸ್ ಪ್ರತಿನಿಧಿ ಈ ಪ್ರಮಾಣ ಪತ್ರವನ್ನು ನೀಡಿದರು. ಈ ವೇಳೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಇದ್ದರು.

ಹೃದಯ ಮತ್ತು ಶ್ವಾಸಕೋಶಗಳ ಕಾರ್ಯ ಪುನರ್ ಸ್ಥಾಪಿಸುವ ಕ್ರಮವನ್ನು (ಸಿಪಿಆರ್) ಕಲಿಯಲು ಸೆ.27 ಮತ್ತು 28ರಂದು 24 ಗಂಟೆಗಳ ಅವಧಿಯಲ್ಲಿ 22 ಸಾವಿರಕ್ಕೂ ಅಧಿಕ ಜನರು ಪ್ರತಿಜ್ಞೆ ಸ್ವೀಕರಿಸಿರುವುದು ದಾಖಲೆಯಾಗಿತ್ತು.

ಮುಕ್ತ ವಿ.ವಿ: ನೇಮಕಾತಿಗೆ ತಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ನಡೆದಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವಂತೆ ಉನ್ನತ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿದೆ.

ವಿಶ್ವವಿದ್ಯಾಲಯ ಇದೇ ವರ್ಷ ಸೆಪ್ಟೆಂಬರ್‌ನಲ್ಲಿ 7 ಪ್ರಾಧ್ಯಾಪಕ, 25 ಸಹ ಪ್ರಾಧ್ಯಾಪಕ ಹುದ್ದೆ ನೇರ ನೇಮಕಾತಿ, ಹೈದರಾಬಾದ್- ಕರ್ನಾಟಕ ಮೀಸಲಾತಿ ನಿಯಮ 371(ಜೆ) ರ ಅನ್ವಯ 32 ವಿವಿಧ ಬೋಧಕೇತರ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಚಾಲನೆಯಲ್ಲಿತ್ತು. ಸದ್ಯ ಈ ನೇಮಕಾತಿಗೆ ತಡೆ ಬಿದ್ದಿದೆ.

ಕಾರಣವೇನು?: ಮುಕ್ತ ವಿ ವಿಯಲ್ಲಿ ಈ ಹಿಂದೆ ಹಾಗೂ ಪ್ರಸ್ತುತ ವಿವಿಧ ಮೀಸಲಾತಿಯಡಿ ಬೋಧಕ ಮತ್ತು ಬೋಧಕೇತರ ಹುದ್ದೆಗಳ ತಾತ್ಕಾಲಿಕ, ಕಾಯಂ ನೇಮಕಾತಿ ಪ್ರಕ್ರಿಯೆಯಲ್ಲಿ ಮೀಸಲಾತಿ ನಿಯಮ ಉಲ್ಲಂಘನೆ ಕುರಿತು ವಿಧಾನಮಂಡಲದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ದೂರು ಸಲ್ಲಿಕೆಯಾಗಿತ್ತು. ದೂರು ಕೊಟ್ಟವರ ಮಾಹಿತಿ ಆದೇಶದಲ್ಲಿ ಇಲ್ಲ.

ದೂರು ಪರಿಶೀಲಿಸಿದ ಸಮಿತಿಯು ‘ಮೀಸಲಾತಿ ಹಾಗೂ ರೋಸ್ಟರ್ ಬಿಂದುಗಳನ್ನು ನಿಯಮಾನುಸಾರ ಗುರುತಿಸಿರುವ ಕುರಿತು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಕಲ್ಯಾಣ ವರ್ಗಗಳ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಹೈ-ಕ ಮೀಸಲಾತಿ) ಇಲಾಖೆಗಳಿಂದ ಅಧಿಕೃತವಾಗಿ ಅಭಿಪ್ರಾಯ/ಸಹಮತಿ ಪಡೆದಿರುವ ಕುರಿತು ಪರಿಶೀಲಿಸಿ, ನಿಯಮ ಬದ್ಧ-ವಾಗಿದೆಯೆಂದು ಅನುಮೋದನೆ ನೀಡುವವರೆಗೂ ವಿಶ್ವವಿದ್ಯಾಲಯವು ಹಾಲಿ ಕೈಗೊಂಡಿರುವ ಎಲ್ಲಾ ಬೋಧಕ ಮತ್ತು ಬೋಧಕೇತರ (ತಾತ್ಕಾಲಿಕ/ಖಾಯಂ) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ತಡೆಹಿಡಿಯತಕ್ಕದ್ದು’ ಎಂದು ಉನ್ನತ ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು.

ಈ ಹಿನ್ನೆಲೆಯಲ್ಲಿ ಇಲಾಖೆಯು ಅ. 13ರಂದು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದಿದ್ದು, ‘ಮುಂದಿನ ಸೂಚನೆವರೆಗೆ ಎಲ್ಲ ನೇಮಕಾತಿ ಪ್ರಕ್ರಿಯೆಯನ್ನು ತಡೆ ಹಿಡಿಯಬೇಕು. ತಾತ್ಕಾಲಿಕ ಹಾಗೂ ಕಾಯಂ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಒದಗಿಸಬೇಕು’ ಎಂದು ಸೂಚಿಸಿದೆ.

‘ಗ್ಯಾರಂಟಿ’ ಬಗ್ಗೆ ಅಪಪ್ರಚಾರ’

ಬೆಂಗಳೂರು: ‘ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಅಪಪ್ರಚಾರ ನಡೆ-ಸಲಾಗುತ್ತಿವೆ. ಎಲ್ಲ ಯೋಜನೆಗಳೂ ಯಶಸ್ವಿಯಾಗಿ ನಡೆಯುತ್ತಿವೆ’ ಎಂದು ಕೆಪಿಸಿಸಿ ಮಾಧ್ಯಮ ಕೇಂದ್ರದ ಉಪಾಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹೇಳಿದ್ದಾರೆ.

‘ಶಕ್ತಿ’ ಯೋಜನೆಯಡಿ ಈವರೆಗೆ ಮಹಿಳಾ ಪ್ರಯಾಣಿಕರ ಟಿಕೆಟ್‌ಗೆ ₹2,036 ಕೋಟಿ 44 ಲಕ್ಷ ವೆಚ್ಚವಾಗಿದೆ. ವಿವಿಧ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಮಹಿಳೆಯರು 86 ಕೋಟಿ 1 ಲಕ್ಷ 11 ಸಾವಿರ ಬಾರಿ ಉಚಿತವಾಗಿ ಪ್ರಯಾಣ-ಮಾಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ಗೃಹಲಕ್ಷ್ಮಿ’ ಯೋಜನೆಯಡಿ ಮನೆ ಯಜಮಾನಿಯರಿಗೆ ಮಾಸಿಕ ₹2,000 ಜಮೆ ಮಾಡಲಾಗುತ್ತಿದ್ದು, ತಿಂಗಳಿಗೆ ₹2,250 ಕೋಟಿ ವೆಚ್ಚ ಮಾಡಲಾಗುತ್ತಿದೆ. ‘ಗೃಹಜ್ಯೋತಿ’ಯಡಿ ಮಾಸಿಕ 1 ಕೋಟಿ 52 ಲಕ್ಷ ಕುಟುಂಬಗಳು ಉಚಿತ ವಿದ್ಯುತ್ ಪಡೆಯುತ್ತಿದ್ದು, ಸರ್ಕಾರ ತಿಂಗಳಿಗೆ ₹780 ಕೋಟಿ ವೆಚ್ಚ ಮಾಡುತ್ತಿದೆ ಎಂದಿದ್ದಾರೆ.

‘ಅನ್ನಭಾಗ್ಯ’ ಯೋಜನೆಯಡಿ 3 ಕೋಟಿ 82 ಲಕ್ಷ 62 ಸಾವಿರ ಕುಟುಂಬಗಳಿಗೆ ಬ್ಯಾಂಕ್ ಖಾತೆಗೆ ತಲಾ ₹170 ರಂತೆ ಜಮೆ ಮಾಡಲಾಗುತ್ತಿದೆ. ಸರ್ಕಾರ ಇದಕ್ಕೆ ₹650 ಕೋಟಿ ವ್ಯಯಿಸುತ್ತಿದೆ. ಆದರೆ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಅಪಪ್ರಚಾರದ ಮೂಲಕ ಜನರ ದಾರಿ ತಪ್ಪಿಸುತ್ತಿವೆ ಎಂದು ಗೂಳಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



‘ಲೋಕಾ’ ಬಲೆಗೆ ಇನ್ನಷ್ಟು ‘ತಿಮಿಂಗಲ’ಗಳು

₹1.35 ಕೋಟಿ ಮೌಲ್ಯದ ಆಸ್ತಿ 250 ಗ್ರಾಂ ಚಿನ್ನಾಭರಣ ಪತ್ತೆ

ಪ್ರಜಾವಾಣಿ ವಾರ್ತೆ



ಬಿರಾದಾರ ಪಾಟೀಲ

ಬೆಳಗಾವಿ: ಇಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಎಸ್. ಬಿರಾದಾರ ಪಾಟೀಲ, ಕಲಬುರಗಿಯ ನಗರ ಹಾಗೂ ಗ್ರಾಮೀಣ ಯೋಜನಾ ಜಂಟಿ ನಿರ್ದೇಶಕ ಅಪ್ಪಾಸಾಬ್ ಕಾಂಬಳೆ ಅವರ ಮನೆಗಳ ಮೇಲೆ ಸೋಮವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು.

ಲೋಕಾಯುಕ್ತ ಎಸ್ಪಿ ಹನುಮಂತರಾಯ ನೇತೃತ್ವದಲ್ಲಿ ಡಿವೈಎಸ್ಪಿ ಜೆ.ರಘು ತಂಡ ದಾಳಿ ನಡೆಸಿತು. ಬಿರಾದಾರ ಅವರು ಇಲ್ಲಿ ವಿಶ್ವೇಶ್ವರಯ್ಯ ನಗರದ ಶ್ರದ್ಧಾ ಅಪಾರ್ಟ್‌ಮೆಂಟ್‌ನಲ್ಲಿ ಖರೀದಿಸಿದ ಮನೆ, ಕಿತ್ತೂರು ಮತ್ತು ಖಾನಾಪುರದಲ್ಲಿ ಇರುವ ಮನೆಗಳ ಮೇಲೂ ಏಕಕಾಲಕ್ಕೆ ದಾಳಿ ನಡೆಯಿತು.

ಅವರ ಮನೆಯಲ್ಲಿ ₹1.35 ಕೋಟಿಗೂ ಅಧಿಕ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಇದು ಆದಾಯಕ್ಕಿಂತ ಅತಿ ಹೆಚ್ಚಾದ ಕಾರಣ ಎಲ್ಲವನ್ನೂ ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ ಎಂದೂ ಮೂಲಗಳು ಹೇಳಿವೆ.

ಬೆಳಗಾವಿ ಮೂಲದವರಾದ ಸದ್ಯ ಕಲಬುರಗಿಯ ನಗರ ಹಾಗೂ ಗ್ರಾಮೀಣ ಯೋಜನಾ ಜಂಟಿ ನಿರ್ದೇಶಕರಾಗಿರುವ ಅಪ್ಪಾಸಾಬ್ ಕಾಂಬಳೆ ಅವರ ಮನೆಗಳ ಮೇಲೂ ದಾಳಿ ನಡೆಯಿತು. ರಾಮತೀರ್ಥ ನಗರದಲ್ಲಿರುವ ಅವರ ಹಳೆಯ ಮನೆ, ಆಟೊ ನಗರದ ಕಾರ್ಖಾನೆ ಮೇಲೆ ದಾಳಿ ಮಾಡಲಾಗಿದೆ.

ದಾಳಿ ವೇಳೆ 250 ಗ್ರಾಂ ಚಿನ್ನಾಭರಣ, ಅಪಾರ ಹಣ ಹಾಗೂ ಹಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಹಿಂದೆಯೂ ಸಿಕ್ಕಿಬಿದ್ದಿದ್ದ ಬಿರಾದಾರ: ಎಂ.ಎಸ್.ಬಿರಾದಾರ ಪಾಟೀಲ 2023ರ ಫೆಬ್ರುವರಿ 16ರಂದು ಕೂಡ ಲೋಕಾಯುಕ್ತರು ಬೀಸಿದ ಬಲೆಗೆ ಬಿದ್ದಿದ್ದರು. ₹2 ಲಕ್ಷ ವೆಚ್ಚದ ಚರಂಡಿ ನಿರ್ಮಾಣ ಕಾಮಗಾರಿ ಮುಗಿಸಿದ ಗುತ್ತಿಗೆದಾರರ ಬಿಲ್‌ಗೆ ಸಹಿ ಮಾಡಲು ₹5 ಸಾವಿರ ಲಂಚ ಕೇಳಿದ್ದರು. ಇಲ್ಲಿನ ಶಹಾಪುರದಲ್ಲಿರುವ ಅವರ ಕಚೇರಿಯಲ್ಲಿ ಲಂಚ ಪಡೆಯುತ್ತಿದ್ದ ವೇಳೆಯೇ ಲೋಕಾಯುಕ್ತರ ಬಲೆಗೆ ಬಿದ್ದಿದ್ದರು.

ಬೆಳಗಾವಿಯ ವಿಶ್ವೇಶ್ವರಯ್ಯ ನಗರದಲ್ಲಿರುವ ಎಂ.ಎಸ್.ಬಿರಾದಾರ ಮನೆಯಲ್ಲಿ ಸಂಪತ್ತಿನ ಶೋಧ ನಡೆಸಿದ ಲೋಕಾಯುಕ್ತ ಸಿಬ್ಬಂದಿ

ಬೆಳಗಾವಿಯ ರಾಮತೀರ್ಥ ನಗರದಲ್ಲಿರುವ ಅಪ್ಪಾಸಾಹೇಬ್ ಕಾಂಬಳೆ ಅವರ ಮನೆಯಲ್ಲಿ ಪತ್ತೆಯಾದ ಚಿನ್ನ, ಬೆಳ್ಳಿಯ ಸಾಮಗ್ರಿಗಳು

ಸಿಕ್ಕವು ಚಿನ್ನಾಭರಣ, ವಿದೇಶಿ ಮದ್ಯ



ಮಹಾಂತೇಶ ನ್ಯಾಮತಿ

ಪರಮೇಶ್ವರಪ್ಪ

ಹಾವೇರಿ: ಅಕ್ರಮ ಆಸ್ತಿ ಗಳಿಕೆ ಆರೋಪದ ಹಿನ್ನೆಲೆಯಲ್ಲಿ ಜಿಲ್ಲೆಯ ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಒ) ಮಹಾಂತೇಶ ನ್ಯಾಮತಿ ಮತ್ತು ಜಲಾನಯನ ಅಭಿವೃದ್ಧಿ ವಿಭಾಗದ ಆರ್‌ಎಫ್‌ಒ ಪರಮೇಶ್ವರಪ್ಪ ಪೇಲನವರ ಅವರ ಕಚೇರಿ ಮತ್ತು ಮನೆಗಳು ಸೇರಿ 9 ಕಡೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, ನಗದು, ಚಿನ್ನಾಭರಣ ಮತ್ತು ಆಸ್ತಿ ಪತ್ತೆಯಾಗಿದೆ.

ವಿದೇಶಿ ಮದ್ಯ ಪತ್ತೆ: ಪರಮೇಶ್ವರಪ್ಪ ಪೇಲನವರ ಹಾವೇರಿ ನಗರದಲ್ಲಿ ನಾಲ್ಕು ಮನೆ, ಕುರುಬಗೊಂಡ ಗ್ರಾಮದ ಬಳಿ 3 ಎಕರೆ ಜಮೀನಿನಲ್ಲಿ ಫಾರ್ಮ್‌ಹೌಸ್ ಹೊಂದಿದ್ದಾರೆ. ಫಾರ್ಮ್‌ಹೌಸ್‌ನಲ್ಲಿ ವಾಕಿಂಗ್ ಟ್ರ್ಯಾಕ್, ಐಷಾರಾಮಿ ಸೌಲಭ್ಯಗಳಿದ್ದು, ವಿದೇಶಿ ನಾಯಿಗಳು ಸಿಕ್ಕಿವೆ ಮತ್ತು 2 ಲೀಟರ್ ವಿದೇಶಿ ಮದ್ಯ ಪತ್ತೆಯಾಗಿದೆ. ಒಂದು ಲೀಟರ್ ವಿದೇಶಿ ಮದ್ಯಕ್ಕೆ ₹18 ಸಾವಿರ ಎಂದು ಅಂದಾಜಿಸಲಾಗಿದೆ.

ಜಿಲ್ಲೆಯ 6 ಕಡೆ 8 ಎಕರೆಗೂ ಹೆಚ್ಚು ಜಮೀನನ್ನು ಹೊಂದಿದ್ದಾರೆ. ₹6 ಲಕ್ಷ ನಗದು, ₹2 ಲಕ್ಷ ಮೌಲ್ಯದ ಪೀಠೋಪಕರಣ, ₹3 ಲಕ್ಷ ಮೌಲ್ಯದ ಪುಸ್ತಕಗಳು, ಏರ್ ಪಿಸ್ತೂಲ್ ಸಿಕ್ಕಿವೆ.

650 ಗ್ರಾಂ ಚಿನ್ನ ಪತ್ತೆ: ಮಹಾಂತೇಶ ನ್ಯಾಮತಿ ಅವರು 3 ಮನೆ, 2 ನಿವೇಶನ ಮತ್ತು 5 ಎಕರೆ ಹೊಲ ಹೊಂದಿದ್ದಾರೆ. ಮನೆಯಲ್ಲಿ 650 ಗ್ರಾಂ ಚಿನ್ನಾಭರಣ, 2 ಕೆಜಿ ಬೆಳ್ಳಿ ಮತ್ತು ₹6.50 ಲಕ್ಷ ನಗದು ಪತ್ತೆಯಾಗಿದೆ.

ಪರಮೇಶ್ವರಪ್ಪ ಅವರ ಮನೆಯಲ್ಲಿ ಸಿಕ್ಕಿರುವ ಏರ್ ಪಿಸ್ತೂಲ್, ನಗದು, ವಿದೇಶಿ ಮದ್ಯ

ಇಇ, ಆರ್‌ಎಫ್‌ಒ ಪತ್ನಿಯರ ಹೆಸರಲ್ಲಿ ವಾಣಿಜ್ಯ ಮಳಿಗೆ

ಬೀದರ್‌ನ ವಲಯ ಅರಣ್ಯಾಧಿಕಾರಿ ಬಸವರಾಜ ಡಾಂಗೆ ಅವರ ಮನೆಯಲ್ಲಿ ದೊರೆತ ಚಿನ್ನ ಬೆಳ್ಳಿಯ ಆಭರಣ, ರಿವಾಲ್ವರ್ ಹಾಗೂ ಮದ್ಯದ ಬಾಟಲಿಗಳು

ಕಲಬುರಗಿ: ಯಾದಗಿರಿ ಜಿಲ್ಲೆ ಭೀಮರಾಯನಗುಡಿಯ ಕೃಷ್ಣಾ ಭಾಗ್ಯ ಜಲ ನಿಗಮದ (ಕೆಬಿಜೆಎನ್‌ಎಲ್) ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಯಿಂದ ವರ್ಗಾವಣೆಯಾಗಿ ಹುದ್ದೆಯ ನಿರೀಕ್ಷೆಯಲ್ಲಿರುವ ಚಿತ್ತಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದ ತಿಪ್ಪಣ್ಣಗೌಡ ಅನ್ನದಾನಿ ಹಾಗೂ ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಸುಮಾರು ₹ 2.71 ಕೋಟಿ ಆಸ್ತಿ ಇರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಪತ್ನಿ ಸುನಿತಾ ಹೆಸರಿನಲ್ಲಿ ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದಲ್ಲಿ ಜಮೀನು ಹಾಗೂ ₹ 25 ಲಕ್ಷ ಮೌಲ್ಯದ 12 ವಾಣಿಜ್ಯ ಮಳಿಗೆಗಳಿವೆ.

ಬೀದರ್‌ನ ವಲಯ ಅರಣ್ಯಾಧಿಕಾರಿ ಬಸವರಾಜ ಡಾಂಗೆ ಹಾಗೂ ಅವರ ಪತ್ನಿ ಬಳಿ ₹ 1.86 ಕೋಟಿ ಆಸ್ತಿ ಇದೆ. ಪತ್ನಿ ಗೀತಾ ಹೆಸರಲ್ಲಿ ಕಲಬುರಗಿಯ ಗಾಜಿಪುರದಲ್ಲಿ ಐದು ವಾಣಿಜ್ಯ ಮಳಿಗೆಗಳನ್ನು ಖರೀದಿಸಿದ್ದಾರೆ. ಅವರ ಬಳಿ ಒಂದು ಪಿಸ್ತೂಲ್, ದುಬಾರಿ ಮೌಲ್ಯದ ಎರಡು ಮದ್ಯದ ಬಾಟಲಿಗಳು ಸಿಕ್ಕಿವೆ.

ಕಲಬುರಗಿ ನಗರ ಯೋಜನಾ ಶಾಖೆಯ ಜಂಟಿ ನಿರ್ದೇಶಕ ಅಪ್ಪಾಸಾಹೇಬ ಕಾಂಬಳೆ ಅವರ ಓಜಾ ಲೇಔಟ್‌ನ ಬಾಡಿಗೆ ಮನೆಯ ಮೇಲೆ ದಾಳಿ ನಡೆಯಿತು.

ರಾಯಚೂರಿನ ನಿರ್ಮಿತಿ ಕೇಂದ್ರ ಕ್ಯಾಶುಟೆಕ್ ಯೋಜನಾ ನಿರ್ದೇಶಕ ಶರಣಪ್ಪ ಪಟ್ಟೇದ್ ಅವರ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. ನಗರದ ಗಂಗಾಪರಮೇಶ್ವರಿ ಕಾಲೊನಿಯಲ್ಲಿನ ಮನೆ, ಐಡಿಎಸ್‌ಎಂಟಿ ಲೇಔಟ್ ಮನೆ ಹಾಗೂ ತಾಲ್ಲೂಕಿನ ಶಕ್ತಿನಗರದಲ್ಲಿನ ಕಚೇರಿ ಸೇರಿ ನಾಲ್ಕು ಕಡೆ ಏಕಕಾಲಕ್ಕೆ ದಾಳಿ ಮಾಡಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ನಾಗೇಂದ್ರಪ್ಪ ಬಳಿ ಆದಾಯಕ್ಕಿಂತ ಶೇಕಡ 220ರಷ್ಟು ಹೆಚ್ಚು ಆಸ್ತಿ!

ಎಂ.ನಾಗೇಂದ್ರಪ್ಪ

ತುಮಕೂರು: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಶಿರಾ ತಾಲ್ಲೂಕಿನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ನಾಗೇಂದ್ರಪ್ಪ ಎಂಟು ನಿವೇಶನಗಳ ಒಡೆಯ!

ನಾಗೇಂದ್ರಪ್ಪ ಅವರ ನಗರದ ಮನೆ, ತೋಟದ ಮನೆ, ಶಿರಾ ಕಚೇರಿ ಸೇರಿದಂತೆ ಐದು ಕಡೆ ಸೋಮವಾರ ಏಕಕಾಲಕ್ಕೆ ಜಾಲಾಡಿದ ಲೋಕಾಯುಕ್ತ ಪೊಲೀಸರು ಒಟ್ಟು ₹2.61 ಕೋಟಿ ಮೊತ್ತದ ಆಸ್ತಿ ಪತ್ತೆ ಹಚ್ಚಿದ್ದಾರೆ. ಇದು ನಾಗೇಂದ್ರಪ್ಪ ಆದಾಯಕ್ಕಿಂತ ಶೇ 220ರಷ್ಟು ಹೆಚ್ಚು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ತುಮಕೂರು ನಗರದ ಬಟವಾಡಿಯ ಮಿರ್ಜಿ ಪೆಟ್ರೋಲ್ ಬಂಕ್ ಹಿಂಭಾಗದಲ್ಲಿರುವ ಮನೆ ಸೇರಿದಂತೆ ಎರಡು ಮನೆ, ವಿವಿಧ ಕಡೆಗಳಲ್ಲಿ ಎಂಟು ನಿವೇಶನ, 18 ಎಕರೆ 8 ಗುಂಟೆ ಕೃಷಿ ಜಮೀನು ಪತ್ತೆಯಾಗಿದೆ. ಅವುಗಳ ಒಟ್ಟು ಮೌಲ್ಯ ₹1.64 ಕೋಟಿ ಎಂದು ಅಂದಾಜಿಸಲಾಗಿದೆ.

1 ಕೆ.ಜಿ 300 ಗ್ರಾಂ ಚಿನ್ನಾಭರಣ, 2 ಕೆ.ಜಿ 400 ಗ್ರಾಂ ಬೆಳ್ಳಿ ಸಾಮಗ್ರಿ, ₹27 ಸಾವಿರ ನಗದು, ಎರಡು ಕಾರು, ಎರಡು ಬೈಕ್ ಸೇರಿದಂತೆ ₹97.18 ಲಕ್ಷ ಮೌಲ್ಯದ ವಸ್ತುಗಳು ಪತ್ತೆಯಾಗಿವೆ. ಒಟ್ಟಾರೆ ₹2.61 ಕೋಟಿ ಮೊತ್ತದ ಆಸ್ತಿ ಸಂಪಾದಿಸಿರುವುದು ಗೊತ್ತಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ವರಿಷ್ಠಾಧಿಕಾರಿ ವಲಿಬಾಷಾ ನೇತೃತ್ವದಲ್ಲಿ ಡಿವೈಎಸ್‌ಪಿಗಳಾದ ಮಂಜುನಾಥ್, ಹರೀಶ್ ನೇತೃತ್ವದ ಅಧಿಕಾರಿಗಳ ತಂಡ ದಾಳಿ ನಡೆಸಿತ್ತು.

ಈ ಅಧಿಕಾರಿಗಳಿಗಿದೆ ಕೋಟ್ಯಂತರ ಮೌಲ್ಯದ ಆಸ್ತಿ

ನಾಗೇಂದ್ರ ನಾಯ್ಕ

ವಿ.ಕೃಷ್ಣಮೂರ್ತಿ

ಚಿತ್ರದುರ್ಗ: ಹಿರಿಯೂರು ತಾಲ್ಲೂಕಿನ ಸಾಮಾಜಿಕ ಅರಣ್ಯ ವಿಭಾಗದ ಎಸಿಎಫ್ ನಾಗೇಂದ್ರ ನಾಯ್ಕ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ವಿ. ಕೃಷ್ಣಮೂರ್ತಿ ಅವರ ನಿವಾಸಗಳ ಮೇಲೆ ಸೋಮವಾರ ಬೆಳಿಗ್ಗೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಚಿನ್ನ, ಬೆಳ್ಳಿ ಆಭರಣ, ನಗದು ಮತ್ತು ಕೋಟ್ಯಂತರ ರೂಪಾಯಿ ಮೊತ್ತದ ಆಸ್ತಿ ಪತ್ತೆ ಮಾಡಿದ್ದಾರೆ.

ನಾಗೇಂದ್ರ ನಾಯ್ಕ ಅವರ ಹಿರಿಯೂರಿನಲ್ಲಿರುವ ಮನೆ ಹಾಗೂ ತವಂದಿ ಗ್ರಾಮದ ಬಳಿಯ ಫಾರ್ಮ್‌ಹೌಸ್‌ನಲ್ಲಿ ಪರಿಶೀಲನೆ ನಡೆಸಲಾಗಿದ್ದು, ₹ 2 ಲಕ್ಷ ನಗದು, 650 ಗ್ರಾಂ ಚಿನ್ನ ಹಾಗೂ 4 ಕೆ.ಜಿ. ಬೆಳ್ಳಿ ಆಭರಣ, 11 ನಿವೇಶನ, ಇನ್ನೋವಾ ಸೇರಿ ಎರಡು ಕಾರು ಸಿಕ್ಕಿವೆ. ₹ 1.40 ಕೋಟಿ ಮೌಲ್ಯದ ಸ್ಥಿರಾಸ್ತಿ ಹಾಗೂ ₹ 51 ಲಕ್ಷ ಮೌಲ್ಯದ ಚರಾಸ್ತಿ ದೊರೆತಿದೆ. ಇವರು ಆದಾಯಕ್ಕಿಂತ ಶೇ 200ಪಟ್ಟು ಹೆಚ್ಚುವರಿ ಆಸ್ತಿ ಹೊಂದಿದ್ದಾಗಿ ಗೊತ್ತಾಗಿದೆ.

ಕೃಷ್ಣಮೂರ್ತಿ ಅವರ ಹಿರಿಯೂರು ನಗರದ ಮನೆಯ ಪರಿಶೀಲನೆ ವೇಳೆ 600 ಗ್ರಾಂ ಚಿನ್ನ, 2 ಕೆ.ಜಿ. ಬೆಳ್ಳಿ, ಎರಡು ಕಾರು ಹಾಗೂ 10 ನಿವೇಶನಗಳ ದಾಖಲೆಗಳು ಪತ್ತೆಯಾಗಿವೆ. ₹ 1.28 ಕೋಟಿ ಮೌಲ್ಯದ ಸ್ಥಿರಾಸ್ತಿ, ₹ 60 ಲಕ್ಷ ಮೌಲ್ಯದ ಚರಾಸ್ತಿ ದೊರೆತಿದ್ದು, ಆದಾಯಕ್ಕಿಂತ ಶೇ 220 ಪಟ್ಟು ಹೆಚ್ಚು ಆಸ್ತಿ ಹೊಂದಿರುವುದು ಪತ್ತೆಯಾಗಿದೆ. ‘ಎಸಿಎಫ್ ಮನೆಯಲ್ಲಿ ನಾಟಾ ಪತ್ತೆಯಾಗಿದೆ. ಪರವಾನಗಿ ಪಡೆದಿರುವುದಾಗಿ ಅವರು ತಿಳಿಸಿದ್ದು, ಅರಣ್ಯ ಇಲಾಖೆಯ ಬಳಿ ಮಾಹಿತಿ ಕೋರಲಾಗಿದೆ. ಇಬ್ಬರು ಅಧಿಕಾರಿಗಳ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎನ್. ವಾಸುದೇವರಾಮ್ ತಿಳಿಸಿದ್ದಾರೆ.

ದಾವಣಗೆರೆ ವರದಿ: ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ ಉಪ ನಿರ್ದೇಶಕ ಎಸ್.ಆರ್. ಶ್ರೀನಿವಾಸ್ ಅವರ ಇಲ್ಲಿನ ಕಚೇರಿಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ಸೋಮವಾರ ದಾಳಿ ನಡೆಸಿದರು.

ಡಿವೈಎಸ್‌ಪಿ ರಾಮಕೃಷ್ಣ ನೇತೃತ್ವದಲ್ಲಿ ಬೆಂಗಳೂರಿನಿಂದ ಬಂದಿದ್ದ 7 ಜನ ಅಧಿಕಾರಿಗಳ ತಂಡ ಇಲ್ಲಿನ ಪಿ.ಬಿ. ರಸ್ತೆಯ ಬಳಿ ಇರುವ ಕಚೇರಿಗೆ ತೆರಳಿ ದಾಖಲೆಗಳನ್ನು ಪರಿಶೀಲಿಸಿತು. ಶ್ರೀನಿವಾಸ್ ಅವರ ಬೆಂಗಳೂರಿನ ನಿವಾಸ ಸೇರಿ ಒಟ್ಟು 8 ಕಡೆ ದಾಳಿ ನಡೆದಿದೆ. ದಾಳಿಯಲ್ಲಿ ಪತ್ತೆಯಾದ ದಾಖಲೆಗಳ ವಿವರವನ್ನು ಬಹಿರಂಗಗೊಳಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಅಂಕಿ-ಅಂಶಗಳು

₹1.91 ಕೋಟಿ ನಾಗೇಂದ್ರನಾಯ್ಕ ಬಳಿ ಪತ್ತೆಯಾದ ಆಸ್ತಿ

₹1.88 ಕೋಟಿ ವಿ.ಕೃಷ್ಣಮೂರ್ತಿ ಬಳಿ ಪತ್ತೆಯಾದ ಆಸ್ತಿ

ಎಸಿಎಫ್ ನಾಗೇಂದ್ರ ನಾಯ್ಕ ಅವರ ಹಿರಿಯೂರಿನ ಮನೆಯಲ್ಲಿ ಪತ್ತೆಯಾದ ನಗದು ಹಾಗೂ ಚಿನ್ನಾಭರಣವನ್ನು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎನ್.ವಾಸುದೇವರಾಮ್ ಪರಿಶೀಲಿಸಿದರು

ಅಪಾರ ಆಸ್ತಿ, ಅಧಿಕಾರಿಗಳಿಗೆ ಬಿಸಿ

ಒಂದನೇ ಪುಟದಿಂದ...

ಬೆಳಿಗ್ಗೆಯಿಂದ ಶುರುವಾದ ಶೋಧ ಕಾರ್ಯ ಸಂಜೆಯವರೆಗೂ ಮುಂದುವರಿದಿತ್ತು. ಕೆಲವು ಅಧಿಕಾರಿಗಳು ತಮ್ಮ ಆದಾಯಕ್ಕಿಂತ ಶೇ 60ರಷ್ಟು ಹೆಚ್ಚಿನ ಆಸ್ತಿ ಹೊಂದಿದ್ದರೆ, ಲಾಭಕಟ್ಟಿನ ಹುದ್ದೆಯಲ್ಲಿರುವ ಕೆಲವು ಅಧಿಕಾರಿಗಳ ಅಕ್ರಮ ಆಸ್ತಿಯ ಪ್ರಮಾಣ ಶೇ 322ಕ್ಕಿಂತ ಹೆಚ್ಚಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಅರಣ್ಯ, ಸಮಾಜ ಕಲ್ಯಾಣ, ವಾಣಿಜ್ಯ ತೆರಿಗೆ, ನಗರ ಯೋಜನೆ, ಕೈಗಾರಿಕೆ, ಕೆಪಿಟಿಸಿಎಲ್ ಹೀಗೆ ವಿವಿಧ ಇಲಾಖೆಯ ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ಶೋಧದ ವೇಳೆ, 17 ಅಧಿಕಾರಿಗಳು ಒಟ್ಟು ₹37 ಕೋಟಿ ಮೌಲ್ಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಬಗ್ಗೆ ದಾಖಲೆ ಲಭ್ಯವಾಗಿದೆ ಎಂದು ಲೋಕಾಯುಕ್ತ ಮೂಲಗಳು ಹೇಳಿವೆ.

ದಾಳಿಯಲ್ಲಿ ₹14 ಲಕ್ಷಕ್ಕೂ ಹೆಚ್ಚು ನಗದು ವಶಕ್ಕೆ ಪಡೆಯಲಾಗಿದೆ. ಸಹಾಯಕ ಎಂಜಿನಿಯರ್ ನಾಗೇಂದ್ರಪ್ಪ ಮನೆಯಲ್ಲಿ 1.30 ಕೆ.ಜಿ ಚಿನ್ನ ದೊರೆತಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮದ ಯೋಜನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಟಿ.ಎಂ. ಶಶಿಕುಮಾರ್ ಆದಾಯಕ್ಕೆ ಮೀರಿ ಅಂದಾಜು ಶೇ 322ರಷ್ಟು ಆಸ್ತಿ ಹೊಂದಿದ್ದಾರೆ. ದಾವಣಗೆರೆ ಜಿಲ್ಲೆಯ ಬಾಯ್ಲರ್ಸ್ ಮತ್ತು ಫ್ಯಾಕ್ಟರೀಸ್ ವಿಭಾಗದ ಉಪನಿರ್ದೇಶಕ ಎಸ್.ಆರ್. ಶ್ರೀನಿವಾಸ್ ಅವರು ಶೇ 290ರಷ್ಟು ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿರುವುದು ದಾಳಿಯ ವೇಳೆ ಪತ್ತೆಯಾಗಿದೆ.

‘ಸರ್ಕಾರ ಬಿದ್ದರೆ ಬೆಳಗಾವಿ ರಾಜಕಾರಣವೇ ಕಾರಣ’

ಖಾಲಿಡಬ್ಬ ಬಾರಿಸುವ ಡಿ.ಕೆ.ಶಿವಕುಮಾರ್ ಪುಕ್ಕಲ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ರಮೇಶ ಜಾರಕಿಹೊಳಿ

ಬೆಳಗಾವಿ: ‘ಕಾಂಗ್ರೆಸ್ ಸರ್ಕಾರ ಬೀಳಿಸುವ ಉದ್ದೇಶ ನಮಗಿಲ್ಲ. ಒಂದು ವೇಳೆ ಬಿದ್ದರೆ, ಅದಕ್ಕೆ ಬೆಳಗಾವಿ ರಾಜಕಾರಣವೇ ಕಾರಣವಾಗುತ್ತದೆ’ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

‘ಬಿಜೆಪಿ ಆಪರೇಷನ್ ಕಮಲ ಮಾಡಿ ಸರ್ಕಾರ ಬೀಳಿಸಲು ಯತ್ನಿಸುತ್ತಿದೆ ಎಂಬುದು ಸುಳ್ಳು. ‘ಗ್ಯಾರಂಟಿ’ಗಳನ್ನು ನೀಗಿಸಲು ಆಗದ ಕಾಂಗ್ರೆಸ್‌ನವರು ಬಿಜೆಪಿ ಹೆಸರು ಕೆಡಿಸುತ್ತಿದ್ದಾರೆ. ಜನರ ಚಿತ್ತ ಬೇರೆಡೆ ಸೆಳೆಯುವ ಯತ್ನವಿದು’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

> ಜನರು ಕಾಂಗ್ರೆಸ್ ಪರ ತೀರ್ಪು ನೀಡಿದ್ದಾರೆ. ಅವರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಬೇಕಿದೆ. ರಮೇಶ ಮಾತಿಗೆ ಉತ್ತರ ನೀಡುತ್ತಾ ಕುಳಿತುಕೊಳ್ಳಲು ಆಗದು
>
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

‘ಸರ್ಕಾರ ಬೀಳಬಾರದು, ಬಹಳ ದಿನ ಬಾಳಬೇಕು ಎಂಬ ಆಕಾಂಕ್ಷೆ ನಮ್ಮದು. ಆದರೆ, ಯೋಗ್ಯತೆ ಗೊತ್ತಾಗಿ ಜನರೇ ಇದನ್ನು ಬೀಳಿಸುವರು. ಅದಕ್ಕೂ ಮುನ್ನ ನಾವು ಬೀಳಿಸಿದರೆ ಕಾಂಗ್ರೆಸ್‌ನವರು ಮತ್ತೆ ಅನುಕಂಪ ಪಡೆದು ಗೆಲ್ಲುತ್ತಾರೆ. 2019ರಲ್ಲಿ ಸರ್ಕಾರ ಬೀಳಿಸಿದ್ದು ರಮೇಶ ಜಾರಕಿಹೊಳಿ ಮತ್ತು ತಂಡ ಹೊರತು ಬಿಜೆಪಿ ಅಲ್ಲ. ಆಗ ಡಿ.ಕೆ. ಶಿವಕುಮಾರ್ ಉಪಟಳ ಹೆಚ್ಚಿದ್ದ ಕಾರಣ, ಬುದ್ಧಿ ಕಲಿಸಲು ಸರ್ಕಾರ ಬೀಳಿಸಿದೆ. ಈಗ ಅಂಥ ಕೆಲಸಕ್ಕೆ ನಾನು ಕೈಹಾಕಲ್ಲ. ಈ ಬಾರಿ ಸರ್ಕಾರ ಬೀಳಬೇಕೆಂದರೆ ಮಹಾರಾಷ್ಟ್ರ ಮಾದರಿಯ ಪ್ರಯತ್ನ ಕಾಂಗ್ರೆಸ್‌ನಲ್ಲೇ ನಡೆಯಬೇಕು’ ಎಂದರು.

‘ಶಿವಕುಮಾರ್ ಬೆಳಗಾವಿ ರಾಜಕಾರಣಕ್ಕೆ ಕೈ ಹಾಕಿದ್ದರಿಂದ ಆಗಿನ ಸರ್ಕಾರ ಬಿದ್ದಿತ್ತು. ಈಗಲೂ ಅವರು ಅದೇ ರೀತಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಮತ್ತೇನಾಗತ್ತೋ ನೋಡಬೇಕು’ ಎಂದೂ ಹೇಳಿದರು. ‘ಚುನಾವಣೆಯಲ್ಲಿ ಸೋಲಾದ ಬಳಿಕ 6 ತಿಂಗಳು ಯಾರೂ, ಏನೂ ಮಾತನಾಡಬಾರದು ಎಂದು ನಿರ್ಧರಿಸಿದ್ದೆವು. ಆದರೆ, ಶಿವಕುಮಾರ್ ದಿನಕ್ಕೊಂದು ಖಾಲಿಡಬ್ಬ ಬಾರಿಸುತ್ತಿದ್ದು, ಅನಿವಾರ್ಯವಾಗಿ ಬಾಯಿ ಬಿಡಬೇಕಿದೆ’ ಎಂದರು.

ಶೀಘ್ರ ಮಾಜಿ: ‘ಶಿವಕುಮಾರ್ ಶೀಘ್ರವೇ ಮಾಜಿ ಸಚಿವರಾಗುವರು. ಅವರು ಜೈಲಿಗೆ ಹೋಗುವರೋ ಇಲ್ವೊ ಗೊತ್ತಿಲ್ಲ. ಆದರೆ, ಮಾಜಿ ಆಗುವುದು ಗ್ಯಾರಂಟಿ’ ಎಂದು ಹೇಳಿದರು.

‘ಶಿವಕುಮಾರ್ ಸಚಿವರಾಗಿ ಇರುವವರೆಗೆ ಸರ್ಕಾರ ಅಪಾಯದಲ್ಲಿದೆ ಎಂದರ್ಥ. ಅವರೊಬ್ಬ ಪುಕ್ಕಲು ಮನುಷ್ಯ. ಅವರು ಮತ್ತು ಅವರ ಆಪ್ತರು ಯಾವತ್ತೂ ನೇರ ಹೋರಾಡಿ ಗೆದ್ದವರಲ್ಲ. ಬರೀ ಹೊಂದಾಣಿಕೆ, ಹಿಂಬಾಗಿಲಿನ ಗೆಲುವು ಕಂಡಿದ್ದಾರೆ. ಈ ಬಾರಿ ಲಾಟರಿ ಹೊಡೆದಿದ್ದಾರೆ. ಈ ಲಾಟರಿ ಸಚಿವರೆಲ್ಲ ಬಹಳ ದಿನ ನಿಲ್ಲುವುದಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಕರ್ನಾಟಕಕ್ಕೆ ಅಂಬೇಡ್ಕರ್ ಹೆಸರಿಡಿ’

‘ಕರ್ನಾಟಕ ರಾಜ್ಯಕ್ಕೆ ಬೇರೆಬೇರೆ ಹೆಸರುಗಳನ್ನು ಸೂಚಿಸುತ್ತಿದ್ದಾರೆ. ಆದರೆ, ಎಲ್ಲ ಬಿಟ್ಟು ‘ಅಂಬೇಡ್ಕರ್ ನಾಡು’ ಎಂದು ಹೆಸರಿಡಬೇಕು’ ಎಂದು ರಮೇಶ ಜಾರಕಿಹೊಳಿ ಹೇಳಿದರು. ‘ವಾಲ್ಮೀಕಿ, ಬಸವಣ್ಣ, ಕಿತ್ತೂರು ಚನ್ನಮ್ಮ ಇವರೆಲ್ಲರನ್ನೂ ಇತಿಹಾಸದಲ್ಲಿ ಓದಿ ತಿಳಿದಿದ್ದೇವೆ. ಆದರೆ, ಅಂಬೇಡ್ಕರ್ ಸಾಧನೆಯನ್ನು ಕಣ್ಣಾರೆ ಕಂಡಿದ್ದೇವೆ. ಹಾಗಾಗಿ, ಈ ನಾಡಿಗೆ ಅವರ ಹೆಸರೇ ಸೂಕ್ತ’ ಎಂದರು.

15 ನಿವೇಶನ, 5 ಎಕರೆ ಭೂಮಿ ಪತ್ತೆ

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರಾಭಿವೃದ್ಧಿ ಇಲಾಖೆಯಲ್ಲಿ ಸ್ಥಳ ನಿರೀಕ್ಷೆಯಲ್ಲಿದ್ದ ಕಾರ್ಯಪಾಲಕ ಎಂಜಿನಿಯರ್, ಮದ್ದೂರು ತಾಲ್ಲೂಕು ತೈಲೂರು ಗ್ರಾಮದ ಶಶಿಕುಮಾರ್ ಅವರ ತಾಯಿ– ಪತ್ನಿಯ ಹೆಸರಿನಲ್ಲಿ 15 ನಿವೇಶನಗಳಿವೆ. ಕೊಳಚೆ ನಿರ್ಮೂಲನಾ ಮಂಡಳಿ ಮುಖ್ಯ ಎಂಜಿನಿಯರ್, ಮಳವಳ್ಳಿ ತಾಲ್ಲೂಕು ನಂಜೇಗೌಡನದೊಡ್ಡಿ ಗ್ರಾಮದ ಬಾಲರಾಜು ಅವರಿಗೆ ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 5 ಎಕರೆ ಭೂಮಿ ಇದೆ.

ಸೋಮವಾರ ಬೆಳಿಗ್ಗೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಜಿಲ್ಲೆಯ ಈ ಇಬ್ಬರು ಅಧಿಕಾರಿಗಳ ಬಳಿಯಿರುವ ಅಪಾರ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ. ಮಂಡ್ಯ ನಗರಸಭೆ, ಬಿಬಿಎಂಪಿ, ಬಿಡಿಎ, ಕೆಐಎಡಿಬಿಯಲ್ಲಿ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಶಶಿಕುಮಾರ್ ಸದ್ಯ ಮಾತೃಸಂಸ್ಥೆ ನಗರಾಭಿವೃದ್ಧಿ ಇಲಾಖೆಯಲ್ಲಿ ಸ್ಥಳ ನಿರೀಕ್ಷೆಯಲ್ಲಿದ್ದರು.

ಶಶಿಕುಮಾರ್ ವೇತನಕ್ಕಿಂತ ಹೆಚ್ಚಾಗಿ ₹ 9.15 ಕೋಟಿ (ಶೇ 321) ಮೌಲ್ಯದ ಆಸ್ತಿಗಳು ಪತ್ತೆಯಾಗಿವೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದರು. ತೈಲೂರು ಗ್ರಾಮದಲ್ಲಿ ಮನೆ, ತೋಟದ ಮನೆ, 5 ಎಕರೆ ಕೃಷಿ ಜಮೀನು, ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ₹ 2.50 ಕೋಟಿ ಮೌಲ್ಯದ ಮನೆ, 510 ಗ್ರಾಂ ಚಿನ್ನ, 6 ಕೆ.ಜಿ ಬೆಳ್ಳಿ, 1 ಕಾರು ಪತ್ತೆಯಾಗಿವೆ. ಜೊತೆಗೆ ಚನ್ನಪಟ್ಟದಲ್ಲಿರುವ ಶಶಿಕುಕಮಾರ್ ಅವರ ಮಾವನ ಮನೆಯಲ್ಲೂ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಬಾಲರಾಜು ಅವರು ನಂಜೇಗೌಡನದೊಡ್ಡಿ ಗ್ರಾಮದಲ್ಲಿ ಮನೆ, ತೋಟದ ಮನೆ ಸೇರಿದಂತೆ 40 ಎಕರೆ ಕೃಷಿ ಭೂಮಿ ಹೊಂದಿದ್ದಾರೆ. ಬೆಂಗಳೂರು ಜಯನಗರದಲ್ಲಿ ₹ 2 ಕೋಟಿ ಮೌಲ್ಯದ ಮನೆ ಇದೆ. ಅಶೋಕ ಪಿಲ್ಲರ್ ಬಳಿ 40X 80 ಅಳತೆಯ ನಿವೇಶನ ಇದೆ. ಮನೆಯಲ್ಲಿ 1 ಕೆ.ಜಿ ಚಿನ್ನ, 500 ಗ್ರಾಂ ಬೆಳ್ಳಿ, ತಾಯಿ, ತಮ್ಮನ ಹೆಸರಿನಲ್ಲಿ 12 ನಿವೇಶನಗಳು ಪತ್ತೆಯಾಗಿವೆ. ಲೋಕಾಯುಕ್ತ ಎಸ್‌ಪಿ ಸಜಿತ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಸುನೀಲ್ ಕುಮಾರ್, ಮೋಹನ್‌ರೆಡ್ಡಿ, ಪ್ರಕಾಶ್, ಬ್ಯಾಟರಾಯಗೌಡ ಅವರು ದಾಳಿ ನಡೆಸಿ ರಾತ್ರಿವರೆಗೂ ಪರಿಶೀಲನೆ ನಡೆಸಿದರು.

ಬ್ಲೂಟೂತ್: ಮತ್ತೆ 7 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಯಾದಗಿರಿ: ವಿವಿಧ ನಿಗಮ ಮಂಡಳಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಕೆ ಸಂಬಂಧ ಮತ್ತೆ ಏಳು ಆರೋಪಿಗಳನ್ನು ನಗರ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 16ಕ್ಕೆ ಏರಿಕೆಯಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಚಿಂಚೋಳಿ ಗ್ರಾಮದ ರಾಹುಲ್ ಶಿವಶರಣ ಬಸರಿಗಿಡ, ಅಳ್ಳಗಿ ಗ್ರಾಮದ ಖಾಜಾಸಾಬ್ ಅಭ್ಯರ್ಥಿಗಳಾಗಿದ್ದಾರೆ. ಈಗಾಗಲೇ 9 ಅಭ್ಯರ್ಥಿಗಳನ್ನು ಶನಿವಾರ ಹಾಗೂ ಭಾನುವಾರ ಬಂಧಿಸಲಾಗಿತ್ತು. ಸೋಮವಾರ ಅಭ್ಯರ್ಥಿಗಳ ಜೊತೆಗೆ ಅಕ್ರಮಕ್ಕೆ ಸಾಥ್ ನೀಡಿದವರನ್ನು ಬಂಧಿಸಲಾಗಿದೆ.

ಬಂಧಿತ ಆರೋಪಿ ಬಾಬುರಾವ್‌ಗೆ ಸಹಕಾರ ನೀಡಿದ ಡೊಣ್ಣೂರು ಗ್ರಾಮದ ಓಂಕಾರ್ ಪೀರಪ್ಪ ಸೊನ್ನ, ನಾಮಕರ್ ಪೀರಪ್ಪ ಸೊನ್ನ, ಪ್ರಭುಲಿಂಗ ರಾಜಕುಮಾರ್ ಕುಂಬಾರ, ಸಿದ್ದರಾಮ ಎಂಬುವವನಿಗೆ ಸಹಕಾರ ನೀಡಿದ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ದೇವಣಗಾಂವ್ ಗ್ರಾಮದ ಶ್ರೀಶೈಲ ಸಾಯಿಬಣ್ಣ ಸೊನ್ನ, ಸೊನ್ನ ಗ್ರಾಮದ ವಡಗೇರಾ ಉಪಖಜಾನೆ ಎಫ್‌ಡಿಎ ಬಸವರಾಜ್ ತುಕಾರಾಂ ಅಂಕಲಗಿ ಅವರನ್ನು ಬಂಧಿಸಲಾಗಿದೆ.

‘ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವ ಕುರಿತು ತನಿಖೆ ಪ್ರಗತಿಯಲ್ಲಿದ್ದು, ಯಾದಗಿರಿ ನಗರದಲ್ಲಿ ನಡೆದ ಕೆಇಎ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಇದುವರೆಗೂ 16 ಜನ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಸಂಗೀತಾ ತಿಳಿಸಿದ್ದಾರೆ.

ಪ್ರವಾಸಕ್ಕೆ ಬಂದಿದ್ದ ಫ್ರಾನ್ಸ್ ಪ್ರಜೆ ಸಾವು

ಕೊಪ್ಪಳ: ಭಾರತದ ಪ್ರವಾಸಕ್ಕೆ ಬಂದಿದ್ದ ಫ್ರಾನ್ಸ್‌ನ ನಾನ್ಸೆಲಿಯರ್ ದಿದಿಯೆ (63) ಎಂಬ ವ್ಯಕ್ತಿ ಇಲ್ಲಿಗೆ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಬೈಕ್ ಉರುಳಿ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಫ್ರಾನ್ಸ್‌ನ ಐವರು ಸ್ನೇಹಿತರ ತಂಡ ಅಕ್ಟೋಬರ್ 24ರಂದು ಚೆನ್ನೈ ಮೂಲಕ ಭಾರತಕ್ಕೆ ಬಂದಿತ್ತು. ದೇಶದ ಪ್ರವಾಸಿ ತಾಣಗಳನ್ನು ಸುತ್ತಲು ಚೆನ್ನೈನಲ್ಲಿ ಬೈಕ್‌ಗಳನ್ನು ಬಾಡಿಗೆ ಪಡೆದುಕೊಂಡು ಹಂಪಿಗೆ ಬಂದಿದ್ದರು. ಇಲ್ಲಿಂದ ಗೋವಾಕ್ಕೆ ಹೋಗುವಾಗ ಈ ಘಟನೆ ನಡೆದಿದೆ ಎಂದು ಕೊಪ್ಪಳ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸಂಗಂ ಸಾಹಿತ್ಯ ಪುರಸ್ಕಾರ ಕಥಾ ಸಂಕಲನ ಆಹ್ವಾನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದ ಅರಿವು ಟ್ರಸ್ಟ್ ಸಾಹಿತ್ಯ ಬಳಗವು ‘ಸಂಗಂ ಸಾಹಿತ್ಯ ಪುರಸ್ಕಾರ-2023ಕ್ಕೆ ಕಥಾ ಸಂಕಲನಗಳನ್ನು ಆಹ್ವಾನಿಸಿದೆ. ಆಸಕ್ತ ಬರಹಗಾರರು ಮತ್ತು ಪ್ರಕಾಶಕರು 2021 ರಿಂದ 2023ರವರೆಗಿನ ಅವಧಿಯಲ್ಲಿ ಪ್ರಥಮ ಮುದ್ರಣ ಕಂಡ ಕನ್ನಡ ಕಥಾ ಸಂಕಲನಗಳ 4 ಪ್ರತಿಗಳನ್ನು ಕಳುಹಿಸಬಹುದು.

ಪ್ರಶಸ್ತಿಯು ₹ 25 ಸಾವಿರ ಮತ್ತು ಸ್ಮರಣಿಕೆ ಒಳಗೊಂಡಿದೆ. ಕೃತಿಗಳ ಸಲ್ಲಿಕೆಗೆ ನವೆಂಬರ್ 22 ಕೊನೆಯ ದಿನ ಎಂದು ಅರಿವು ಟ್ರಸ್ಟ್ ಬಳಗದ ಸಂಚಾಲಕ ಅರವಿಂದ ಪಟೇಲ್ ತಿಳಿಸಿದ್ದಾರೆ. ಕೃತಿಗಳನ್ನು ಕಳುಹಿಸಬೇಕಾದ ವಿಳಾಸ: ಅರಿವು, 004, ಮರ್ಚೆಡ್ ರೀನೊ, 2ನೇ ಅಡ್ಡರಸ್ತೆ, ಗಾಂಧಿನಗರ, ಬಳ್ಳಾರಿ-583103. ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9449622737 ಅಥವಾ 9980346474.

ಬಿಲ್ ಬಾಕಿ ಉಳಿಸಿಕೊಂಡಿದ್ದಕ್ಕೆ ಜೆಸ್ಕಾಂನಿಂದ ಡೇರಿ ಕರೆಂಟ್ ಕಟ್

ಹಾಲು ಸುರಿದು ಆಕ್ರೋಶ

ಪ್ರಜಾವಾಣಿ ವಾರ್ತೆ

ಬೀದರ್‌ನ ಜೆಸ್ಕಾಂ ಕಚೇರಿ ಎದುರು ಸೋಮವಾರ ರಾತ್ರಿ ಹಾಲು ಚೆಲ್ಲಿರುವುದು

ಬೀದರ್: ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದ ಹಾಲಿನ ಡೇರಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ಸುಮಾರು ಮೂರು ಸಾವಿರ ಲೀಟರ್ ಹಾಳಾಗಿದ್ದು, ಡೇರಿ ಮಾಲೀಕರು ನಗರದ ಜೆಸ್ಕಾಂ ಕಚೇರಿ ಎದುರು ಸೋಮವಾರ ರಾತ್ರಿ ಹಾಲು ಚೆಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ‘ಲೋಕಲ್ ಫಾರ್ಮ್’ ಡೇರಿ ಜೆಸ್ಕಾಂಗೆ ₹1.30 ಲಕ್ಷ ಬಿಲ್ ಕಟ್ಟದೇ ಬಾಕಿ ಉಳಿಸಿಕೊಂಡಿತ್ತು. ಸೋಮವಾರ ಬೆಳಿಗ್ಗೆ ಡೇರಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು. ಇದರಿಂದಾಗಿ ಮೂರು ಸಾವಿರ ಲೀಟರ್ ಹಾಲು ಕೆಟ್ಟು ಹೋಗಿದೆ. ತೀವ್ರ ನಷ್ಟವಾಗಿದ್ದಕ್ಕೆ ಕ್ಯಾನ್‌ಗಳಲ್ಲಿ ಹಾಲು ತಂದು ಜೆಸ್ಕಾಂ ಕಚೇರಿ ಆವರಣದಲ್ಲಿ ಸುರಿದರು.

‘ನಮ್ಮ ಡೇರಿಯಿಂದ ₹1.30 ಲಕ್ಷ ವಿದ್ಯುತ್ ಬಿಲ್ ಕಟ್ಟಬೇಕಿತ್ತು. ₹45 ಸಾವಿರ ಕಟ್ಟಿದ್ದೆವು. ಶುಕ್ರವಾರ ₹50 ಸಾವಿರ ಮೊತ್ತದ ಚೆಕ್ ನೀಡಿದ್ದೇವೆ. ಚೆಕ್ ಕ್ಲೇಮ್ ಮಾಡಿಕೊಳ್ಳದೆ ಏಕಾಏಕಿ ಬಂದು ಬೆಳಿಗ್ಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ. ನೋಟಿಸ್ ಕೂಡ ನೀಡಿಲ್ಲ. ನಿತ್ಯ 25 ಹಳ್ಳಿಗಳ ರೈತರು ನಮಗೆ ಹಾಲು ಮಾರಾಟ ಮಾಡುತ್ತಾರೆ. ಸಂಗ್ರಹವಾಗಿದ್ದ ಹಾಲು ಹಾಗೂ ಹಾಲಿನ ಇತರೆ ಉತ್ಪನ್ನಗಳು ಹಾಳಾಗಿದ್ದು, ₹4 ಲಕ್ಷ ನಷ್ಟವಾಗಿದೆ. ಮಂಗಳವಾರ ಪುನಃ ರೈತರು ಹಾಲು ತೆಗೆದುಕೊಂಡು ಬರುತ್ತಾರೆ. ಕರೆಂಟ್ ಇಲ್ಲದ ಕಾರಣ ಸಂಗ್ರಹಿಸಲು ಆಗುವುದಿಲ್ಲ. ಇದಕ್ಕೆ ಯಾರು ಹೊಣೆ? ನಷ್ಟವನ್ನು ಜೆಸ್ಕಾಂ ಅಧಿಕಾರಿಗಳು ಭರಿಸಬೇಕು’ ಎಂದು ಡೇರಿ ಮಾಲೀಕರಾದ ಶಾಂತಬಾಯಿ ಹಾಗೂ ಅಜಯ್ ಬಿರಾದಾರ್ ಆಗ್ರಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಜೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ರಮೇಶ ಪಾಟೀಲ ಅವರನ್ನು ‘ಪ್ರಜಾವಾಣಿ’ ಸಂಪರ್ಕಿಸಲು ಯತ್ನಿಸಿದರೂ ಅವರು ಲಭ್ಯರಾಗಲಿಲ್ಲ.

ಬಿಹಾರದ ಮೂವರ ಬಂಧನ: ಬಂಧಿತರ ಬಳಿ ಸಾವಿರಕ್ಕೂ ಹೆಚ್ಚು ದಸ್ತಾವೇಜು ಪ್ರತಿ

‘ವಂಚನೆ ತಡೆಯಲು ಗೋಪ್ಯತೆ ಕಾಪಾಡಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಆಸ್ತಿ ನೋಂದಣಿ ಮಾಡಿಸಿದವರಲ್ಲಿ ಕೆಲವರ ಖಾತೆಗಳಿಂದ ವಂಚಕರು ಹಣ ಕದಿಯುತ್ತಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಗೋಪ್ಯತಾ ನೀತಿ ಅಳವಡಿಸಿಕೊಳ್ಳುವಂತೆ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು ಎಲ್ಲ ಉಪ ನೋಂದಣಾಧಿಕಾರಿಗಳಿಗೆ ಸೂಚಿಸಿದ್ದಾರೆ.

ದಸ್ತಾವೇಜಿನ ನೋಂದಣಿ ಸಮಯದಲ್ಲಿ ಪಕ್ಷಗಾರರು ಗುರುತಿನ ದಾಖಲೆಯಾಗಿ ಸಲ್ಲಿಸುವ ಆಧಾರ್ ಮಾಹಿತಿಯ ಗೋಪ್ಯತೆ ಕಾಪಾಡಬೇಕು. ದಸ್ತಾವೇಜಿನಲ್ಲಿ ಆಧಾರ್ ಸಂಖ್ಯೆಯ ಕೊನೆಯ ನಾಲ್ಕು ಸಂಖ್ಯೆಗಳನ್ನು ಮಾತ್ರ ನಮೂದಿಸಲು ತಿಳಿಸಬೇಕು. ಸಾರ್ವಜನಿಕರು ಸಲ್ಲಿಸುವ ಆಧಾರ್ ಗುರುತಿನ ಚೀಟಿಯ ಪ್ರತಿಗಳನ್ನು ಸುರಕ್ಷಿತವಾಗಿ ಸಂರಕ್ಷಿಸಿ ಇಡಬೇಕು ಎಂದು ಅವರು ನಿರ್ದೇಶನ ನೀಡಿದ್ದಾರೆ.

ಬಂಧನ: ಮಂಗಳೂರು ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆಸ್ತಿ ನೋಂದಣಿ ಮಾಡಿಕೊಂಡಿರುವ ಅನೇಕ ಮಂದಿಯ ಖಾತೆಗೆ ಕನ್ನ ಹಾಕಿದ ಬಿಹಾರದ ಮೂವರನ್ನು ಅಕ್ಟೋಬರ್ 22ರಂದು ನಗರದ ಸೆನ್ ಕ್ರೈಂ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅಕ್ಟೋಬರ್ 27ರಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಈ ನಿರ್ದೇಶನ ನೀಡಿದೆ.

‘ಆಸ್ತಿ ನೊಂದಣಿಗೆ ಸಂಬಂಧಿಸಿದ ಕಾವೇರಿ-2 ಪೋರ್ಟಲ್ ಹ್ಯಾಕ್ ಮಾಡಿದ್ದ ಆರೋಪಿಗಳು, ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆಸ್ತಿ ನೋಂದಣಿ ಮಾಡಿದವರ ಬಯೊಮೆಟ್ರಿಕ್ ದಾಖಲೆಗಳನ್ನು ಕದ್ದು ವಂಚನೆ ನಡೆಸುತ್ತಿದ್ದರು’ ಎಂದು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

‘ಆರೋಪಿಗಳು ಕಾವೇರಿ-2 ಪೋರ್ಟಲ್‌ನಿಂದ ದಾಖಲಾತಿಗಳ ಆಧಾರ್ ಸಂಖ್ಯೆ ಮತ್ತು ಹೆಬ್ಬೆರಳ ಗುರುತಿನ ಬಯೊಮೆಟ್ರಿಕ್ ಮಾಹಿತಿಯನ್ನು ಸಂಗ್ರಹಿಸುತ್ತಿದ್ದರು. ಸ್ಕ್ಯಾನರ್ ಮೂಲಕ ಬೆರಳುಮುದ್ರೆಯನ್ನು ಸ್ಕ್ಯಾನ್ ಮಾಡಿ, ಆಧಾರ್ ಆಧರಿತ ಪಾವತಿ ವ್ಯವಸ್ಥೆಯನ್ನು (ಎಇಪಿಎಸ್) ದುರ್ಬಳಕೆ ಮಾಡಿಕೊಂಡು ಬ್ಯಾಂಕ್ ಖಾತೆಯ ಹಣವನ್ನು ಬೇರೆ ಖಾತೆಗಳಿಗೆ ವರ್ಗಾವಣೆ ಮಾಡುತ್ತಿದ್ದರು’ ಎಂದು ಅವರು ವಿವರಿಸಿದ್ದಾರೆ.

‘ಇದುವರೆಗೆ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಸಾವಿರಕ್ಕೂ ಹೆಚ್ಚು ನೊಂದಣಿ ಪತ್ರಗಳ ಪಿಡಿಎಫ್ ಮತ್ತು ಆಂಧ್ರಪ್ರದೇಶ ಹಾಗೂ ಇತರ ಕೆಲವು ರಾಜ್ಯಗಳಿಗೆ ಸಂಬಂಧಿಸಿದ 300 ಕ್ಕೂ ಹೆಚ್ಚು ಪತ್ರಗಳ ಪಿಡಿಎಫ್ ಪ್ರತಿಗಳನ್ನು ಆರೋಪಿಗಳು ಸಂಗ್ರಹಿಸಿಟ್ಟಿರುವುದು ಕಂಡು ಬಂದಿದೆ’ ಎಂದು ಅವರು ತಿಳಿಸಿದ್ದಾರೆ.

ಕೇರಳ, ಪಂಜಾಬ್ ಮಾದರಿಯ ಕರಡು ನೀತಿ ಸಿದ್ಧಪಡಿಸಿದ ರಾಜ್ಯ ಸರ್ಕಾರ

ಹೂಡಿಕೆ: ಅನಿವಾಸಿ ಕನ್ನಡಿಗರ ಸೆಳೆತ

● ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕದಲ್ಲಿ ಹೂಡಿಕೆ ಮಾಡುವಂತೆ ವಿದೇಶಗಳಲ್ಲಿ ನೆಲೆಸಿರುವ ಶ್ರೀಮಂತ ಕನ್ನಡಿಗರನ್ನು (ಎನ್‌ಆರ್‌ಕೆ) ಪ್ರೇರೇಪಿಸಲು ರಾಜ್ಯ ಸರ್ಕಾರ ಕೇರಳ, ಪಂಜಾಬ್ ಮಾದರಿಯಲ್ಲಿ ಹೊಸ ನೀತಿ ರೂಪಿಸುತ್ತಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆಯಂತೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಈಗಾಗಲೇ ಕರಡು ಸಿದ್ಧಪಡಿಸಿದ್ದು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಪರಿಶೀಲನೆಗಾಗಿ ಸಲ್ಲಿಸಿದ್ದಾರೆ. ಈ ನೀತಿಯು ಜಗತ್ತಿನಾದ್ಯಂತ ಇರುವ ಕನ್ನಡಿಗರಿಗೆ ಪ್ರೋತ್ಸಾಹ ಮತ್ತು ಆದ್ಯತಾ ಸೇವೆಗಳನ್ನು ನೀಡುವ ಜತೆಗೆ, ಪ್ರತ್ಯೇಕ ಸಚಿವಾಲಯದ ರಚನೆಗೂ ದಾರಿ ಮಾಡಿಕೊಡಲಿದೆ.

'ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಹೆಚ್ಚು ಕೌಶಲ ಹೊಂದಿದವರಾಗಿದ್ದು, ಶ್ರೀಮಂತರೂ ಆಗಿದ್ದಾರೆ. ಅಂತಹವರಿಂದ ಕರ್ನಾಟಕವು ದೊಡ್ಡ ಪ್ರಮಾಣದ ಹೂಡಿಕೆಯ ಸಾಮರ್ಥ್ಯವನ್ನು ನಿರೀಕ್ಷಿಸುತ್ತದೆ. ಆ ಮೂಲಕ ರಾಜ್ಯವನ್ನು ಹೂಡಿಕೆ ಸ್ನೇಹಿಯಾಗಿಸುವ ಅಗತ್ಯ ಮನಗಂಡು ಇಂತಹ ಯೋಜನೆ ರೂಪಿಸಲಾಗುತ್ತಿದೆ' ಎನ್ನುತ್ತಾರೆ ಸಚಿವ ಪ್ರಿಯಾಂಕ್ ಖರ್ಗೆ.

ಕರ್ನಾಟಕದಲ್ಲಿ ಈಗಾಗಲೇ ಎನ್‌ಆರ್‌ಐ ವೇದಿಕೆಯನ್ನು ಸರ್ಕಾರ ರಚಿಸಿದೆ. ಆದರೆ, ಅವರನ್ನು ಕರ್ನಾಟಕದ ಕಡೆ ಸೆಳೆಯಲು ಬೇಕಾದ ಯೋಜನೆ ಹಮ್ಮಿಕೊಳ್ಳಲು ಯಾವುದೇ ಸ್ಪಷ್ಟ ನೀತಿ ಇಲ್ಲ. ಎನ್‌ಆರ್‌ಐಗಳ ಜತೆ ನಿರಂತರ ಸಂಪರ್ಕವನ್ನು ಹೊಂದಲು ಈ ವೇದಿಕೆಗೆ ಸಾಧ್ಯವಾಗಿಲ್ಲ.

ಬಂಡವಾಳ ಹೂಡಲು ಇಚ್ಛಿಸುವ ಅನಿವಾಸಿ ಕನ್ನಡಿಗರ ಪಟ್ಟಿ ಸಿದ್ಧಪಡಿಸಿಕೊಂಡು ಹೂಡಿಕೆಯ ಅಗತ್ಯವಿದ್ದಾಗ ಆದ್ಯತೆಯ ಮೇಲೆ ಬಳಸಿಕೊಳ್ಳಲು, ಹೂಡಿಕೆ ಸೆಳೆಯುವ ಜತೆಗೆ ಅನಿವಾಸಿ ಭಾರತೀಯರು ಹಾಗೂ ಕನ್ನಡಿಗರ ಮೂಲಕ ರಾಜ್ಯಕ್ಕೆ ಅಗತ್ಯವಾದ ಇತರೆ ಪ್ರಯೋಜನೆಗಳನ್ನು ಪಡೆಯುವ ದೂರ ದೃಷ್ಟಿಯನ್ನು ಹೊಸ ಕರಡು ನೀತಿ ಒಳಗೊಂಡಿದೆ.

- ಹೂಡಿಕೆ ಅನುಮತಿಗೆ ಏಕಗವಾಕ್ಷಿ ವ್ಯವಸ್ಥೆ
- ಪ್ರವಾಸೋದ್ಯಮಕ್ಕೆ ವಿಶೇಷ ಪ್ಯಾಕೇಜ್‌ಗಳು
- ರಿಯಲ್ ಎಸ್ಟೇಟ್‌ಗೆ ಕೃಷಿ ಭೂಮಿ ಬಳಸಲು ಅವಕಾಶ
- ಕೈಗಾರಿಕಾ ನೀತಿಗಳಲ್ಲಿ ಸಡಿಲಿಕೆ
- ಪ್ರತ್ಯೇಕ ಕಾನೂನು ಘಟಕ ಸ್ಥಾಪನೆ
- ಎನ್‌ಆರ್‌ಐಕೆ ಅನುಷ್ಠಾನ ಪ್ರಾಧಿಕಾರ ರಚನೆ
- ಕನ್ನಡದ ಪ್ರೀತಿಗಾಗಿ 'ನಮ್ಮ ನಾಡು' ಭೂಮಿಕೆ ಆರಂಭ

ರಾಜ್ಯದಲ್ಲಿ ರೂಪಿಸಿದ ಕರಡು ನೀತಿಯ ಪ್ರಸ್ತಾವಗಳನ್ನು ಕಾರ್ಯಗತಗೊಳಿಸಲು ಮುಖ್ಯಮಂತ್ರಿ ನೇತೃತ್ವದ 21 ಸದಸ್ಯರ ಎನ್‌ಆರ್‌ಐ(ಕೆ) ಅನುಷ್ಠಾನ ಪ್ರಾಧಿಕಾರ ರಚಿಸುವುದು ನೀತಿಯ ಭಾಗವಾಗಿದೆ

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

ವಿಶೇಷ ಎನ್‌ಆರ್‌ಕೆ ಕಾರ್ಡ್

ಅನಿವಾಸಿ ಕನ್ನಡಿಗರು ರಾಜ್ಯ ಭೇಟಿ ಸಮಯದಲ್ಲಿ ರಿಯಾಯಿತಿ, ವಿಶೇಷ ಸವಲತ್ತು ಪಡೆಯಲು ಎನ್‌ಆರ್‌ಕೆ ಕಾರ್ಡ್ ನೀಡುವ ಚಿಂತನೆ ಇದೆ. ಈ ಕಾರ್ಡ್ ಹೊಂದಿರುವವರು ಸರ್ಕಾರಿ ಕಚೇರಿಗಳಿಂದ ಅಗತ್ಯ ಬೆಂಬಲ, ಹೂಡಿಕೆಗೆ ಅಗತ್ಯವಾದ ಸೌಕರ್ಯಗಳನ್ನು ತ್ವರಿತವಾಗಿ ಪಡೆಯಲು ಅವಕಾಶ ಮಾಡಿಕೊಡಲಿದೆ.

ಜಗ್ಗೇಶ್ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿ ಉಗುರಿನ ಪದಕವನ್ನು ಧರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯಸಭಾ ಸದಸ್ಯ ಹಾಗೂ ನಟ ಜಗ್ಗೇಶ್ ವಿರುದ್ಧ ಅರಣ್ಯ ಇಲಾಖೆಯ ಮುಂದಿನ ವಿಚಾರಣಾ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ವಿಧಿಸಿದೆ.

ಈ ಸಂಬಂಧ ಜಗ್ಗೇಶ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. 'ವಶಪಡಿಸಿಕೊಂಡಿರುವ ಪದಕದ ಮೇಲೆ ನೀಡಲಾಗುವ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಯು ಅರ್ಜಿಯ ಅಂತಿಮ ವಿಚಾರಣೆಗೆ ಒಳಪಟ್ಟಿರುತ್ತದೆ' ಎಂದು ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ನವೆಂಬರ್ 29ಕ್ಕೆ ಮುಂದೂಡಿದೆ.

ವಿಚಾರಣೆ ವೇಳೆ ಜಗ್ಗೇಶ್ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ ಕೆ. ನಾವದಗಿ, 'ಸಾಮಾಜಿಕ ಜಾಲತಾಣದಲ್ಲಿನ ಚಿತ್ರವನ್ನು ಆಧರಿಸಿ ನೋಟಿಸ್ ನೀಡಿದ ಒಂದೇ ತಾಸಿನಲ್ಲಿ 14 ಅಧಿಕಾರಿಗಳ ತಂಡ ಜಗ್ಗೇಶ್ ಅವರ ಮನೆಯಲ್ಲಿ ಶೋಧ ನಡೆಸಿದೆ. ಶೋಧದ ಬಳಿಕ ಅರ್ಜಿದಾರರ ಮನೆಯ ಹೊರಗೆ ಮಾಧ್ಯಮಗೋಷ್ಠಿ ನಡೆಸಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಕಲಂ 39 ಮತ್ತು 40 ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನೋಟಿಸ್‌ಗೆ ಪ್ರತಿಕ್ರಿಯೆ ಸಲ್ಲಿಸುವವರೆಗೂ ನೀವು ಮೌನವಾಗಿರಬೇಕಿತ್ತಲ್ಲವೇ? ಇದು ನಿಯಮಬಾಹಿರವಲ್ಲವೇ? ಅವರು ನಕಲಿ ಪೆಂಡೆಂಟ್ ನೀಡುತ್ತಾರೆ ಎಂಬುದು ನಿಮ್ಮ ಗಮನಕ್ಕೆ ಹೇಗೆ ಬಂತು? ಒಂದು ಗಂಟೆಯಲ್ಲಿ ನಿಮಗೆ ಸಿಕ್ಕ ಆ ಸುದ್ದಿಯ ಮೂಲ ಯಾವುದು? ನಿಮ್ಮ ಪ್ರಚಾರವು ಈ ರೀತಿ ಇರಬಾರದು' ಎಂದು ಪ್ರಾಸಿಕ್ಯೂಷನ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತು.

'ಅರಣ್ಯ ಸಂಚಾರಿ ದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ 2023ರ ಅಕ್ಟೋಬರ್ 25ರಂದು ನನಗೆ ನೋಟಿಸ್ ಜಾರಿ ಮಾಡಿದ್ದಾರೆ. ಬೆಂಗಳೂರಿನ ನನ್ನ ಮನೆಯಲ್ಲಿ 14 ಜನ ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಅಕ್ರಮವಾಗಿ ಶೋಧ ನಡೆಸಿದೆ. ಇದು ಸಂವಿಧಾನದ 21ನೇ ವಿಧಿಯ ಉಲ್ಲಂಘನೆ' ಎಂದು ಆಕ್ಷೇಪಿಸಿ ಜಗ್ಗೇಶ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ರೇವಣ್ಣಗೆ ಪುನಃ ಸಮನ್ಸ್ ಜಾರಿಗೆ ಆದೇಶ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಡಿ. ರೇವಣ್ಣ ಅವರ ಆಯ್ಕೆ ಅನೂರ್ಜಿತಗೊಳಿಸಬೇಕು ಎಂದು ಕೋರಲಾದ ಅರ್ಜಿಯಲ್ಲಿ; ಸಮನ್ಸ್ ಜಾರಿಯಾಗದ ಕಾರಣ ರೇವಣ್ಣ ಅವರಿಗೆ ಮತ್ತೊಮ್ಮೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪರಾಜಿತ ಅಭ್ಯರ್ಥಿ ಜಿ.ದೇವರಾಜೇಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ, 'ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸ್ ಜಾರಿಗೆ ಆದೇಶಿಸಬೇಕು' ಎಂದು ಮನವಿ ಮಾಡಿದರು. ಆದರೆ, ನ್ಯಾಯಪೀಠ ರೇವಣ್ಣ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ಮತ್ತೊಮ್ಮೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ನವೆಂಬರ್ 29ಕ್ಕೆ ಮುಂದೂಡಿತು.

ಆರೋಪವೇನು?: 'ರೇವಣ್ಣ ಅವರ ನಾಮಪತ್ರದಲ್ಲಿ ಅವರ ಆಸ್ತಿ ವಿವರಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ಅವರ ಪತ್ನಿ ಭವಾನಿ ಅವರ ಆಸ್ತಿಯ ವಿವರಗಳೂ ಸುಳ್ಳಿನಿಂದ ಕೂಡಿವೆ. ರೇವಣ್ಣ ಅಕ್ರಮ ಎಸಗಿ ಜಯಗಳಿಸಿದ್ದಾರೆ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಚುನಾವಣೆ ಸಂದರ್ಭದಲ್ಲಿ ಎಚ್.ಡಿ.ರೇವಣ್ಣ ಬೆಂಬಲಿಗರು ಅಣ್ಣೆಹಳ್ಳಿಯಲ್ಲಿ ಮತದಾರರಿಗೆ ಎರಡು ಕೋಳಿ ಮತ್ತು ₹ 2 ಸಾವಿರ ನಗದು ಹಂಚಿ ಮತ ಹಾಕಿಸಿಕೊಂಡಿದ್ದಾರೆ. ಶಾಂತಿ ಗ್ರಾಮದ ಬಳಿ ಜನರಿಗೆ ದುಡ್ಡು, ಕೋಳಿಯ ಆಮಿಷ ಒಡ್ಡುತ್ತಿದ್ದುದನ್ನು ತಡೆಯಲು ಹೋದಾಗ ರೇವಣ್ಣ ಅವರ ಬೆಂಬಲಿಗರು ನಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ' ಎಂಬ ಆರೋಪದಡಿ 30 ಮಂದಿ ವಿರುದ್ಧ ದೂರು ದಾಖಲಿಸಲಾಗಿದೆ.

ಕೆಎಸ್‌ಆರ್‌ಟಿಸಿ: ಪರಿಹಾರ ಮೊತ್ತ ₹ 10 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರಿಗೆ ನೀಡುವ ಕುಟುಂಬ ಕಲ್ಯಾಣ ಯೋಜನೆಯ ಪರಿಹಾರ ಮೊತ್ತವನ್ನು ₹ 3 ಲಕ್ಷದಿಂದ ₹ 10 ಲಕ್ಷಕ್ಕೆ ಏರಿಸಲಾಗಿದೆ. ಅಪಘಾತ ಹೊರತುಪಡಿಸಿ ಅನ್ಯ ಕಾರಣದಿಂದ ಸಿಬ್ಬಂದಿ ಮೃತಪಟ್ಟಾಗ ಅವರ ಕುಟುಂಬಕ್ಕೆ ಈ ಪರಿಹಾರ ಸಿಗಲಿದೆ.

ಅಪಘಾತದಲ್ಲಿ ಸಿಬ್ಬಂದಿ ಮೃತಪಟ್ಟರೆ ಅವರ ಅವಲಂಬಿತರಿಗೆ ಅಪಘಾತ ವಿಮಾ ಪರಿಹಾರ ಯೋಜನೆಯಡಿ ₹1 ಕೋಟಿ ನೀಡುವ ಯೋಜನೆ ಈಗಾಗಲೇ ಜಾರಿಯಲ್ಲಿದೆ. ಅಪಘಾತ ಹೊರತುಪಡಿಸಿ ಇತರೆ ಕಾರಣಗಳಿಂದ ಅಂದರೆ ಕ್ಯಾನ್ಸರ್, ಪಾರ್ಶ್ವವಾಯು, ಹೃದಯಾಘಾತ, ಮೂತ್ರಪಿಂಡ ವೈಫಲ್ಯ ಸೇರಿದಂತೆ ಇತರೆ ಕಾಯಿಲೆಗಳಿಂದ ಸಾವು ಉಂಟಾದರೆ ಕಲ್ಯಾಣ ಯೋಜನೆಯ ಪರಿಹಾರ ಸಿಗಲಿದೆ.

ಯೋಜನೆಗೆ ನೌಕರರ ತಿಂಗಳ ವಂತಿಕೆ ₹100 ಅನ್ನು ₹200ಕ್ಕೆ ಹಾಗೂ ನಿಗಮದ ವತಿಯಿಂದ ಪ್ರತಿ ನೌಕರರ ಪರವಾಗಿ ನೀಡಲಾಗುತ್ತಿರುವ ₹50 ವಂತಿಕೆಯನ್ನು ₹100ಕ್ಕೆ ಹೆಚ್ಚಿಸಿ, ಪರಿಷ್ಕರಿಸಲಾಗಿದೆ. ಪರಿಷ್ಕೃತ ಆದೇಶವು ನ.1 ರಿಂದ ಜಾರಿಯಾಗಲಿದೆ ಎಂದು ಕೆಎಸ್‌ಆರ್‌ಸಿಟಿ ಅಧಿಕಾರಿಗಳು ತಿಳಿಸಿದ್ದಾರೆ.

ಹೈದರಾಬಾದ್‌ನ ಬೆಳೆ ಸಂಶೋಧನಾ ಸಂಸ್ಥೆಯೊಂದಿಗೆ ಒಪ್ಪಂದ

ಹೊಸ ತಳಿಗಳ ಬೀಜ ತ್ವರಿತ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಹೈದರಾಬಾದ್‌ನ ಅಂತರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆಯ ಅಧಿಕಾರಿಗಳು (ಇಕ್ರಿಸ್ಯಾಟ್) ಹೊಸ ತಳಿಗಳ ಬೀಜಗಳನ್ನು ರಾಜ್ಯದ ರೈತರಿಗೆ ತ್ವರಿತವಾಗಿ ವಿತರಿಸುವ ಒಪ್ಪಂದಕ್ಕೆ ಸೋಮವಾರ ಸಹಿ ಹಾಕಿದರು.

ರಾಜ್ಯ ಬೀಜ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಎಚ್.ಎಸ್. ದೇವರಾಜ, ಐಸಿಆರ್‌ಐಎಸ್‌ಎಟಿ ಉಪ ಮಹಾ ನಿರ್ದೇಶಕ ಅರವಿಂದ ಕುಮಾರ್ ಅವರು ಕೃಷಿ ಸಚಿವ ಚಲುವರಾಯಸ್ವಾಮಿ ಸಮ್ಮುಖದಲ್ಲಿ ಒಪ್ಪಂದ ಮಾಡಿಕೊಂಡರು.

ರಾಜ್ಯ ಸರ್ಕಾರದ ಅಂಗಸಂಸ್ಥೆಯಾದ ಕರ್ನಾಟಕ ರಾಜ್ಯ ಬೀಜ ನಿಗಮವು ಪ್ರತಿ ವರ್ಷ ಸರಾಸರಿ 3.5 ಲಕ್ಷ ಕ್ವಿಂಟಲ್ ಬೀಜ ಸರಬರಾಜು ಮಾಡುತ್ತಿದೆ. ಅಂತರಾಷ್ಟ್ರೀಯ ಬೆಳೆ ತಳಿ ಸಂಶೋಧನಾ ಕೇಂದ್ರವಾದ ಐಸಿಆರ್‌ಐಎಸ್‌ಎಟಿ ಹೊಸ ತಂತ್ರಜ್ಞಾನದ ಮೂಲಕ ಅರೆ ಶುಷ್ಕ ವಾತಾವರಣಕ್ಕೆ ಹೊಂದಿಕೊಳ್ಳುವ ಹೊಸ ತಳಿಗಳನ್ನು ಅಭಿವೃದ್ಧಿಪಡಿಸುತ್ತಿದೆ. ಸಂಸ್ಥೆ ಅಭಿವೃದ್ಧಿಪಡಿಸಿದ ಶೇಂಗಾ, ತೊಗರಿ, ಜೋಳ, ಕಡಲೆ, ಸಜ್ಜೆ ತಳಿಗಳಿಗೆ ದೇಶದ ಎಲ್ಲೆಡೆ ಬೇಡಿಕೆ ಇದೆ. ಇನ್ನು ಮುಂದೆ ಸಂಸ್ಥೆಯ ತಳಿಗಳು ರಾಜ್ಯ ಬೀಜ ನಿಗಮಕ್ಕೆ ಲಭ್ಯವಾಗಲಿವೆ ಎಂದು ಚಲುವರಾಯಸ್ವಾಮಿ ಹೇಳಿದರು.

ಮೂರು ವರ್ಷಗಳ ಒಪ್ಪಂದದಿಂದಾಗಿ ರೈತರಿಗೆ ತೊಗರಿ, ಕಡಲೆ, ಜೋಳ, ಸಜ್ಜೆ, ಸಿರಿಧಾನ್ಯಗಳಲ್ಲಿ ಹೊಸ ಶಕ್ತಿವರ್ಧಕ ತಳಿಗಳನ್ನು ಪರಿಚಯಿಸಲು ಅನುಕೂಲವಾಗುತ್ತದೆ. ಹೊಸ ತಳಿಗಳನ್ನು ಧಾರವಾಡದ ತಳಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಮೌಲ್ಯವರ್ಧನೆ ಮಾಡಲಾಗುವುದು. ವಿವಿಧ ಬೆಳೆಗಳಲ್ಲಿ ಹೊಸ ತಳಿ ಪರಿಚಯಿಸಲಾಗುವುದು. ಬರ ಮತ್ತು ರೋಗ ನಿರೋಧಕ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲಾಗುವುದು. ಆ ಮೂಲಕ ರಾಜ್ಯದ ಸರಾಸರಿ ಉತ್ಪಾದಕತೆಯಲ್ಲೂ ಹೆಚ್ಚಳವಾಗಲಿದೆ ಎಂದರು.

ಕೃಷಿ ಇಲಾಖೆ ಕಾರ್ಯದರ್ಶಿ ವಿ.ಅನ್ಬುಕುಮಾರ್, ಕೃಷಿ ಇಲಾಖೆ ಆಯುಕ್ತ ವೈ.ಎಸ್.ಪಾಟೀಲ, ಕೃಷಿ ನಿರ್ದೇಶಕ ಜಿ.ಟಿ.ಪುತ್ರ, ವಿಆರ್‌ಡಿಸಿ ಮುಖ್ಯಸ್ಥ ವಿ.ಎಸ್.ಸಂಗಮ, ಮುಖ್ಯ ಸಂಶೋಧಕರಾದ ಪ್ರಕಾಶ ಗಂಗಶೆಟ್ಟಿ, ಅಶೋಕ ಕುಮಾರ್ ಉಪಸ್ಥಿತರಿದ್ದರು.

ಬಿಸಿಯೂಟ ನೌಕರರನ್ನು ಕಾಯಂಗೊಳಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಪ್ರಾರಂಭಿಸಿದ್ದಾರೆ –ಪ್ರಜಾವಾಣಿ ಚಿತ್ರ

ಚಂದ್ರಶೇಖರ ಶೆಟ್ಟಿ ವಿಶ್ರಾಂತ ಕುಲಪತಿಗಳ ವೇದಿಕೆ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆಯ (ಎಫ್‌ವಿಸಿಕೆ) ಅಧ್ಯಕ್ಷರಾಗಿ ಎಸ್.ಚಂದ್ರಶೇಖರ ಶೆಟ್ಟಿ ಆಯ್ಕೆಯಾಗಿದ್ದಾರೆ.

ನಾರಾಯಣಗೌಡ, ಬಿ. ಸಂಗಮೇಶ್ವರ (ಉಪಾಧ್ಯಕ್ಷರು), ಎಚ್. ಮಹೇಶಪ್ಪ (ಕಾರ್ಯದರ್ಶಿ), ಟಿ.ಡಿ. ಕೆಂಪರಾಜು (ಖಜಾಂಚಿ), ಸರ್ವಮಂಗಳ ಶಂಕರ್ (ಸಹ ಕಾರ್ಯದರ್ಶಿ), ಎಸ್.ಎನ್. ಹೆಗಡೆ, ಎನ್.ಎಸ್. ರಾಮೇಗೌಡ, ಎಸ್.ಎಸ್. ಮೂರ್ತಿ, ಆರ್.ಎನ್. ಶ್ರೀನಿವಾಸಗೌಡ, ಆರ್. ಚಂದ್ರಶೇಖರ, ಎಸ್. ಸಚ್ಚಿದಾನಂದ, ಎಂ.ಕೆ. ಸೂರಪ್ಪ, ಪದ್ಮಾಶೇಖರ್, ಜಿ. ಹೇಮಂತ ಕುಮಾರ್ (ಸದಸ್ಯರು), ಕೆ.ಎಸ್. ರಂಗಪ್ಪ, ಸುರೇಶ್ ಎಸ್. ಹೊನ್ನಪ್ಪಗೋಳ್, ಇ.ಟಿ. ಪುಟ್ಟಯ್ಯ (ಕಾರ್ಯಕಾರಿ ಸದಸ್ಯರು) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶರಣರಿಗೆ ಜಾಮೀನು ನೀಡದಂತೆ ಪ್ರಾಸಿಕ್ಯೂಷನ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ತಮ್ಮ ಮಠದಲ್ಲಿನ ಹಾಸ್ಟೆಲ್‌ನಲ್ಲಿ ಇದ್ದು ಓದುತ್ತಿದ್ದ ಮೂರು–ನಾಲ್ಕನೇ ತರಗತಿಯ ಬಡ ಮಕ್ಕಳನ್ನು ಲೈಂಗಿಕವಾಗಿ ಶೋಷಿಸಿದ್ದಾರೆ. ಅವರೊಬ್ಬ ಪ್ರಭಾವಿ ವ್ಯಕ್ತಿಯಾಗಿದ್ದು ಅವರಿಗೆ ಜಾಮೀನು ನೀಡಬಾರದು' ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮನವಿ ಮಾಡಿತು.

ಜಾಮೀನು ಕೋರಿ ಶಿವಮೂರ್ತಿ ಶರಣರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್‌ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಸಂತ್ರಸ್ತ ಬಾಲಕಿಯರ ಮೇಲೆ ಅತ್ಯಾಚಾರ ನಡೆದಿದೆ ಎಂದು ವೈದ್ಯಕೀಯ ವರದಿ ಹೇಳಿಲ್ಲ. ಇದು ಪೋಕ್ಸೊ ಪ್ರಕರಣವಾದ್ದರಿಂದ ಹಟಸಂಭೋಗ ನಡೆದಿದ್ದರೆ ಮಾತ್ರವೇ ಅಪರಾಧ ಎಂಬುದು ಇಲ್ಲಿ ಪರಿಗಣನಾರ್ಹವಲ್ಲ. ಮಕ್ಕಳನ್ನು ರಾತ್ರಿ ಊಟವಾದ ನಂತರ ತಮ್ಮ ಕೊಠಡಿಗೆ ಕರೆಸಿಕೊಂಡ ಸ್ವಾಮೀಜಿ ಲೈಂಗಿಕವಾಗಿ ಶೋಷಿಸುತ್ತಿದ್ದರು. ಸಂತ್ರಸ್ತ ಬಾಲಕಿಯರ ಖಾಸಗಿ ಭಾಗಗಳಿಗೆ ಕೈ ಹಾಕುತ್ತಿದ್ದರು ಎಂಬ ಅಂಶಗಳು ಮ್ಯಾಜಿಸ್ಟ್ರೇಟ್ ಮುಂದೆ ಬಾಲಕಿಯರು ನೀಡಿರುವ ತಮ್ಮ ಸ್ವಯಂ ಹೇಳಿಕೆಯಲ್ಲಿ ವ್ಯಕ್ತವಾಗಿವೆ' ಎಂದರು.

'ತನಿಖೆಯಲ್ಲಿ ಸ್ವಾಮೀಜಿ ಅಪರಾಧ ಎಸಗಿರುವುದು ಮೇಲ್ನೋಟಕ್ಕೇ ಕಂಡುಬಂದಿದೆ. ಇದೊಂದು ಗಂಭೀರ ಮತ್ತು ಪ್ರಭಾವಿ ವ್ಯಕ್ತಿಯ ವಿರುದ್ಧದ ಕ್ರಿಮಿನಲ್ ಕೇಸು. ಸ್ವಾಮೀಜಿ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012ರ (ಪೋಕ್ಸೊ) ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್‌ಕುಮಾರ್, ಸ್ವಾಮೀಜಿ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರ ವಾದವನ್ನು ಪುಷ್ಟೀಕರಿಸಿದರಲ್ಲದೆ, 'ದೂರು ನೀಡುವ ಮುನ್ನ ಇಬ್ಬರೂ ಸಂತ್ರಸ್ತ ಬಾಲಕಿಯರು ಯಾರ ಜೊತೆ ಇಲ್ಲದೆ ಬೆಂಗಳೂರಿಗೆ ಹೇಗೆ ಬರಲು ಸಾಧ್ಯವಾಯಿತು? ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂದಾಗಿದ್ದರೆ ಅವರೇಕೆ ತಮ್ಮ ಹಳ್ಳಿಗಳಿಗೆ ಹೋಗಲಿಲ್ಲ? ಪೋಷಕರನ್ನು ಯಾಕೆ ಭೇಟಿ ಮಾಡಲಿಲ್ಲ? ಮೈಸೂರಿಗೇ ಹೋಗಿ ಒಡನಾಡಿ ಸಂಸ್ಥೆಯ ಮುಖಾಂತರ ಏಕೆ ದೂರು ದಾಖಲಿಸಿದರು' ಎಂದು ಪ್ರಶ್ನಿಸಿದರು.

ದಿನದ ಕಲಾಪ ಮುಗಿದ ಕಾರಣ ವಿಚಾರಣೆಯನ್ನು ಮಂಗಳವಾರಕ್ಕೆ (ಅ.31) ಮುಂದೂಡಲಾಗಿದೆ.

'ದೇಣಿಗೆ ಮೂಲ: ಮಾಹಿತಿ ಪಡೆಯುವ ಹಕ್ಕು ಜನರಿಗಿಲ್ಲ'

ಒಂದನೇ ಪುಟದಿಂದ...

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳಿರುವ ಸಂವಿಧಾನ ಪೀಠವು, ಚುನಾವಣಾ ಬಾಂಡ್ ಯೋಜನೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮಂಗಳವಾರ ನಡೆಸಲಿದೆ. ಹೀಗಾಗಿ, ಅಟಾರ್ನಿ ಜನರಲ್ ಅವರು ಸಲ್ಲಿಸಿರುವ ಈ ಹೇಳಿಕೆಗೆ ಮಹತ್ವ ಬಂದಿದೆ.

325	64	2089	Muniyappa S/o Munishamappa	209.02	R. Shyam Prasad Reddy	209.02
326	64	2090	M. Ramachandrappa S/o M.R. Muniyappa	72.45	Narasimha Prakash. N	72.45
327	64	2091	K.A. Muneendra kumar S/o M. Anjinappa	55.74	K.A. Muneendra kumar S/o M. Anjinappa	55.74
328	64	2093	Amt. Seema B. Gajria W/o Bharath R. Gajria	1700.10	Nirmala Pais Leela	1700.10
329	64	2096	K. Subramani S/o Krishnappa	110.00	M/s. M. C. Builders	110.00
330	64	2097	D.R. Vasudev murthy S/o Late D. Rambhat	75.07	M/s. SKAV Developers Pvt. Ltd	75.07
331	64	2098	A.C. Munikrishnappa S/o Late Chikkanjinappa	83.61	V.Mohan kumar	2.20
332	64	2099	D. Gopalappa S/o late Dyanappa	1213.48	C. Ganesh Narayan	371.03
333	58	1926	Smt. Mariyamma Koshy W/o M. Koshy	437.00	M/s. SKAV Developers (P) Ltd	437.00
334	58	1928	Smt. H.L. Chaya W/o PPrakash	167.22	Smt. H.L. Chaya W/o PPrakash	167.22
335	58	1929	Smt. Ramakka W/o Late Thili Channappa	52.24	M/s. Viveks Construction M/s. Prestige Estates Projects Ltd	52.24
336	58	1931	Smt. Rajamma W/o Late R. Ramanjanappa	390.33	Rahul Rammanohar & A.R. Saraswathi	390.33
337	58	1933	Sri. Bheraram S/o Sukharamji	133.41	Sudarshan.N	133.41
338	58	1935	B.S. Vindokumar S/o M. Somashekhar	1290.48	M/s. SV Constructions	61.11
339	58	1938	B.M. Ramachandraiah S/o R. Muniswamappa	1084.23	M/s. Sumadhura Infra Construction Pvt. Ltd	159.63
340	58	1939	R. Madhu S/o R. Radhakrishna Rao	632.65	M/s. Vajram Estates Pvt. Ltd	632.65
341	58	1940	R. Madhu S/o R. Radhakrishna Rao	1521.10	M/s. SVS Structures M. Narayana swamy	1521.10
342	58	1943	K. Ashwath Narayanappa S/o Konappa	76.08	Svarna Land Development Pvt. Ltd	76.08
343	58	1950	Smt. Indramma W/o Late Munihanumaiah	725.53	Smt. Indramma W/o Late Munihanumaiah	725.53
344	80	2476	Smt. K.V. Achamma W/o K. Venkataramappa	191.49	1. Ranganath 2. Rajeshwari 3. Parimala 4. M/s. e 5 Holdings	191.49
345	80	2477	K. Venkataramanappa S/o Kadiri Nagappa	191.19	1. Ranganath 2. Rajeshwari 3. Parimala 4. M/s. e 5 Holdings	191.19
346	80	2478	Smt. Sunitha Raju D/o Raju Philip	438.96	Smt. Sunitha Raju D/o Raju Philip	438.96
347	80	2479	Syed Ismail S/o Syed Mahamood	362.13	Mrs. Kripa Chandrashekar	77.61
348	80	2480	Anjinappa S/o Late Muniyappa	724.20	Anagha Ventures	724.20
349	80	2485	Narayanappa S/o Thimmarayappa	167.22	J.V.R JogiRaju & others	9.30
350	80	2486	Muniraju S/o Late Durgappa	175.57	M/s. Suraj Properties	175.57
351	80	2487	Venkatesh S/o Dodda Avalappa	592.24	M/s. Sri. Rajarajeshwari Builders & Developers	592.24
352	80	2488	Munishamappa S/o Late Muthurayappa	200.62	M/s. Elegant Builders & Developers	164.48
353	80	2489	Sri. Govind swarup S/o Late Ramraghubirsaram	139.35	Sri. Govind swarup S/o Late Ramraghubirsaram	139.35
354	80	2490	Smt. Hanumakka W/o Ugrappa	167.22	M/s. Suraj Properties	167.22
355	80	2491	N. Shivappa S/o Late Narayanappa	1895.05	N. Shivappa S/o Late Narayanappa	1895.05
356	80	2493	L. Muniyappa S/o Laskmaiah	172.78	B.V. Ashok kumar & others	172.78
357	80	2494	Thimmarayappa S/o Sampangappa	657.33	M/s. S. L.V Shelters Pvt. Ltd	657.33
358	80	2495	K. Chikkalingaiah S/o Late Karilingaiah	167.22	K. Chikkalingaiah S/o Late Karilingaiah	167.22
359	80	2496	Mahesh. G. Patel S/o G.P. Patel	234.10	B.V. Ashok kumar & others	234.10
360	80	2498	Smt. Rathnamma W/o Late Yelappa	221.56	Smt. Rathnamma W/o Late Yelappa	221.56
361	60	1979	RajendraGowda S/o Late Veeranna	630.00	M/s. R.C. Properties	630.00
362	60	1982	Kanthamma W/o Krishna reddy	212.62	I.H. Shivani & M.S.Shivani	212.62
363	60	1983	M.R. Lakshmana s/o M.T Ramakrishna	272.25	M/s. Sanjay M/s. Compart Shelters Pvt. Ltd	272.25
364	60	1985	Narayanappa S/o Giriyappa	993.34	M/s. Jain Height Infrastructure Pvt. Ltd	6.72
365	60	1997	Chetana W/o Suresh	1365.76	Mr. P.R. Jaishankar S/o Rama reddy	56.40
366	60	1998	Smt. Devaki Nataraj W/o G.V. Nataraj	268.80	Mr. Rajeev Mahihia Shoba Developers Ltd	268.80
367	60	1999	Nanda kumar K.C. Beerappa Srinivasaiah	4725.34	M/s Sumudura Infracon Pvt Ltd	15.20
368	108	3184	Smt. Ratnamma W/o Late C. Giriraje gowda & others	2805.00	Smt. Ratnamma W/o Late C. Giriraje gowda & others	2805.00
369	108	3185	Smt. Muniratnamma W/o Late Munishamappa	5947.23	M/s. Prestige Kammanahalli Investments M/s S.S.Developers	4553.69 493.06
370	108	3186	M/s. Ezzy Infratech Pvt. Ltd	208.12	M/s. Ezzy Infratech Pvt. Ltd	208.12
371	108	3187	Smt. Muniyamma W/o Late Muniyappa	1306.47	M/s. DSR Infrastructure Pvt. Ltd Damodhar reddy	165.47 399.28
372	108	3190	Sri. Munivenkatappa S/o Late D. Venkataswamy Gowda	8293.32	M/s. Sumadura Infracon Pvt. Ltd Anandaram Munivenkatappa	261.94 304.34 1093.38
373	108	3191	Sri. Munegowda S/o Late D. Venkataswamy & others	13623.55	M/s. Prestige Estates Projects Pvt. Ltd	2535.86
374	108	3192	Smt. Tulasi W/o Late Varadaraju	4431.84	Sri. Nitin Bagamane S/o Late Sri. B.D. Bhoje gowda	4431.84
375	108	3193	Sri. L. Subbarayappa S/o Lakshmaiah	446.25	M/s. Eambassy Classic Pvt. Ltd	446.25
376	108	3195	Sri. B. Shaffiulla S/o M.A. Basheer	173.83	Mr. Aslam S/o Syed and others	173.83
377	108	3196	Sri. Keshava Reddy S/o Ramaiah Reddy	2072.12	M/s. Pappy Relators Pvt. Ltd	2072.12
378	108	3197	Sri. Nagaraju S/o Chikkappaiah	1217.55	M/s. Pappy Relators Pvt. Ltd	1217.55
379	108	3198	Sri. Krishnamurthy S/o Munilakshmaiah	1252.12	M/s. Pappy Relators Pvt. Ltd	1252.12
380	66	2126	Smt. H. Kavitha D/o K.M. Jayamma	3396.28	Modern Asset	54.73
381	66	2127	Smt. Shwetha D/o Devarajappa	5312.56	Sri. Harshad J. Parikh	5312.56
382	66	2128	Kepanna S/o Patalappa	522.57	Platinium Developers	522.57
383	66	2136	Smt. Shameen Khusro D/o Late C. M. Abdul Gaffar Khan	1117.45	Mr. Azeed Mahmood Imperium Constructions Pvt.Ltd	196.277
384	66	2137	K.C. Pillirappa S/o Late Chikkamuniveerappa	278.70	D.V. Sadananda Gowda K.C. Pillairappa	128.70
385	66	2138	Sri. Muninarayanappa S/o Late Chikkamu	299.59	D.N. Jeevaraja	99.59
386	66	2143	Smt. Nethravathy D/o Nagaraju. S.	3763.24	B.K. Srinivas murthy B.K. Prakash B.K. Lalitha	3763.24
387	66	2145	Smt. B. Govindamma W/o Late Gururaju	132.69	Rajarajeshwari Buildcon Pvt. Ltd	132.69
388	69	2201	Smt. Padma & others	345.285	Smt. Padma & others	345.285
389	69	2202	M/s. Karle Infra Projects Pvt. Ltd	450.00	M/s. Karle Infra Projects Pvt. Ltd	450.00
390	69	2023	Smt. Kalpana Belur W/o Dr. Jagadish Belur	9503.74	Smt. Kalpana Belur W/o Dr. Jagadish Belur	9503.74
391	69	2205	M/s. Spencer and Company Ltd.	2718.12	M/s. Brigade Enterprises Ltd.	2718.12
392	40	1476	D. Padmanabha S/o Dhavapal Naidu	960.00	Naraindas Bodaram	960.00
393	40	1477	Smt. Balamma W/o Shivaramaiah	315.00	M/s. Ecstasy Properties Pvt Ltd	62.27
394	40	1482	Bhanumati W/o Pandurang Katakanand	122.64	Bhanumati W/o Pandurang Katakanand	122.64
395	40	1483	Vasanth Rao S/o Hanumantha Rao Godak	132.12	Vasanth Rao S/o Hanumantha Rao Godak	132.12
396	40	1484	Sri. K. Narayana Reddy S/o Late Kaverappa	958.80	Smt. Amrutha	958.80
397	40	1485	Chaco M.Mani S/o M.Mani	118.13	Chaco M.Mani S/o M.Mani	118.13
398	40	1486	Sri.N. Rajanna S/o Late Nanjappa	1127.58	M/s. S.V.G Properties Pvt Ltd	154.76
399	40	1489	K.S. Munihanumaiah S/o Late Siddappa	945.00	K. Jeevan S/o K.C. Jayarama reddy	80.88
400	40	1490	R. Jyothi D/o M. Ramachandra	622.5	M/s. Surbocon Development Pvt. Ltd M/s. A.V. Groups	325.28 297.22
401	40	1493	Director Agape Ministry of India	40.5	Director Agape Ministry of India	40.5
402	40	1498	Sri. Dinesh Ranka S/o Devaraj. H. Ranka	5616.06	M/s. DRA Developers Project pvt. Ltd	2235.79
403	40	1499	Smt.Asha W/o Vijay Tapase	159.03	Smt.Asha W/o Vijay Tapase	159.03
404	76	2380	Sri. Munisandappa S/o late Munishamappa	592.87	M/s. Vikram Structure Pvt. Ltd	592.87
405	76	2381	Sri. Srinivasa S/o late Munithanjappa	633.00	Sri. Srinivasa S/o late Munithanjappa	633.00
406	76	2384	Sri.N.Murali S/o Narayanaswamy	230.47	Khivraj Motors	230.47
407	76	2388	Sri. T. Chikkanarayanappa S/o Late Tippanna	371.25	M/s. Udit Mohotra	109.09
408	76	2389	Smt.Muddamma W/o Chikkanarayanappa	378.00	Smt.Muddamma W/o Chikkanarayanappa	378.00
409	76	2396	Sri. M.K. Babu S/o Kempe Gowda	331.5	M/s. Vista Spaces LLP. Mrs. KRIPA Chandrashekar	59.98
410	63	2052	S. Padmaraj	67.08	S. Padmaraj	67.08
411	63	2053	Roshan Khaliq	63.10	Sri. Rama murhty P. S/o Krishnaiah chetty	63.10
412	63	2057	Rajulapati Sheshagiri Rao and R. Durga Srinivas Rao	26.595	M/s. Trishul Buildtech 7 Infrastructures Pvt. Ltd	26.595
413	63	2058	Ramakka	75.075	Mrs. Uma Balasaraswathi W/o Dr. Kanteerava Balasaraswathi	75.075
414	63	2059	Raja Reddy and Navaneetha	36.27	Sri. Ramamurthy. P S/o krishnaiah	36.27
415	63	2060	Ubedulla and Jameel Ahmed Sharieff	48.135	Dr. B.R. Jahagirdar Smt. Shobha Jahagirdar	31.725
416	63	2062	B. Giresh	31.72	B.Giresh	31.72
417	63	2063	Abdul Naushad	33.12	Sri. Arjunlal. N. Ahuja And others	33.12
418	63	2066	N. Shanthamma	84.03	S. Sridhar &S mohan	84.03
419	63	2067	Radhamma	40.065	S. Sridhar s/o S mohan	40.065
420	63	2071	Nayan Padiyar	769.71	Nayan padiyar	769.71
421	63	2072	Seeta Devi	321.345	Seeta Devi	321.345
422	63	2073	Kamala Devi	293.295	Kamala Devi	293.295
423	63	2075	Muniratna W/o D.Gopal	68.02	Muniratna W/o Gopal	68.02
424	28	1179	B.R.Srinivas S/o Lt Kempanna	465.99	Madhavaram Constructions	465.99
425	28	1186	Suresh Bhatia S/o M.M.Bhatia	273.60	Sri Suresh Bhatia S/o M.M.Bhatia	273.60
426	28	1189	B.S.Vijaya Prabha and Ujwal Deep	529.50	M/s Legacy Global Projects Pvt Ltd	138.5
427	28	1191	K.Ramesh S/o Krishnappa	4055.31	M/s. Pride & Expert Properties Pvt. Ltd.,	4055.31
428	28	1192	B.S.Leelavathi W/o B.N.Sathyanna	1615.74	C & B Infrastructure and Developers Pvt. Ltd.,	1615.74
429	28	1193	B.S.Leelavathi W/o B.N.Sathyanna	7563.55	C & B Infrastructure and Developers Pvt. Ltd.,	7563.55
430	28	1194	Smt B.S.Leelavathi W/o B.N.Sathyanna	2690.00	C & B Infrastructure and Developers Pvt. Ltd.,	2690.00
431	28	1195	Anneppa S/o Lt. Munishamappa	4286.25	M/s. Pride & Expert Properties Pvt. Ltd.,	3736.59
432	28	1196	Munishamappa (Doddaiah) S/o Lt Ramashamappa	906.03	M/s. Mantri Garden view Home Pvt. Ltd.,	906.03
433	28	1197	Munaiappa S/o Ramaswamappa	975.66	M/s. Mantri Garden view Home Pvt. Ltd.,	975.66
434	28	1198	Anjinappa S/o Ramaswamappa	975.66	M/s. Mantri Garden view Home Pvt. Ltd.,	975.66
435	28	1200	Muniappa S/o Mariappa	717.80	M/s. Mantri Garden view Home Pvt. Ltd.,	717.80
436	72	2276	C.R. Jayappa Reddy S/O Late Ramaiah Reddy	1707.06	M/s. Shriram Properties (Pvt) Ltd	1707.06
437	72	2279	Shanthilala S/o Thilok Chand	676.69 sq	Mythreyi Promoters Developers (P) Ltd.,	146.52
438	72	2289	Dasappa S/O Honnappa	495.36	M/s. Legacy Global Projects (P) Ltd.,	495.36
439	72	2290	Sushilamma W/o Srinivasachari	235.24	M/s. Legacy Global Projects (P) Ltd.,	235.24
440	72	2292	Sri. Srinivasappa S/o Muniyappa	151.48	M/s. Legacy Global Projects (P) Ltd.,	151.48
441	72	2294	Smt Puttamma W/o Narayanappa	240.00	M/s. Legacy Global Projects (P) Ltd.,	240.00
442	72	2295	Sri Kallappa S/o Bangeppa	276.06	M/s. Legacy Global Projects (P) Ltd.,	276.06
443	72	2296	Smt Narayanamma W/o Lt Nanjappa	257.91	M/s. Legacy Global Projects (P) Ltd.,	257.91
444	72	2297	Akkayamma W/O Devirappa and others	790.36	M/s. Vista Spaces Estates Pvt. Ltd.,	790.36
445	72	2298	1) Smt Shanthakumari W/o R.V Subramanyan 2) Shivram S/o Lt Rangaswamy	283.96	1) Smt Shanthakumari W/o R.V Subramanyan 2) Shivram S/o Lt Rangaswamy	283.96
446	72	2300	Mr.Kaiyyappa S/o Muniyappa	446.40	Svarna Land Development (P) Ltd.,	446.40
447	92	2780	Ganga Bai W/o Karpu Swamy	139.35	Thimmeai Gowda	21.09
448	92	2782	Balasubramanya chari S/o Late B. Mariaya Chari and others	399.48	M/s. Puja Housing Corporation	399.48
449	92	2783	Sri. Kempanna S/o Doddanarayanappa	666.10	M/s. Polladium Constructions Pvt ltd	666.10
450	92	2788	B.K. Somashekar S/o Late B.K. Kempanna	46.47	B.K. Somashekar S/o Late B.K. Kempanna	46.47
451	92	2789	D.V.G Krishnan s/o D.M. Vishwanatha Iyar	94.75	S.V. Naresh kumar	94.75
452	92	2791	K.P. Ankappa S/o K.M. Papanna & K.P. Rajanna S/o K.M. Papanna	118.20	M/s. Ecstasy Projects (P) Ltd	118.20
453	92	2793	A.K. Pushpa Rajan S/o Krishnamurthy	139.35	M/s. Inner Spaces	139.35
454	92	2795	Ramachandra S/o Munishamappa	401.32	M/s. White Lotus Lifescapes (P) Ltd	401.32
455	92	2799	Sri. Cherian Sebastian S/o Late E.I. Sebastian	710.71	M/s. Sri. Vinayaka Constructions	60.05

ಸಹಿ/-
ಉಪ ಆಯುಕ್ತರು (ಭೂಸ್ವಾಧೀನ ಮತ್ತು ಟಿ.ಡಿ.ಆರ್)ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬಿಆರ್‌ಎಸ್ ಅಭ್ಯರ್ಥಿಗೆ ಚಾಕುವಿನಿಂದ ಇರಿತ

ಚೂರಿ ಇರಿತಕ್ಕೆ ಒಳಗಾದ ಬಿಆರ್‌ಎಸ್ ಪಕ್ಷದ ಅಭ್ಯರ್ಥಿ ಕೋತಾ ಪ್ರಭಾಕರ ರೆಡ್ಡಿ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಹೈದರಾಬಾದ್ : ತೆಲಂಗಾಣ ರಾಜ್ಯದ ಸಿದ್ದಿಪೇಟೆ ಜಿಲ್ಲೆಯಲ್ಲಿ ಸೋಮವಾರ ಚುನಾವಣಾ ಪ್ರಚಾರ ನಡೆಸುತ್ತಿದ್ದ ವೇಳೆ ಮೇದಕ್ ಸಂಸದ, ದುಬ್ಬಾಕ್ ವಿಧಾನಸಭಾ ಕ್ಷೇತ್ರದ ಬಿಆರ್‌ಎಸ್ ಪಕ್ಷದ ಅಭ್ಯರ್ಥಿ ಕೋತಾ ಪ್ರಭಾಕರ ರೆಡ್ಡಿಗೆ 38 ವರ್ಷದ ವ್ಯಕ್ತಿ ಚೂರಿಯಿಂದ ಇರಿದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ರೆಡ್ಡಿ ಅವರ ಹೊಟ್ಟೆಗೆ ಗಾಯಗಳಾಗಿದ್ದು, ಸಿದ್ದಿಪೇಟೆ ಜಿಲ್ಲೆಯ ಗಜ್ವೆಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಬಳಿಕ ಸಿಕಂದರಾಬಾದ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರೆಡ್ಡಿ ಅವರು ಸುರಂಪಲ್ಲಿ ಗ್ರಾಮದಲ್ಲಿ ಪಾದ್ರಿಯ ಮನೆಯಿಂದ ಹೊರಬರುತ್ತಿದ್ದಾಗ ಈ ಘಟನೆ ನಡೆದಿದೆ. ಆರೋಪಿ ಜಿ. ರಾಜು ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈತನ ವಿರುದ್ಧ ಕೊಲೆ ಯತ್ನದ ಪ್ರಕರಣ ದಾಖಲಿಸಲಾಗಿದೆ.

ರೆಡ್ಡಿ ಅವರ ಕೈಕುಲುಕುವ ನೆಪದಲ್ಲಿ ಬಂದ ಆರೋಪಿ, ಚಾಕುವಿನಿಂದ ಅವರ ಹೊಟ್ಟೆಗೆ ಎರಡು ಬಾರಿ ಇರಿದಿದ್ದಾನೆ. ಬಿಆರ್‌ಎಸ್ ಕಾರ್ಯಕರ್ತರು ಆತನನ್ನು ಹಿಡಿದು ಥಳಿಸಿದ್ದಾರೆ ಎಂದು ಸಿದ್ದಿಪೇಟೆ ಪೊಲೀಸ್ ಆಯುಕ್ತರಾದ ಎನ್. ಶ್ವೇತಾ ತಿಳಿಸಿದ್ದಾರೆ. ರಾಜು ಯೂಟ್ಯೂಬ್ ಚಾನೆಲ್ ಪತ್ರಕರ್ತನಾಗಿದ್ದು, ಗುರುತಿನ ಚೀಟಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ತನ್ನ ಕುಟುಂಬಕ್ಕೆ ದಲಿತ ಬಂಧು ಯೋಜನೆ ಮಂಜೂರು ಮಾಡದ ಕಾರಣ ಸರ್ಕಾರದ ವಿರುದ್ಧ ಅಸಮಾಧಾನಗೊಂಡು, ಕೊಲೆ ಯತ್ನಕ್ಕೆ ಪ್ರಯತ್ನಿಸಿದ್ದಾನೆ ಎಂದು ತಿಳಿದು ಬಂದಿದೆ.

ಆರೋಪಿ ಕಾಂಗ್ರೆಸ್ ಜೊತೆ ಸಂಪರ್ಕ ಹೊಂದಿದ್ದಾರೆ ಎಂದು ಬಿಆರ್‌ಎಸ್ ನಾಯಕರು ಆರೋಪಿಸಿದ್ದಾರೆ.

ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢದಲ್ಲಿ ಎಡಪಕ್ಷಗಳ ಅಭ್ಯರ್ಥಿಗಳು ಕಣಕ್ಕೆ

ಹೊಂದಾಣಿಕೆ ಸೂತ್ರ ವಿಫಲ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢ ವಿಧಾನಸಭೆ ಚುನಾವಣೆಗಳಲ್ಲಿ ಹೊಂದಾಣಿಕೆ ಸೂತ್ರ ಮುರಿದುಬಿದ್ದ ಬಳಿಕ ಸಿಪಿಎಂ ಮತ್ತು ಸಿಪಿಐ ಈ ರಾಜ್ಯಗಳಲ್ಲಿ ಕಾಂಗ್ರೆಸ್ ವಿರುದ್ಧ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಕಡೇ ಪ್ರಯತ್ನ ಎಂಬಂತೆ ತೆಲಂಗಾಣದಲ್ಲಿ ಸ್ಥಾನ ಹೊಂದಾಣಿಕೆ ಕುರಿತು ಮಾತುಕತೆಗಳು ನಡೆಯುತ್ತಿವೆ.

2018ರ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ ಈ ಬಾರಿ ಎಡಪಕ್ಷಗಳು ಕಡಿಮೆ ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ. ಇಬ್ಬರು ಹಾಲಿ ಶಾಸಕರೂ ಸೇರಿ ಒಟ್ಟು 17 ಅಭ್ಯರ್ಥಿಗಳನ್ನು ಸಿಪಿಎಂ ರಾಜಸ್ಥಾನದಲ್ಲಿ ಕಣಕ್ಕಿಳಿಸಿದೆ. ಮಧ್ಯಪ್ರದೇಶದಲ್ಲಿ ನಾಲ್ವರು ಮತ್ತು ಛತ್ತೀಸಗಢದಲ್ಲಿ ಮೂವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಇದೇ ವೇಳೆ, ಸಿಪಿಐನ 16 ಅಭ್ಯರ್ಥಿಗಳು ಛತ್ತೀಸಗಢದಲ್ಲಿ, ರಾಜಸ್ಥಾನದಲ್ಲಿ 12 ಮತ್ತು ಮಧ್ಯಪ್ರದೇಶದಲ್ಲಿ ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಮುಖ್ಯಾಂಶಗಳು

- ತೆಲಂಗಾಣದಲ್ಲಿ ಸ್ಥಾನ ಹೊಂದಾಣಿಕೆ ಸಫಲ: ಸಿಪಿಐ ನಿರೀಕ್ಷೆ
- ರಾಜಸ್ಥಾನದಲ್ಲಿ ಸಿಪಿಎಂನಿಂದ 17 ಅಭ್ಯರ್ಥಿಗಳು ಕಣಕ್ಕೆ

'ಇಂಡಿಯಾ' ಮೈತ್ರಿಕೂಟದ ಇತರ ಸದಸ್ಯ ಪಕ್ಷಗಳಾದ ಜೆಡಿಯು, ಎಎಪಿ ಮತ್ತು ಸಮಾಜವಾದಿ ಪಕ್ಷಗಳು ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ವಿರುದ್ಧ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಿವೆ. ಆದರೆ, 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಟ್ಟಾಗಿ ಹೋರಾಟ ಮಾಡುವುದಾಗಿ ಹೇಳಿವೆ. ಎಡಪಕ್ಷಗಳೂ ಈಗ ಇದೇ ಹಾದಿ ತುಳಿದಿವೆ.

> ವಿಧಾನಸಭೆ ಚುನಾವಣೆಗಳಲ್ಲೂ 'ಇಂಡಿಯಾ' ಪಕ್ಷಗಳು ಒಟ್ಟಾಗಿ ಸ್ಪರ್ಧಿಸಿದ್ದರೆ ಹೆಚ್ಚಿನ ಅನುಕೂಲವಾಗುತ್ತಿತ್ತು.
>
> **ಸೀತಾರಾಂ ಯೆಚೂರಿ,** ಸಿಪಿಎಂ ಪ್ರಧಾನ ಕಾರ್ಯದರ್ಶಿ

ಹಾಗಿದ್ದೂ, ತೆಲಂಗಾಣ ಚುನಾವಣೆ ಸೀಟು ಹಂಚಿಕೆ ವಿಚಾರದಲ್ಲಿ ಒಮ್ಮತ ಮೂಡಲಿದೆ. ತಮ್ಮ ಬೇಡಿಕೆಯನ್ನು ಕಾಂಗ್ರೆಸ್ ಪರಿಗಣಿಸುತ್ತದೆ ಎಂಬ ಭರವಸೆಯನ್ನು ಸಿಪಿಎಂ ಮತ್ತು ಸಿಪಿಐ ಪಕ್ಷಗಳು ಹೊಂದಿವೆ.

ಈ ಮೊದಲು ಸಿಪಿಎಂ ತೆಲಂಗಾಣದಲ್ಲಿ ಐದು ಸ್ಥಾನಗಳಿಗೆ ಬೇಡಿಕೆ ಇರಿಸಿತ್ತು. ಆದರೆ ಈಗ ಮಿರ್ಯಾಲಗೂಡ ಮತ್ತು ಪಾಲೈರು ಕ್ಷೇತ್ರಗಳನ್ನು ತಮಗೆ ಬಿಟ್ಟುಕೊಡುವಂತೆ ಕೋರಿದೆ ಎಂದು ಮೂಲಗಳು ತಿಳಿಸಿವೆ. ಕಳೆದ ಚುನಾವಣೆಯಲ್ಲಿ ಸಿಪಿಎಂ 26 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎಲ್ಲಾ ಕ್ಷೇತ್ರಗಳಲ್ಲೂ ಠೇವಣಿ ಕಳೆದುಕೊಂಡಿತ್ತು.

ಕಳೆದ ಬಾರಿ ಮೂರಿ ಸ್ಥಾನಗಳಲ್ಲಿ ಸ್ಪರ್ಧಿಸಿ ಸೋತಿದ್ದ ಸಿಪಿಐ ಶೇ 17.7 ಮತಗಳನ್ನು ಪಡೆದಿತ್ತು. ತೆಲಂಗಾಣದ ಮಟ್ಟಿಗೆ ತುಸು ಉತ್ತಮ ಸ್ಥಿತಿಯಲ್ಲಿರುವ ಸಿಪಿಐನ ಬೇಡಿಕೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಕಾಂಗ್ರೆಸ್ ಇದೆ ಎಂದು ಹೇಳಲಾಗಿದೆ.

ಕೊತ್ತಗೂಡಂ ಮತ್ತು ಚೆನ್ನೂರು ಕ್ಷೇತ್ರಗಳನ್ನು ಬಿಟ್ಟುಕೊಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಈ ಕುರಿತು ಹೈದರಾಬಾದ್‌ನಲ್ಲಿ ಮಂಗಳವಾರ ನಡೆಯುವ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಿಪಿಐ ಮೂಲಗಳು ತಿಳಿಸಿವೆ.

ಮಾತುಕತೆ ಮುರಿದುಬಿದ್ದಿರುವುದು ಸಿಪಿಎಂ ಹಿರಿಯ ನಾಯಕರಿಗೆ ಸಮಾಧಾನ ತಂದಿಲ್ಲ.

ಮಿಜೋರಾಂ ವಿಧಾನಸಭೆ

40 ಸ್ಥಾನಗಳು | 174 ಅಭ್ಯರ್ಥಿಗಳು | 18 ಮಹಿಳೆಯರು | ಮತದಾನ ದಿನ 7 ನವೆಂಬರ್

ಅಪರಾಧ ಮತ್ತು ಅಭ್ಯರ್ಥಿಗಳು

ಗಂಭೀರ ಪ್ರಕರಣ	7
ಝೆಡ್‌ಪಿಎಂ	4
ಬಿಜೆಪಿ	2
ಎಂಎನ್‌ಎಫ್	1

ಹಣ ಮತ್ತು ಅಭ್ಯರ್ಥಿಗಳು



ವಯಸ್ಸು	
31 - 40 ವರ್ಷ	19
41- 60 ವರ್ಷ	105
61 - 80 ವರ್ಷ	50

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಶಿಕ್ಷಣ

43 5 - 12ನೇ ತರಗತಿ | 128 ಪದವಿ ಅಥವಾ ಮೇಲ್ಪಟ್ಟವರು | 2 ಡಿಪ್ಲೊಮಾ | 1 ಅನಕ್ಷರಸ್ಥ

ಅಭ್ಯರ್ಥಿಗಳ ಸರಾಸರಿ ಆಸ್ತಿ (ಕೋಟಿಗಳಲ್ಲಿ)

ಪಕ್ಷ	ಆಸ್ತಿ
ಕಾಂಗ್ರೆಸ್	₹6.24
ಝೆಡ್‌ಪಿಎಂ	₹6.05
ಎಂಎನ್‌ಎಫ್	₹5.49
ಬಿಜೆಪಿ	₹5.09
ಎಎಪಿ	₹1.95

- ಅತಿ ಶ್ರೀಮಂತ: ಬಿ.ರುವಾಲ್ಜಿಂಗಾ ಲಾಂಗ್ಟ್ಲೈ ಪಶ್ಚಿಮ (ಎಸ್‌ಟಿ) ಬಿಜೆಪಿ ₹90.32
- ಅತ್ಯಂತ ಕಡಿಮೆ ಆಸ್ತಿ: ರಾಮ್ಲುನ್ ಎಡೆನಾ - ಸೆರ್ಚಿಪ್ (ಎಸ್‌ಟಿ) ಪಕ್ಷೇತರ- ₹1,500

ಟಿಡಿಪಿ ಮುಖ್ಯಸ್ಥ ರಾಜೀನಾಮೆ

ಹೈದರಾಬಾದ್ (ಪಿಟಿಐ): ತೆಲುಗು ದೇಶಂ ಪಕ್ಷದ (ಟಿಡಿಪಿ) ತೆಲಂಗಾಣ ಘಟಕದ ಅಧ್ಯಕ್ಷ ಕಾಸಾನಿ ಜ್ಞಾನೇಶ್ವರ್ ಅವರು ಪಕ್ಷದ ಸದಸ್ಯತ್ವಕ್ಕೆ ಸೋಮವಾರ ರಾಜೀನಾಮೆ ನೀಡಿದರು. ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಟಿಡಿಪಿ ನಿರ್ಧಾರ ತೆಗೆದುಕೊಂಡ ನಂತರ ಅವರು ಈ ಘೋಷಣೆ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚುನಾವಣೆಯಲ್ಲಿ ಸ್ಪರ್ಧಿಸಲು ನಾವು ತಯಾರಿ ಮಾಡಿಕೊಂಡಿದ್ದೆವು. ಆದರೆ, ಪಕ್ಷದ ನಾಯಕತ್ವ ತೆಗೆದುಕೊಂಡಿರುವ ನಿರ್ಧಾರದಿಂದ ನನಗೆ ಮತ್ತು ಕಾರ್ಯಕರ್ತರಿಗೆ ತೀವ್ರ ನಿರಾಸೆಯಾಗಿದೆ. ಟಿಡಿಪಿ ಏಕೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲ ಎಂಬ ಪ್ರಶ್ನೆಗೆ ಹಿರಿಯ ನಾಯಕರು ಉತ್ತರ ನೀಡಿಲ್ಲ. ಪಕ್ಷದಲ್ಲೇ ಇದ್ದು ಪಕ್ಷದ ಕೇಡರ್‌ಗೆ ಅನ್ಯಾಯ ಮಾಡಲು ಸಾಧ್ಯವಿಲ್ಲ. ಹಾಗಾಗಿ ರಾಜೀನಾಮೆ ನೀಡಲು ತೀರ್ಮಾನಿಸಿದೆ' ಎಂದು ಹೇಳಿದರು.

ಬೆಂಬಲಿಗರ ಜೊತೆ ಚರ್ಚಿಸಿ ಮುಂದಿನ ನಡೆ ಕುರಿತು ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಜ್ಞಾನೇಶ್ವರ್ ಹೇಳಿದ್ದಾರೆ.

2018ರ ತೆಲಂಗಾಣ ಚುನಾವಣೆಯಲ್ಲಿ ಟಿಡಿಪಿ ಎರಡು ಸ್ಥಾನಗಳನ್ನು ಗೆದ್ದಿತ್ತು.

ಶಾ ವಿರುದ್ಧ ದೂರು

ಭೋಪಾಲ್, ಮಧ್ಯಪ್ರದೇಶ: ಕೇಂದ್ರ ಸಚಿವ ಅಮಿತ್ ಶಾ ಅವರು ಅಧಿಕಾರಿಗಳಿಗೆ ಬೆದರಿಕೆಯೊಡ್ಡುವಂಥ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ಪಕ್ಷವು ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಇಲ್ಲಿನ ಬಿಜೆಪಿ ಮುಖ್ಯಕಚೇರಿಯಲ್ಲಿ ನಡೆದಿದ್ದ ಸಭೆಯಲ್ಲಿ 'ಕಮಲಕ್ಕೆ (ಬಿಜೆಪಿ) ಸಹಕಾರ ನೀಡದ ಅಧಿಕಾರಿಗಳ ಕುರಿತು ಕನಿಕರ ತೋರುವಂತಿಲ್ಲ' ಎಂದು ಅಮಿತ್ ಶಾ ಅವರು ಪಕ್ಷದ ಪದಾಧಿಕಾರಿಗಳಿಗೆ ಹೇಳಿದ್ದರು ಎಂದು ಪತ್ರಿಕೆಯೊಂದು ವರದಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಆರೋಪ ಮಾಡಿದೆ.

'ಹೇಳಿಕೆಯು ರಾಜಕೀಯ ಪ್ರೇರಿತವಾಗಿವೆ' ಎಂದು ಕಾಂಗ್ರೆಸ್ ವಕ್ತಾರ ಭೂಪೇಂದ್ರ ಗುಪ್ತಾ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ



ಪ್ರಿಯಾಂಕಾ ಗಾಂಧಿ

- **ಪ್ರಿಯಾಂಕಾ ಭರವಸೆ:** ಛತ್ತೀಸಗಢದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಮುಂದುವರೆದರೆ, ಸ್ವಸಹಾಯ ಸಂಘಗಳ ಸಾಲಮನ್ನಾ ಮತ್ತು ಅಪಘಾತಗಳಲ್ಲಿ ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಭರವಸೆ ನೀಡಿದರು.
  ಖೈರಾಗಢ ಕ್ಷೇತ್ರದ ಜಲಬಂಧದಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಒಟ್ಟು ಏಳು ಭರವಸೆಗಳನ್ನು ನೀಡಿದರು. 200 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುವುದು. ಮಹಿಳೆಯರಿಗೆ 'ಮಹ್ತಾರಿ ನ್ಯಾಯ ಯೋಜನೆ' ಜಾರಿಗೆ ತರಲಾಗುವುದು. ಇದರಡಿ ಅಡುಗೆ ಅನಿಲದ ಪ್ರತಿ ಸಿಲಿಂಡರ್‌ಗೆ ₹500 ಸಬ್ಸಿಡಿ ನೀಡಲಾಗುವುದು ಎಂದರು.
- **ನಾಮಪತ್ರ ಸಲ್ಲಿಕೆ ಆರಂಭ:** 200 ಸದಸ್ಯ ಬಲದ ರಾಜಸ್ಥಾನ ವಿಧಾನಸಭೆಯ ಚುನಾವಣೆಗೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಸೋಮವಾರ ಆರಂಭವಾಗಿದ್ದು ಮೊದಲ ದಿನ ಎಂಟು ಮಂದಿ ನಾಮಪತ್ರ ಸಲ್ಲಿಸಿದರು. ನ.7ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಈವರೆಗೆ, ಬಿಜೆಪಿ 124 ಮತ್ತು ಕಾಂಗ್ರೆಸ್ 105 ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿವೆ.
- **ಬಿಗಿ ಭದ್ರತೆ:** ತೆಲಂಗಾಣದ ನಕ್ಸಲ್ ಪೀಡಿತ ಪ್ರದೇಶಗಳಲ್ಲಿನ 500ಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 119 ವಿಧಾನಸಭಾ ಕ್ಷೇತ್ರಗಳ ಪೈಕಿ 14 ಸೂಕ್ಷ್ಮ ಕ್ಷೇತ್ರಗಳು ಎಂದು ಗುರುತಿಸಲಾಗಿದೆ. ರಾಜ್ಯದ ಎಂಟು ಜಿಲ್ಲೆಗಳಲ್ಲಿ ಸುಮಾರು 511 ಮತಗಟ್ಟೆಗಳನ್ನು ಎಡಪಂಥೀಯ ಉಗ್ರವಾದ ಪೀಡಿತ ಪ್ರದೇಶದಲ್ಲಿ ಗುರುತಿಸಲಾಗಿದೆ.
- **ನಾಮಪತ್ರ ಸಲ್ಲಿಸಿದ ಗಣ್ಯರು:** ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ದುರ್ಗ್ ಜಿಲ್ಲೆಯ ಪಾಟನ್ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದು, ಸೋಮವಾರ ನಾಮಪತ್ರ ಸಲ್ಲಿಸಿದರು. ಭೂಪೇಶ್ ಎದುರಾಳಿಯಾಗಿ ದುರ್ಗ್ ಸಂಸದ ವಿಜಯ್ ಬಘೇಲ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಬುದ್ನೀ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು. 'ರಾಮಾಯಣ' ಧಾರಾವಾಹಿ ಖ್ಯಾತಿಯ ವಿಕ್ರಮ್ ಮಸ್ತಾಲ್ ಅವರನ್ನು ಬದ್ನಿ ಕ್ಷೇತ್ರದಿಂದ ಕಾಂಗ್ರೆಸ್ ಕಣಕ್ಕಿಳಿಸಿದೆ.
- **ಪುತ್ರಿ ಬದಲು ತಂದೆ ಕಣಕ್ಕಿಳಿಸಿದ ಬಿಜೆಪಿ:** ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆ ದಿನವಾದ ಸೋಮವಾರ ಬಿಜೆಪಿಯ ಹಿರಿಯ ನಾಯಕ, ಮಧ್ಯಪ್ರದೇಶ ಸಚಿವ ಗೌರಿಶಂಕರ್ ಬಿಸೆನ್ ಅವರನ್ನು ಬಾಲಾಘಾಟ್ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಇದಕ್ಕೂ ಮುನ್ನ ಬಿಜೆಪಿ, ಬಿಸೆನ್ ಅವರ ಮಗಳು ಶೀಘ್ರದಲ್ಲೇ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಹೇಳಿತ್ತು.

ರಾಜಸ್ಥಾನದಲ್ಲಿ ಮತ್ತೆ ಅಧಿಕಾರಕ್ಕೆ: ಖರ್ಗೆ

ನವದೆಹಲಿ (ಪಿಟಿಐ): ರಾಜಸ್ಥಾನ ವಿಧಾನಸಭಾ ಚುನಾವಣೆಗೆ ಸಂಭಾವ್ಯ ಅಭ್ಯರ್ಥಿಗಳ ಹೆಸರುಗಳ ಬಗ್ಗೆ ಕಾಂಗ್ರೆಸ್ ನಾಯಕರು ಸೋಮವಾರ ಚರ್ಚೆ ನಡೆಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಈ ಬಾರಿ ರಾಜಸ್ಥಾನದಲ್ಲಿ ಸಂಪ್ರದಾಯ ಬದಲಾಗುತ್ತದೆ. ಆರೋಗ್ಯ ವಿಮೆ, ಕಡಿಮೆ ದರದಲ್ಲಿ ಅಡುಗೆ ಅನಿಲ ಸಿಲಿಂಡರ್, ರೈತರ ಅಭಿವೃದ್ಧಿ, ಮಹಿಳೆಯರಿಗೆ ಗೃಹ ಲಕ್ಷ್ಮಿ ಇತ್ಯಾದಿ ಜನ ಕಲ್ಯಾಣಗಳ ಯೋಜನೆಗಳಿಂದ ರಾಜಸ್ಥಾನ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು.

ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಎಐಸಿಸಿ ರಾಜ್ಯ ಉಸ್ತುವಾರಿ ಸುಖ್ಜಿಂದರ್ ರಾಂಧವ, ರಾಜ್ಯ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ದೊತಸ್ರ , ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಸಭೆಯಲ್ಲಿದ್ದರು.

ನುಡಿ-ಕಿಡಿ



'ನಾನು ಬದುಕಿರುವವರೆಗೂ ರಾಜ್ಯವು ಶಾಂತಿಪ್ರಿಯ ಮತ್ತು ಜಾತ್ಯತೀತವಾಗಿ ಉಳಿಯುತ್ತದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಎಲ್ಲಾ ವರ್ಗಗಳನ್ನು ಒಟ್ಟಿಗೆ ಕರೆದೊಯ್ಯುವಲ್ಲಿ ಬಿಆರ್‌ಎಸ್ ನಂಬಿಕೆ ಇಟ್ಟಿದೆ

ಕೆ.ಸಿ.ಚಂದ್ರಶೇಖರ ರಾವ್, ತೆಲಂಗಾಣ ಮುಖ್ಯಮಂತ್ರಿ

ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಕೆಲ ರ‍್ಯಾಲಿಗಳನ್ನು ನೋಡಿದ ಬಳಿಕ ನನಗೆ (2008) 'ಗಜಿನಿ' ಚಿತ್ರ ನೆನಪಾಗುತ್ತದೆ. ಅವರು ನೆನಪಿನ ಶಕ್ತಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಹಿಂದೆ (2018ರ ಚುನಾವಣಾ ಪ್ರಚಾರದಲ್ಲಿ) ಭರವಸೆ ನೀಡಿದ್ದನ್ನು ಮರೆತಿದ್ದಾರೆ ಮತ್ತು ಹೊಸದಾಗಿ ಸುಳ್ಳು ಹೇಳಲು ಪ್ರಾರಂಭಿಸಿದ್ದಾರೆ.

ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಉಪಮುಖ್ಯಮಂತ್ರಿ

ಹಠಾತ್ ಸಾವಿಗೆ ಕೋವಿಡ್ ಲಸಿಕೆ ಕಾರಣವಲ್ಲ: ಅಧ್ಯಯನ

ನವದೆಹಲಿ (ಪಿಟಿಐ): 'ಕೋವಿಡ್ ಲಸಿಕೆಯಿಂದ ದೇಶದಲ್ಲಿ 18 ರಿಂದ 45 ವರ್ಷದ ವಯೋಮಾನದವರಲ್ಲಿ ಹಠಾತ್ ಸಾವಿನ ಅಪಾಯದ ಸಾಧ್ಯತೆ ಹೆಚ್ಚಿಲ್ಲ' ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ (ಐಸಿಎಂಆರ್) ಅಧ್ಯಯನ ಹೇಳಿದೆ.

ಕೊರೊನಾ ಸೋಂಕಿತರು ಆಸ್ಪತ್ರೆಗೆ ದಾಖಲಾಗುವುದಕ್ಕೂ ಮೊದಲು ಅತಿಯಾದ ಕುಡಿತ ಹಾಗೂ ಅತಿಯಾಗಿ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೇ ಅವರ ಸಾವಿಗೆ ಮೂಲ ಕಾರಣವಾಗಿದೆ ಎಂದು ಅಧ್ಯಯನ ಹೇಳಿದೆ.

'ಈ ಅಧ್ಯಯನದ ವರದಿಯು ಪರಿಶೀಲನೆಯಲ್ಲಿದ್ದು, ಇನ್ನಷ್ಟೇ ಪ್ರಕಟವಾಗಬೇಕಾಗಿದೆ. ಅಧ್ಯಯನ ಪ್ರಕ್ರಿಯೆಯು ಇದೇ ತಿಂಗಳು ಪೂರ್ಣಗೊಂಡಿದೆ' ಎಂದು ಮೂಲಗಳು ತಿಳಿಸಿವೆ.

ಐಸಿಎಂಆರ್ ಅಧ್ಯಯನ ಉಲ್ಲೇಖಿಸಿ ಗುಜರಾತ್‌ನ ಭಾವ್‌ನಗರದಲ್ಲಿ ಭಾನುವಾರ ಪ್ರತಿಕ್ರಿಯಿಸಿದ್ದ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, 'ಕೋವಿಡ್‌ನಿಂದ ಬಾಧಿತರಾಗಿದ್ದವರು ಕನಿಷ್ಠ ಒಂದೆರಡು ವರ್ಷ ಅತಿಯಾದ ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಬಾರದಿತ್ತು. ಇದರಿಂದ ಹಠಾತ್ ಹೃದಯಾಘಾತ ಹಾಗೂ ಹೃದಯಸ್ತಂಭನ ತಪ್ಪಿಸಬಹುದಿತ್ತು' ಎಂದು ಹೇಳಿದ್ದರು.

ಆರೋಗ್ಯವಂತ ಯುವಜನರ ಅಕಾಲಿಕ ಮರಣದ ವರದಿಗಳಿಂದಾಗಿ ಸಂಶೋಧಕರು ವಸ್ತುಸ್ಥಿತಿ ತನಿಖೆಗೆ ಮುಂದಾಗಿದ್ದರು. ಹಠಾತ್ ಸಾವುಗಳ ಕುರಿತು ಕಳವಳ ಕೇಳಿಬಂದಿದ್ದು, ಕೋವಿಡ್ ಲಸಿಕೆಯು ಕಾರಣ ಇರಬಹುದು ಎಂಬ ಶಂಕೆಯೂ ಮೂಡಿತ್ತು.

ಆರೋಗ್ಯವಂತ ಯುವಜನರ ಹಠಾತ್ ಸಾವುಗಳಿಗೆ ಕಾರಣ ತಿಳಿಯಲು ಈ ಅಧ್ಯಯನ ನಡೆಸಲಾಗಿತ್ತು. 2021ರ ಅ.1 ಮತ್ತು 2023ರ ಮಾರ್ಚ್ 31ರ ನಡುವೆ ಸಂಭವಿಸಿದ್ದ 18ರಿಂದ 45 ವರ್ಷ ವಯೋಮಾನದ, ಯಾವುದೇ ಆರೋಗ್ಯ ಸಮಸ್ಯೆಗಳಿಲ್ಲದ ವ್ಯಕ್ತಿಗಳ ಅಕಾಲಿಕ ಸಾವಿನ ಪ್ರಕರಣಗಳನ್ನು ಈ ಅಧ್ಯಯನಕ್ಕೆ ಪರಿಗಣಿಸಲಾಗಿತ್ತು.

ವಯಸ್ಸು, ಲಿಂಗ, ಸ್ಥಳ ಕುರಿತ ಅಂಶಗಳ ಆಧಾರದಲ್ಲಿ 729 ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿ ಕಲೆಹಾಕಲಾಗಿತ್ತು. ಮೃತರ ವೈದ್ಯಕೀಯ ಹಿನ್ನೆಲೆ, ವರ್ತನೆ (ಧೂಮಪಾನ, ಮದ್ಯಪಾನ, ಅತಿಯಾದ ದೈಹಿಕ ಶ್ರಮ), ಕೋವಿಡ್ ಕಾರಣದಿಂದ ಆಸ್ಪತ್ರೆಗೆ ದಾಖಲಾಗಿದ್ದರೆ ಹಾಗೂ ಅವರಿಗೆ ಕೋವಿಡ್ ಲಸಿಕೆ ನೀಡಲಾಗಿತ್ತೆ ಎಂಬ ವಿವರಗಳನ್ನು ಕಲೆಹಾಕಲಾಗಿತ್ತು.

ಕೇರಳ ಸ್ಫೋಟ ಪ್ರಕರಣ: ಗಾಯಗೊಂಡಿದ್ದ ಬಾಲಕಿ ಸಾವು, ಮೃತರ ಸಂಖ್ಯೆ ಮೂರಕ್ಕೆ ಏರಿಕೆ

ಪೊಲೀಸರಿಗೆ ಶರಣಾಗಿದ್ದ ಆರೋಪಿ ಬಂಧನ

ಕೊಚ್ಚಿ (ಪಿಟಿಐ): ಕ್ರೈಸ್ತರ ಧಾರ್ಮಿಕ ಸಭೆಯಲ್ಲಿ ನಡೆದ ಬಾಂಬ್ ಸ್ಫೋಟದ ಹೊಣೆ ಹೊತ್ತಿರುವ ಡೊಮಿನಿಕ್ ಮಾರ್ಟಿನ್ ಅವರನ್ನು ಬಂಧಿಸಲಾಗಿದೆ ಎಂದು ಕೇರಳ ಪೊಲೀಸರು ಸೋಮವಾರ ತಿಳಿಸಿದ್ದಾರೆ. ಈ ಸ್ಫೋಟದಲ್ಲಿ ಗಾಯಗೊಂಡಿದ್ದ 12 ವರ್ಷ ವಯಸ್ಸಿನ ಬಾಲಕಿಯೊಬ್ಬಳು ಮೃತಪಟ್ಟಿದ್ದಾಳೆ. ಇದರಿಂದಾಗಿ ಮೃತಪಟ್ಟವರ ಸಂಖ್ಯೆಯು ಮೂರಕ್ಕೆ ಏರಿಕೆಯಾಗಿದೆ.

ಕ್ರೈಸ್ತರ ಧಾರ್ಮಿಕ ಪಂಥವಾದ 'ಯಹೋವನ ಸಾಕ್ಷಿಗಳು' ಆಯೋಜಿಸಿದ್ದ ಧಾರ್ಮಿಕ ಸಭೆಯಲ್ಲಿ ಭಾನುವಾರ ಸರಣಿ ಬಾಂಬ್ ಸ್ಫೋಟಿಸಲಾಗಿತ್ತು. ಸ್ಫೋಟ ನಡೆದ ಕೆಲವು ತಾಸುಗಳ ನಂತರದಲ್ಲಿ ಮಾರ್ಟಿನ್ ಅವರು, ಸ್ಫೋಟಕ್ಕೆ ಹೊಣೆ ಹೊತ್ತುಕೊಂಡು ಪೊಲೀಸರಿಗೆ ಶರಣಾಗಿದ್ದರು.

ಶರಣಾಗುವ ಮೊದಲು ಸಾಮಾಜಿಕ ಜಾಲತಾಣಗಳ ಮೂಲಕ ವಿಡಿಯೊ ಒಂದನ್ನು ಪ್ರಸಾರ ಮಾಡಿದ್ದ ಮಾರ್ಟಿನ್, ಬಾಂಬ್ ಸ್ಫೋಟಿಸಿದ್ದಕ್ಕೆ ಕಾರಣ ತಿಳಿಸಿದ್ದರು.

ಈ ಸ್ಫೋಟ ಕುರಿತ ತನಿಖೆಯು ಸಮರ್ಥವಾಗಿ ಮುನ್ನಡೆಯುತ್ತಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಹೇಳಿದ್ದಾರೆ. ಸ್ಫೋಟ ನಡೆದ ಸ್ಥಳಕ್ಕೆ ಭೇಟಿ ನೀಡಿದ ಅವರು, ಮೃತಪಟ್ಟವರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿದರು.

ಕಳಮಶ್ಶೇರಿಯಲ್ಲಿ ಕ್ರೈಸ್ತರ ಧಾರ್ಮಿಕ ಸಭೆ ನಡೆದ ಸ್ಥಳದಲ್ಲಿ ರಾಷ್ಟ್ರೀಯ ಭದ್ರತಾ ಪಡೆಯ (ಎನ್‌ಎಸ್‌ಜಿ) ಸಿಬ್ಬಂದಿ ಸೋಮವಾರ ತಪಾಸಣೆ ನಡೆಸಿದರು. (ಪಿಟಿಐ ಚಿತ್ರ)

ನಡ್ಡಾ ಟೀಕೆ: ಕೇರಳದ ಎಡರಂಗ ಸರ್ಕಾರದ ಬಗ್ಗೆ ಕಟುಟೀಕೆ ಮಾಡಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಈ ಸರ್ಕಾರವು ರಾಜ್ಯದಲ್ಲಿನ 'ತೀವ್ರವಾದ'ವನ್ನು ಉಪೇಕ್ಷಿಸಿದೆ ಎಂದು ದೂರಿದ್ದಾರೆ.

ಇಸ್ಲಾಮಿಕ್ ತೀವ್ರವಾದಿ ಸಂಘಟನೆ ಹಮಾಸ್‌ನ ನಾಯಕರೊಬ್ಬರು ಕೇರಳದಲ್ಲಿ ಕೆಲವು ದಿನಗಳ ಹಿಂದೆ ನಡೆದ ಸಭೆಯನ್ನು ಉದ್ದೇಶಿಸಿ ವರ್ಚುವಲ್ ವೇದಿಕೆಯ ಮೂಲಕ ಮಾತನಾಡಿದ್ದರು. ಈ ವಿಚಾರವಾಗಿ ಎಡರಂಗ ಸರ್ಕಾರವು ಮೂಕ ಪ್ರೇಕ್ಷಕನಾಗಿತ್ತು ಎಂದು ಕೂಡ ನಡ್ಡಾ ಅವರು ಆರೋಪಿಸಿದ್ದಾರೆ.

ಎಡರಂಗ ಸರ್ಕಾರವು ದುರಾಡಳಿತದಲ್ಲಿ ತೊಡಗಿದೆ ಎಂದು ಆರೋಪಿಸಿ ಬಿಜೆಪಿ ನೇತೃತ್ವದ ಎನ್‌ಡಿಎ ಕಾರ್ಯಕರ್ತರು ಕೇರಳ ಸಚಿವಾಲಯದ ಪ್ರವೇಶದ್ವಾರಗಳಿಗೆ ಸೋಮವಾರ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಈ ಸಂದರ್ಭದಲ್ಲಿ ನಡ್ಡಾ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ಹಮಾಸ್ ವಿರುದ್ಧ ಇಸ್ರೇಲ್ ಸಾರಿರುವ ಯುದ್ಧವನ್ನು ವಿರೋಧಿಸಿ ಕೇರಳದ ಇಸ್ಲಾಮಿಕ್ ಸಂಘಟನೆಯೊಂದು ಪ್ರತಿಭಟನಾ ಕಾರ್ಯಕ್ರಮ ಆಯೋಜಿಸಿತ್ತು. ಹಮಾಸ್ ನಾಯಕ ಖಾಲೆದ್ ಮಶಾಲ್ ಈ ಕಾರ್ಯಕ್ರಮದಲ್ಲಿ ವರ್ಚುವಲ್ ಆಗಿ ಪಾಲ್ಗೊಂಡು ಮಾತನಾಡಿದ್ದನ್ನು ಉಲ್ಲೇಖಿಸಿ ನಡ್ಡಾ ಅವರು, 'ಮಶಾಲ್ ತನ್ನ ಸಂಘಟನೆಯ ಬಗ್ಗೆ ಬಹಿರಂಗವಾಗಿ ಮಾತನಾಡಿದ್ದಾನೆ' ಎಂದು ದೂರಿದ್ದಾರೆ.

'ಇದರ ಅರ್ಥ ಏನು? ದೇವರ ಸ್ವಂತ ನಾಡು ಕೇರಳಕ್ಕೆ ನೀವು ಕೆಟ್ಟ ಹೆಸರು ತರುತ್ತಿದ್ದೀರಿ' ಎಂದು ಹೇಳಿದ ನಡ್ಡಾ ಅವರು, ಹೀಗೆ ಮಾಡುವುದಕ್ಕೆ ಅವಕಾಶ ಕೊಡಬಹುದೇ ಎಂದು ಅಲ್ಲಿ ಸೇರಿದ್ದವರನ್ನು ಪ್ರಶ್ನಿಸಿದ್ದಾರೆ. ಭಾನುವಾರ ಕೊಚ್ಚಿಯಲ್ಲಿ ನಡೆದ ಬಾಂಬ್ ಸ್ಫೋಟದ ಬಗ್ಗೆ ಉಲ್ಲೇಖಿಸಿ ನಡ್ಡಾ ಅವರು, 'ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರವು ತೀವ್ರವಾದವನ್ನು ಉಪೇಕ್ಷಿಸಿದ ಕಾರಣಕ್ಕೆ ಶಾಂತಿಯುತ ರಾಜ್ಯದಲ್ಲಿ ಇಂತಹ ಘಟನೆ ನಡೆದಿದೆ' ಎಂದು ದೂರಿದ್ದಾರೆ.

ಪೊಲೀಸರಿಂದ ಪರಿಶೀಲನೆ: ಸಿ.ಎಂ ವಿಜಯನ್

ಕೊಚ್ಚಿ (ಪಿಟಿಐ): ಹಮಾಸ್ ನಾಯಕ ವರ್ಚುವಲ್ ವೇದಿಕೆಯೊಂದರ ಮೂಲಕ ಭಾಷಣ ಮಾಡಿದ್ದಾರೆ ಎಂಬ ಆರೋಪಗಳ ಬಗ್ಗೆ ಪೊಲೀಸರು ಪರಿಶೀಲನೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಅಲ್ಲಿ ತಪ್ಪು ನಡೆದಿದ್ದರೆ ಸೂಕ್ತ ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಪ್ಯಾಲೆಸ್ಟೀನ್‌ಗೆ ಬೆಂಬಲ ವ್ಯಕ್ತಪಡಿಸಿದ್ದೇ ಅಪರಾಧ ಎಂದು ತೋರಿಸಲು ಬಿಜೆಪಿ ಉದ್ದೇಶಿಸಿದೆ. ಆದರೆ ಕೇರಳದಲ್ಲಿ ಅಂಥದ್ದಕ್ಕೆ ಅವಕಾಶ ಕೊಡುವುದಿಲ್ಲ. ದೇಶ ಮತ್ತು ಕೇರಳ ರಾಜ್ಯವು ಹಿಂದಿನಿಂದಲೂ ಪ್ಯಾಲೆಸ್ಟೀನ್‌ಗೆ ಬೆಂಬಲವಾಗಿ ನಿಂತಿವೆ. ಈಗ ಮಾತ್ರ ಕೇಂದ್ರದ ಮಟ್ಟದಲ್ಲಿ ನಿಲುವು ಬದಲಾಗಿದೆ ಎಂದು ವಿಜಯನ್ ಹೇಳಿದ್ದಾರೆ.

ಜೆ.ಪಿ. ನಡ್ಡಾ ಅವರ ಆರೋಪಗಳ ಕುರಿತು ವಿಜಯನ್ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ. 'ಪ್ಯಾಲೆಸ್ಟೀನ್ ಹೋರಾಟಗಾರ ಎಂದು ಹೇಳಲಾದ ವ್ಯಕ್ತಿಯು ಜಮಾತ್-ಎ-ಇಸ್ಲಾಮಿ ಸಂಘಟನೆಯ ಯುವ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ. ಅವರು ಅಲ್ಲಿ ಏನು ಮಾತನಾಡಿದ್ದಾರೆ ಎಂಬುದನ್ನು ನೋಡಬೇಕಿದೆ' ಎಂದು ವಿಜಯನ್ ತಿಳಿಸಿದ್ದಾರೆ.

ಅವಿಶ್ವಾಸ ಸೃಷ್ಟಿ ಯತ್ನಕ್ಕೆ ಪ್ರತಿರೋಧ: ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಪಿಣರಾಯಿ ವಿಜಯನ್ ಅವರು ಕರೆದಿದ್ದ ಸರ್ವಪಕ್ಷ ಸಭೆಯು, ಸಮಾಜದಲ್ಲಿ ಅವಿಶ್ವಾಸ ಹಾಗೂ ಅಸಹಿಷ್ಣುತೆಯನ್ನು ಸೃಷ್ಟಿಸುವ ಪ್ರಯತ್ನಗಳಿಗೆ ಪ್ರತಿರೋಧ ಒಡ್ಡಲು ನಿರ್ಣಯಿಸಿದೆ.

ಆಧಾರರಹಿತ ಆರೋಪಗಳಲ್ಲಿ, ಊಹೆ ಆಧರಿಸಿದ ಅಭಿಯಾನಗಳಲ್ಲಿ ಮತ್ತು ಗಾಳಿಸುದ್ದಿಯನ್ನು ಹರಡುವ ಕೆಲಸದಲ್ಲಿ ತೊಡಗದೆ ಇರುವಂತೆ ಜನರನ್ನು ಒತ್ತಾಯಿಸಲು ಕೂಡ ಸಭೆಯು ನಿರ್ಣಯಿಸಿದೆ. ಮುಖ್ಯಮಂತ್ರಿ ಕಚೇರಿ ಹೊರಡಿಸಿರುವ ಪತ್ರಿಕಾ ಹೇಳಿಕೆಯಲ್ಲಿ ಈ ಮಾಹಿತಿ ಇದೆ.

ಗಾಜಾ ಉತ್ತರ ಭಾಗದಲ್ಲಿ ಇಸ್ರೇಲ್ ದಾಳಿ

ಖಾನ್ ಯೂನಿಸ್ (ಎಪಿ): ಇಸ್ರೇಲ್‌ನ ಯೋಧರು ಗಾಜಾದ ಉತ್ತರ ಮತ್ತು ಮಧ್ಯ ಭಾಗದ ಮೇಲೆ ಸೋಮವಾರ ದಾಳಿ ನಡೆಸಿದ್ದಾರೆ. ಗಾಯಗೊಂಡವರು ಹಾಗೂ ಪ್ಯಾಲೆಸ್ಟೀನ್ ನಿರಾಶ್ರಿತರು ಆಸರೆ ಪಡೆದುಕೊಂಡಿರುವ ಆಸ್ಪತ್ರೆಗಳ ಸನಿಹದಲ್ಲೇ ಇಸ್ರೇಲ್ ವಾಯು ದಾಳಿ ನಡೆಸುತ್ತಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

ಇಸ್ರೇಲ್‌ನ ಯುದ್ಧ ಟ್ಯಾಂಕ್ ಹಾಗೂ ಬುಲ್ಡೋಜರ್ ಗಾಜಾದ ಕೇಂದ್ರ ಭಾಗದಲ್ಲಿ ಹೆದ್ದಾರಿಯೊಂದನ್ನು ಬಂದ್ ಮಾಡಿರುವ ದೃಶ್ಯಾವಳಿಯೊಂದು ಸುದ್ದಿಸಂಸ್ಥೆಗೆ ಲಭ್ಯವಾಗಿದೆ. ಈ ಹೆದ್ದಾರಿಯನ್ನು ಪ್ಯಾಲೆಸ್ಟೀನ್ ನಾಗರಿಕರು ಇಸ್ರೇಲ್ ವಾಯುದಾಳಿಯಿಂದ ತಪ್ಪಿಸಿಕೊಳ್ಳಲು ಗಾಜಾದ ಉತ್ತರ ಭಾಗದಿಂದ ದಕ್ಷಿಣಕ್ಕೆ ಬರಲು ಬಳಸುತ್ತಾರೆ.

ಈ ವಿಡಿಯೊದಲ್ಲಿ, ರಸ್ತೆಗೆ ಅಡ್ಡಿಯಾಗಿ ಏನೋ ಇದೆ ಎಂಬುದನ್ನು ಗಮನಿಸಿ ಒಂದು ಕಾರು ವಾಪಸ್ ಬರಲು ಅನುವಾಗುತ್ತದೆ. ಆಗ ಆ ಕಾರಿನ ಮೇಲೆ ಟ್ಯಾಂಕ್‌ನಿಂದ ದಾಳಿ ನಡೆಯುತ್ತದೆ,

ಸಂಬಂಧಿಗಳ ಮೃತದೇಹಗಳನ್ನು ಪಡೆದುಕೊಳ್ಳಲು ರಫಾದಲ್ಲಿನ ನಜ್ಜರ್ ಆಸ್ಪತ್ರೆ ಬಳಿ ಬಾಲಕ ಮತ್ತು ಮಹಿಳೆ ಕಾದು ಕುಳಿತಿರುವ ದೃಶ್ಯ. (ಎಎಫ್‌ಪಿ ಚಿತ್ರ)

ಕಾರು ಹೊತ್ತಿ ಉರಿಯುತ್ತದೆ. ಇದನ್ನು ಚಿತ್ರೀಕರಿಸುತ್ತಿದ್ದ ಪತ್ರಕರ್ತರೊಬ್ಬರು 'ಹಿಂದಕ್ಕೆ ಹೋಗಿ' ಎಂದು ಭಯದಿಂದ ಕಿರುಚಿಕೊಂಡಿದ್ದಾರೆ.

ಇಸ್ರೇಲ್ ಪಡೆ ಹಾಗೂ ಹಮಾಸ್ ಬಂಡುಕೋರರ ನಡುವೆ ವಸತಿ ಪ್ರದೇಶದಲ್ಲಿ ಕದನ ಶುರುವಾದಲ್ಲಿ, ಎರಡೂ ಕಡೆಗಳಲ್ಲಿ ಸಾವಿನ ಸಂಖ್ಯೆಯು ತೀವ್ರವಾಗಿ ಹೆಚ್ಚಾಗುವ ಭೀತಿ ಇದೆ. ಹೆದ್ದಾರಿಯನ್ನು ಬಂದ್ ಮಾಡಿರುವುದು ತೆರವಾಗದೆ ಇದ್ದಲ್ಲಿ, ಉತ್ತರ ಭಾಗದಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರಿಗೆ ದಕ್ಷಿಣ ಭಾಗಕ್ಕೆ ಬರಲು ಅವಕಾಶವೇ ಇಲ್ಲದಂತಾಗುತ್ತದೆ.

ಉತ್ತರ ಗಾಜಾದಲ್ಲಿ ಅಂದಾಜು 1.17 ಲಕ್ಷ ಮಂದಿ ಪ್ಯಾಲೆಸ್ಟೀನ್ ನಾಗರಿಕರು ಆಸ್ಪತ್ರೆಗಳಲ್ಲಿ ಆಶ್ರಯ ಪಡೆದಿದ್ದಾರೆ. ಇಸ್ರೇಲ್ ದಾಳಿಯಿಂದ ತಪ್ಪಿಸಿಕೊಳ್ಳಲು ಆಸ್ಪತ್ರೆಗಳು ಸುರಕ್ಷಿತ ಸ್ಥಳಗಳು ಎಂಬುದು ಅವರ ಲೆಕ್ಕಾಚಾರ.

ಇಸ್ರೇಲ್ ಸೇನೆಯು ಗಾಜಾದ ಉತ್ತರದ ಕಡೆಯಿಂದ ನಗರವನ್ನು ಪ್ರವೇಶಿಸುತ್ತಿರುವಂತಿದೆ. ಸಿರಿಯಾ ಕಡೆಯಿಂದ ಬಂದ ರಾಕೆಟ್ ಇಸ್ರೇಲ್‌ನ ಭೂಪ್ರದೇಶದಲ್ಲಿ ಬಿದ್ದ ನಂತರದಲ್ಲಿ ಇಸ್ರೇಲ್ ಸಿರಿಯಾ ಮೇಲೆ ದಾಳಿ ನಡೆಸಿದೆ. ಸೋಮವಾರ ಬೆಳಿಗ್ಗೆ ಯುದ್ಧ ವಿಮಾನಗಳು ಸಿರಿಯಾದ ಮಿಲಿಟರಿ ಮೂಲಸೌಕರ್ಯದ ಮೇಲೆ ದಾಳಿ ನಡೆಸಿವೆ ಎಂದು ಇಸ್ರೇಲ್ ತಿಳಿಸಿದೆ.

ಅಪಹೃತ ಯುವತಿ ಸಾವು

ಜೆರುಸಲೇಂ (ಎಎಫ್‌ಪಿ): ಹಮಾಸ್ ಬಂಡುಕೋರರು ಅಪಹರಿಸಿದ್ದ ಜರ್ಮನ್-ಇಸ್ರೇಲಿ ಮಹಿಳೆ 'ಶಾನಿ ನಿಕೋಲ್ ಲೌಕ್ (23) ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ವಿದೇಶಾಂಗ ಸಚಿವಾಲಯ ಹೇಳಿದೆ.

ಈ ಮಹಿಳೆಯನ್ನು ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದಿಂದ ಅಪಹರಿಸಲಾಗಿತ್ತು. ಅವರನ್ನು ಹಿಂಸಿಸಿ, ಗಾಜಾದಲ್ಲಿ ಮೆರವಣಿಗೆ ಮಾಡಲಾಗಿತ್ತು.

- ಸಮರದಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಮಂದಿ ಪ್ಯಾಲೆಸ್ಟೀನ್ ನಾಗರಿಕರು ಜೀವ ಕಳೆದುಕೊಂಡಿದ್ದಾರೆ. ಮೃತಪಟ್ಟವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು: ಗಾಜಾ ಆರೋಗ್ಯ ಸಚಿವಾಲಯ
- ಇಸ್ರೇಲ್-ಪ್ಯಾಲೆಸ್ಟೀನ್ ನಡುವಿನ ಸಂಘರ್ಷದಲ್ಲಿ ಇಷ್ಟೊಂದು ಜನ ಹಿಂದೆಂದೂ ಪ್ರಾಣ ಕಳೆದುಕೊಂಡಿರಲಿಲ್ಲ.
- ಹಮಾಸ್ ದಾಳಿಗೆ ಇಸ್ರೇಲ್‌ನಲ್ಲಿ 1,400ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಮರಾಠ ಮೀಸಲು: ಭಾರಿ ಪ್ರತಿಭಟನೆ

ಛತ್ರಪತಿ ಸಂಭಾಜಿನಗರ (ಪಿಟಿಐ): ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ ಸೋಮವಾರ ತೀವ್ರತೆ ಪಡೆದುಕೊಂಡಿದ್ದು, ವಿವಿಧೆಡೆ ಭಾರಿ ಪ್ರತಿಭಟನೆಗಳು ನಡೆದಿವೆ.

ಶಾಸಕ ಪ್ರಕಾಶ್ ಸೋಲಂಕಿ ಅವರು, ಮರಾಠ ಮೀಸಲಾತಿ ಚಳವಳಿ ಮತ್ತು ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಹೋರಾಟಗಾರ ಮನೋಜ್ ಜರಾಂಗೆ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ ಪ್ರತಿಭಟನಕಾರರಿಂದ ಅವರ ನಿವಾಸದ ಮೇಲೆ ದಾಳಿ ನಡೆದಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸೋಲಂಕಿ, 'ಯಾರೂ ನಮ್ಮ ಮಾತು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಮನೆ ಮೇಲೆ ಕಲ್ಲು ತೂರಾಟ ನಡೆಸಿ, ವಾಹನಕ್ಕೆ ಬೆಂಕಿ ಇಟ್ಟರು. ಸಮುದಾಯದ ನೆರವಿನಿಂದಲೇ ನಾಲ್ಕು ಬಾರಿ ಗೆದ್ದಿದ್ದೇನೆ. ನಾನೊಬ್ಬ ಮರಾಠ ಶಾಸಕ' ಎಂದರು.

ನಿರಾಕರಣೆ: ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಮನೋಜ್ ಜರಾಂಗೆ, ಆರೋಗ್ಯ ತಪಾಸಣೆಗೆ ನಿರಾಕರಿಸಿದ್ದಾರೆ.

ಮೀಸಲಾತಿಗೆ ಆಗ್ರಹಿಸಿ ಮರಾಠ ಕ್ರಾಂತಿ ಮೋರ್ಚಾ ಮತ್ತು ಸಕಾಳ ಮರಾಠ ಸಮಾಜದಿಂದ ಕರಾಡ್‌ನಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು –ಪಿಟಿಐ ಚಿತ್ರ

ತಜ್ಞರ ಸಮಿತಿ ರಚನೆ

ಮುಂಬೈ: ಮರಾಠ ಮೀಸಲಾತಿ ಕುರಿತಂತೆ ಸುಪ್ರೀಂ ಕೋರ್ಟ್‌ನಲ್ಲಿ ಪರಿಹಾರಾತ್ಮಕ ಮೇಲ್ಮನವಿ ಸಲ್ಲಿಸಲು ಮಹಾರಾಷ್ಟ್ರ ಸರ್ಕಾರಕ್ಕೆ ಸಲಹೆ ನೀಡಲು ಮೂವರು ತಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮರಾಠ ಸಮುದಾಯಕ್ಕೆ 'ಕುಣಬಿ' ಜಾತಿ ಪ್ರಮಾಣಪತ್ರ ನೀಡುವುದು ಹೇಗೆ ಎಂಬ ಕುರಿತು ನಿವೃತ್ತ ನ್ಯಾಯಮೂರ್ತಿ ಸಂದೀಪ್ ಶಿಂದೆ ನೇತೃತ್ವದ ಸಮಿತಿಯು ಮಂಗಳವಾರ ವರದಿ ಸಲ್ಲಿಸಲಿದೆ. ನಂತರ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗುವುದು ಎಂದರು.

ಕ್ಷೇಮ ಕುಶಲ

ನಾಲಗೆಗಾಗಿ ಗಂಟಲನ್ನು ಕೆಡಿಸಿಕೊಳ್ಳಬೇಡಿ

ಡಾ. ಕಿರಣ್ ವಿ. ಎಸ್.

‘ಈಚೆಗೆ ಹೊರಗೆ ಹೋಗಿದ್ದಾಗ ರಸ್ತೆಯ ಬದಿಯಲ್ಲಿ ಪಾನಿಪೂರಿ ತಿಂದೆ. ಅಂದಿನಿಂದ ಗಂಟಲಲ್ಲಿ ಏನೋ ಅಹಿತ. ಎರಡು ದಿನಗಳಿಂದ ಧ್ವನಿ ಬದಲಾಗಿದೆ. ನಿನ್ನೆಯಿಂದ ನುಂಗಲೂ ಕಷ್ಟವಾಗುತ್ತಿದೆ’ - ಇದು ಹಲವಾರು ಜನರ ಅನುಭವ. ರುಚಿಯ ಹಿಂದೆ ಬಿದ್ದು ಶುಚಿಯನ್ನು ಅಲಕ್ಷ್ಯ ಮಾಡುವ ಅನೇಕರು ಗಂಟಲಿನ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಕೆಲವೊಮ್ಮೆ ಈ ಸಮಸ್ಯೆ ತೀವ್ರಗೊಂಡು ಆ್ಯಂಟಿಬಯಾಟಿಕ್ ಔಷಧಗಳನ್ನು ಸೇವಿಸುವಷ್ಟು ಗಂಭೀರವಾಗುತ್ತದೆ. ಆಹಾರ-ಪಾನೀಯಗಳ ಕಾರಣದಿಂದ ಉಂಟಾಗುವ ಗಂಟಲಿನ ಸಮಸ್ಯೆಗಳ ಬಗ್ಗೆ ಅರಿವು ಬೆಳೆಸಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಉಪಯುಕ್ತ.

ಮಲಿನ ಆಹಾರಪದಾರ್ಥಗಳು ಮುಖ್ಯವಾಗಿ ಎರಡು ಬಗೆಗಳಿಂದ ಅನಾರೋಗ್ಯಕ್ಕೆ ಕಾರಣವಾಗಬಹುದು. ಮೊದಲನೆಯದು - ಸೋಂಕುಕಾರಕ ಪರೋಪಜೀವಿಗಳು. ಶುಚಿಯಿಲ್ಲದ ವ್ಯಕ್ತಿಗಳು ತಯಾರಿಸುವ ಆಹಾರಪದಾರ್ಥಗಳ ಮೂಲಕ ಸೋಂಕು ಹರಡುವ ಸಾಧ್ಯತೆಗಳು ಅಧಿಕ. ಎರಡನೆಯದು - ಇಂತಹ ಆಹಾರಪದಾರ್ಥಗಳಲ್ಲಿ ಇರಬಹುದಾದ ರಾಸಾಯನಿಕ ಮಾಲಿನ್ಯ. ಇವುಗಳ ಪ್ರಭಾವದಿಂದ ಗಂಟಲಿನ ಸೂಕ್ಷ್ಮವಾದ ಲೋಳೆಪದರಕ್ಕೆ ಹಾನಿಯಾಗುತ್ತದೆ. ಆಗ ಗಂಟಲಿನಲ್ಲಿ ಕೆರೆದಂತೆ ಭಾಸವಾಗುತ್ತದೆ. ಬಿಸಿಯಾದ ಅಥವಾ ಖಾರವಾದ ಪದಾರ್ಥಗಳನ್ನು ಸೇವಿಸಿದಾಗ ಉರಿಯ ಅನುಭವವಾಗಬಹುದು. ಇದು ಮುಂದುವರೆದು, ನುಂಗುವಾಗ ಗಂಟಲಿನಲ್ಲಿ ನೋವಾಗುತ್ತದೆ, ಧ್ವನಿ ಬದಲಾಗುತ್ತದೆ. ಇದರ ಜೊತೆಗೆ ಮೂಗು ಸೋರುವಿಕೆ, ಶೀತ, ಕೆಮ್ಮು, ಜ್ವರ, ಚಳಿ, ಮೈ-ಕೈ ನೋವುಗಳು ಕಾಣಬಹುದು.

ಗಂಟಲಿಗೆ ಹೀಗೆ ಗಾಸಿಯಾದಾಗ ಸೋಂಕುಕಾರಕ ಪರೋಪಜೀವಿಗಳು ಸುಲಭವಾಗಿ ಪ್ರವೇಶ ಗಿಟ್ಟಿಸುತ್ತವೆ. ಇದರಿಂದ ಸೋಂಕು ರಕ್ತಕ್ಕೆ ಸೇರುವ ಸಾಧ್ಯತೆಗಳಿರುತ್ತವೆ. ಶರೀರದ ರಕ್ಷಕ ವ್ಯವಸ್ಥೆ ಚೆನ್ನಾಗಿರುವವರಲ್ಲಿ ಇಂತಹ ಸೋಂಕು ತಾನಾಗಿಯೇ ನಿಗ್ರಹವಾಗುತ್ತದೆ. ಆದರೆ ರಕ್ಷಕವ್ಯವಸ್ಥೆ ಕ್ಷೀಣವಾಗಿರುವವರಲ್ಲಿ ಈ ಸೋಂಕು ಸಾಕಷ್ಟು ತೊಂದರೆ ನೀಡುತ್ತದೆ. ಮಧುಮೇಹಿಗಳು, ಸಣ್ಣ ವಯಸ್ಸಿನ ಮಕ್ಕಳು, ಯಾವುದೇ ಕಾರಣಕ್ಕೆ ಸ್ಟೀರಾಯ್ಡ್ ಔಷಧಗಳನ್ನು ಸೇವಿಸುತ್ತಿರುವವರು ಮೊದಲಾದವರಲ್ಲಿ ಗಂಟಲುಬೇನೆಯನ್ನು ಉಪೇಕ್ಷಿಸುವಂತಿಲ್ಲ. ಅದಕ್ಕೆ ಸಾಧ್ಯವಾದಷ್ಟೂ ಶೀಘ್ರವಾಗಿ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಆರಂಭಿಸಬೇಕಾಗುತ್ತದೆ.

ಬಹುತೇಕ ಗಂಟಲುಬೇನೆಗಳಿಗೆ ನಿರ್ದಿಷ್ಟ ಚಿಕಿತ್ಸೆ ಬೇಕಾಗುವುದಿಲ್ಲ. ಸಾಕಷ್ಟು ಬಿಸಿನೀರನ್ನು ಕುಡಿಯುವುದು, ಉಪ್ಪುನೀರಿನಲ್ಲಿ ಗಂಟಲನ್ನು ಮುಕ್ಕಳಿಸುವುದು, ಬೆಚ್ಚಗಿನ ದ್ರವಾಹಾರ ಸೇವನೆ, ಮಾತಿನಿಂದ ವಿಶ್ರಾಂತಿ, ಮಾತನಾಡುವಾಗ ದನಿಯನ್ನು ಏರಿಸದಿರುವುದು, ದೀರ್ಘಶ್ವಾಸ, ಮೊದಲಾದುವುಗಳು ಸಹಾಯಕ. ಧೂಮಪಾನಿಗಳ ಗಂಟಲು ಸಾಮಾನ್ಯ ಜನರಿಗಿಂತ ಒಣದಾಗಿರುತ್ತದೆ. ಇಂತಹವರಲ್ಲಿ ಗಂಟಲುಬೇನೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತದೆ. ಇಂತಹವರು ಧೂಮಪಾನವನ್ನು ತ್ಯಜಿಸಲು ಗಂಟಲುನೋವು ಒಳ್ಳೆಯ ಅವಕಾಶವನ್ನು ನೀಡುತ್ತದೆ.

ಗಂಟಲುಬೇನೆಯ ಯಾವ ಹಂತದಲ್ಲಿ ವೈದ್ಯರನ್ನು ಕಾಣಬೇಕು? ಬಹುತೇಕ ಗಂಟಲುನೋವುಗಳನ್ನು ನಮ್ಮ ದೇಹದ ರಕ್ಷಕ ವ್ಯವಸ್ಥೆಯೇ ಸರಿಪಡಿಸುತ್ತದೆ. ಅದರ ಸಾಮರ್ಥ್ಯವನ್ನು ಮೀರಿದ ಬೇನೆಗಳಿಗೆ ಮಾತ್ರ ವೈದ್ಯಕೀಯ ಸಲಹೆ ಬೇಕಾಗುತ್ತದೆ. ನಲವತ್ತೆಂಟು ಗಂಟೆಗಳಿಗಿಂತಲೂ ಹೆಚ್ಚಿನ ಕಾಲ ಗಂಟಲಿನಲ್ಲಿ ಅಸೌಖ್ಯ ಎನಿಸಿದರೆ ವೈದ್ಯರನ್ನು ಕಾಣುವುದು ಸೂಕ್ತ. ಇದರ ಜೊತೆಗೆ ಏರುತ್ತಿರುವ ಜ್ವರ, ಧ್ವನಿಯಲ್ಲಿನ ಬದಲಾವಣೆ, ದ್ರವಪದಾರ್ಥಗಳನ್ನು ನುಂಗುವುದೂ ಕಷ್ಟವೆನಿಸುವುದು, ನಿದ್ರಿಸುವಾಗ ಜೊಲ್ಲು ಸೋರುವುದು, ಉಸಿರಾಟದ ಸಮಸ್ಯೆ, ಬಾಯಿಯನ್ನು ಅಗಲವಾಗಿ ತೆರೆಯಲು ಹಿಂಸೆಯಾಗುವುದು, ಉಗುಳಿನಲ್ಲಿ ರಕ್ತ ಕಾಣುವುದು, ಮುಖ ಅಥವಾ ಗಂಟಲಿನ ಊತ - ಇಂತಹ ಸಂದರ್ಭಗಳಲ್ಲಿ ಸೋಂಕಿನ ತೀವ್ರತೆ ಅಧಿಕವಾಗಿರಬಹುದು. ಇವು ವೈದ್ಯರು ನಿರ್ಧರಿಸಬೇಕಾದ ಸಂದರ್ಭಗಳು. ಯಾವುದೇ ಕಾರಣಕ್ಕೂ ಸ್ವಯಂ-ವೈದ್ಯ ಮಾಡಿಕೊಂಡು ಪರಿಸ್ಥಿತಿಯನ್ನು ಹದಗೆಡಿಸಿಕೊಳ್ಳಬಾರದು.

ಹೊರಗಿನ ಆಹಾರ-ಪಾನೀಯಗಳನ್ನು ಸೇವಿಸಿ ತಂದುಕೊಳ್ಳುವ ಗಂಟಲುಬೇನೆಯ ಚಿಕಿತ್ಸೆಗಿಂತಲೂ ಅದನ್ನು ಬಾರದಂತೆ ನಿರ್ವಹಿಸುವುದು ಜಾಣತನ. ಮನೆಯಲ್ಲಿ ಕೈ ತೊಳೆಯದೇ ನಾವು ಏನನ್ನೂ ಸೇವಿಸುವುದಿಲ್ಲ. ವೈದ್ಯರು ಯಾವುದಾದರೂ ಔಷಧವನ್ನು ಸೂಚಿಸಿದಾಗ ಅದರ ಅಡ್ಡ-ಪರಿಣಾಮಗಳ ಬಗ್ಗೆ ಪ್ರಶ್ನಿಸುತ್ತೇವೆ. ಮಕ್ಕಳಿಗೆ ಶುಚಿತ್ವದ ಬಗ್ಗೆ ಪಾಠ ಹೇಳುತ್ತೇವೆ. ಇಷ್ಟೆಲ್ಲ ಜಾಗರೂಕವಾಗಿರುವ ನಾವು ರಸ್ತೆಬದಿಯ ಅಶುಚಿಕರ ಆಹಾರವನ್ನು ಮುಲಾಜಿಲ್ಲದೆ ಬಾಯಿಗಿಳಿಸುವುದು ಸೋಜಿಗ. ಹತ್ತಾರು ಜನ ಅದನ್ನು ತಿನ್ನುತ್ತಿದ್ದಾರೆಂಬ ನಂಬಿಕೆಯೋ, ರುಚಿಯ ಚಪಲವೋ, ಜೊತೆಯಲ್ಲಿ ಇರುವವರ ಒತ್ತಾಯವೋ, ‘ಆಗಾಗ ಇಂತಹದ್ದನ್ನು ತಿನ್ನುತ್ತಿದ್ದರೆ ನಮ್ಮ ಇಮ್ಯೂನಿಟಿ ಬೆಳೆಯುತ್ತದೆ’ ಎನ್ನುವ ಭ್ರಮೆಯೋ, ‘ಜಗತ್ತಿನಾದ್ಯಂತ ಸ್ಟ್ರೀಟ್-ಫುಡ್ ತಿನ್ನುವವರಿದ್ದಾರೆ’ ಎನ್ನುವ ಸಾಂಘಿಕ ಉಡಾಫೆಯ ಮನೋಭಾವವೋ - ಒಟ್ಟಿನಲ್ಲಿ ಏನೋ ಒಂದು ಕಥೆಯನ್ನು ನಮಗೆ ನಾವೇ ಹೇಳಿಕೊಂಡು ಕಾಣದ ಅಪಾಯಕ್ಕೆ ಒಡ್ಡಿಕೊಳ್ಳುತ್ತೇವೆ. ಒಂದು ವಯಸ್ಸಿನ ನಂತರ ಇಂತಹ ದೈಹಿಕ, ಮಾನಸಿಕ ಪ್ರಲೋಭನೆಗಳನ್ನು ಹತ್ತಿಕ್ಕುವುದು ಬಹಳ ಮುಖ್ಯ.

ಮುಂದುವರೆದ ದೇಶಗಳ ಪ್ರವಾಸಿ ತಾಣಗಳಲ್ಲಿ ‘ಸ್ಟ್ರೀಟ್-ಫುಡ್’ ಎನ್ನುವುದು ದೊಡ್ಡ ಪಾತ್ರ ವಹಿಸುತ್ತದೆ ಎನ್ನುವ ಮಾತು ಸತ್ಯ. ಆದರೆ ಅಲ್ಲಿನ ವ್ಯವಸ್ಥೆ ಅದರ ಬಗ್ಗೆ ಬಹಳ ಕಠಿಣ ನಿರ್ಬಂಧಗಳನ್ನು ಹೇರಿ, ಸುರಕ್ಷತೆಯ ಬಗ್ಗೆ ಗಮನ ನೀಡಿರುತ್ತದೆ. ನಮ್ಮ ದೇಶದಲ್ಲಿ ಅಂತಹ ಕಟ್ಟುನಿಟ್ಟನ್ನು ಅಪೇಕ್ಷಿಸುವುದು ಕಷ್ಟ. ನಮ್ಮಲ್ಲಿ ರಸ್ತೆಬದಿಯ ಆಹಾರ ಮಾರಾಟ ಮಾಡುವ ಬಹುತೇಕರಿಗೆ ಕಾನೂನಿನ ಮಾನ್ಯತೆ ಇರುವುದಿಲ್ಲ. ಹೀಗಾಗಿ, ಅವರ ಬಳಿ ಸುರಕ್ಷತೆಯ ಖಾತ್ರಿ ಇರುವುದಿಲ್ಲ. ಅಲ್ಲಿ ಆಹಾರ ಸೇವಿಸುತ್ತಿರುವ ಹತ್ತಾರು ಅಪರಿಚಿತ ಮಂದಿಗೆ ಮುಂದಿನ ಕೆಲದಿನಗಳಲ್ಲಿ ಯಾವ ಯಾವ ಆರೋಗ್ಯ ಸಮಸ್ಯೆಗಳು ಬಂದವು ಎಂದು ತಿಳಿಯುವುದು ಅಸಾಧ್ಯ. ಹೊರಗೆ ತಿನ್ನುವ ಅನಿವಾರ್ಯ ಪ್ರಸಂಗಗಳಲ್ಲಿ ಶುಚಿಯಾದ ಹೋಟೆಲಿನಲ್ಲಿ ಬಿಸಿಬಿಸಿಯಾದ, ಚೆನ್ನಾಗಿ ಬೇಯಿಸಿದ, ಹಬೆಯಾಡುತ್ತಿರುವ ಆಹಾರಸೇವನೆ ಸೂಕ್ತ. ಆಹಾರದ ಗುಣಮಟ್ಟದಲ್ಲಿ ರಾಜಿಯಾಗುವುದು ಆರೋಗ್ಯಕ್ಕೆ ಹಾನಿಕರ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು

13) ಎಲೆಯ ಅಡ್ಡ ಸೀಳಿಕೆಯ ನೋಟವನ್ನು ತೋರಿಸುವ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



14) ಮಾನವನ ಜೀರ್ಣಾಂಗ ವ್ಯವಸ್ಥೆಯ ಬಗ್ಗೆ ಬರೆಯಿರಿ

ಉತ್ತರ:– ನಾವು ಅನೇಕ ವಿವಿಧ ಆಹಾರವನ್ನು ಸೇವಿಸುತ್ತೇವೆ. ಆ ಆಹಾರವು ನಮ್ಮ ಹಲ್ಲಿನಿಂದ ನುರಿಸುವ ಮೂಲಕ ಇದನ್ನು ನುಣ್ಣಗೆ ಮಾಡಲಾಗುತ್ತದೆ. ನಾಳದ ಒಳಗೋಡೆಗಳ ಪದರ ಮೃದುವಾಗಿರುವುದರಿಂದ ಆಹಾರವು ನಯವಾಗಿ ಹಾದು ಹೋಗಲು ಅದು ತೇವಾಂಶದಿಂದ ಕೂಡಿರಬೇಕು. ಅದಕ್ಕೆ ಲಾಲಾರಸ ಗ್ರಂಥಿಯಿಂದ ಸ್ರವಿಸಲ್ಪಡುವ ಲಾಲಾರಸ ಸಹಾಯ ಮಾಡುತ್ತದೆ

ಲಾಲಾರಸವು ಲಾಲಾರಸದ ಅಮೈಲೇಸ್ ಎಂಬ ಕಿಣ್ವವನ್ನು ಹೊಂದಿದ್ದು ಅದು ಪಿಷ್ಟ ಎಂಬ ಸಂಕೀರ್ಣ ಅಣುವನ್ನು ವಿಭಜಿಸಿ ಸಕ್ಕರೆಯನ್ನು ಬಿಡುಗಡೆ ಮಾಡುತ್ತದೆ. ಆಹಾರವು ಲಾಲಾರಸದೊಂದಿಗೆ ಚೆನ್ನಾಗಿ ಮಿಶ್ರಣಗೊಂಡು ಸ್ನಾಯುವಿನಿಂದಾದ ನಾಲಿಗೆಯ ಸಹಾಯದಿಂದ ಮೆಲ್ಲುವಾಗ ಬಾಯಿಯ ತುಂಬಾ ಚಲಿಸುತ್ತದೆ. ಆಹಾರವು ಜೀರ್ಣನಾಳದ ಪ್ರತಿಯೊಂದು ಭಾಗದಲ್ಲಿ ಸರಿಯಾಗಿ ಸಂಸ್ಕರಿಸಲು ಅದು ಜೀರ್ಣನಾಳದಲ್ಲಿ ಒಂದು ನಿಯಂತ್ರಿತ ರೀತಿಯಲ್ಲಿ ಚಲಿಸುತ್ತದೆ. ಜೀರ್ಣನಾಳದ ಒಳಸ್ತರಿಯು ಸ್ನಾಯುಗಳನ್ನು ಹೊಂದಿದ್ದು ಅದು ಆಹಾರವನ್ನು ಮುಂದಕ್ಕೆ ತಳ್ಳಲು ಲಯಬದ್ಧವಾಗಿ ಸಂಕುಚಿಸುತ್ತದೆ. ಈ ಪರಿಕ್ರಮಣ ಸಂಕುಚನ ಚಲನೆಗಳು ಕರುಳಿನ ಉದ್ದಕ್ಕೂ ಉಂಟಾಗುತ್ತವೆ.

ಆಹಾರವು ಬಾಯಿಯಿಂದ ಜಠರಕ್ಕೆ ಆಹಾರ ನಾಳ ಅಥವಾ ಅನ್ನನಾಳದ ಮೂಲಕ ಒಯ್ಯಲ್ಪಡುತ್ತದೆ. ಜಠರವು ಒಂದು ದೊಡ್ಡ ಅಂಗವಾಗಿದ್ದು ಆಹಾರ ಪ್ರವೇಶಿಸಿದಾಗ ಹಿಗ್ಗುತ್ತದೆ. ಜಠರದ ಸ್ನಾಯುಕ ಗೋಡೆಗಳು ಹೆಚ್ಚಿನ ಪಚನ ರಸಗಳೊಂದಿಗೆ ಆಹಾರವು ಚೆನ್ನಾಗಿ ಮಿಶ್ರಣವಾಗಲು ಸಹಾಯ ಮಾಡುತ್ತವೆ. ಈ ಪಚನ ಪ್ರಕ್ರಿಯೆಗಳು ಜಠರದ ಗೋಡೆಯಲ್ಲಿ ಕಂಡುಬರುವ ಜಠರಗ್ರಂಥಿಗಳಿಂದ ನಿರ್ವಹಿಸಲ್ಪಡುತ್ತವೆ. ಇವು ಹೈಡ್ರೋಕ್ಲೋರಿಕ್ ಆಮ್ಲ, ಪ್ರೋಟೀನನ್ನು ಜೀರ್ಣಿಸುವ ಪೆಪ್ಸಿನ್ ಮತ್ತು ಲೋಳೆಯನ್ನು ಸ್ರವಿಸುತ್ತವೆ. ಹೈಡ್ರೋಕ್ಲೋರಿಕ್ ಆಮ್ಲವು ಪೆಪ್ಸಿನ್ ಕಿಣ್ವದ ಕ್ರಿಯೆಯನ್ನು ಉತ್ತೇಜಿಸುವ ಆಮ್ಲೀಯ ಮಾಧ್ಯಮವನ್ನು ಉಂಟುಮಾಡುತ್ತದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಲೋಳೆಯು ಜಠರದ ಗೋಡೆಗಳನ್ನು ಆಮ್ಲದ ಕ್ರಿಯೆಯಿಂದ ರಕ್ಷಿಸುತ್ತದೆ. ಜಠರದಿಂದ ಆಹಾರದ ಹೊರದೂಡುವಿಕೆಯು ಸಂಕುಚನ ಸ್ನಾಯುಗಳಿಂದ(sphincter muscle) ನಿಯಂತ್ರಿಸಲ್ಪಡುತ್ತದೆ. ಅದು ಆಹಾರವನ್ನು ಸಣ್ಣ ಪ್ರಮಾಣದಲ್ಲಿ ಸಣ್ಣಕರುಳಿಗೆ ಬಿಡುಗಡೆ ಮಾಡುತ್ತದೆ. ಈಗ ಆಹಾರವು ಜಠರದಿಂದ ಸಣ್ಣಕರುಳಿಗೆ ಪ್ರವೇಶಿಸುತ್ತದೆ. ಇದು ಜೀರ್ಣನಾಳದ ಅತ್ಯಂತ ಉದ್ದದ ಭಾಗವಾಗಿದ್ದು, ವ್ಯಾಪಕವಾಗಿ ಸುರುಳಿಹೊಂದಿ ಕಡಿಮೆ ಸ್ಥಳದಲ್ಲಿ ಅಳವಡಿಸಲ್ಪಟ್ಟಿದೆ. ಸಣ್ಣಕರುಳಿನ ಉದ್ದವು ವಿವಿಧ ಪ್ರಾಣಿಗಳಲ್ಲಿ ಅವು ಸೇವಿಸುವ ಆಹಾರದ ಆಧಾರದ ಮೇಲೆ ವಿಭಿನ್ನವಾಗಿವೆ. ಹುಲ್ಲನ್ನು ತಿನ್ನುವ ಸಸ್ಯಾಹಾರಿಗಳಿಗೆ ಸೆಲ್ಯುಲೋಸನ್ನು ಜೀರ್ಣಿಸುವ ಸಲುವಾಗಿ ಉದ್ದನೆಯ ಸಣ್ಣಕರಳು ಇದ್ದರೆ ಹುಲಿಯಂಥ ಮಾಂಸಾಹಾರಿಗಳು ಗಿಡ್ಡ ಸಣ್ಣಕರುಳನ್ನು ಹೊಂದಿವೆ.

ಸಣ್ಣಕರುಳು ಎಂಬುದು ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು ಮತ್ತು ಕೊಬ್ಬುಗಳು ಸಂಪೂರ್ಣ ಪಚನವಾಗುವ ಸ್ಥಳವಾಗಿದೆ. ಈ ಉದ್ದೇಶಕ್ಕಾಗಿ ಇದು ಮೇದೋಜೀರಕ ಗ್ರಂಥಿ ಮತ್ತು ಯಕೃತ್‌ಗಳ ಸ್ರವಿಕೆಗಳ ಸಹಾಯ ಪಡೆಯುತ್ತದೆ.

ಜಠರದಿಂದ ಬರುವ ಆಹಾರವು ಆಮ್ಲೀಯವಾಗಿದ್ದು ಮೇದೋಜೀರಕ ಕಿಣ್ವಗಳ ಪ್ರತಿವರ್ತನೆಗಾಗಿ ಅದನ್ನು ಕ್ಷಾರೀಯಗೊಳಿಸುವ ಅಗತ್ಯವಿದೆ. ಯಕೃತ್‌ನಿಂದ ಸ್ರವಿಕೆಯಾಗುವ ಪಿತ್ತರಸವು ಕೊಬ್ಬಿನ ಮೇಲೆ ಪ್ರತಿವರ್ತಿಸುವ ಜೊತೆಗೆ ಈ ಕಾರ್ಯವನ್ನು ಪೂರ್ಣಗೊಳಿಸುತ್ತದೆ.

ಸಣ್ಣಕರುಳಿನಲ್ಲಿ ಕಂಡುಬರುವ ಕೊಬ್ಬುಗಳು ದೊಡ್ಡ ದೊಡ್ಡ ದುಂಡುಕಣಗಳ(globule) ರೂಪದಲ್ಲಿದ್ದು, ಕಿಣ್ವಗಳಿಗೆ ಅದರ ಮೇಲೆ ವರ್ತಿಸಲು ಕಷ್ಟವಾಗುತ್ತದೆ. ಪಿತ್ತರಸದ ಲವಣಗಳು ಅವುಗಳನ್ನು ಚಿಕ್ಕ ಚಿಕ್ಕ ದುಂಡುಕಣಗಳಾಗಿ ವಿಭಜಿಸಿ ಕಿಣ್ವಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.

ಮೇದೋಜೀರಕವು ಮೇದೋಜೀರಕ ರಸವನ್ನು ಸ್ರವಿಸುತ್ತದೆ. ಅದು ಪ್ರೋಟೀನನ್ನು ಜೀರ್ಣಿಸಲು ಟ್ರಿಪ್ಸಿನ್ ಮತ್ತು ಎಮಲ್ಸೀಕರಣಗೊಂಡ ಕೊಬ್ಬುಗಳನ್ನು ವಿಭಜಿಸಲು ಲೈಪೇಸ್‌ನಂತಹ ಕಿಣ್ವಗಳನ್ನು ಹೊಂದಿದೆ.

ಸಣ್ಣಕರುಳಿನ ಭಿತ್ತಿಯು ಗ್ರಂಥಿಗಳನ್ನು ಹೊಂದಿದ್ದು ಅವು ಕರುಳಿನ ರಸವನ್ನು ಸ್ರವಿಸುತ್ತವೆ. ಇದರಲ್ಲಿರುವ ಕಿಣ್ವಗಳು ಅಂತಿಮವಾಗಿ ಪ್ರೋಟೀನ್‌ಗಳನ್ನು ಅಮೈನೋ ಆಮ್ಲಗಳಾಗಿ, ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್ ಆಗಿ ಹಾಗೂ ಕೊಬ್ಬುಗಳನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

ಜೀರ್ಣವಾದ ಆಹಾರವು ಕರುಳಿನ ಗೋಡೆಗಳಿಂದ ಹೀರಲ್ಪಡುತ್ತದೆ. ಹೀರಿಕೆಯಾಗದ ಆಹಾರವು ದೊಡ್ಡ ಕರುಳಿಗೆ ಕಳಿಸಲ್ಪಡುತ್ತದೆ. ಅಲ್ಲಿ ಅದರ ಗೋಡೆಯು ಈ ಪದಾರ್ಥಗಳಿಂದ ಹೆಚ್ಚಿನ ನೀರನ್ನು ಹೀರಿಕೊಳ್ಳುತ್ತದೆ. ಉಳಿದ ಪದಾರ್ಥಗಳನ್ನು ಗುದದ್ವಾರದ ಮೂಲಕ ದೇಹದಿಂದ ಹೊರಹಾಕಲಾಗುತ್ತದೆ

15) ಮಾನವನ ಜೀರ್ಣಾಂಗವ್ಯೂಹದ ಚಿತ್ರಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



16) ಬಿಟ್ಟ ಸ್ಥಳ ತುಂಬಿ

1) ಆರೋಗ್ಯ ವ್ಯಕ್ತಿಯ ರಕ್ತದ ಒತ್ತಡ …………

ಉತ್ತರ:– 120/80 mm/hg

2) ಅಮಿಬಾ ಆಹಾರವನ್ನು ಸೆರೆಹಿಡಿಯಲು ಬಳಸುವ ವ್ಯವಸ್ಥೆ………………… ..

ಉತ್ತರ:– ಮಿಥ್ಯಾಪಾದ

3) ಲಾಲಾರಸವು ಲಾಲಾರಸದ ಅಮೈಲೇಸ್ ಎಂಬ ಕಿಣ್ವವನ್ನು ಹೊಂದಿದ್ದು ಅದು ಪಿಷ್ಟ ಎಂಬ ಸಂಕೀರ್ಣ ಅಣುವನ್ನು ವಿಭಜಿಸಿ ……………….. ಬಿಡುಗಡೆ ಮಾಡುತ್ತದೆ

ಉತ್ತರ:– ಸಕ್ಕರೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC MATHEMATICS

DETERMINANTS

1) Show that value of a determinant is unalte- red if to the elements of any row or column the same multiples of corresponding elements of any other row(or)column are added.

Soln :– The value of a determinant is unaltered if to the elements of any row (or column) the same multiples of the corresponding elements of any other row (or column) are added.

Proof :– $\Delta=\begin{bmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{bmatrix}$

and Δ' be obtained by having R_1+kR_2

$$\Delta'=\begin{bmatrix} a_1+ka_2 & b_1+kb_2 & c_1+kc_2 \\ a_2 & b_2 & c_2 \\ a_3 & b_3 & c_3 \end{bmatrix}$$

(From the property – If each element of 1 row (or column) of a determinant is a sum of two terms, the Δ can be expressed as a sum of 2 determinants)

$$\Rightarrow \begin{bmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{bmatrix} + \begin{bmatrix} ka_2 & kb_2 & kc_2 \\ a_2 & b_2 & c_2 \\ a_3 & b_3 & c_3 \end{bmatrix}$$

$$\Rightarrow \Delta + k\begin{bmatrix} a_2 & b_2 & c_2 \\ a_2 & b_2 & c_2 \\ a_3 & b_3 & c_3 \end{bmatrix}$$

(From the property that – If 2 rows (or columns) of a determinant are identical, derterminant becomes zero)

$\Rightarrow \Delta + k.0$; hence $\Delta'=\Delta$

2) If x, y and z are all different and $A=\begin{vmatrix} x & x^2 & 1+x^3 \\ y & y^2 & 1+y^3 \\ z & z^2 & 1+z^3 \end{vmatrix}=0$ then show that $1+xyz=0$

Soln :– Consider $A=\begin{vmatrix} x & x^2 & 1+x^3 \\ y & y^2 & 1+y^3 \\ z & z^2 & 1+z^3 \end{vmatrix}$

$$\Rightarrow \begin{vmatrix} x & x^2 & 1 \\ y & y^2 & 1 \\ z & z^2 & 1 \end{vmatrix} \begin{vmatrix} x & x^2 & x^3 \\ y & y^2 & y^3 \\ z & z^2 & z^3 \end{vmatrix}$$

$$\Rightarrow \begin{vmatrix} x & x^2 & 1 \\ y & y^2 & 1 \\ z & z^2 & 1 \end{vmatrix} + xyz\begin{vmatrix} 1 & x & x^2 \\ 1 & y & y^2 \\ 1 & z & z^2 \end{vmatrix}$$

interchanging columns that is $C_1 \leftrightarrow C_2$ and $C_2 \leftrightarrow C_3$ in the 1st determinant, we get

$$A=(-1)^2\begin{vmatrix} 1 & x & x^2 \\ 1 & y & y^2 \\ 1 & z & z^2 \end{vmatrix} + xyz\begin{vmatrix} 1 & x & x^2 \\ 1 & y & y^2 \\ 1 & z & z^2 \end{vmatrix}$$

$$=(1+xyz)\begin{vmatrix} 1 & x & x^2 \\ 1 & y & y^2 \\ 1 & z & z^2 \end{vmatrix}$$

$=(1+xyz)(x-y)(y-z)(z-x)$

From data $A=0$,

hence, $(1+xyz)(x-y)(y-z)(z-x)=0$

But $(x-y)\neq 0, (y-z)\neq 0, (z-x)\neq 0$

because x, y and z are all different

$\therefore A=0 \Rightarrow (1+xyz)=0$

3) Find the inverse of $\begin{bmatrix} 1 & -1 & 1 \\ 2 & -1 & 3 \\ -3 & -2 & 4 \end{bmatrix}$

Soln :– Consider the matrix $\begin{bmatrix} 1 & -1 & 1 \\ 2 & -1 & 3 \\ -3 & -2 & 4 \end{bmatrix}$

$C_{11}=A_{11}=-4+6=2$

$C_{12}=-A_{12}=-(8+9)=-17$

$C_{13}=A_{13}=-4-3=-7;$

$C_{21}=-A_{21}=-(-4+2)=2$

$C_{22}=A_{22}=4+3=7;$

$C_{23}=-A_{23}=-(-2-3)=5$

$C_{31}=A_{31}=-3+1=-2;$

$C_{32}=-A_{32}=-(3-2)=-1$

$C_{33}=A_{33}=-1+2=1$

Also, $|A|=1[-4-(-6)]-(-1)[8+9]+1[-4-3]$

$=(-4+6)+1(17)+(-7)$

$=2+17-7$

$=12\neq 0$

$$A^{-1}=\frac{\text{adj } A}{|A|}=\frac{1}{12}\begin{bmatrix} 2 & -17 & -7 \\ 2 & 7 & 5 \\ -2 & -1 & 1 \end{bmatrix}'$$

$$=\frac{1}{12}\begin{bmatrix} 2 & 2 & -2 \\ -17 & 7 & -1 \\ -7 & 5 & 1 \end{bmatrix}$$

4) Evaluate the determinant $\begin{bmatrix} 1^2 & 2^2 & 3^2 \\ 2^2 & 3^2 & 4^2 \\ 4^2 & 5^2 & 6^2 \end{bmatrix}$

Soln :– The given determinant is

$$\begin{bmatrix} 1^2 & 2^2 & 3^2 \\ 2^2 & 3^2 & 4^2 \\ 4^2 & 5^2 & 6^2 \end{bmatrix}=\begin{bmatrix} 1 & 4 & 9 \\ 4 & 9 & 16 \\ 16 & 25 & 36 \end{bmatrix}$$

$$=\begin{bmatrix} 1 & 4 & 9 \\ 3 & 5 & 7 \\ 12 & 16 & 20 \end{bmatrix}$$

here $R_2 \rightarrow R_2 - R_1$ and $R_3 \rightarrow R_3 - R_2$

(Contd……)



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ
ಜನರಿಗೆ ತಮ್ಮ ಹಕ್ಕು, ಹೊಣೆಗಾರಿಕೆಯ ಅರಿವು ಇಲ್ಲದೇ ಹೋದರೆ ಪ್ರಜಾಪ್ರಭುತ್ವ ಕೇವಲ ನಕಲಿ ಮಾಲು.
–ಎಂ. ಗೋಪಾಲಕೃಷ್ಣ ಅಡಿಗ

ಮಾಜಿ ಅಧಿಕಾರಿಗಳಿಗೆ ಮರಣದಂಡನೆ ಭಾರತದ ಸಾಮರ್ಥ್ಯಕ್ಕೆ ಅಗ್ನಿಪರೀಕ್ಷೆ

ಭಾರತದ ನೌಕಾಪಡೆಯ ಎಂಟು ಮಂದಿ ಮಾಜಿ ಅಧಿಕಾರಿಗಳಿಗೆ ಕತಾರ್‌ನ ನ್ಯಾಯಾಲಯವು ಮರಣದಂಡನೆ ವಿಧಿಸಿರುವುದು ಬಹಳ ಆಘಾತಕಾರಿಯಾದುದು. 2022ರ ಆಗಸ್ಟ್‌ನಲ್ಲಿ ಬಂಧನಕ್ಕೆ ಒಳಗಾದ ಇವರು ಅಲ್ಲಿಂದ ಈತನಕ ಜೈಲಿನಲ್ಲಿಯೇ ಇದ್ದಾರೆ. ಇವರ ಮೇಲೆ ಇರುವ ಆರೋಪಗಳು ಏನು ಎಂಬುದನ್ನು ಕತಾರ್ ಸರ್ಕಾರವಾಗಲೀ ಭಾರತದ ವಿದೇಶಾಂಗ ಸಚಿವಾಲಯವಾಗಲೀ ಬಹಿರಂಗ ಮಾಡಿಲ್ಲ. ಮೂರನೇ ದೇಶವೊಂದರ ಪರವಾಗಿ ಬೇಹುಗಾರಿಕೆ ನಡೆಸಿದ ಆರೋಪ ಇವರ ಮೇಲೆ ಇದೆ ಎಂಬ ಊಹಾಪೋಹಕ್ಕೆ ಇದು ಕಾರಣವಾಗಿದೆ. ಇದು, ಈ ಮಾಜಿ ಅಧಿಕಾರಿಗಳ ಕುಟುಂಬಗಳಲ್ಲಿ ಕಳವಳ ಮತ್ತು ಗೊಂದಲ ಉಂಟುಮಾಡಿದೆ. ಈ ಎಂಟು ಮಂದಿಯಲ್ಲಿ ಏಳು ಜನರು ನೌಕಾಪಡೆಯಲ್ಲಿ ದೊಡ್ಡ ಹುದ್ದೆಯಲ್ಲಿ ಸೇವೆ ಸಲ್ಲಿಸಿದವರು. ಕತಾರ್ ನ್ಯಾಯಾಲಯದ ತೀರ್ಪು ಹೊರಬಿದ್ದಾಗ ಸರ್ಕಾರವು 'ಆಘಾತ' ವ್ಯಕ್ತಪಡಿಸಿದೆ. ಈ ತೀರ್ಪಿನ ಕುರಿತಂತೆ ಸರ್ಕಾರಕ್ಕೆ ಏನೂ ತಿಳಿದಿರಲಿಲ್ಲ ಅಥವಾ ಕತಾರ್ ಸರ್ಕಾರವು ನೀಡಿದ ಭರವಸೆಗೆ ವ್ಯತಿರಿಕ್ತವಾದ ತೀರ್ಪು ಬಂದಿದೆ ಎಂಬುದನ್ನು ಇದು ಸೂಚಿಸುತ್ತದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಇಂತಹ ಪರಿಸ್ಥಿತಿಯನ್ನು ಈ ಹಿಂದೆ ಕಂಡಿರಲಿಲ್ಲ. 2016ರಲ್ಲಿ ಕುಲಭೂಷಣ್ ಜಾಧವ್ ಪ್ರಕರಣವು ಎದುರಾಗಿತ್ತು. ಆದರೆ, ಆ ಸಂದರ್ಭದಲ್ಲಿ ಭಾರತವು ನಿಭಾಯಿಸಬೇಕಾಗಿದ್ದುದು ಪಾಕಿಸ್ತಾನವನ್ನು. ಅದಕ್ಕೆ ಸಂಬಂಧಿಸಿದಂತೆ ನಿರ್ಧಾರಗಳನ್ನು ಕೈಗೊಳ್ಳುವುದು ಸರ್ಕಾರಕ್ಕೆ ಸುಲಭವಾಗಿತ್ತು. ಜಾಧವ್ ಅವರು ಭಾರತದ ಬೇಹುಗಾರ ಮತ್ತು ಪಾಕಿಸ್ತಾನದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಸಲು ಷಡ್ಯಂತ್ರ ಮಾಡಿದ್ದರು ಎಂದು ಪಾಕಿಸ್ತಾನ ಆರೋಪ ಮಾಡಿತ್ತು. ಆದರೆ, ಇದು ನೆರೆಯ ಪ್ರತಿಕೂಲವಾದ ದೇಶದ ನಿರಾಧಾರ ಹೇಳಿಕೆ ಎಂದು ಭಾರತವು ತಳ್ಳಿಹಾಕಿತ್ತು. ಆದರೆ ಕತಾರ್‌ನ ವಿಷಯದಲ್ಲಿ ಈ ರೀತಿ ನಡೆದುಕೊಳ್ಳುವುದು ಭಾರತಕ್ಕೆ ಸಾಧ್ಯವಿಲ್ಲ. ಕತಾರ್ ಜೊತೆಗೆ ಕೆಲ ವರ್ಷಗಳ ನಿರಂತರ ಪ್ರಯತ್ನದ ಫಲವಾಗಿ ಸ್ನೇಹ-ಸಂಬಂಧವನ್ನು ಭಾರತ ಬೆಳೆಸಿಕೊಂಡಿದೆ.

ಸೆರೆಯಲ್ಲಿರುವ ಭಾರತೀಯರನ್ನು ಬಿಡಿಸಿ ಕರೆತರಲು ಲಭ್ಯವಿರುವ ಕಾನೂನಾತ್ಮಕ ಮತ್ತು ರಾಜಕೀಯ ಆಯ್ಕೆಗಳೆಲ್ಲವನ್ನೂ ಕೇಂದ್ರ ಸರ್ಕಾರವು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು

ಕತಾರ್ ಮತ್ತು ಭಾರತದ ನಡುವೆ ದೊಡ್ಡ ಮಟ್ಟದ ಆರ್ಥಿಕ ಸಂಬಂಧ ಇದೆ. ದ್ವಿಪಕ್ಷೀಯ ವ್ಯಾಪಾರದ ವಾರ್ಷಿಕ ವಹಿವಾಟು 1,500 ಕೋಟಿ ಡಾಲರ್ (ಸುಮಾರು ₹1.25 ಲಕ್ಷ ಕೋಟಿ). ಇದರಲ್ಲಿ ಭಾರತದ ಆಮದಿನ ಪ್ರಮಾಣವೇ ಶೇ 80ರಷ್ಟಿದೆ. ಭಾರತಕ್ಕೆ ಅನಿಲ ಪೂರೈಸುವ ಪ್ರಮುಖ ದೇಶಗಳಲ್ಲಿ ಕತಾರ್ ಕೂಡ ಒಂದು. ಭಾರತದ ಅಗತ್ಯದ ಶೇಕಡ 42ರಷ್ಟು ನೈಸರ್ಗಿಕ ಅನಿಲವನ್ನು ಈ ದೇಶ ಒದಗಿಸುತ್ತಿದೆ. ರಕ್ಷಣಾ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಎರಡೂ ದೇಶಗಳ ನೌಕಾಪಡೆಗಳ ನಡುವೆ ಕೂಡ ಬಲವಾದ ಸಂಬಂಧ ಇದೆ. ಭಾರತ ಮೂಲದ ಜನರು ಬಹುದೊಡ್ಡ ಸಂಖ್ಯೆಯಲ್ಲಿ ಅಲ್ಲಿ ನೆಲೆಸಿದ್ದಾರೆ. ವೈದ್ಯಕೀಯ ಸಿಬ್ಬಂದಿ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಎಂಟು ಲಕ್ಷ ಭಾರತೀಯರು ಅಲ್ಲಿ ಇದ್ದಾರೆ. ಆ ದೇಶದ ಒಟ್ಟು ಜನಸಂಖ್ಯೆಯೇ 27 ಲಕ್ಷ. ಆ ದೇಶದಲ್ಲಿ ನೆಲೆಯಾಗಿರುವ ಬೇರೊಂದು ದೇಶದ ಸಮುದಾಯಗಳಲ್ಲಿ ಭಾರತೀಯರೇ ಹೆಚ್ಚು. ಹಮಾಸ್ ಬಂಡುಕೋರರ ಬಳಿ ಇರುವ ಒತ್ತೆಯಾಳುಗಳನ್ನು ಬಿಡಿಸಲು ಈ ಪುಟ್ಟ ದೇಶವು ಗಂಭೀರವಾದ ಪ್ರಯತ್ನ ನಡೆಸುತ್ತಿದೆ. ಅಮೆರಿಕ, ಇಸ್ರೇಲ್‌ನಂತಹ ಪ್ರಮುಖ ದೇಶಗಳ ಮೇಲೆ ಕತಾರ್ ಹೊಂದಿರುವ ಪ್ರಭಾವವನ್ನು ಇದು ತೋರಿಸುತ್ತದೆ. ಹಾಗಾಗಿಯೇ, ಕೆನಡಾ ಜೊತೆಗೆ ಇತ್ತೀಚೆಗೆ ವರ್ತಿಸಿದ ರೀತಿಯಲ್ಲಿ ಕತಾರ್ ಜೊತೆಗೆ ವರ್ತಿಸುವುದು ಭಾರತಕ್ಕೆ ಸಾಧ್ಯವಾಗದು.

ಈಗಿನ ಈ ವಿದ್ಯಮಾನವು ಯಾವ ಮಟ್ಟದ ಪರಿಣಾಮ ಬೀರಬಹುದು ಎಂಬುದು ಖಚಿತವಿಲ್ಲ. ಆದರೆ, ಸಂದರ್ಭವು ಅತ್ಯಂತ ನಾಜೂಕು ಎಂಬುದನ್ನು ಗಮನದಲ್ಲಿ ಇರಿಸಿಕೊಳ್ಳಲೇಬೇಕು. ಸೆರೆಯಲ್ಲಿರುವ ಭಾರತೀಯರನ್ನು ಬಿಡಿಸಿ ತರಲು ಲಭ್ಯವಿರುವ ಕಾನೂನಾತ್ಮಕ ಮತ್ತು ರಾಜಕೀಯ ಆಯ್ಕೆಗಳೆಲ್ಲವನ್ನೂ ಬಳಸಿಕೊಳ್ಳುವುದಾಗಿ ಭಾರತ ಸರ್ಕಾರ ಹೇಳಿದೆ. ಕತಾರ್‌ನ ನ್ಯಾಯಾಂಗ ವ್ಯವಸ್ಥೆಯು ಹೇಗಿದೆ ಎಂಬುದರ ಕುರಿತು ಹೆಚ್ಚಿನದೇನೂ ತಿಳಿದಿಲ್ಲ. ಪಾರದರ್ಶಕತೆ ಇಲ್ಲದೇ ಇದ್ದರೂ ಹಲವು ಹಂತಗಳ ಮೇಲ್ಮನವಿ ವ್ಯವಸ್ಥೆ ಅಲ್ಲಿ ಇದ್ದಂತಿದೆ. ಅಲ್ಲಿನ ದೊರೆಯು ಕ್ಷಮಾದಾನದ ಹಕ್ಕನ್ನೂ ಬಳಸಿಕೊಳ್ಳಬಹುದು. ಆದರೆ, ಅದಕ್ಕೆ ಅತ್ಯುನ್ನತ ಮಟ್ಟದ ರಾಜಕೀಯ ಮಧ್ಯಪ್ರವೇಶ ಬೇಕಾಗುತ್ತದೆ. ಮಾನವ ಹಕ್ಕುಗಳ ರಕ್ಷಣೆ ಕುರಿತಂತೆ ಕತಾರ್‌ನ ಹಿನ್ನೆಲೆ ಚೆನ್ನಾಗಿಯೇನೂ ಇಲ್ಲ. ಆದರೆ, ಎರಡು ದಶಕಗಳಲ್ಲಿ ಭಾರತ ಜಾರಿ ಮಾಡಿದಷ್ಟು ಮರಣದಂಡನೆಗಳನ್ನು ಕತಾರ್ ಜಾರಿ ಮಾಡಿಲ್ಲ ಎಂಬುದು ಆಶಾದಾಯಕ. ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಬೇಕು ಎಂಬ ನಿರೀಕ್ಷೆ ಎಂಟು ಮಂದಿಯ ಕುಟುಂಬ, ಸೇನಾಪಡೆಗಳ ಯೋಧರು ಮತ್ತು ಕತಾರ್‌ನಲ್ಲಿರುವ ಭಾರತ ಮೂಲದ ಜನರಲ್ಲಿ ಖಂಡಿತಾ ಇದೆ.

ದಿನದ ಟ್ವೀಟ್

ಸಂಬಂಧಗಳ ಅರಿವಿನ ಕೊರತೆ...

ನಾನಾಯಿತು ನನ್ನ ಬದುಕಾಯಿತು ಎಂದು ಶ್ರದ್ಧೆಯಿಂದ ಬಾಳುತ್ತಿರುವ ನನ್ನನ್ನು ಪ್ರಚಾರದ ವಸ್ತುವಿನಂತೆ ಬಳಕೆ ಮಾಡಲಾಯಿತು! ಪ್ರೀತಿ, ನಂಬಿಕೆ, ಸಂಬಂಧ ಎಂದು ಸಾಮಾಜಿಕವಾಗಿ ಮಾತನಾಡುತ್ತಿದ್ದ ನನ್ನನ್ನು ಮೂಕನಾಗಿಸಿ, ಇನ್ನುಮುಂದೆ ಯಾವ ವಿಷಯವೂ ಮಾತನಾಡದಂತೆ ದಿಗ್ಬಂಧ ಹಾಕಿಕೊಂಡಿತು ಮನಸ್ಸು– ಇಂದಿನ ದುರ್ದೈವ ಪ್ರಚಾರ ಕಂಡು! ಸಂಬಂಧಗಳ ಅರಿವಿಲ್ಲದ ಸಮುದಾಯ!

(ತಾಯಿ ಉಡುಗೊರೆ ನೀಡಿದ್ದ ಹುಲಿ ಉಗುರಿನ ಲಾಕೆಟ್ ಅನ್ನು ಅರಣ್ಯ ಇಲಾಖೆಗೆ ಒಪ್ಪಿಸಿದ ನಂತರದ ಬೆಳವಣಿಗೆಗೆ ಪ್ರತಿಕ್ರಿಯೆ)

ಜಗ್ಗೇಶ್, ನಟ, ರಾಜ್ಯಸಭೆ ಸದಸ್ಯ

ಕಿಡಿನುಡಿ

ಕೇರಳದ ಗೃಹ ಸಚಿವರೂ ಆಗಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ತಮ್ಮ ಜವಾಬ್ದಾರಿ ನಿಭಾಯಿಸಲು, ಕೇರಳದ ಜನರನ್ನು ರಕ್ಷಿಸಲು ಆಗುತ್ತಿಲ್ಲ ಎಂದಾದರೆ, ಗೃಹ ಸಚಿವರಾಗಿ ಕೆಲಸ ಮಾಡಲು ಬೇರೊಬ್ಬ ಸಮರ್ಥರನ್ನು ಹುಡುಕಬೇಕು. ವಿಜಯನ್ ಅವರು 'ಇಂಡಿಯಾ' ಒಕ್ಕೂಟದ ಪರವಾಗಿ ದೆಹಲಿಯಲ್ಲಿ ಪೂರ್ಣಾವಧಿ ರಾಜಕಾರಣ ಮಾಡಿಕೊಂಡು ಇರಬಹುದು.

ರಾಜೀವ್ ಚಂದ್ರಶೇಖರ್, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ

25 ವರ್ಷಗಳ ಹಿಂದೆ
ಶನಿವಾರ, 31-10-1998

• ಅವಿಶ್ವಾಸ ನಿರ್ಣಯ: ದಳ ಶಾಸಕರಿಗೆ ವಿಪ್

ಬೆಂಗಳೂರು, ಅ. 30– ವಿಧಾನಸಭೆಯಲ್ಲಿ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯ ಚರ್ಚೆಗೆ ಬಂದಾಗ ಹಾಗೂ ನಿರ್ಣಯವನ್ನು ಮತಕ್ಕೆ ಹಾಕಿದ ಸಂದರ್ಭದಲ್ಲಿ ಸದನದಲ್ಲಿ ಹಾಜರಿದ್ದು ನಿರ್ಣಯದ ವಿರುದ್ಧ ಮತ ಚಲಾಯಿಸುವಂತೆ ಆಡಳಿತ ಪಕ್ಷ ಜನತಾ ದಳದ ಎಲ್ಲ ಶಾಸಕರಿಗೆ ಇಂದು ಅಧಿಕೃತವಾಗಿ 'ವಿಪ್' ನೀಡಲಾಗಿದೆ.

ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿರುವ ಕೆ. ವಸಂತ ಬಂಗೇರ ಅವರು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಂ.ಸಿ. ನಾಣಯ್ಯ ಅವರೊಡನೆ ಸಮಾಲೋಚಿಸಿ, ವಿಪ್ ನೀಡಿದ್ದಾರೆ.

• ಶಿರಾ ಪ್ರಕರಣ ತನಿಖೆಗೆ ಜಂಟಿ ಸದನ ಸಮಿತಿ

ಬೆಂಗಳೂರು, ಅ. 30– ಶಿರಾದಲ್ಲಿ ನಡೆದ ಹಿಂಸಾಚಾರ ಮತ್ತು ಗೋಲಿಬಾರ್ ಪ್ರಕರಣದ ಬಗ್ಗೆ ಸದನ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿ ವಿಧಾನಮಂಡಲದ ಉಭಯ ಸದನಗಳ ವಿರೋಧಿ ಸದಸ್ಯರು ನಡೆಸಿದ ಧರಣಿಗೆ ಮಣಿದ ಸರ್ಕಾರ, ಇಂದು ಜಂಟಿ ಸದನ ಸಮಿತಿ ರಚಿಸಲು ಒಪ್ಪಿತು.

ಈ ವಿಚಾರವನ್ನು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹಾಗೂ ವಿಧಾನ ಪರಿಷತ್ತಿನಲ್ಲಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

50 ವರ್ಷಗಳ ಹಿಂದೆ
ಬುಧವಾರ, 31-10-1973

• ಸಂಸತ್ತಿನಿಂದ ಮಹಾಜನ್ ವರದಿ ವಾಪಸಾಗುವ ಅಗತ್ಯವಿಲ್ಲ: ರಾಜ್ಯ ಕಾಂಗ್ರೆಸ್ ಅಧ್ಯಕ್ಷ ರಂಗನಾಥ್ ಸ್ಪಷ್ಟನೆ

ಬೆಂಗಳೂರು, ಅ. 30– ಸಂಸತ್ ಮುಂದಿರುವ ಮಹಾಜನ್ ವರದಿಯನ್ನು ಹಿಂತೆಗೆದುಕೊಳ್ಳುವ ಸಲಹೆಯನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ.ಎಚ್. ರಂಗನಾಥ್ ಅವರು ಇಂದು ಇಲ್ಲಿ ವಿರೋಧಿಸಿದರು.

ಮೈಸೂರು– ಮಹಾರಾಷ್ಟ್ರ ಮತ್ತು ಮೈಸೂರು– ಕೇರಳ ಗಡಿ ವಿವಾದಕ್ಕೆ ಸಂಬಂಧಿಸಿದ ಆ ವರದಿಯನ್ನು ಹಿಂತೆಗೆದು-ಕೊಳ್ಳುವ ಬಗ್ಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಚರ್ಚಿಸಲಿದ್ದಾರೆಂದು ವರದಿಯಾಗಿರುವುದನ್ನು ಸುದ್ದಿಗಾರರೊಬ್ಬರು ಇಂದು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರ ಗಮನಕ್ಕೆ ತಂದಾಗ 'ಹಿಂತೆಗೆದುಕೊಳ್ಳುವ ಅಗತ್ಯವೇನೂ ಇಲ್ಲ' ಎಂದರು.

• ದಿಕ್ಕೆಟ್ಟ ಈಜಿಪ್ಟ್ ಸೇನೆಗಾಗಿ ತುರ್ತು ಪರಿಹಾರ ಸಾಮಗ್ರಿ ರವಾನೆ

ಟೆಲ್ ಅವಿವ್, ಅ. 30– ಆಹಾರ ಸಾಮಗ್ರಿ, ವೈದ್ಯಕೀಯ ನೆರವು ಮುಂತಾದ ತುರ್ತು ಪರಿಹಾರ ಸಾಮಗ್ರಿ ಹೊತ್ತ 30 ದೋಣಿಗಳು, ಹತ್ತು ಲಾರಿಗಳು ಸೂಯೆಜ್ ಪೂರ್ವ ತೀರದಾಚೆ ದಿಕ್ಕೆಟ್ಟು ನಿಂತಿರುವ ಈಜಿಪ್ಟಿನ ಮೂರನೇ ಪಡೆ ಇರುವ ಸ್ಥಳವನ್ನು ಸೇರಿದವು.

ತುರ್ತು ನೆರವಿಗೆ ಇನ್ನೂ 60 ಟ್ರಕ್ಕುಗಳು ಸೂಯೆಜ್ ಪೂರ್ವ ದಂಡೆಯನ್ನು ತಲುಪುವ ಹಾದಿಯಲ್ಲಿವೆ ಎಂದು ವಿಶ್ವಸಂಸ್ಥೆ ವಕ್ತಾರರು ತಿಳಿಸಿದ್ದಾರೆ.

ಹುಲಿಗಳ ಹೆಚ್ಚಳದ ಸಂಭ್ರಮದ ಸಮಯದಲ್ಲೇ ನಡೆಯುತ್ತಿದೆ ಅವುಗಳ ಭವಿಷ್ಯದ ಚರ್ಚೆ

ದೇಶ ಎಷ್ಟು ಹುಲಿ ಪೋಷಿಸಬಹುದು?

ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ದೇಶದಲ್ಲಿ 1973ರಲ್ಲಿ ಹುಲಿ ಯೋಜನೆ ಪ್ರಾರಂಭ ಆದಾಗ ಇದ್ದ ಹುಲಿಗಳ ಸಂಖ್ಯೆ 1,827. ಐವತ್ತು ವರ್ಷಗಳ ನಂತರ ಅವುಗಳ ಸಂಖ್ಯೆ 3,167ಕ್ಕೆ ಏರಿದೆ. ಇದೇ ಅವಧಿಯಲ್ಲಿ ಹುಲಿ ಯೋಜನಾ ಪ್ರದೇಶಗಳ ಸಂಖ್ಯೆ 9ರಿಂದ 53ಕ್ಕೆ ಏರಿದೆ. ಹುಲಿಗಳ ಸಂಖ್ಯೆಯ ಹೆಚ್ಚಳದ ಸಂಭ್ರಮದ ಸಮಯದಲ್ಲೇ ಮುಂದಿನ ದಶಕಗಳಲ್ಲಿ ಅವುಗಳ ಭವಿಷ್ಯಕ್ಕೆ ಸಂಬಂಧಿಸಿ ವ್ಯಾಪಕ ಚರ್ಚೆಗಳೂ ನಡೆಯುತ್ತಿವೆ.

ನಮ್ಮ ದೇಶದ ಅರಣ್ಯಗಳು ಒಟ್ಟಾರೆಯಾಗಿ ಎಷ್ಟು ಹುಲಿಗಳನ್ನು ಪೋಷಿಸಬಹುದೆಂಬುದು ಈ ಚರ್ಚೆಯ ಒಂದು ಮುಖ್ಯ ವಿಷಯ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಮತ್ತು ಗ್ಲೋಬಲ್ ಟೈಗರ್ ಫೋರಂ ಅಭಿಪ್ರಾಯದಂತೆ ನಮ್ಮ ಅರಣ್ಯ-ಗಳಲ್ಲಿ ಬದುಕಬಹುದಾದ ಹುಲಿಗಳ ಗರಿಷ್ಠ ಸಂಖ್ಯೆ 3,500ರಿಂದ 4,000. ಆದರೆ ವನ್ಯಜೀವಿ ವಿಜ್ಞಾನಿಗಳು ಇದನ್ನು ಒಪ್ಪುವುದಿಲ್ಲ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ 2018ರ ವರದಿಯಂತೆ ನಮ್ಮ ದೇಶದ ಶೇ 50ರಷ್ಟು ಹುಲಿ ಸಂರಕ್ಷಣಾ ಯೋಜನಾ ಪ್ರದೇಶಗಳ ನಿರ್ವಹಣೆ, ಕಾರ್ಯಾಚರಣೆಯ ಕಾರ್ಯಕ್ಷಮತೆ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯಿದೆ. 18 ಹುಲಿ ಸಂರಕ್ಷಣಾ ಪ್ರದೇಶಗಳಲ್ಲಿ ಹುಲಿಗಳ ದಟ್ಟಣೆ 100 ಚ.ಕಿ.ಮೀಗೆ ಕೇವಲ ಒಂದು! ನಾಲ್ಕು ಹುಲಿಯೋಜನೆಯ ಕ್ಷೇತ್ರದಲ್ಲಿ ಹುಲಿಗಳೇ ಇರಲಿಲ್ಲ. ಹುಲಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ದೇಶದ ಕೆಲವು ಭಾಗಗಳಲ್ಲಿ ಮಾತ್ರ. ಹೀಗಾಗಿ ಎಲ್ಲ 53 ಹುಲಿ ಯೋಜನೆಗಳ ಪ್ರದೇಶಗಳನ್ನು ವ್ಯವಸ್ಥಿತವಾದ, ವೈಜ್ಞಾನಿಕ ನಿರ್ವಹಣೆಗೆ ಒಳಪಡಿಸಿದರೆ, 75,796 ಚ.ಕಿ.ಮೀ.ಗಳ ಒಟ್ಟು ವಿಸ್ತೀರ್ಣದ ಪ್ರದೇಶದಲ್ಲೇ ಸುಮಾರು 5,000 ಹುಲಿಗಳು ಬದುಕುವುದು ಸಾಧ್ಯ. ಇದರೊಂದಿಗೆ ದೇಶದಲ್ಲಿ ಹುಲಿಗಳಿಗೆ ಸೂಕ್ತ ನೆಲೆಯನ್ನೊದಗಿಸಬಲ್ಲ 3.8 ಲಕ್ಷ ಚ.ಕಿ.ಮೀ.ಗಳಷ್ಟು ಅರಣ್ಯವಿದ್ದರೂ ಬದುಕಿ, ಸಮರ್ಥವಾಗಿ ಸಂತತಿಯನ್ನು ಮುಂದುವರಿಸಬಲ್ಲ ಹುಲಿ ಸಂಕುಲಗಳಿರುವುದು 50,000 ಚ.ಕಿ.ಮೀ. ಪ್ರದೇಶದ ಅರಣ್ಯಗಳಲ್ಲಿ ಮಾತ್ರ. ಹೀಗಾಗಿ ಹುಲಿ ಯೋಜನಾ ಪ್ರದೇಶಗಳಲ್ಲಿ, ಅದರ ಹೊರಗಿನ ಸಂರಕ್ಷಿತ ಪ್ರದೇಶಗಳಲ್ಲಿ ಮತ್ತು ಇತರ ಅರಣ್ಯಗಳಲ್ಲಿ, ಅರಣ್ಯ ಮತ್ತು ವನ್ಯಜೀವಿ ನಿರ್ವಹಣಾ ವಿಧಾನಗಳಲ್ಲಿ ಬದಲಾವಣೆಗಳನ್ನು ತಂದಲ್ಲಿ ಹುಲಿಗಳ ಸಂಖ್ಯೆಯನ್ನು 10 ಸಾವಿರದಿಂದ 15 ಸಾವಿರದವರೆಗೂ ಹೆಚ್ಚಿಸಲು ಅವಕಾಶಗಳಿವೆ. ಛತ್ತೀಸಗಢ, ಒಡಿಶಾ, ಜಾರ್ಖಂಡ್, ಅರುಣಾಚಲ ಪ್ರದೇಶ ಮತ್ತು ಮಿಜೋರಾಂನಲ್ಲಿರುವ ಹುಲಿಗಳ ಆವಾಸದಲ್ಲಿ, ಹುಲಿ ಮತ್ತು ಅದರ ಬಲಿಪ್ರಾಣಿಗಳ ನಡುವಿನ ಸಂಬಂಧವನ್ನು ವೈಜ್ಞಾನಿಕವಾಗಿ ನಿರ್ವಹಿಸಿದರೆ ಹುಲಿಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಬಹುದೆಂಬುದು ವಿಜ್ಞಾನಿಗಳ ವಾದ.

ಹುಲಿಗಳು ವಿಶಾಲ ಭೂಪ್ರದೇಶದ ಪ್ರಾಣಿಗಳು. ಸುಮಾರು ಎರಡು ವರ್ಷಗಳ ಕಾಲ ತಾಯಿಯೊಂದಿಗೆ ಬದುಕುವ ಮರಿಗಳು ಅನಂತರ ತಮ್ಮ ಜನ್ಮಕ್ಷೇತ್ರ-ದಿಂದ ದೂರಕ್ಕೆ ಚೆದರುತ್ತವೆ. ಈ ಚೆದರುವಿಕೆ ಹುಲಿಗಳ ಜೀನೀಯ ವೈವಿಧ್ಯದ ಆರೋಗ್ಯಕ್ಕೆ ಬಹು ಮುಖ್ಯ. ಹುಲಿಗಳಿರುವ ವಿವಿಧ ಅರಣ್ಯಗಳ ನಡುವಿನ ಸಂಪರ್ಕದ ಕೊಂಡಿದಾರಿಯಲ್ಲಿ (ಕಾರಿಡಾರ್) ಅಡೆತಡೆಗಳಿಲ್ಲದಿದ್ದಾಗ ಹುಲಿಗಳ ಸಂಚಾರ ಸುಗಮವಾಗುತ್ತದೆ. ಇದರೊಡನೆ ಸಂರಕ್ಷಿತ ಪ್ರದೇಶಗಳ ಹೊರಗಿರುವ ಶೇ 30ರಷ್ಟು ಹುಲಿಗಳ ಸಂಚಾರಕ್ಕೂ ಕೊಂಡಿದಾರಿಗಳು ಅಗತ್ಯ. ಸಣ್ಣ ವಿಸ್ತೀರ್ಣದ ಸಂರಕ್ಷಿತ ಪ್ರದೇಶವನ್ನು ಅಕ್ಕಪಕ್ಕದ ಅರಣ್ಯಗಳೊಂದಿಗೆ ಕೊಂಡಿದಾರಿಗಳ ಮೂಲಕ ಜೋಡಿಸುವುದರಿಂದ ಒಳತಳೀಕರಣದಿಂದ(ಇನ್‌ಬ್ರೀ-ಡಿಂಗ್) ಹುಲಿಗಳು ಕಣ್ಮರೆಯಾಗುವ ಪ್ರಮಾಣವನ್ನು ಶೇ 70 ರಷ್ಟು ಕಡಿಮೆ ಮಾಡಬಹುದು ಎಂಬುದನ್ನು ಸಂಶೋಧನೆಗಳು ತೋರಿಸಿಕೊಟ್ಟಿವೆ. ಮುಂಬರುವ ದಶಕಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾಗಿ ಅನುಷ್ಠಾನಗೊಳ್ಳಲಿರುವ ಅಭಿವೃದ್ಧಿ ಯೋಜನೆಗಳು, ಈ ಕೊಂಡಿದಾರಿಗಳನ್ನು ಕತ್ತರಿಸಿ, ಹುಲಿಸಂಕುಲಗಳನ್ನು ಸಣ್ಣ ಅರಣ್ಯ ಪ್ರದೇಶಗಳಿಗೆ ಸೀಮಿತಗೊಳಿಸದಂತೆ ನೋಡಿಕೊಳ್ಳುವುದು ಬಹುದೊಡ್ಡ ಸವಾಲಾಗಿದೆ.

ಹುಲಿಗಳ ಸಂರಕ್ಷಣೆ ಮತ್ತು ಅರಣ್ಯದಂಚಿನ ಸಮುದಾಯಗಳ ಜೀವನೋಪಾಯ ಮಾರ್ಗಗಳ ನಡುವೆ ಆರೋಗ್ಯಕರ ಸಂಬಂಧವನ್ನು ರೂಪಿಸಿ, ಕಾಪಾಡುವುದು ಮತ್ತೊಂದು ಮುಖ್ಯ ಸವಾಲು. ಈ ದಿಕ್ಕಿನಲ್ಲಿ ನಡೆದಿರುವ ಸ್ಥಳೀಯ ಸಮುದಾಯಗಳ ಸಹಭಾಗಿತ್ವದ ಪ್ರಯೋಗಗಳನ್ನು ಎಲ್ಲ ಅರಣ್ಯಗಳಿಗೂ ವಿಸ್ತರಿಸಬೇಕು. ಉದಾಹರಣೆಗೆ ಮಹಾರಾಷ್ಟ್ರದ ತಡೋಬಾ ಹುಲಿ ಸಂರಕ್ಷಣಾ ಪ್ರದೇಶದಲ್ಲಿ, ವನ್ಯಜೀವಿ ಪ್ರವಾಸೋದ್ಯಮದಿಂದ ದೊರೆತ ಸುಮಾರು ₹12 ಕೋಟಿಗಳಷ್ಟು ವರಮಾನವನ್ನು ಅಲ್ಲಿನ 94 ಹಳ್ಳಿಗಳೊಂದಿಗೆ ಹಂಚಿ-ಕೊಳ್ಳಲಾಗಿದೆ. ತಡೋಬಾ, ಪೆಂಚ್, ಬೋರ್ ಮತ್ತು ಉಮ್ರೆಡ್‌ಖಾರ್ ಹಂಡ್ಲಾ ಸಂರಕ್ಷಿತ ಪ್ರದೇಶಗಳ 25,000 ಕುಟುಂಬಗಳಿಗೆ ಎಲ್‌ಪಿಜಿ ಅನಿಲ ಮತ್ತು ಸ್ಟವ್‌ಗಳನ್ನು ಒದಗಿಸುವ ವೆಚ್ಚವನ್ನು ಹುಲಿ ಪ್ರವಾಸೋದ್ಯಮ ಭರಿಸುತ್ತಿದೆ. ವನ್ಯಜೀವಿ ಸಫಾರಿ ನಡೆಸುವ ಜವಾಬ್ದಾರಿಯನ್ನು ದೇವಡಾ ಮತ್ತು ಅಗರ್ಝರಿ ಹಳ್ಳಿಗಳ ತರಬೇತಿ ಪಡೆದ ಯುವಕರಿಗೆ ನೀಡಲಾಗಿದೆ. ಅದರಿಂದ ದೊರೆತ ವರಮಾನವು ಹಳ್ಳಿಗಳ ಪರಿಸರ ಅಭಿವೃದ್ಧಿ ಸಮಿತಿ ಯೋಜನೆಗಳಿಗೆ ಬಳಕೆಯಾಗುತ್ತಿದೆ.

ಹುಲಿಗಳ ಸಂಖ್ಯೆ ಹೆಚ್ಚಾದಂತೆ ಅರಣ್ಯದೊಳಗಿನ ಮತ್ತು ಅರಣ್ಯದಂಚಿನ ಜನಸಮುದಾಯಗಳ ಜೊತೆಗಿನ ಸಂಘರ್ಷದ ಪ್ರಕರಣಗಳೂ ಹೆಚ್ಚುತ್ತವೆ. ಅವುಗಳನ್ನು ಕಡಿಮೆ ಮಾಡಲು ಲಭ್ಯವಿರುವ ಅತಿಮುಖ್ಯ ಸಂರಕ್ಷಣಾ ಕಾರ್ಯೋಪಾಯವೆಂದರೆ, ಉತ್ತಮ ಜೀವನ, ಸೌಲಭ್ಯಗಳನ್ನು ಅರಸಿ ಸ್ವಇಚ್ಛೆಯಿಂದ ಅರಣ್ಯದಿಂದ ಹೊರಬರಲು ಆಶಿಸುವ ಅರಣ್ಯವಾಸಿಗಳಿಗೆ ಆಕರ್ಷಕ ಪ್ರೋತ್ಸಾಹ-ಕಗಳನ್ನು ಒದಗಿಸುವುದು. ಕರ್ನಾಟಕದಲ್ಲಿ ಈ ರೀತಿ ಸ್ವಇಚ್ಛೆಯಿಂದ ಹೊರಬಂದು ಬದುಕು ಕಟ್ಟಿಕೊಂಡ 500 ಕುಟುಂಬಗಳಿವೆ. ಸದ್ಯದಲ್ಲಿ ದೇಶದಾದ್ಯಂತ ಕುಂಟುತ್ತ ಸಾಗಿರುವ ಈ ಯೋಜನೆಗೆ ಅಗತ್ಯ ಆರ್ಥಿಕ ಸಂಪನ್ಮೂಲ ಒದಗಿಸುವುದರ ಮೂಲಕ ಭವಿಷ್ಯದಲ್ಲಿ ಸಂಘರ್ಷದ ಪ್ರಕರಣಗಳನ್ನು ನಿಯಂತ್ರಿಸಬೇಕಾಗಿದೆ. ಸಂರಕ್ಷಿತ ಪ್ರದೇಶದ ಹೊರಗೆ ಕಂಡುಬರುವ ಸಂಘರ್ಷದ ಪ್ರಕರಣಗಳಿಗೆ, ಆಯಾ ಸ್ಥಳ ನಿರ್ದಿಷ್ಟವಾದ ಕಾರ್ಯೋಪಾಯ-ಗಳನ್ನು ಜಾರಿಗೆ ತರುವ ಅಗತ್ಯವಿದೆ. ಇದನ್ನು ಸಾಧಿಸಲು ಪ್ರತಿಯೊಂದು ಹುಲಿ ಯೋಜನಾ ಪ್ರದೇಶದಲ್ಲೂ, ಸ್ಥಳೀಯ ಸಮಸ್ಯೆಗಳ ಪರಿಚಯವಿರುವ, ಅನುಭವಸ್ಥ ವನ್ಯಜೀವಿ ವಿಜ್ಞಾನಿಗಳನ್ನು ಯೋಜನೆಯ ಭಾಗವಾಗಿ ನೇಮಿಸಿಕೊಳ್ಳಬೇಕೆಂಬುದು ಪರಿಣತರ ಒತ್ತಾಯ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅಧಿಕಾರಿಶಾಹಿ ಮನೋಭಾವದ ಕಾರ್ಯವೈಖರಿಯ ಬಗ್ಗೆ ವನ್ಯಜೀವಿ ವಿಜ್ಞಾನಿಗಳ ವಲಯದಲ್ಲಿ ಅಸಮಾಧಾನವಿದೆ. ಹುಲಿಗಳ ಸ್ಥಿತಿಗತಿಯ ನಿಗಾವಣೆ, ಗಣತಿ, ಸಂಶೋಧನೆ, ಶೈಕ್ಷಣಿಕ ಕಾರ್ಯಕ್ರಮಗಳು, ಪ್ರವಾಸೋದ್ಯಮ, ಸಮುದಾಯಗಳ, ಹುಲಿಗಳ ಸ್ಥಳಾಂತರದಂಥ ಸರ್ವಸಮಸ್ತ ಚಟುವಟಿಕೆಗಳೂ ಪ್ರಾಧಿಕಾರದಸರ್ಕಾರಿಅಧಿಕಾರಿಗಳಮೇಲ್ವಿಚಾರಣೆಯಲ್ಲೇ ನಡೆಯಬೇಕಾದ ಉಸಿರುಗಟ್ಟಿಸುವ ಪರಿಸ್ಥಿತಿಯಲ್ಲಿ ಸ್ವತಂತ್ರ ಮನೋಭಾವದ, ಪ್ರತಿಭಾವಂತ ವಿಜ್ಞಾನಿಗಳು ದೂರ ಉಳಿದಿದ್ದಾರೆ. ಪ್ರಾಧಿಕಾರದ ಅಧ್ಯಕ್ಷ ಸ್ಥಾನವನ್ನು ಕೇಂದ್ರ ಸರ್ಕಾರದ ಅರಣ್ಯ ಸಚಿವರ ಬದಲಿಗೆ ಅನುಭವಸ್ಥ ವನ್ಯಜೀವಿ ವಿಜ್ಞಾನಿಗೆ ನೀಡಬೇಕು. ಹುಲಿ ಸಂರಕ್ಷಣೆಯಲ್ಲಿ ಅತ್ಯುತ್ತಮ ಪರಿಣತಿಯಿರುವ ತಜ್ಞರನ್ನು ಪ್ರಾಧಿಕಾರದ ಸದಸ್ಯರಾಗಿ ನೇಮಿಸಬೇಕು. ಪ್ರಾಧಿಕಾರಕ್ಕೆ ನಿಯೋಜನೆಯ ಮೇಲೆ ಬರುವ ಸರ್ಕಾರಿ ಅಧಿಕಾರಿಗಳಿಗೆ, ಹುಲಿ ಸಂರಕ್ಷಣೆ, ನಿರ್ವಹಣೆಗೆ ಸಂಬಂಧಿಸಿ ಮೂರು ತಿಂಗಳ ಕ್ಷೇತ್ರಾಧಾರಿತ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕೆಂಬ ಸಲಹೆಗಳನ್ನು ವನ್ಯಜೀವಿ ವಿಜ್ಞಾನಿಗಳು ನೀಡಿದ್ದಾರೆ.

ಹುಲಿ ಸಂರಕ್ಷಣೆಗೆ ಪ್ರಬಲವಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಆಯಾಮಗಳಿವೆ. ಭವಿಷ್ಯದ ಹುಲಿ ಸಂರಕ್ಷಣಾ ಕಾರ್ಯಕ್ರಮಗಳನ್ನು ರೂಪಿಸಿ, ಜಾರಿಗೊಳಿಸುವಾಗ ಅರಣ್ಯಗಳ ಸುತ್ತಲಿನ ಜನರ ಸಾಮಾಜಿಕ, ಆರ್ಥಿಕ ನಿರೀಕ್ಷೆ, ಆಕಾಂಕ್ಷೆಗಳನ್ನೂ ಗಮನ-ದಲ್ಲಿಟ್ಟುಕೊಂಡು, ಎಲ್ಲ ಅಭಿವೃದ್ಧಿ ಯೋಜನೆಗಳನ್ನೂ ಸಾರಾಸಗಟಾಗಿ ತಿರಸ್ಕರಿಸದೇ, ಸಾಧ್ಯವಾದ ಕಡೆಗಳಲ್ಲಿ ಅವುಗಳಿಗೆ ಪರ್ಯಾಯ ಮಾರ್ಗಗಳನ್ನು ಹುಡುಕಬೇಕಾದ ಅಗತ್ಯವಿದೆ. ಸಂರಕ್ಷಣೆಯ ಕೆಲಸಗಳು ವಿಜ್ಞಾನದ ಭದ್ರ ಬುನಾದಿಯ ಮೇಲೆ ನಿಂತು, ವ್ಯಾವಹಾರಿಕ ಜಾಣ್ಮೆಯನ್ನು ಒಳಗೊಂಡಾಗ ಮಾತ್ರ ಸಂರಕ್ಷಣೆಯ ಪ್ರಯತ್ನಗಳು ಸಫಲವಾಗುತ್ತವೆ. ಹುಲಿಗಳ ಸಂರಕ್ಷಣೆ ಮತ್ತು ಪುನಶ್ಚೇತನದ ಜವಾಬ್ದಾರಿ ಹೊತ್ತಿರುವ ಹುಲಿಸಂರಕ್ಷಣಾ ಪ್ರಾಧಿಕಾರ ಮತ್ತು ದೇಶದ ಎಲ್ಲ ಅರಣ್ಯ ಇಲಾಖೆಗಳು, ಕಳೆದ ಐದು ದಶಕಗಳ ಸಂಶೋಧನೆಗಳಿಂದ ದೊರೆತಿರುವ ವೈಜ್ಞಾನಿಕ ಕೌಶಲ, ಪರಿಣತಿ ಮತ್ತು ಅಮೂಲ್ಯ ಮಾಹಿತಿಯನ್ನು ಮುಂದಿನ ದಶಕಗಳಲ್ಲಿ ಸಮರ್ಥವಾಗಿ ಬಳಸಿಕೊಳ್ಳಬೇಕಾದ ಅಗತ್ಯವಿದೆ.

ಚುರುಮುರಿ



ಹೂಳು–ಗೋಳು

• ಲಿಂಗರಾಜು ಡಿ.ಎಸ್.

'ಇದೇನು ರೋಸು ಸಾ, ಆಗಲೇ ಭಿನ್ನಮತವಂತೆ!' ಅಂತ ಬೇಜಾರು ಮಾಡಿದೆ.

'ಇವೆಲ್ಲಾ ರಾಜಕೀಯದ ಹೂಳು ಕನ್ರೋ. ಒಂದೊಂದು ಪಕ್ಷ ಅಧಿಕಾರಕ್ಕೆ ಬಂದಂಗೆ ವ್ಯವಸ್ಥೇಲಿ ಭ್ರಷ್ಟಾಚಾರದ ಹೂಳು ಹೆಚ್ಚಿ ಸತ್ಯದ ಜಲ ಇಂಗಿ ಹೋಯ್ತದೆ' ತುರೇಮಣೆ ವಿಶ್ಲೇಷಣೆ ಆರಂಭಿಸಿದರು.

'ಅದೆಂಗೆ ಈ ಮಾಮೇರಿ ರೋಸೆಲ್ಲಾ ಹೂಳು ಅಂತೀರ ಸಾ?' ಅಂತ ಕೇಳಿದೆ.

'ನೋಡ್ಲಾ, 'ನೀವು ಹರಿಶ್ಚಂದ್ರನಾ? ಆಣೆ ಮಾಡ್ರೀ!' ಅಂತ ಒಬ್ಬರು, 'ವರ್ಗಾವಣೆ, ನೇಮಕಾತಿ ಕಾಸು ಎಲ್ಲೋಯ್ತು?' ಅಂತ ಇನ್ನೊಬ್ಬರು ಹೂಳು ತುಂಬ್ತರೆ' ಅಂದ್ರು ತುರೇಮಣೆ.

'ಹೂ ಕನೋ 'ನಮ್ಮ ಅನ್ನಕ್ಕೆ ನಿಮ್ಮ ಮಸಾಲೆ ಯಾಕೆ? ಬರೀ ಮುದ್ದೆ ಉಂಡುದ್ದಷ್ಟೇ. ಹುದ್ದೆ ಬಗ್ಗೆ ಮಾತಾಡಿಲ್ಲ' ಅಂತ ಅಡ್ಡಗ್ಯಾನ ಮಾಡ್ತರೆ. ಇನ್ನೊಬ್ರು 'ನಾವು ಪಕ್ಷದ ಬಲವರ್ಧನೆ ಬಗ್ಗೆ ಚರ್ಚೆ ಮಾಡಿದ್ದೀವಿ. ಅಷ್ಟಿಯೇ!' ಅಂದವ್ರೆ! ಇದರ ಮಧ್ಯೆ ಜನರ ಗೋಳು ಕೇಳೋರಿಲ್ಲ' ಅಂತ ಯಂಟಪ್ಪಣ್ಣ ವಿಶ್ಲೇಷಿಸಿತು.

'ಈರುಳ್ಳಿ ರೇಟು ನೂರರ ಹತ್ತಿರ ಅದೆ, ಮಳೆ-ಬೆಳೆ ಕೊರತೆ, ಟ್ರಾಫಿಕ್ ರಗಳೆ, ವಿದ್ಯುತ್ ಕ್ಷಾಮ! ದಿನಸಿ ರೇಟು ಅಟ್ಟ ಏರಿ ಕೂತದೆ! ಜನ ಸೀದು ಸೀಕಲಾಗ್ಯವರೆ!' ಅಂದೆ ನಾನು.

'ಜನ ಬರದಲ್ಲೂ ಖುಷಿಯಾಗ್ಯವರೆ ಅಂತ ರಾಜಕಾರಣಿಗಳು ಒಗ್ಗರಣೆ ಹಾಕದು ಬುಟ್ಟು ಕಣ್ಣಿಂದ ಬಣ್ಣದ ಕನ್ನಡಕ ತಗೆದು ಜನದ ಕಷ್ಟ ನೋಡಬೇಕು' ಚಂದ್ರು ಉಪದೇಶ ಕೊಟ್ಟ.

'ಸಾ, ವನ್ಯಜೀವಿಗಳಿಗೆ ಸಂಬಂಧಿಸಿದ ವನ್ನೆಲ್ಲಾ ವಾಪಾಸ್ ಕೊಡಬಕಂತೆ. ವನ್ಯಜೀವಿಗಳು ಎಲ್ಲವೆ ಸಾ ಈಗ!' ಅಂತ ವಿಷಯ ಬದಲಾಯಿಸಿದೆ.

'ಇದೇನ್ಲಾ ಹಿಂಗದೀಯೆ, ಎಲ್ಲಾ ವನ್ಯಜೀವಿಗಳೂ ರಾಜಕೀಯದ ಪಡಸಾಲೆ ಮೂಲೆ ಮುಡುಕಲ್ಲೆಲ್ಲಾ ಸೇರಿಕ್ಯಂದು ನಮ್ಮನ್ನ ವೈನಾಗಿ ಕೆತ್ತತಾವಲ್ಲೋ! ಇನ್ನೇನು ಉಳಿದದೆ ವಾಪಾಸ್ ಕೊಡಕ್ಕೆ!' ಅಂತ ಒಳೇಟು ಕೊಟ್ಟರು.

ಸಂಗತ

ಕನ್ನಡವೂ ವಿಜ್ಞಾನ ಸಂವಹನವೂ

ಕನ್ನಡದಲ್ಲಿ ವಿಜ್ಞಾನದ ಫಲಪ್ರದ ಸಂವಹನಕ್ಕೆ ಸಂಕಲ್ಪಿಸೋಣ

• ಯೋಗಾನಂದ

ವಿಜ್ಞಾನವು ಮನುಷ್ಯ ಜೀವನದ ಒಂದು ಮುಖ್ಯ ಭಾಗ. ಅದು ಜನಮಾನಸಕ್ಕೆ ಎಟುಕಬೇಕಾದ ಅನಿವಾರ್ಯ ಇದೆ. ಶಾಲೆ–ಕಾಲೇಜುಗಳಲ್ಲಿ ವಿಜ್ಞಾನ ಬೋಧನೆಯೇನೋ ಬಿರುಸಾಗಿದೆ. ಪ್ರಯೋಗಾಲಯ-ಗಳು, ಭರಪೂರ ವಿಜ್ಞಾನ ಗ್ರಂಥಗಳುಳ್ಳ ಗ್ರಂಥಾಲಯಗಳು ಇವೆ, ಲ್ಯಾಪ್‌ಟಾಪ್‌ಗಳು ಮಿಂಚುತ್ತಿವೆ. ಆದರೆ, ವಿದ್ಯಾರ್ಥಿಗಳು ವಿಜ್ಞಾನವನ್ನು ಸಮರ್ಥವಾಗಿ ಕಲಿಯುತ್ತಿದ್ದಾರೆ ಎನ್ನುವುದನ್ನು ಈ ಅನುಕೂಲಗಳು ಸಾಬೀತುಪಡಿಸವು. ಶ್ರದ್ಧಾಸಕ್ತಿಯಿಂದ ವಿದ್ಯಾಲಯದಲ್ಲಿ ಕಲಿತದ್ದು, ಅಭ್ಯಾಸ ಮಾಡಿದ್ದು ಅವರಿಗೆ ಮನನವಾಗುವುದು ಮಾತ್ರವಲ್ಲದೆ, ಜನಸಾಮಾನ್ಯರ ಸಾಮಾನ್ಯ ಜ್ಞಾನವಾದಾಗಲೇ ಅದರ ಸಾರ್ಥಕ್ಯ.

ವಿಜ್ಞಾನ ನಿರಂತರ ಮುನ್ನಡೆಯುತ್ತಿದೆ. ವಿಜ್ಞಾನವು ಇಂಗ್ಲಿಷಿನಲ್ಲಿ ಮೊದಲು ಲಭಿಸುತ್ತದೆ. ತದನಂತರ ವಿಶ್ವದ ಇತರೆ ಭಾಷೆಗಳಿಗೆ ಸಲ್ಲುವುದು. ಅಷ್ಟು ಹೊತ್ತಿಗಾಗಲೆ ಇನ್ನಷ್ಟು ಸಂಶೋಧನೆಗಳು, ಆವಿಷ್ಕಾರಗಳು ಆಗಿರುತ್ತವೆ ಎನ್ನುವುದು ಬೇರೆ ಮಾತು. ಎಷ್ಟು ತ್ವರಿತವಾಗಿ ಅದು ತರ್ಜುಮೆಯಾಗಿ ಪ್ರಸರಣವಾಗುವುದೊ ಅಷ್ಟು ಉತ್ತಮ. ಭಾರತದಲ್ಲಿ ಶೇಕಡ 12ರಷ್ಟು ಜನ ಮಾತ್ರ ಇಂಗ್ಲಿಷ್ ಮಾತನಾಡಬಲ್ಲರು, ಬರೆಯಬಲ್ಲರು. ಹಾಗಾಗಿ ಭಾರತೀಯ ಭಾಷೆಗಳು ವಿಜ್ಞಾನ ಭಾಷೆಗಳೂ ಆಗಬೇಕಿವೆ. ಕನ್ನಡದ ಸಂದರ್ಭವನ್ನು ಅವಲೋಕಿಸಿದರೆ, ತರಗತಿಯ ಹೊರಗೆ ವಿದ್ಯಾರ್ಥಿಗಳು ಶೈಕ್ಷಣಿಕ ವಿಚಾರಗಳನ್ನೂ ಒಳಗೊಂಡಂತೆ ಎಲ್ಲವನ್ನೂ ಮಾತನಾಡುವುದು ಕನ್ನಡದಲ್ಲೇ! ವಿಜ್ಞಾನ ಕಲಿಕೆಗೆ ಇಂಗ್ಲಿಷ್ ಹೇಳಿಮಾಡಿಸಿದ ಭಾಷೆ ಎನ್ನುವುದು ಭ್ರಮೆ. ಕನ್ನಡಕ್ಕೆ ವಿಜ್ಞಾನ ಸಾಹಿತ್ಯಕ ಅಭಿವ್ಯಕ್ತಿಯಾಗುವ ಎಲ್ಲ ಅರ್ಹತೆಗಳಿದ್ದರೂ ಇಂಗ್ಲಿಷಿಗೆ ಜೋತುಬೀಳುವ ಪ್ರವೃತ್ತಿ ಮುಂದುವರಿದಿದೆ.

ಇಂಗ್ಲಿಷಿನಿಂದ ಅಥವಾ ಯಾವುದೇ ಅನ್ಯ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸುವಾಗ ಹಿನ್ನೆಲೆ ಗ್ರಹಿಸದಿದ್ದರೆ ಆಭಾಸ ಕಟ್ಟಿಟ್ಟ ಬುತ್ತಿ. ಎಷ್ಟೋ ವೇಳೆ, ಸಾಕ್ಷರರಿಗಿಂತ ನಿರಕ್ಷರರೇ ಕನ್ನಡದಲ್ಲಿ ಸೊಗಸಾಗಿ ವಿಜ್ಞಾನವನ್ನು ಪ್ರಸರಿಸಬಲ್ಲರು ಎನ್ನಿಸುತ್ತದೆ. ಗಾದೆಗಳ ಮೂಲಕ ಅವರು ವಿಜ್ಞಾನವನ್ನು ಸಂದರ್ಭಗೊಳಿಸುವ ಪರಿ ಅಚ್ಚರಿ ಮೂಡಿಸುತ್ತದೆ.

ವಿಜ್ಞಾನ ಬೋಧಕರು ತೀರಾ ಪಠ್ಯಕ್ಕಂಟಿಕೊಳ್ಳದೆ ದಿನನಿತ್ಯದ ನಿದರ್ಶನಗಳನ್ನೇ ಆಡುಮಾತಿನಲ್ಲಿ ನೀಡಿದರೆ ಮಕ್ಕಳು ಸುಲಭವಾಗಿ ಗ್ರಹಿಸುತ್ತಾರೆ. ಹೊಲ, ಗದ್ದೆಗಳಲ್ಲಿ ಮಕ್ಕಳನ್ನು ರವಷ್ಟಾದರೂ ಅಡ್ಡಾಡಿಸದಿದ್ದರೆ 'ಭತ್ತದ ಮರ', 'ಗೆಣಸಿನ ಗೊಂಚಲು' ನಮೂನೆಯ ಎಡವಟ್ಟುಗಳು ಆದಾವು! ಅಕ್ಕಿಯ ಮೇಲೆ ಮೂರು ಬೆರಳು ನೀರಿನ ಮಟ್ಟವಿದ್ದರೆ ಅನ್ನ ಮಲ್ಲಿಗೆ ಹೂವಿನಂತೆ ಆಗುವುದೆಂಬ ಅನುಭವ ಪಾಕವಿಧಾನ ಮನೆಮಾತು.

1858ರಲ್ಲೇ ಕನ್ನಡದಲ್ಲಿ 'ಗಣಿತ ವಿಜ್ಞಾನ' ಎಂಬ ಕೃತಿಯನ್ನು ಮಂಗಳೂರಿನ ಜರ್ಮನ್ ಪ್ರೆಸ್ ಹೊರತಂದಿತ್ತು. ನಂತರ 1871ರಲ್ಲಿ ಪ್ರಾಣಿಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಇತ್ತೀಚೆಗೆ ಯುವ ವಿಜ್ಞಾನ ಬರಹಗಾರರ ಸಂಖ್ಯೆ ಹೆಚ್ಚುತ್ತಿದೆ. ಸಾಹಿತ್ಯಾಂಕ ಮತ್ತು ವಿಜ್ಞಾನಾಂಕ ಜೋಡೆತ್ತಿನಂತೆ ಸಾಗಬಹುದೆಂಬ ಭರವಸೆ ಮೂಡಿದೆ. ನವಕರ್ನಾಟಕ ಪ್ರಕಾಶನ ಸಂಸ್ಥೆ ತನ್ನ ಐವತ್ತರ ಸಂಭ್ರಮಕ್ಕೆ ಕಳಶವಿಟ್ಟಂತೆ 'ವಿಜ್ಞಾನ-ತಂತ್ರಜ್ಞಾನ ಪದಸಂಪದ'ವನ್ನು 2011ರಲ್ಲಿ ಹೊರತಂದಿತು. 884 ಪುಟಗಳ ಈ ಕೃತಿ ನಿಘಂಟೆನ್ನುವುದಕ್ಕಿಂತಲೂ ಒಂದು ವಿಶ್ವಕೋಶವೇ ಆಗಿದೆ. ಇನ್ನಷ್ಟು ಪದಗಳ ಸೇರ್ಪಡೆಯಾಗಬೇಕೆನ್ನುವ ಸಂಸ್ಥೆಯ ಹಂಬಲ ಅದರ ಬದ್ಧತೆಗೆ ಹಿಡಿದ ಕನ್ನಡಿ. ವಿಜ್ಞಾನವನ್ನು ಜನಪ್ರಿ-ಯಗೊಳಿಸುವುದೆಂದರೆ? ಬಗೆ ಬಗೆಯ ವಿಜ್ಞಾನದ ಹೊಳಹು, ಅರಿವು, ಗ್ರಹಿಕೆ ಹಾಗೂ ಸಂಶೋಧನೆ-ಗಳನ್ನು ವಿಜ್ಞಾನ ತಿಳಿದವರು ವಿಜ್ಞಾನ ಪರಿಣತರಲ್ಲ-ದವರಿಗೆ ಅರ್ಥವಾಗುವಂತೆ ಸಾದರಪಡಿಸುವುದು. ವಿಜ್ಞಾನವನ್ನು ಜನಪ್ರಿಯಗೊಳಿಸುವುದು ಮಹತ್ತರ ಸಾಂಸ್ಕೃತಿಕ ಹೊಣೆಗಾರಿಕೆ.

ವೈಜ್ಞಾನಿಕ ಚಿಂತನಾಮಾರ್ಗ ಹಸನಾಗುವಂತೆ ವಿಜ್ಞಾನವನ್ನು ಜನರಿಗೆ ತಲುಪಿಸುವ ಕ್ರಿಯೆಯ ಪರಿಷ್ಕರಣೆಯೂ ಆಗಿಂದಾಗ್ಗೆ ಆಗಬೇಕಿದೆ. ಇದು ಲಿಖಿತ ಸಾಹಿತ್ಯದ ಮೂಲಕವೇ ಆಗಬೇಕೆಂದಿಲ್ಲ. ಮೌಖಿಕ ಸಾಹಿತ್ಯದ ಮೂಲಕವೂ ಆದೀತು. ಬೀದಿನಾಟಕ, ಯಕ್ಷಗಾನ, ಲಾವಣಿ, ನೃತ್ಯ, ಕೇಳಿಕೆ, ಕಥೆ, ಹಾಡು ಮುಖಾಂತರವೂ ಆಗಬಹುದು. ಕ್ರಿ.ಪೂ. 4ನೇ ಶತಮಾನದ ಖಗೋಳತಜ್ಞ ಯುಡೋಕ್ಸಸ್ ಎಂಬಾತನ ಸಾಧನೆ ಪ್ರಖರವಾದರೂ ಜನಪ್ರಿಯಗೊಳ್ಳಲಿಲ್ಲ. ಆದರೆ, ಒಂದು ಶತಮಾನದ ನಂತರ ಹಿಪ್ಪರ್ಕಸ್ ಎಂಬ ಹವ್ಯಾಸಿ ಕವಿ ರಚಿಸಿದ 'ಫಿನೊಮೆನ' ಎಂಬ ಹಾಡಿನ ಮೂಲಕವಷ್ಟೆ ಅದರ ಮೌಲ್ಯ ಅರ್ಥವಾಗಿದ್ದು. ವಿಜ್ಞಾನ ಲೇಖಕರಿಗೆ ಸ್ಪಷ್ಟತೆ ಇರಬೇಕು. ಸಂಕ್ಷಿಪ್ತತೆಗೆ ಭಂಗ ತರುವ ಅನಗತ್ಯ ರೂಪಕ ಮತ್ತು ಹೋಲಿಕೆಗಳಿಗೆ ಲಗತ್ತಾಗದಂತೆ ಎಚ್ಚರ ವಹಿಸಬೇಕು. ವಿಜ್ಞಾನ ಸಂವಹನ ಮುಖ್ಯವಾಗಬೇಕೆ ವಿನಾ ಪ್ರಭಾವ, ಪಾಂಡಿತ್ಯ ಪ್ರದರ್ಶನವಲ್ಲ. ಸರಳ ಭಾಷೆಯೇ ಜನಪ್ರಿಯ ವಿಜ್ಞಾನ ಭಾಷೆ. ಇಂಗ್ಲಿಷಿನಿಂದ ಕನ್ನಡಕ್ಕೆ ತರುವಾಗ ಪಾರಿಭಾಷಿಕ ಪದಗಳು ಸಮಸ್ಯೆಯೇನೂ ಅಲ್ಲ. ತೀರಾ ಮಡಿವಂತಿಕೆ ತೋರದೆ ಕೆಲವನ್ನು ಹಾಗೆಯೇ ಉಳಿಸಿಕೊಳ್ಳಬಹುದು. 'ಅಯಾನು', 'ಐಸೊಟೋಪ್', 'ಫ್ರಿಜ್'... ಇದ್ದಂತೆ ಉಳಿಸಿಕೊಂಡ ಪದಗಳಿಗೆ ಉದಾಹರಣೆಗಳು. ಗಿಯರ್ ವ್ಹೀಲ್ 'ಹಲ್ಲು ಚಕ್ರ' ಆಗುವ ಆಭಾಸಕ್ಕಿಂತ ಅಂತೆಯೇ ಇದ್ದರಾಯಿತಲ್ಲ.

ವಿಜ್ಞಾನ ಸಂಗತಿಗಳನ್ನು ಜನಸಾಮಾನ್ಯರು ಅರ್ಥೈಸಿಕೊಳ್ಳಲಾರರೆಂದೇ ಕೆಲವು ವಿಜ್ಞಾನಿಗಳು ಭಾವಿಸುತ್ತಾರೆ. ಆದರೆ, ವಿಜ್ಞಾನಿಗಳು ತಾಂತ್ರಿಕ ಪದಗಳ ಗಡಿಬಿಡಿಯಿಲ್ಲದೆ ಸಂವಹನವನ್ನು ಉಭಯಕುಶಲೋ-ಪರಿಯಂತೆ ನಿರ್ವಹಿಸಿದರೆ ಖಂಡಿತ ಜನ ಇಷ್ಟಪಡು-ತ್ತಾರೆ. ಚಂದ್ರನ ಮೇಲೆ ಭಾರತವು ಅನ್ವೇಷಣಾ ವಾಹನ ಇಳಿಸಿರುವ ಯಶಸ್ಸಿನ ಹಾಗೂ ರಾಜ್ಯಕ್ಕೆ ಕರ್ನಾಟಕ ನಾಮಕರಣವಾಗಿ ಐದು ದಶಕಗಳು ಸಂದ ಸಡಗರ ಈಗ. ಈ ಉತ್ಸಾಹಕ್ಕೆ ಕನ್ನಡದಲ್ಲಿ ವಿಜ್ಞಾನದ ಫಲಪ್ರದ ಸಂವಹನಕ್ಕೆ ಸಂಕಲ್ಪಿಸೋಣ.

ವಾಚಕರ ವಾಣಿ

ಗಾಳಿಯಲ್ಲಿ ಗುಂಡು ಹೊಡೆಯುವುದು ಬೇಡ

ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಅಭದ್ರತೆ ಕಾಡುತ್ತಿದೆ ಎಂಬರ್ಥದ ಮಾತುಗಳನ್ನು ಸಚಿವರು ಹಾಗೂ ಆಡಳಿತ ಪಕ್ಷದ ಶಾಸಕರೇ ಮತ್ತೆ ಮತ್ತೆ ಹೇಳುತ್ತಿದ್ದಾರೆ. ಸಂಖ್ಯಾಬಲವಿದ್ದರೂ ಆಪರೇಷನ್ ಕಮಲದ ಭೀತಿ ಎದುರಾಗಿದೆ. 'ಕೆಲವು ಶಾಸಕರಿಗೆ ₹ 50 ಕೋಟಿ ಮತ್ತು ಸಚಿವ ಸ್ಥಾನದ ಆಮಿಷ ಒಡ್ಡಲಾಗಿದೆ. ಅದಕ್ಕೆ ಪೂರಕವೆಂಬಂತೆ ವಿಡಿಯೊ ಮತ್ತು ಆಡಿಯೊ ಸಾಕ್ಷ್ಯಗಳಿವೆ' ಎಂದು ಕಾಂಗ್ರೆಸ್ ಶಾಸಕ ರವಿ ಗಣಿಗ ಹೇಳಿದ್ದಾರೆ.

ಸರಳ ಬಹುಮತಕ್ಕೆ ಬೇಕಾದುದಕ್ಕಿಂತ ಹೆಚ್ಚಿನ ಶಾಸಕರನ್ನು ಹೊಂದಿರುವ ಸರ್ಕಾರವೊಂದನ್ನು ಅಲುಗಾಡಿಸುವುದು ಅಷ್ಟು ಸುಲಭವಲ್ಲವೆಂದು ಅನ್ನಿಸಿದರೂ ಬಿಜೆಪಿ ಈ ಹಿಂದೆ ನಡೆದುಕೊಂಡ ರೀತಿಯು ಇದ್ದರೂ ಇರಬಹುದೇನೋ ಎಂಬ ಅನುಮಾನಗಳಿಗೆ ಕಾರಣವಾಗುತ್ತದೆ. ಆದರೆ, ಸಂಖ್ಯಾಬಲದ ದೃಷ್ಟಿಯಿಂದ ನೋಡಿದರೆ ಆಗಿನ ಸ್ಥಿತಿಯೇ ಬೇರೆ. ಈಗಿನ ಸ್ಥಿತಿಯೇ ಬೇರೆ. 2019ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ನಾಯಕತ್ವ ಇತ್ತು. ಅವರನ್ನು ನಂಬಿ ಕೆಲವು ಶಾಸಕರು ಪಕ್ಷಾಂತರ ಮಾಡಿದರು. ಈಗ ಕೇಸರಿ ಪಾಳಯದಲ್ಲಿ ಅಂತಹ ನಾಯಕತ್ವ ಇಲ್ಲ.

ಆಮಿಷ ಒಡ್ಡಿರುವ ವಿಷಯವನ್ನು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ ಎಂದು ಶಾಸಕ ರವಿ ಹೇಳಿದ್ದಾರೆ. ನಿಜವಿದ್ದಲ್ಲಿ, ಲೋಕಾಯುಕ್ತ ಸಂಸ್ಥೆಗೂ ದೂರು ಕೊಡಬೇಕು. ಇಲ್ಲದೆ ಹೋದರೆ ಗಮನವನ್ನು ಬೇರೆಡೆ ಸೆಳೆಯಲು ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸ ಎಂದು ಜನ ಭಾವಿಸುವ ಸಾಧ್ಯತೆಯೇ ಹೆಚ್ಚು.

ಮಣಿಕಂಠ ಪಾ. ಹಿರೇಮಠ, ಹಂಪಿ

ಜಲಸಾಕ್ಷರತೆಗೆ ಬೇಕು ಜನಾಂದೋಲನ

'ಜೀವಜಲದ ಬಗ್ಗೆ ಎಚ್ಚರವಿರಲಿ, ಇಲ್ಲದೆ ಇದ್ದರೆ ಜಲಕ್ಷಾಮ ಉಂಟಾಗುತ್ತದೆ' ಎಂದು ಡಾ.ಕೆ.ಎಸ್. ಚೈತ್ರ ಅವರು ತಮ್ಮ ಲೇಖನದಲ್ಲಿ (ಸಂಗತ, ಅ.30) ಪ್ರಸ್ತಾಪಿಸಿದ್ದಾರೆ. ಜಲಸಾಕ್ಷರತೆ ಹಾಗೂ ಅನುಷ್ಠಾನದಿಂದ ನೀರಿನ ಕೊರತೆ ನೀಗಿಸಬಹುದು. ಎಲ್ಲರೂ ನಿತ್ಯ ಅನುಸರಿಸಬಹುದಾದ ಸರಳ ವಿಧಾನಗಳು ಇಂತಿವೆ. 1.ಮನೆ ತಾರಸಿ ಮೇಲೆ ಬೀಳುವ ಪರಿಶುದ್ಧ ಮಳೆನೀರಿನ ಸಂಗ್ರಹ, ಸಂಗ್ರಹಿಸಿದ ನೀರನ್ನು ಶೋಧಿಸಿ, ಬಳಕೆ ಮಾಡುವುದು. 2. ಸ್ನಾನ ಮಾಡಿದ, ಬಟ್ಟೆ ಒಗೆದ ನೀರನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಪುನರ್‌ಬಳಕೆ ಮಾಡುವುದು– ಶೌಚಾಲಯ ಬಳಕೆಗೆ, ಮನೆ ಒರೆಸಲು, ವಾಹನಗಳನ್ನು ತೊಳೆಯಲು, ತಾರಸಿ ತೋಟ ಹಾಗೂ ಉದ್ಯಾನಕ್ಕೆ ಬಳಸುವುದು. 3. ಮಹಾತ್ಮ ಗಾಂಧಿ ಅವರ ಸಲಹೆಯಂತೆ ಶೌಚಾಲಯದ ನೀರನ್ನು ಜೈವಿಕ ಅನಿಲ ಘಟಕಕ್ಕೆ ಸೇರಿಸಿ ಇಂಧನ ಪಡೆದ ನಂತರ ಇಂಗು ಗುಂಡಿಗೆ ಸೇರಿಸಿ ಗೊಬ್ಬರ ಕೂಡ ಪಡೆಯಬಹುದು. 4. ನೀರು ಸೋರುವಿಕೆ ತಡೆಗಟ್ಟುವುದು. 5. ನೀರಿನ ವೆಚ್ಚ ಕಡಿತಗೊಳಿಸುವುದು.

ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

ನಿಲ್ಲದ ಚಕ್ರ

ಅಧಿಕಾರಕ್ಕೇರುವುದೊಂದೇ
ರಾಜಕಾರಣಿಗಳ
ಮೂಲಮಂತ್ರ
ಹುದ್ದೆ ಸ್ಥಾನಮಾನಗಳಿಗಾಗಿ
ನಡೆಸುತ್ತಾರೆ
ನಿತ್ಯ ಪ್ರತಿತಂತ್ರ
ಮರುಳಾದ ಮತದಾರನಿಗೆ
ತಿಳಿಯುವಷ್ಟರಲ್ಲಿವರ
ಈ ಕುತಂತ್ರ
ಮಗದೊಂದು ಚುನಾವಣೆಗೆ
ಹೆಣೆಯಲಾರಂಭಿಸುತ್ತಾರೆ
ಹೊಸ ಷಡ್ಯಂತ್ರ!

ಆನಂದ ರಾಮತೀರ್ಥ
ಜಮಖಂಡಿ

ಪ್ರಶ್ನಿಸುವುದು ತಪ್ಪೇ?

'ಶಾಲೆಯಲ್ಲಿ ರಾಮಾಯಣ ಕಲಿಸಿ' (ಪ್ರ.ವಾ., ಅ.29) ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿಕೆ ನೀಡಿ, 'ರಾಮಾಯಣವನ್ನು ಪ್ರಶ್ನಿಸುವಂತಹ, ನಮ್ಮ ನಂಬಿಕೆಗಳನ್ನು ಅವಮಾನಿಸುವಂತಹ ಕೃತ್ಯಗಳು ನಡೆಯುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆಧುನಿಕ ಪ್ರಜಾಪ್ರಭುತ್ವ ಮಾದರಿಯ ಶಿಕ್ಷಣ ವ್ಯವಸ್ಥೆಯು ಪ್ರಶ್ನಿಸುವ ಮನೋಭಾವದ ಮೇಲೆಯೇ ನಿಂತಿದೆ. ಪ್ರಶ್ನೆಗಳನ್ನು ಕೇಳುವ ಸ್ವಾತಂತ್ರ್ಯ ಇರಬಾರದೇ? ಇದನ್ನು ಶಾಸಕರು ಅರ್ಥಮಾಡಿಕೊಳ್ಳಬೇಕು. 'ಪ್ರಶ್ನಿಸುವುದರಿಂದಲೇ ನಾನು ತತ್ತ್ವಜ್ಞಾನಿಯಾದೆ'ಎಂದು ತತ್ತ್ವಜ್ಞಾನಿಯೊಬ್ಬರು ಹೇಳಿದ್ದಾರೆ! ಧಾರ್ಮಿಕ ನೆಲೆಯಲ್ಲಿ ರಾಮಾಯಣ ಬೋಧಿಸಲು ಮನೆಯಲ್ಲೇ ಮಕ್ಕಳಿಗೆ ವ್ಯವಸ್ಥೆ ಕಲ್ಪಿಸಬಹುದೇ ವಿನಾ ಶಾಲೆಯಲ್ಲಿ ಅಲ್ಲ. ಇಷ್ಟಕ್ಕೂ ರಾಮಾಯಣ, ಮಹಾಭಾರತ ಎಂಬ ಅದ್ಭುತ ಮಹಾ ಕಾವ್ಯಗಳು ಮನುಕುಲ ಇರುವವರೆಗೂ ಬೋಧಿಸಬೇಕಾದ ವಿಷಯಗಳೇ ಆಗಿವೆ. ಪ್ರಶ್ನಿಸಬಾರದೆನ್ನುವುದು ತಪ್ಪು.

ಶಿವಕುಮಾರ ಬಂಡೋಳಿ, ಹುಣಸಗಿ

ಎಲ್ಲರಿಗೂ ಬೇಕು ನೀರಿನ ಮಹತ್ವದ ಅರಿವು

'ಇದು ಜೀವಜಲ, ಇರಲಿ ಎಚ್ಚರ' ಲೇಖನಕ್ಕೆ ಪೂರಕವಾಗಿ ಪ್ರತಿಕ್ರಿಯೆ. ನೀರಿನ ಮಹತ್ವವು ಅದರ ಗೈರಿನಲ್ಲಿ ಅರಿವಾಗುತ್ತದೆ. ನೀರಿನ ಅಭಾವ ಎದುರಿಸುತ್ತಿರುವವರಿಗೆ ಮಾತ್ರ ಅದರ ಮೌಲ್ಯದ ಅರಿವಿರುತ್ತದೆ. ಒಂದು ದಿನ ನಲ್ಲಿ ತಿರುವಿದಾಗ ನೀರು ಬರದಿದ್ದರೆ ಆಗ ನೀರಿನ ಮೌಲ್ಯ ತಿಳಿಯುತ್ತದೆ. ಎಲ್ಲಿಯವರೆಗೆ ನಲ್ಲಿಯಲ್ಲಿ ನೀರು ಬರುತ್ತದೆಯೋ ಅಲ್ಲಿಯವರೆಗೆ ಅದರ ಪ್ರಾಮುಖ್ಯ ತಿಳಿಯುವುದಿಲ್ಲ. ಒಂದು ಬಡಾವಣೆಯಲ್ಲಿ ಎರಡು ಸಾವಿರ ನಿವೇಶನಗಳಿದ್ದು, ಎರಡು ಸಾವಿರ ಮನೆಗಳ ನಿರ್ಮಾಣ ಆದರೆ, ಅಲ್ಲಿ ಕನಿಷ್ಠ ಎರಡು ಸಾವಿರ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತದೆ. ಪ್ರತಿ ಮನೆಯವರು ಅವಶ್ಯಕತೆಗಿಂತಲೂ ಹಲವು ಪಟ್ಟು ಹೆಚ್ಚು ನೀರನ್ನು ಬಳಸುತ್ತಾರೆ. ಪ್ರತಿದಿನ ಬೆಳಿಗ್ಗೆ ವಾಯುವಿಹಾರದ ಸಮಯದಲ್ಲಿ ಗಮನಿಸಿದರೆ, ಅವಶ್ಯಕತೆ ಇಲ್ಲದಿದ್ದರೂ ಕಾರು ತೊಳೆಯುವುದು, ಮನೆ ಮುಂದಿನ ಕಾಂಕ್ರೀಟ್ ಅಂಗಳ ತೊಳೆಯುವುದು, ಒತ್ತುವರಿ ಮಾಡಿ ತೋಟ ಮಾಡುವುದು ಕಾಣಿಸುತ್ತದೆ. ಇದರಿಂದ ಬಹಳಷ್ಟು ನೀರು ಪೋಲಾಗುವುದು ತಿಳಿಯುತ್ತದೆ. ಇದಕ್ಕೆಲ್ಲ ಪರಿಹಾರವಿಲ್ಲವೇ? ಒಂದು ಬಡಾವಣೆಯಲ್ಲಿ ಸಮುದಾಯ ಕೊಳವೆಬಾವಿ, ಓವರ್‌ಹೆಡ್ ಟ್ಯಾಂಕ್ ಮೂಲಕ ನೀರಿನ ಪೂರೈಕೆ ಸಾಧ್ಯವಿಲ್ಲವೇ? ಮನೆಗೊಂದು ಬೋರ್ ಹಾಕುವುದಕ್ಕೆ ಪರ್ಯಾಯವಿಲ್ಲವೇ?

ಟಿ.ವಿ.ಬಿ. ರಾಜನ್, ತಲಘಟ್ಟಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಾರದಲ್ಲಿ 70 ಗಂಟೆ ಕೆಲಸ

ಕೆಲವರ ಬೆಂಬಲ ಹಲವರ ಆಕ್ರೋಶ

ದೇಶವನ್ನು ಮುಂದಕ್ಕೆ ತರಲು ವಾರದಲ್ಲಿ 70 ಗಂಟೆ ದುಡಿಯಬೇಕು ಎಂಬ ಸಲಹೆಯನ್ನು ಹಲವು ಉದ್ಯಮಿಗಳು ಬೆಂಬಲಿಸುತ್ತಿದ್ದಾರೆ. ದುಡಿಯುವ ವರ್ಗವು ಇದು ಶೋಷಣೆ ಎಂದು ಹೇಳುತ್ತಿದೆ. ವಾರವೆಲ್ಲಾ ಹೀಗೆ ದುಡಿದರೆ ಉತ್ಪಾದಕತೆ ಕುಸಿದು, ದೇಶದ ಆರ್ಥಿಕತೆಗೆ ಧಕ್ಕೆಯಾಗುತ್ತದೆ ಎನ್ನುತ್ತಿದೆ ವೈದ್ಯಲೋಕ. ವಾರಕ್ಕೆ 70 ಗಂಟೆ ದುಡಿಯಬೇಕು ಎಂಬುದೂ ಕಾನೂನುಬಾಹಿರವೂ ಹೌದು

'ಬೆಂಗಳೂರು ಟ್ರಾಫಿಕ್‌ನಲ್ಲಿ ಕೆಲಸಕ್ಕೆ ಹೋಗಿದ್ದೀರಾ?'

ಐಟಿ ಉದ್ಯಮವು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದೆ. ಇಲ್ಲಿನ ಐಟಿ ಕಂಪನಿಗಳಿಗೆ ಕೆಲಸಕ್ಕೆ ಹೋಗಿ, ಮನೆಗೆ ಬರಲೇ ನಾಲ್ಕು ತಾಸು ಬೇಕು. ಹೀಗಿರುವಾಗ 14 ತಾಸು ಕೆಲಸ, 4 ತಾಸು ಪ್ರಯಾಣ ಮಾಡಬೇಕಾಗುತ್ತದೆ. ನೀವು ಎಂದಾದರೂ ಹೀಗೆ ಮಾಡಿದ್ದೀರಾ ಎಂದು ಟ್ವಿಟರ್‌ನಲ್ಲಿ ಹಲವರು ಪ್ರಶ್ನಿಸಿದ್ದಾರೆ

ಪ್ರಜಾವಾಣಿ ವಾರ್ತೆ

ಇನ್ಫೊಸಿಸ್ ಸಹ ಸಂಸ್ಥಾಪಕರಾದ ಎನ್. ಆರ್.ನಾರಾಯಣಮೂರ್ತಿ ಅವರು ಈಚೆಗೆ ಸಂದರ್ಶನವೊಂದರಲ್ಲಿ ಮಾತನಾಡುತ್ತಾ, ಭಾರತವು ಆರ್ಥಿಕವಾಗಿ ಉತ್ತುಂಗಕ್ಕೆ ಏರಿದ ಶಕ್ತಿಯಾಗಬೇಕಾದರೆ ಯುವಜನರು ವಾರವೊಂದರಲ್ಲಿ 70 ತಾಸು ದುಡಿಯಬೇಕು ಎಂದು ಹೇಳಿದ್ದರು. ಅವರ ಈ ಮಾತು ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡಮಟ್ಟದ ಸದ್ದು ಮಾಡಿದೆ. ಯುವಕರು ವಾರಕ್ಕೆ 70 ತಾಸು ದುಡಿಯಬೇಕು ಎಂಬುದನ್ನು ಕೆಲವರು ಬೆಂಬಲಿಸಿದರೆ, ಹಲವರು ವಿರೋಧಿಸುತ್ತಿದ್ದಾರೆ. ಇದು ಒಂದು ಚರ್ಚೆಯನ್ನು ಹುಟ್ಟುಹಾಕಿದೆ. ದೇಶದ ಮಾಹಿತಿ ತಂತ್ರಜ್ಞಾನ ವಲಯದಲ್ಲಿನ ದುಡಿಮೆಯ ಸಂಸ್ಕೃತಿ, ದುಡಿಮೆಯಲ್ಲಿನ ತೊಡಕುಗಳು ಮತ್ತು ವೇತನದ ಸ್ಥಿತಿಗತಿಯ ಬಗ್ಗೆಯೂ ಚರ್ಚೆಯನ್ನು ಈ ಮಾತು ಹುಟ್ಟುಹಾಕಿದೆ.

70 ತಾಸು ದುಡಿಯಬೇಕು ಎಂಬ ಮಾತಿಗೆ ಆಕ್ರೋಶ ವ್ಯಕ್ತವಾಗಿದೆ. ಸಾಮಾಜಿಕ ಕಾರ್ಯಕರ್ತರು, ಉದ್ಯೋಗಿಗಳು, ಐಟಿ–ಕೈಗಾರಿಕಾ ವಲಯದಲ್ಲಿ ದುಡಿಯುತ್ತಿರುವ ಸಾಮಾನ್ಯ ಜನರು ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆರಂಭದ ದಿನಗಳಲ್ಲಿ ನಾರಾಯಣಮೂರ್ತಿಯವರು ವಾರದಲ್ಲಿ 80–90 ತಾಸು ದುಡಿಯುತ್ತಿದ್ದರು ಎಂದು ಸುಧಾಮೂರ್ತಿ ಅವರು ನೀಡಿದ ಸಮರ್ಥನೆಗೂ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಬಹುತೇಕ ಮಂದಿ ಇದು ಶೋಷಣೆ ಮತ್ತು ಬಂಡವಾಳಶಾಹಿ ಮನಃಸ್ಥಿತಿ ಎಂದು ಕರೆದಿದ್ದಾರೆ.

2022ರಲ್ಲಿ ಕೇಂದ್ರ ಸರ್ಕಾರವು ಕಾರ್ಮಿಕ ಸಂಹಿತೆಯನ್ನು ಜಾರಿಗೆ ತಂದಿತು. ಆ ಪ್ರಕಾರ ಯಾವುದೇ ವ್ಯಕ್ತಿ ವಾರವೊಂದರಲ್ಲಿ ದುಡಿಯುವ ಒಟ್ಟು ಅವಧಿ 48 ಗಂಟೆಗಳನ್ನು ಮೀರಬಾರದು. ಅದು ದಿನಕ್ಕೆ 12 ತಾಸಿನಂತೆ ವಾರಕ್ಕೆ ನಾಲ್ಕು ದಿನ, ದಿನಕ್ಕೆ 9.6 ತಾಸಿನಂತೆ ವಾರಕ್ಕೆ ಐದು ದಿನ ಮತ್ತು ದಿನಕ್ಕೆ 8 ತಾಸಿನಂತೆ ವಾರಕ್ಕೆ ಆರು ದಿನ ಕೆಲಸ ಮಾಡಬಹುದು ಎಂದು ಕಾರ್ಮಿಕ ಸಂಹಿತೆ ಹೇಳುತ್ತದೆ. ಓವರ್‌ಟೈಮ್ ಪಾವತಿ ಇಲ್ಲದ ವಾರಕ್ಕೆ 48 ಗಂಟೆಗಿಂತ ಹೆಚ್ಚಿನ ಅವಧಿಯ ದುಡಿಮೆ ದಂಡಾರ್ಹ ಮತ್ತು ಶಿಕ್ಷಾರ್ಹ ಅಪರಾಧವಾಗುತ್ತದೆ. ಓವರ್‌ಟೈಮ್ ಪಾವತಿ ಇದ್ದರೂ ದಿನವೊಂದರ ದುಡಿಮೆಯ ಅವಧಿ 12 ತಾಸು ಮೀರಬಾರದು. ಆದರೆ ವಾರಕ್ಕೆ 70 ಗಂಟೆ ಆಗಬೇಕಾದರೆ ದಿನವೊಂದರಲ್ಲಿ 14 ತಾಸಿನಂತೆ ವಾರದಲ್ಲಿ ಐದು ದಿನ ದುಡಿಯಬೇಕು. ಅದೇ ರೀತಿ ವಾರದಲ್ಲಿ ಆರು ದಿನ 11.9 ತಾಸು ದುಡಿಯಬೇಕಾಗುತ್ತದೆ.

> ### ಅತಿ ಮಹತ್ವಾಕಾಂಕ್ಷೆ
> ವಾರದಲ್ಲಿ 70 ತಾಸು ದುಡಿಯಬೇಕು ಎಂಬುದು ಅತಿ ಮಹತ್ವಾಕಾಂಕ್ಷೆಯಾಗಿ ಹೋಯಿತು. ಕಷ್ಟಪಟ್ಟು ದುಡಿ ಎಂಬುದು, ಆರೋಗ್ಯವನ್ನು ಬಲಿಗೊಟ್ಟು ದುಡಿ ಎಂದರ್ಥವಲ್ಲ
>
> **ಡಾ.ಸುರಂಜಿತ್ ಚಟರ್ಜಿ,** ಅಪೋಲೊ ಆಸ್ಪತ್ರೆ, ದೆಹಲಿ

ವಾರಕ್ಕೆ 70 ತಾಸು ದುಡಿದರೆ ದೇಶವು ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹಲವು ಉದ್ಯಮಿಗಳು ಹೇಳಿದ್ದಾರೆ. ಆದರೆ, ಒಬ್ಬ ವ್ಯಕ್ತಿ ಅಷ್ಟು ತಾಸು ದುಡಿದರೆ ಅವನ ಆರೋಗ್ಯದಲ್ಲಿ ಏರುಪೇರಾಗುತ್ತದೆ, ಅವನ ಉತ್ಪಾದಕತೆ ಕುಸಿಯುತ್ತದೆ. ಇದು ಯಾವುದೇ ಉದ್ಯಮದ ಉತ್ಪಾದಕತೆಯನ್ನು ಕುಗ್ಗಿಸುತ್ತದೆ. ವಾರವೊಂದರಲ್ಲಿ 70 ತಾಸಿನಷ್ಟು ದುಡಿಮೆ ಮಾನವನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತದೆ ಎಂದು ಹಲವು ವೈದ್ಯರು ಸಾಮಾಜಿಕ ಜಾಲತಾಣಗಳಲ್ಲಿನ ಚರ್ಚೆಯಲ್ಲಿ ತಮ್ಮ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ. ಮಾನಸಿಕ ಒತ್ತಡ, ಹೃದಯ ಸಂಬಂಧಿ ಕಾಯಿಲೆಗಳು, ಬೊಜ್ಜು, ಅಧಿಕ ರಕ್ತದೊತ್ತಡದಂತಹ ಆರೋಗ್ಯದ ಸಮಸ್ಯೆಗಳು ತಲೆದೋರಬಹುದು. ಅಂತಿಮವಾಗಿ ಇದು ದೇಶದ ಪ್ರಗತಿಗೆ ಮಾರಕ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

ಬೆಂಬಲಿಸಿದವರು

ನಾರಾಯಣಮೂರ್ತಿ ಅವರ ಹೇಳಿಕೆಯನ್ನು ನಾನು ತುಂಬು ಹೃದಯದಿಂದ ಬೆಂಬಲಿಸುತ್ತೇನೆ. ಇದು ಶೋಷಣೆಯಲ್ಲ, ಬದಲಿಗೆ ಇದು ಸಮರ್ಪಣೆ. 2047ರ ವೇಳೆಗೆ ನಾವೆಲ್ಲರೂ ಹೆಮ್ಮೆ ಪಡಬಹುದಾದ ಆರ್ಥಿಕ ಸೂಪರ್‌ಪವರ್ ಆಗಿ ಭಾರತವನ್ನು ರೂಪಿಸಬೇಕಿದೆ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶಕ್ಕೆ ವಾರಕ್ಕೆ ಐದು ದಿನದ ದುಡಿಮೆಯ ಸಂಸ್ಕೃತಿ ಸರಿಹೊಂದುವುದಿಲ್ಲ. ನಮ್ಮ ಪ್ರಧಾನಿ ನರೇಂದ್ರ ಮೋದಿ ದಿನಕ್ಕೆ 14–16 ತಾಸು ದುಡಿಯುತ್ತಾರೆ. ನನ್ನ ತಂದೆ ವಾರದ ಏಳು ದಿನವೂ, ದಿನಕ್ಕೆ 12–14 ತಾಸು ದುಡಿಯುತ್ತಿದ್ದರು. ನಾನು ಪ್ರತಿದಿನ 10–12 ತಾಸು ದುಡಿಯುತ್ತೇನೆ. ನಾವು ನಮ್ಮ ಕೆಲಸದ ಬಗ್ಗೆ ಮತ್ತು ರಾಷ್ಟ್ರ ನಿರ್ಮಾಣದ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು

ಸಜ್ಜನ್ ಜಿಂದಾಲ್, ಜೆಎಸ್‌ಡಬ್ಲ್ಯು ಮುಖ್ಯಸ್ಥ

ನಾರಾಯಣಮೂರ್ತಿ ಅವರ ನಿಲುವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಕಡಿಮೆ ಕೆಲಸ ಮಾಡಿ, ಮೋಜುಮಾಡುವ ಸ್ಥಿತಿಯಲ್ಲಿ ನಾವಿಲ್ಲ. ಬದಲಿಗೆ ನಾವು ನಮ್ಮೆಲ್ಲಾ ಶಕ್ತಿಯನ್ನು ಒಗ್ಗೂಡಿಸಿ ದುಡಿಯಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಬೇರೆ ದೇಶಗಳು ಹಲವು ತಲೆಮಾರುಗಳಲ್ಲಿ ಸಾಧಿಸಿದ್ದನ್ನು ನಾವು ಒಂದೇ ತಲೆಮಾರಿನಲ್ಲಿ ಸಾಧಿಸಬೇಕಾದ ಸ್ಥಿತಿಯಲ್ಲಿದ್ದೇವೆ

ಭವೇಶ್ ಅಗರ್ವಾಲ್, ಒಲಾ ಕ್ಯಾಬ್ಸ್ ಸಿಇಒ

'ನಮ್ಮ ಯುವಕರು ಏನನ್ನೂ ಕಲಿಯುತ್ತಿಲ್ಲ'

ನಾರಾಯಣಮೂರ್ತಿ

'3ಒನ್‌4 ಕ್ಯಾಪಿಟಲ್' ನವೋದ್ಯಮದ ಯೂಟ್ಯೂಬ್ ಚಾನೆಲ್ ಅ.27ರಂದು ಆಯೋಜಿಸಿದ್ದ 'ದಿ ರೆಕಾರ್ಡ್' ಕಾರ್ಯಕ್ರಮದಲ್ಲಿ ನಾರಾಯಣ ಮೂರ್ತಿ ಅವರು ಮಾತನಾಡಿದ್ದರು. ಉದ್ಯಮಿ ಮೋಹನ್‌ದಾಸ್ ಪೈ ಅವರು ನಾರಾಯಣ ಮೂರ್ತಿ ಅವರ ಸಂದರ್ಶನ ನಡೆಸಿದ್ದರು. ಸ್ವಾತಂತ್ರ್ಯೋತ್ತರ ಭಾರತ, ಜವಾಹರ ಲಾಲ್ ನೆಹರೂ ಅವರ ಆಡಳಿತ ಮತ್ತು 1991ರ ಜಾಗತೀಕರಣದ ಬಗ್ಗೆಯೂ ಅವರು ಮಾತನಾಡಿದ್ದರು. ತಾವು ಸಮಾಜವಾದಿ ಸಿದ್ಧಾಂತ ಬಿಟ್ಟು ಬಂಡವಾಳಶಾಹಿ ಸಿದ್ಧಾಂತಕ್ಕೆ ಹೇಗೆ ಬದಲಾದೆ ಎಂದೂ ಹೇಳಿಕೊಂಡಿದ್ದರು. 1991ಕ್ಕೂ ಮೊದಲು ಭಾರತವು ಉದ್ಯಮಿಸ್ನೇಹಿ ಆಗಿರಲಿಲ್ಲ ಎಂದೂ ಅವರು ಸಂದರ್ಶನದಲ್ಲಿ ಹೇಳಿದ್ದರು.

ಇಷ್ಟೆಲ್ಲಾ ವಿಷಯಗಳ ಕುರಿತು ನಾರಾಯಣ ಮೂರ್ತಿ ಅವರು ಮಾತನಾಡಿದ್ದರೂ, 70 ಗಂಟೆಗಳ ದುಡಿಮೆ ಎನ್ನುವ ಮಾತು ಜನರು ಹೆಚ್ಚು ಆಕ್ರೋಶ ತೋರಲು ಕಾರಣವಾಯಿತು. ಹಾಗಾದರೆ, ನಾರಾಯಣ ಮೂರ್ತಿ ಅವರು ಈ ವಿಷಯದ ಕುರಿತು ಸಂದರ್ಶನದಲ್ಲಿ ಏನು ಹೇಳಿದ್ದರು ಎಂಬುದರ ಸಂಕ್ಷಿಪ್ತ ರೂಪ ಇಲ್ಲಿದೆ:

'ಸಣ್ಣಮಟ್ಟದಲ್ಲಿ ಇರಬಹುದು. ಆದರೆ, ನಾವು ಇದನ್ನು ಇನ್ಫೊಸಿಸ್‌ನಲ್ಲಿ ಮಾಡಿದ್ದೇವೆ. ಕಳೆದ 20–30 ವರ್ಷಗಳಲ್ಲಿ ಆರ್ಥಿಕವಾಗಿ ಉತ್ತುಂಗಕ್ಕೆ ಬೆಳೆದ ಚೀನಾ ಸೇರಿದಂತೆ ಹಲವು ದೇಶಗಳನ್ನು ಗಮನಿಸಬೇಕು. ಇಂಥ ಸ್ಥಿತಿಗೆ ತಲುಪಲು ಅವುಗಳನ್ನು ಸಾಧ್ಯವಾಗಿಸಿದ ನೀತಿಗಳನ್ನು ಗಮನಿಸಬೇಕು. ಹೀಗೆ ಮಾಡಿದರೆ, ನಮ್ಮ ದೇಶದ ಬೆಳವಣಿಗೆ ಸಾಧ್ಯ ಎಂಬುದು ನನ್ನ ನಂಬಿಕೆ.

'ಇಲ್ಲಿ ಇನ್ನೊಂದು ವಿಷಯವಿದೆ. ಪಶ್ಚಿಮದ ದೇಶಗಳ ಅಭ್ಯಾಸಗಳಿಂದ ನಮ್ಮ ಯುವಕರು ಏನನ್ನೂ ಕಲಿಯುತ್ತಿಲ್ಲ. ಆ ಮೂಲಕ ದೇಶಕ್ಕೆ ಯಾವ ಸಹಾಯವನ್ನೂ ಮಾಡುತ್ತಿಲ್ಲ. ಭಾರತದ ಉತ್ಪಾದಕತೆಯು ಜಗತ್ತಿನಲ್ಲೇ ಕಡಿಮೆ ಇದೆ. ಇದನ್ನು ಸರಿಪಡಿಸಿಕೊಳ್ಳದೆ, ಸರ್ಕಾರದಲ್ಲಿ ಭ್ರಷ್ಟಾಚಾರ ನಿಲ್ಲದೆ, ಅಧಿಕಾರಶಾಹಿಯು ತನ್ನ ನಿರ್ಧಾರಗಳನ್ನು ಕ್ಷಿಪ್ರವಾಗಿ ತೆಗೆದುಕೊಳ್ಳದಿದ್ದರೆ ನಾವು ಆರ್ಥಿಕವಾಗಿ ಪ್ರಬಲವಾಗಿರುವ ದೇಶಗಳೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲ.

'ಇದಕ್ಕಾಗಿಯೇ ನನ್ನ ಮನವಿ ಏನೆಂದರೆ, 'ಇದು ನನ್ನ ದೇಶ, ನಾನು ವಾರಕ್ಕೆ 70 ಗಂಟೆ ದುಡಿಯುತ್ತೇನೆ' ಎಂದು ನಮ್ಮ ಯುವಕರು ಹೇಳಬೇಕು. ವಿಶ್ವದ ಎರಡನೇ ಮಹಾಯುದ್ಧದ ಬಳಿಕ ಜರ್ಮನಿ ಹಾಗೂ ಜಪಾನ್ ಇದೇ ರೀತಿ ಮಾಡಿತು. 'ನಾವು ಹೊಸದಾಗಿ ನಮ್ಮ ದೇಶವನ್ನು ಕಟ್ಟಬೇಕು' ಎಂದು ಜರ್ಮನಿಯ ನಾಯಕ ಹೇಳಿದ. ಆಗ ಪ್ರತಿಯೊಬ್ಬ ಜರ್ಮನ್ ಕೂಡ ಕೆಲವು ವರ್ಷಗಳ ಕಾಲ ಕೆಲವು ಗಂಟೆಗಳ ಹೆಚ್ಚಿನ ದುಡಿಮೆ ಮಾಡಿದ.

'ನಮ್ಮ ದೇಶಕ್ಕೆ ಮೊದಲ ಬಾರಿಗೆ ಇಷ್ಟೊಂದು ಗೌರವ ದೊರೆಯುತ್ತಿದೆ. ಇದೇ ಸಮಯ, ನಾವು ಒಗ್ಗಟ್ಟಾಗಬೇಕು. ದೇಶದ ಪ್ರಗತಿಗೆ ವೇಗ ನೀಡಬೇಕು. ಇದನ್ನು ಸಾಧ್ಯವಾಗಿಸಲು ನಾವು ಹೆಚ್ಚು ಶ್ರಮ ಪಡಬೇಕು ಎಂದೆಲ್ಲಾ ನಮ್ಮ ಕಾರ್ಪೊರೇಟ್ ವಲಯದ ಮುಂದಾಳುಗಳು ನಮ್ಮ ಯುವಕರಿಗೆ ಹೇಳಬೇಕು. ನಾವು ಇದನ್ನೆಲ್ಲಾ ಮಾಡದೇ, ನಮ್ಮ ಅಸಹಾಯಕ ಸರ್ಕಾರ ಏನು ತಾನೆ ಮಾಡಲು ಸಾಧ್ಯ. ಬದಲಾವಣೆಗಳು ಯುವಕರಿಂದಲೇ ಆಗಬೇಕು. ನಮ್ಮ ಜನಸಂಖ್ಯೆಯ ಪ್ರಮುಖ ಭಾಗವಾದ ಯುವಕರೇ ನಮ್ಮ ದೇಶವನ್ನು ಕಟ್ಟಲು ಸಾಧ್ಯ. ಅವರು ನಮ್ಮ ದೇಶವನ್ನು ಹೆಚ್ಚು ಉತ್ಸಾಹದಿಂದ ಕಟ್ಟಬಹುದು'.

ತೀವ್ರ ವಿರೋಧ ಮತ್ತು ಆಗ್ರಹ

ಇವತ್ತು ದುಡಿ, ನಾಳೆ ಅನುಭವಿಸು ಎಂಬ ದಿನಗಳೆಲ್ಲಾ ಹೋಗಿವೆ. ಈ ರೀತಿ ಸುಮ್ಮನೇ ಬಡಬಡಿಸಬೇಡಿ. ನೌಕರರು ಹೆಚ್ಚು ತಾಸು ದುಡಿಯಬೇಕು ಎಂದು ಬಯಸುವುದಾದರೆ, ತಾಸಿನ ಲೆಕ್ಕದಲ್ಲಿ ಸಂಬಳ ನೀಡಿ. ದುಡಿಮೆ ಏಕಮುಖವಾಗಿರಬಾರದು

ಪಂಕಜ್ ಪಾಂಡೆ (@pp479w), ಖಾಸಗಿ ಕಂಪನಿಯೊಂದರ ಉದ್ಯೋಗಿ

ಇಡೀ ಜಗತ್ತು ವಾರದಲ್ಲಿ ನಾಲ್ಕು ದಿನ ದುಡಿಮೆಯತ್ತ ಹೊರಳುತ್ತಿದ್ದರೆ, ಇವರು ವಾರದ ಏಳು ದಿನವೂ ದುಡಿಯುವ ಮಾತನಾಡುತ್ತಿದ್ದಾರೆ. ಒಬ್ಬ ಉದ್ಯೋಗದಾತನಾಗಿ ಉದ್ಯೋಗಿಯಿಂದ ಗರಿಷ್ಠ ದುಡಿಮೆ ಮಾಡಿಸಿಕೊಳ್ಳುವುದು ಸರಿ ಎನಿಸುತ್ತದೆ. ಆದರೆ ಉದ್ಯೋಗಿಗಳ ಮಾನಸಿಕ ಆರೋಗ್ಯ ಏನಾಗಬೇಕು? ಅವರ ಕೌಟುಂಬಿಕ ಜೀವನ ಏನಾಗಬೇಕು?

ಕಮಲ್ ಕುಮಾರ್ (@kamalkumarBJD), ಖಾಸಗಿ ಕಂಪನಿ ಉದ್ಯೋಗಿ ಮತ್ತು ಬಿಜೆಡಿ ಕಾರ್ಯಕರ್ತ

ಮಹಿಳೆಯರ ಆಕ್ರೋಶ

ನಾರಾಯಣ ಮೂರ್ತಿ ಅವರ ಹೇಳಿಕೆಯು ಮಹಿಳಾ ಆಯಾಮವನ್ನೂ ಪಡೆದುಕೊಂಡಿದೆ. ಎಡೆಲ್ವೀಸ್ ಮ್ಯುಚುವಲ್ ಫಂಡ್‌ನ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ರಾಧಿಕಾ ಗುಪ್ತ ಅವರ 'ಎಕ್ಸ್' ಪೋಸ್ಟ್‌ವೊಂದರಿಂದ ಇಂಥದೊಂದು ಚರ್ಚೆ ಆರಂಭವಾಯಿತು. ಅವರ ಹೇಳಿಕೆ ಇಂತಿದೆ:

'ಕಚೇರಿ ಹಾಗೂ ಮನೆಯ ನಡುವೆ, ಭಾರತವನ್ನು ಕಟ್ಟಲು, ಮುಂದಿನ ಪೀಳಿಗೆಯನ್ನು ಬೆಳೆಸಲು ದೇಶದ ಹಲವು ಮಹಿಳೆಯರು ವಾರಕ್ಕೆ 70ಕ್ಕೂ ಹೆಚ್ಚು ಗಂಟೆಗಳ ದುಡಿಮೆ ಮಾಡುತ್ತಿದ್ದಾರೆ, ನಗುತ್ತಲೇ ಮತ್ತು ಯಾವುದೇ ಹೆಚ್ಚುವರಿ ಸಂಬಳದ ಆಕಾಂಕ್ಷೆ ಇಲ್ಲದೆ. ಕುತೂಹಲದ ವಿಷಯವೇನೆಂದರೆ, ಟ್ವಿಟರ್‌ನಲ್ಲಿ ನಡೆಯುತ್ತಿರುವ ಯಾವ ಚರ್ಚೆಯಲ್ಲಿಯೂ ಈ ವಿಷಯ ಉಲ್ಲೇಖವಿಲ್ಲ' ಎಂದಿದ್ದರು.

'ಇದರಿಂದ ಮಹಿಳೆಯರಂತೂ ಹೆಚ್ಚಿನ ಸಮಸ್ಯೆಗೆ ಒಳಗಾಗುತ್ತಾರೆ. ಬಹುಶಃ ಅವರಿಗೆ ಉದ್ಯೋಗವೋ ಅಥವಾ ಕುಟುಂಬವೋ ಎಂದು ಆಯ್ಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ತಲೆದೋರಬಹುದು' ಎನ್ನುವುದು ಬೆಂಗಳೂರಿನಲ್ಲಿ ಐಟಿ ಉದ್ಯೋಗದಲ್ಲಿ ಇರುವ ಮಹಿಳೆಯೊಬ್ಬರ ಅಭಿಪ್ರಾಯ.

ಮಕ್ಕಳನ್ನು ಬೆಳೆಸಲು ಸಮಯ ಸಿಗುತ್ತಿಲ್ಲ ಎಂಬುದೂ ಸೇರಿ ಹಲವು ಕೌಟುಂಬಿಕ ಕಾರಣಗಳಿಗಾಗಿ ಈಗಾಗಲೇ ಮಹಿಳೆಯರು ಉದ್ಯೋಗಕ್ಕೆ ರಾಜೀನಾಮೆ ನೀಡುತ್ತಿದ್ದಾರೆ. ಈ ಎಲ್ಲಾ ಕಾರಣದಿಂದಾಗಿ ಉದ್ಯೋಗದ ಸ್ಥಳಗಳಲ್ಲಿ ಮಹಿಳಾ ಸ್ನೇಹಿ ನೀತಿಗಳು ಇರಬೇಕು ಎಂದು ಚರ್ಚಿಸುತ್ತಿರುವ ಈ ಹೊತ್ತಿನಲ್ಲಿ ನಾರಾಯಣ ಮೂರ್ತಿ ಅವರು ಈ ಹೇಳಿಕೆಯು ಮಹಿಳೆಯರ ಭಾರಿ ಆಕ್ರೋಶಕ್ಕೆ ಕಾರಣವಾಗಿದೆ.

ಆಧಾರ: ಪಿಟಿಐ, ನಾರಾಯಣಮೂರ್ತಿ ಅವರ ಸಂದರ್ಶನ, 'ಎಕ್ಸ್' ಪೋಸ್ಟ್‌ಗಳು

ಸಿನಿ ಬಿಟ್ಸ್

'ಕ್ಯಾಪ್ಚರ್' ಮಾಡಲು ಬಂದ ಪ್ರಿಯಾಂಕಾ

ನಟಿ ಪ್ರಿಯಾಂಕಾ ಉಪೇಂದ್ರ ಅವರು ಮತ್ತೊಂದು ಹಾರರ್ ಸಿನಿಮಾ ಮೂಲಕ ತೆರೆ ಮೇಲೆ ಬರುತ್ತಿದ್ದಾರೆ. ಪ್ರಿಯಾಂಕಾ ಅವರ ಹೊಸ ಸಿನಿಮಾಗೆ 'ಕ್ಯಾಪ್ಚರ್' ಎಂದು ಶೀರ್ಷಿಕೆ ಇಡಲಾಗಿದೆ.

ಈ ಸಿನಿಮಾಗೆ 'ಮಮ್ಮಿ', 'ದೇವಕಿ' ಖ್ಯಾತಿಯ ನಿರ್ದೇಶಕ ಲೋಹಿತ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಪ್ರಿಯಾಂಕಾ ಮತ್ತು ಲೋಹಿತ್ ಅವರ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಮೂರನೇ ಸಿನಿಮಾ ಇದಾಗಿದೆ. ಸಿನಿಮಾವನ್ನು ನಟಿ ರಾಧಿಕಾ ಕುಮಾರಸ್ವಾಮಿ ಅವರ ಸಹೋದರ ರವಿರಾಜ್ ನಿರ್ಮಾಣ ಮಾಡುತ್ತಿದ್ದಾರೆ.

ಇತ್ತೀಚೆಗಷ್ಟೇ ಚಿತ್ರತಂಡವು ಸಿನಿಮಾದ ಟೈಟಲ್ ಪೋಸ್ಟರ್ ಅನ್ನು ವಿಭಿನ್ನವಾಗಿ ಬಿಡುಗಡೆಗೊಳಿಸಿತು. ವೀರೇಶ್ ಚಿತ್ರಮಂದಿರದ ಮುಂಭಾಗದಲ್ಲಿ ಪ್ರಿಯಾಂಕಾ ಉಪೇಂದ್ರ ಅವರ 60 ಅಡಿ ಕೌಟೌಟ್ ಪೋಸ್ಟರ್ ನಿಲ್ಲಿಸಿ, ಚಿತ್ರತಂಡ ಶೀರ್ಷಿಕೆ ಅನಾವರಣಗೊಳಿಸಿತು. ನಟರಾದ ಉಪೇಂದ್ರ ಹಾಗೂ ಪ್ರಜ್ವಲ್ ದೇವರಾಜ್ ಪೋಸ್ಟರ್ ಬಿಡುಗಡೆಗೊಳಿಸಿದರು. ಸಂಪೂರ್ಣ ಸಿನಿಮಾವನ್ನು ಸಿಸಿ ಟಿವಿ ಕಾನ್ಸೆಪ್ಟ್‌ನಲ್ಲಿ ಚಿತ್ರೀಕರಣ ಮಾಡಲಾಗಿದೆ. ಹೀಗಾಗಿ ವೀಕ್ಷಕರಿಗೆ ಈ ಸಿನಿಮಾ ವಿಭಿನ್ನವಾದ ಅನುಭವ ನೀಡಲಿದೆ ಎಂದಿದೆ ಚಿತ್ರತಂಡ. ಸಿನಿಮಾ ನವೆಂಬರ್‌ನಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ.

ನಾಳೆ 'ಗರಡಿ' ಟ್ರೈಲರ್ ಬಿಡುಗಡೆ

ಸೂರ್ಯ ಹಾಗೂ ಸೋನಲ್

ಯೋಗರಾಜ್ ಭಟ್ ನಿರ್ದೇಶನದ, ನಟ ಬಿ.ಸಿ.ಪಾಟೀಲ್ ನಿರ್ಮಾಣದ 'ಗರಡಿ' ಚಿತ್ರದ ಟ್ರೈಲರ್ ನ.1ರಂದು ರಾಣೆಬೆನ್ನೂರಿನಲ್ಲಿ ಬಿಡುಗಡೆಯಾಗಲಿದೆ. ರಾಣೆಬೆನ್ನೂರಿನ ಮುನ್ಸಿಪಲ್ ಗ್ರೌಂಡ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ನಟ ದರ್ಶನ್ ಟ್ರೈಲರ್ ಬಿಡುಗಡೆಗೊಳಿಸಲಿದ್ದಾರೆ.

ದರ್ಶನ್ ಅವರು ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದು, ಈ ಚಿತ್ರದ ಮೂಲಕ ನಟ ಸೂರ್ಯ ನಾಯಕನಾಗಿ ಬೆಳ್ಳಿತೆರೆಗೆ ಹೆಜ್ಜೆ ಇಡಲಿದ್ದಾರೆ. ಇವರಿಗೆ ಸೋನಲ್ ಮೊಂತೆರೋ ಜೋಡಿಯಾಗಿದ್ದಾರೆ. ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ನೀಡಿದ್ದು, ಸಿನಿಮಾ ನ.10ರಂದು ಬಿಡುಗಡೆಯಾಗುತ್ತಿದೆ.

ಸೌಮ್ಯ ಫಿಲ್ಮ್ಸ್ ಹಾಗೂ ಕೌರವ ಪ್ರೊಡಕ್ಷನ್ ಹೌಸ್ ಲಾಂಛನದಲ್ಲಿ ವನಜಾ ಪಾಟೀಲ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಚಿತ್ರಕ್ಕೆ ವಿ.ಹರಿಕೃಷ್ಣ ಸಂಗೀತ ನೀಡಿದ್ದಾರೆ. ನಿರಂಜನ್ ಬಾಬು ಛಾಯಾಚಿತ್ರಗ್ರಹಣ ಹಾಗೂ ಸುರೇಶ್ ಅರಸ್ ಅವರ ಸಂಕಲನ ಚಿತ್ರಕ್ಕಿದೆ. ಬಿ.ಸಿ.ಪಾಟೀಲ್, ರವಿಶಂಕರ್, ಧರ್ಮಣ್ಣ, ಸುಜಯ್ ಬೇಲೂರ್, ರಾಘವೇಂದ್ರ, ಚೆಲುವರಾಜ್, ತೇಜಸ್ವಿನಿ ಪ್ರಕಾಶ್, ನಯನ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ನಟಿ ನಿಶ್ವಿಕಾ ನಾಯ್ಡು ಚಿತ್ರದಲ್ಲಿ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬದುಕಿನ ಉದ್ದೇಶ

ನುಡಿ ಬೆಳಗು

ಪಿ. ಚಂದ್ರಿಕಾ

ಕಣ್ಣು ಮುಚ್ಚಿ ಮಲಗಿದ್ದ ಆ ಯುವಕನ ಸುತ್ತ ಮನೆಯ ಜನರೆಲ್ಲಾ ದುಃಖದಿಂದ ಕಾಯುತ್ತಾ ಕುಳಿತಿದ್ದರು. ಕಣ್ಣು ಬಿಟ್ಟ ಯುವಕನಿಗೆ ಆಶ್ಚರ್ಯ, 'ಇವರೆಲ್ಲಾ ಯಾಕೆ ಹೀಗೆ ನನ್ನ ಸುತ್ತ ಇದ್ದಾರೆ'ಎಂದು. ಅವನು ಮಾತನಾಡಲಿಕ್ಕೆ ಹೋದರೆ 'ಹುಷ್ ಮಾತಾಡಬೇಡ, ಈಗ ಮಾತ್ರವಲ್ಲ ಇನ್ನೆಂದಿಗೂ ಜಾಸ್ತಿ ಮಾತಾಡಬೇಡ' ಎಂದು ಅವನನ್ನು ತಡೆದರು. ಯುವಕನಿಗೆ ಏನಾಗುತ್ತಿದೆ ಎಂದು ಅರ್ಥವಾಗಲಿಲ್ಲ. ಡಾಕ್ಟರ್ ಅವನಿಗೆ ವಿವರಿಸಿದರು, 'ಕ್ಷಯ ಹೆಚ್ಚಾಗಿ ನಿನ್ನ ಶ್ವಾಸಕೋಶಗಳವರೆಗೂ ಹಬ್ಬಿದೆ. ಶ್ವಾಸಕೋಶದ ಒಂದು ಪುಪ್ಪುಸವನ್ನೇ ಆಪರೇಷನ್ ಮಾಡಿ ತೆಗೆಯಬೇಕು' ಎಂದರು. ಮನೆಯ ಜನರೆಲ್ಲರ ಕಣ್ಣಲ್ಲಿ ನೀರು. ಯುವಕನಿಗೂ ನೋವಾಯಿತು. ಡಾಕ್ಟರ್ ಹೇಳಿದರು, 'ನಿನಗೆ ಇನ್ನೂ ಒಂದು ಆಘಾತ. ಇನ್ನು ಮುಂದೆ ನೀನು ಜೋರಾಗಿ ಮಾತಾಡಲೂ ಬಾರದು' ಎಂದು.

ಆ ಯುವಕ ಆಗಷ್ಟೇ ಹಿಂದೂಸ್ಥಾನಿ ಸಂಗೀತಗಾರನಾಗಿ ಹೆಸರು ಮಾಡುತ್ತಿದ್ದ. ಹುಟ್ಟುತ್ತಲೆ ತನ್ನೊಂದಿಗೆ ಹಾಡಿನ ಮಾಂತ್ರಿಕ ದಂಡವನ್ನು ಹಿಡಿದೇ ಬಂದಿದ್ದ. ಅವನ ಕಂಠದಲ್ಲಿ ಗಂಧರ್ವರೇ ಕುಳಿತಿದ್ದಾರೆ ಎಂದು ಜನ ನಂಬಿದ್ದರು. ಅವನ ಹಾಡಿನ ಮೋಡಿಯಲ್ಲಿ ಜನ ತೇಲಿ ಹೋಗುತ್ತಿದ್ದರು. ಆ ಯುವಕ ಡಾಕ್ಟರ್‌ರನ್ನು ಕೇಳಿದ, 'ಹಾಗಾದರೆ ಇನ್ನು ಮುಂದೆ ನಾನು ಹಾಡಲಾರೆನೇ?'.

'ಜೋರಾಗಿ ಮಾತೇ ಆಡಬೇಡ ಎಂದರೆ ಹಾಡುವುದು ಸಾಧ್ಯವೇ! ಒಂದು ಪುಪ್ಪುಸದಲ್ಲಿ ಉಸಿರಾಡುವುದಷ್ಟೇ ಸಾಧ್ಯ ಇನ್ನು ಹಾಡುವುದು ಹೇಗೆ? ಅದು ನಿನ್ನ ಜೀವಕ್ಕೆ ಅಪಾಯ ತರಬಹುದು'. ಯುವಕನೆಂದ ಅತ್ಯಂತ ದೃಢಸಂಕಲ್ಪದಿಂದ 'ನಾನು ಸುಮ್ಮನೆ ಸಾಯಲು ಹುಟ್ಟಿಬಂದಿಲ್ಲ ಸಾಧನೆಯ ಶಿಖರವನ್ನು ನನ್ನದಾಗಿಸಿಕೊಳ್ಳಬೇಕಿದೆ. ಹಾಡಿಲ್ಲದೆ ನಾನು ಬದುಕಲಾರೆ. ಅದಿಲ್ಲದಿದ್ದರೆ ನಾನು ಸತ್ತಂತೆಯೇ ಲೆಕ್ಕ' ಎಂದ.

ಸಂಗೀತ ಜಗತ್ತು ಯಾರ ಹೆಸರನ್ನು ಅತ್ಯಂತ ಗೌರವದಿಂದ ನೆನಪಿಸಿಕೊಳ್ಳುತ್ತದೋ ಆ ಮಹಾನ್ ಸಾಧಕ ಪಂ. ಕುಮಾರಗಂಧರ್ವರ ಕಥೆ ಇದು. ಅವರು ತಮ್ಮ ಇಚ್ಛಾಶಕ್ತಿಯಿಂದ ತಮ್ಮ ನ್ಯೂನತೆಯನ್ನು ದಾಟಿ, ಇಳಿಗಾಲದವರೆಗೂ ಹಾಡುತ್ತಾ ಕಳೆದರು. ಇಷ್ಟಕ್ಕೂ ಕಾರಣವಾಗಿದ್ದು ಅವರ 'ನಾನು ಸುಮ್ಮನೆ ಸಾಯಲಿಕ್ಕೆ ಹುಟ್ಟಿಲ್ಲ' ಎನ್ನುವ ನಂಬಿಕೆ. ಎಲ್ಲ ಜೀವಗಳಿಗೂ ಒಂದೊಂದು ಉದ್ದೇಶ ಇರುತ್ತದೆ. ಅದನ್ನು ಪ್ರಕೃತಿ ನಿರ್ಧರಿಸುತ್ತದೆ. ನಂಬಿಕೆ ಮಾತ್ರ ನಮ್ಮದೇ ಆಗಿರಬೇಕು. ಆಗ ಮಾತ್ರ ನಮಗೆ ಬೇಕಾದ ಹಾಗೆ ನಮ್ಮ ಜೀವನವನ್ನು ರೂಪಿಸಿಕೊಳ್ಳಬಹುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಅಕ್ಟೋಬರ್ 31, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ತೃತೀಯ ಗಂ. 21-31 ನಕ್ಷತ್ರ: ರೋಹಿಣಿ ಗಂ. 27-58 ಯೋಗ: ವರಿಯಾನ್ ಗಂ 15-33 ಕರಣ: ವಣಿಜ ಗಂ. 09-52, ತುಲಾ ಮಾಸದ 14 ನೇ ದಿನ, ಮಳೆನಕ್ಷತ್ರ: ಸ್ವಾತಿ 3.

ರಾಹುಕಾಲ: ಮಧ್ಯಾಹ್ನ 03-00 - 04-30

ಸೂರ್ಯೋದಯ : 06-28 ಸೂರ್ಯಾಸ್ತ : 06-00

ಮುಸ್ಲಿಂ ದಿನಾಂಕ : 15 ರಬಿಯುಸ್ಸಾನಿ

ಅದೃಷ್ಟ ಸಂಖ್ಯೆ : 5, 1

ಮೇಷ: ಚೋರ ಬಾಧೆ ಇರುವ ಕಾರಣದಿಂದಾಗಿ ದೊಡ್ಡ ಮಟ್ಟದ ಹಣ ಅಥವಾ ಬೆಲೆ ಬಾಳುವ ವಸ್ತುಗಳನ್ನು ಹಿಡಿದುಕೊಂಡು ಸಂಚರಿಸುವುದು ಸರಿಯಲ್ಲ. ಮಕ್ಕಳ ವಿಚಾರದಲ್ಲಿ ಹೆಮ್ಮೆ ಪಡುವಂತಹ ಕ್ಷಣಗಳು ಎದುರಾಗುವುದು.

ವೃಷಭ: ಸಮಯ ಅರಿತು ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿಗೆ ಕಾರಣವಾಗುತ್ತದೆ. ಹೊಸಕಾರ್ಯಗಳ ಚಾಲನೆಗೆ ಸೂಕ್ತ ಸಮಯವಲ್ಲ. ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.

ಮಿಥುನ: ಅಕ್ಕ-ಪಕ್ಕದಲ್ಲಾಗುವ ಸನ್ನಿವೇಶಗಳು ಪ್ರಾಮಾಣಿಕತೆಗೆ ಅಥವಾ ಸ್ವಾಮಿನಿಷ್ಠೆಗೆ ಬೆಲೆ ಇಲ್ಲವೆಂದು ಕಾಣಿಸುವುದು. ಅದರ ಫಲವಾಗಿ ಸ್ವಭಾವ ಬದಲಿಸಿಕೊಳ್ಳಬೇಡಿ. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು.

ಕರ್ಕಾಟಕ: ಸಂಘ-ಸಂಸ್ಥೆಗಳ ಅಧಿಕಾರಿಗಳಿಗೆ ನಾಲ್ಕಾರು ಮಾತುಗಳನ್ನು ಕೇಳಬೇಕಾದ ಸಂದರ್ಭ ಬರಬಹುದು. ಹೂವು, ಹಣ್ಣು, ತರಕಾರಿ , ಹಾಲಿನ ವ್ಯಾಪಾರಿಗಳಿಗೆ ಲಾಭ ಆಗುವುದು. ಷೇರು ಬಂಡವಾಳ ಹೆಚ್ಚಿಸಿಕೊಳ್ಳುವಿರಿ.

ಸಿಂಹ: ವೃತ್ತಿ ನೈಪುಣ್ಯತೆಯಿಂದಾಗಿ ಹೆಚ್ಚು ವರಮಾನ ಬರುವ ಕಂಪನಿಗಳಿಂದ ಬೇಡಿಕೆ ಬರುವುದು. ಗಣೇಶನ ಸೇವೆಯೊಂದಿಗೆ ಉತ್ಸಾಹದಿಂದ ಕೆಲಸ ಆರಂಭಿಸಿದರೆ ಸಮಸ್ಯೆಗಳು ಪರಿಹಾರಗೊಳ್ಳಲಿವೆ.

ಕನ್ಯಾ: ಕೌಟುಂಬಿಕವಾಗಿ ಕೆಟ್ಟು ಹೋದ ಸಂಬಂಧ ಸತ್ಯದ ಅರಿವಿನಿಂದಾಗಿ ಮತ್ತೆ ಮರಳಿ ಬರಲಿದೆ. ಜವಾಬ್ದಾರಿ ಹೆಚ್ಚಿರುವುದರಿಂದ ಸೃಜನಾತ್ಮಕ ಕಾರ್ಯ ನಿರ್ವಹಣೆ ಅಗತ್ಯ. ಸಾಂಸಾರಿಕವಾಗಿ ಸುಖ-ದುಃಖಗಳ ಸಮ್ಮಿಶ್ರ ಫಲವಿದೆ.

ತುಲಾ: ಯಾವುದೇ ವಿಚಾರವಾದರೂ ತೀರ್ಮಾನ ಕೈಗೊಳ್ಳುವ ಮುನ್ನ ಮನೆಯವರೊಂದಿಗೆ ಹಾಗೂ ತಿಳಿದವರೊಂದಿಗೆ ಚರ್ಚಿಸಿ ನಿರ್ಧರಿಸಿ. ಬದಲಾವಣೆಯನ್ನು ಬಯಸಿದ ನಿಮಗೆ ಹರ್ಷದ ಸಮಯವಾಗಿದೆ.

ವೃಶ್ಚಿಕ: ಯೋಜನೆಯನ್ನು ಪೂರ್ಣಗೊಳಿಸುವ ವಿಚಾರವಾಗಿ ಗಡಿಬಿಡಿಯ ವಾತಾವರಣ ಇರಲಿದೆ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಪ್ರಾಪ್ತಿಯಾಗುತ್ತವೆ. ಕಾರ್ಯಗಳು ನಡೆಯಲಿವೆ.

ಧನು: ಸಿಟ್ಟು, ಒರಟುತನ ಏಕಾಂಗಿತನಕ್ಕೆ ಮುಖ್ಯ ಕಾರಣವಾಗುವುದು. ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ. ಮಂಜುನಾಥನ ದರ್ಶನ ಭಾಗ್ಯದಿಂದ ಕಾರ್ಯಾನುಕೂಲವಾಗಲಿದೆ.

ಮಕರ: ಆರ್ಥಿಕತೆಗೆ ಇನ್ನೊಬ್ಬರ ಅಥವಾ ಹೆಂಡತಿಯ ಸಹಕಾರ ಅಗತ್ಯವೆನಿಸಲಿದೆ. ಇಂದಿನ ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿದೆ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರುವ ಯೋಗವಿದೆ.

ಕುಂಭ: ನ್ಯಾಯವಾದಿಗಳಿಗೆ ಉದ್ಯೋಗದಲ್ಲಿ ಹೆಚ್ಚಿನ ಶ್ರಮ ಅಗತ್ಯವೆನಿಸಲಿದೆ. ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ. ಕೆಲಸಗಳೆಲ್ಲ ನಿಮ್ಮ ಇಷ್ಟದಂತೆಯೇ ನಡೆಯುವುದು.

ಮೀನ: ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಕೆಲಸದ ಅಸ್ಥಿರತೆ ಅನುಭವಕ್ಕೆ ಬರಲಿದೆ. ವಿಜ್ಞಾನಿಗಳಿಗೆ ಹಾಗೂ ಕ್ರಿಯಾತ್ಮಕ ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ.

ಪದಬಂಧ 5486 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶಾಲನ್ನು ಕಚ್ಚುತ್ತಿರುವ ವ್ಯಾಘ್ರ (3)
2.ನಡುವೆ ರಂಪ ನಡೆದಾಗಿನ ಸಂಪ್ರದಾಯ! (4)
4.ಮನುಷ್ಯನಿಗೆ ಸಂಬಂಧಪಟ್ಟದ್ದು (4)
6.ಪದ ಕೊನೆಗಿದ್ದಾಗಲೇ ಈ ಐಶ್ವರ್ಯ! (3)
7.ಕನಸಲ್ಲಿ ಹೆಕ್ಕಿ ತೆಗೆದ ಗಲೀಜು (2)
9.ಆಸೆಯೇ ಇಲ್ಲದಿರುವಿಕೆ (3)
11.ಕಂದಾಚಾರದಲ್ಲಿರುವ ಬೆಲೆ ಗೊತ್ತಾಯಿತೇ? (2)
13.ಆ ಲೋಲಕದ ಬದಿ ಆಸಕ್ತನಿದ್ದಾನೆ (3)
14.ಕಣದಲ್ಲಿ ಹಾಕಿದ ಲಗಾಮು (4)
16.ಹಿರಣ್ಯಯ್ಯನವರ ನಾಟಕದ ಟೋಪಿಯ ಬಟ್ಟೆ (4)
17.ವೃದ್ಧಿಯು ಹೆಚ್ಚಾಗಿಯೇ ಇದೆ! (3)

ಮೇಲಿಂದ ಕೆಳಕ್ಕೆ

1.ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವ ಸಾಧನ (5)
2.ಪರಂಪರೆಯಲ್ಲಿನ ದೃಷ್ಟಿದೋಷ (2)
3.ಇತರರಿಗೆ ಉಪಕಾರವನ್ನು ಮಾಡುವುದು (5)
5.ಈಕೆ ವಿದೇಶದವಳು (3)
8.ಜೊತೆಯಲ್ಲಿ ಆಲೋಚಿಸುವವನು (5)
10.ಪ್ರಾಯದ ಎಮ್ಮೆ ಅಥವಾ ಹಸು (3)
12.ಬಳೆ ತೊಟ್ಟು ಗುರಿ ಸಾಧಿಸಲು ಪ್ರತಿಜ್ಞಾಬದ್ಧನಾದವನು (5)
15.ಬಾಯಿಂದ ಸುರಿಯುತ್ತಿರುವ ಲಾಲಾರಸ (2)



5485ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧಮ 6.ಜವಾಬುದಾರಿ
7.ವಿತರಕ 9.ಕಾಡು
10.ಕೇವಲ 12.ಸಂತ
14.ಪರಸತಿ 16.ಮಾರ್ಗದರ್ಶಕ
18.ಕದನ

ಮೇಲಿಂದ ಕೆಳಕ್ಕೆ:
1.ಅಪವಿತ್ರ 2.ಮತ್ಸರ
3.ಗಜ 4.ಅಂಬುಗೂಡು
5.ತುರಿಮಣೆ 8.ಕಲಕೇತ
9.ಕಾಲಕ್ಷೇಪ 11.ಅನುಮಾನ
12.ಸಂಪಾದನೆ 13.ಮತಿಹೀನ
15.ರಸಿಕ 17.ಕಚ

ಸುಡೊಕು 5872

2		9			7	1		4
	6			3				
5		7	4		6	2		3
					5		3	1
	5	1		8			2	
3			9					8
		2		1		8		5
9			7		8			
	8			2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5871 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಮಾಹಿತಿ ಆಯೋಗ: ಖಾಲಿ ಇರುವ ಹುದ್ದೆಗಳ ಭರ್ತಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ 2005ರ ಮಾಹಿತಿ ಹಕ್ಕು ಕಾನೂನು ಇದ್ದೂ, ಇಲ್ಲದಂತಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ಆಯೋಗದಲ್ಲಿ ಮಂಜೂರಾಗಿರುವ ಹುದ್ದೆಗಳು, ಖಾಲಿ ಇರುವ ಹುದ್ದೆಗಳು ಮತ್ತು ಇತ್ಯರ್ಥವಾಗಬೇಕಿರುವ ಒಟ್ಟು ಪ್ರಕರಣಗಳು ಸೇರಿದಂತೆ ಇನ್ನಿತರ ಮಾಹಿತಿಗಳನ್ನು ಎಲ್ಲ ರಾಜ್ಯಗಳಿಂದ ಪಡೆಯುವಂತೆ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಸೂಚಿಸಿದೆ.

ಈ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಸಲ್ಲಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮೂರು ವಾರ ಕಾಲಾವಕಾಶ ನೀಡಲಾಗಿದೆ.

ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕಾಲ-ಕಾಲಕ್ಕೆ ಭರ್ತಿ ಮಾಡಬೇಕು ಎಂದು 2019ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಆದರೆ, ಈ ತೀರ್ಪನ್ನು ಯಾವುದೇ ರಾಜ್ಯಗಳು ಅಥವಾ ಕೇಂದ್ರ ಸರ್ಕಾರ ಪಾಲನೆ ಮಾಡುತ್ತಿಲ್ಲ ಎಂದು ಆರೋಪಿಸಿ ಆರ್‌ಟಿಐ ಕಾರ್ಯಕರ್ತೆ ಅಂಜಲಿ ಭಾರದ್ವಾಜ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ರಾಜಕೀಯ ಮೈತ್ರಿ ನಿಯಂತ್ರಣ ಅಧಿಕಾರ ತನಗಿಲ್ಲ: ಆಯೋಗ

ನವದೆಹಲಿ (ಪಿಟಿಐ): 'ರಾಜಕೀಯ ಮೈತ್ರಿಕೂಟವನ್ನು ನಿಯಂತ್ರಿಸುವ ಯಾವುದೇ ಅಧಿಕಾರವು ತಾನು ಹೊಂದಿಲ್ಲ' ಎಂದು ಚುನಾವಣಾ ಆಯೋಗವು ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

26 ರಾಜಕೀಯ ಪಕ್ಷಗಳು ರಚಿಸಿಕೊಂಡಿರುವ ಮೈತ್ರಿಕೂಟದ ಹೆಸರಾಗಿ 'ಐ.ಎನ್.ಡಿ.ಐ.ಎ' (ಇಂಡಿಯಾ) ಎಂಬ ಸಂಕ್ಷಿಪ್ತ ರೂಪ ಬಳಸುತ್ತಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿ ಆಯೋಗವು ಈ ಪ್ರತಿಕ್ರಿಯೆ ನೀಡಿದೆ.

'ಚುನಾವಣೆಗಳನ್ನು ನಡೆಸುವುದು, ರಾಜಕೀಯ ಪಕ್ಷಗಳ ನೋಂದಣಿ ಮಾಡುವ ಅಧಿಕಾರವನ್ನು ಆಯೋಗ ಹೊಂದಿದೆ. ಆದರೆ, ರಾಜಕೀಯ ಮೈತ್ರಿಕೂಟವನ್ನು ಪ್ರಜಾಪ್ರತಿನಿಧಿ ಕಾಯ್ದೆ ಅಥವಾ ಸಂವಿಧಾನದ ಅಡಿ 'ನಿಯಂತ್ರಿತ ಘಟಕಗಳು' ಎಂಬುದಾಗಿ ಗುರುತಿಸಲಾಗಿಲ್ಲ' ಎಂದೂ ಆಯೋಗವು ತಿಳಿಸಿದೆ.

'ಈ ಪ್ರತಿಕ್ರಿಯೆಯು ಆಯೋಗದ ಪಾತ್ರ ಏನು ಎಂಬುದನ್ನು ವಿವರಿಸುವುದಕ್ಕೆ ಮಾತ್ರ ಸೀಮಿತವಾದುದು. ಆದರೆ, 'ಇಂಡಿಯಾ' ಎಂಬ ಸಂಕ್ಷಿಪ್ತ ರೂಪ ಬಳಕೆಯ ಸಿಂಧುತ್ವ ಕುರಿತ ತನ್ನ ವಿಶ್ಲೇಷಣೆ ಎಂಬುದಾಗಿ ಭಾವಿಸಬಾರದು' ಎಂದೂ ಆಯೋಗವು ಸ್ಪಷ್ಟಪಡಿಸಿದೆ.

'ಕೋರ್ಟ್ ಇಡೀ ವ್ಯವಸ್ಥೆಯನ್ನು ಮುನ್ನಡೆಸದು'

ನವದೆಹಲಿ (ಪಿಟಿಐ): ಮಾತೃತ್ವ ಅಥವಾ ಪಿತೃತ್ವ ಕುರಿತು ನಿರ್ಧರಿಸುವುದಕ್ಕೆ ಸಂಬಂಧಿಸಿ ದೇಶದಾದ್ಯಂತ ಡಿಎನ್‌ಎ ಪರೀಕ್ಷೆಗೆ ಆದೇಶಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿತು.

ವಿಚಾರಣೆಗಾಗಿ ಅರ್ಜಿಯೊಂದು ತನ್ನ ಮುಂದೆ ಬಂದ ವೇಳೆ, ನ್ಯಾಯಮೂರ್ತಿಗಳಾದ ಸಂಜಯ್‌ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಈ ನಿರ್ಧಾರ ಪ್ರಕಟಿಸಿತು.

'ಅರ್ಜಿಯಲ್ಲಿ ಉಲ್ಲೇಖಿಸಿರುವ ವಿಷಯಕ್ಕೆ ಸಂಬಂಧಿಸಿ, ಇಡೀ ದೇಶಕ್ಕೆ ಅನ್ವಯಿಸುವಂತೆ ಆದೇಶ ನೀಡುವುದು ಕಷ್ಟ' ಎಂದು ನ್ಯಾಯಪೀಠ ಹೇಳಿತು.

'ನ್ಯಾಯಾಲಯಗಳೇ ಇಡೀ ವ್ಯವಸ್ಥೆಯನ್ನು ಮುನ್ನಡೆಸಲು ಸಾಧ್ಯವಿಲ್ಲ. ತನ್ನ ಮುಂದೆ ಬರುವ ಪ್ರಕರಣಗಳಲ್ಲಿನ ವಿಷಯಕ್ಕೆ ಸಂಬಂಧಿಸಿ ಮಾತ್ರ ನ್ಯಾಯನಿರ್ಣಯ ಮಾಡಲು ಸಾಧ್ಯ' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿತು.

'ಇದು ಯಾವ ರೀತಿಯ ಅರ್ಜಿ? ದೇಶವ್ಯಾಪಿ ಡಿಎನ್‌ಎ ಪರೀಕ್ಷೆ ನಡೆಸಬೇಕು ಎಂದು ಬಯಸುವಿರಾ, ಎಂದು ಸ್ವತಃ ಹಾಜರಿದ್ದ ಅರ್ಜಿದಾರನನ್ನು ಉದ್ದೇಶಿಸಿ ಕೇಳಿದ ನ್ಯಾಯಪೀಠ, 'ವೈಯಕ್ತಿಕವಾಗಿ ನೀವು ಯಾವುದಾದರೂ ವ್ಯಾಜ್ಯ ಎದುರಿಸುತ್ತಿದ್ದೀರಾ' ಎಂದೂ ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರ, ಈ ವಿಚಾರವಾಗಿ ಕಳೆದ ಏಳು ವರ್ಷಗಳಿಂದ ವಿವಾದ ಇದೆ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಅರ್ಜಿದಾರರಿಗೆ ಸಂಬಂಧಿಸಿದ ವ್ಯಾಜ್ಯವೊಂದು ಇತ್ಯರ್ಥವಾಗದೇ ಬಾಕಿ ಉಳಿದಿದೆ ಎಂಬ ಕಾರಣಕ್ಕೆ ದೇಶದಾದ್ಯಂತ ಡಿಎನ್‌ಎ ಪರೀಕ್ಷೆ ನಡೆಸುವಂತೆ ನಿರ್ದೇಶನ ನೀಡಲಾಗದು' ಎಂದು ನ್ಯಾಯಪೀಠ ಹೇಳಿತು.

ಸಂವಿಧಾನದ 10ನೇ ಶೆಡ್ಯೂಲ್‌ನ ಪಾವಿತ್ರ್ಯ ಕಾಪಾಡಿ: ಮಹಾರಾಷ್ಟ್ರ ಸ್ಪೀಕರ್‌ಗೆ 'ಸುಪ್ರೀಂ' ಚಾಟಿ

ಶಾಸಕರ ಅನರ್ಹತೆ ಇತ್ಯರ್ಥಕ್ಕೆ ಗಡುವು

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಅವರ ಬಣದ ಶಾಸಕರ ಅನರ್ಹತೆ ಸಂಬಂಧ ಸಲ್ಲಿಸಿರುವ ಅರ್ಜಿಗಳನ್ನು ಡಿಸೆಂಬರ್ 31ರೊಳಗೆ ಇತ್ಯರ್ಥಪಡಿಸುವಂತೆ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ, ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ.

ಜತೆಗೆ, ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹಾಗೂ ಅವರ ಬಣದ ಶಾಸಕರ ಅನರ್ಹತೆ ಕುರಿತು ಸಲ್ಲಿಸಿರುವ ಅರ್ಜಿಗಳನ್ನು 2024ರ ಜನವರಿ 31ರೊಳಗೆ ಇತ್ಯರ್ಥಪಡಿಸಬೇಕು ಎಂದು ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಸೋಮವಾರ ಶಾಸಕರ ಅನರ್ಹತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿತು.

'ಸಂವಿಧಾನದ 10ನೇ ಶೆಡ್ಯೂಲ್‌ನ (ಪಕ್ಷಾಂತರ ನಿಷೇಧ) ಪಾವಿತ್ರ್ಯ ಕಾಪಾಡುವುದು ಸ್ಪೀಕರ್ ಅವರ ಜವಾಬ್ದಾರಿಯಾಗಿದೆ. ಇಲ್ಲವಾದರೆ ಸಾಂವಿಧಾನಿಕ ಕಟ್ಟಳೆಗಳನ್ನು ಗಾಳಿಗೆ ತೂರಿದಂತಾಗುತ್ತದೆ' ಎಂದು ಚಾಟಿ ಬೀಸಿತು.

ಸ್ಪೀಕರ್ ಅವರ ವಿಳಂಬ ಧೋರಣೆ ಬಗ್ಗೆ ಹಿಂದಿನ ವಿಚಾರಣೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಪೀಠವು, 'ಅರ್ಜಿಗಳ ಇತ್ಯರ್ಥಕ್ಕೆ ನಿರ್ದಿಷ್ಟ ದಿನಾಂಕ ನಿಗದಿಪಡಿಸುವ ಕುರಿತು ನ್ಯಾಯಾಲಯಕ್ಕೆ ತಿಳಿಸಬೇಕು. ಇಲ್ಲವಾದರೆ ನಾವೇ ಸಮಯವನ್ನು ನಿಗದಿಪಡಿಸುತ್ತೇವೆ' ಎಂದು ಎಚ್ಚರಿಕೆ ನೀಡಿತ್ತು.

ಶಾಸಕರ ಅನರ್ಹತೆ ಸಂಬಂಧ ಸಲ್ಲಿಸಿರುವ ಅರ್ಜಿಗಳ ಇತ್ಯರ್ಥಕ್ಕೆ ಸ್ಪೀಕರ್ ಅನಗತ್ಯವಾಗಿ ವಿಳಂಬ ಮಾಡುತ್ತಿದ್ದಾರೆ. ತ್ವರಿತವಾಗಿ ಇತ್ಯರ್ಥಪಡಿಸಲು ಅವರಿಗೆ ಸೂಚಿಸುವಂತೆ ಕೋರಿ ಶಿವಸೇನಾ (ಉದ್ಧವ್ ಬಣ) ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿವೆ.

'ಚುನಾವಣೆವರೆಗೆ ವಿಚಾರಣೆ ಮುಂದುವರಿಸಲ್ಲ'

ಮಹಾರಾಷ್ಟ್ರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ದೀಪಾವಳಿ ರಜೆ ಹಾಗೂ ಚಳಿಗಾಲದ ಅಧಿವೇಶನ ನಡೆಯಲಿದೆ. ಉದ್ಧವ್ ಮತ್ತು ಶರದ್ ಬಣ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಪೀಠವು ಸೂಚಿಸಿದ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ, 2024ರ ಫೆಬ್ರುವರಿ 29ರವರೆಗೆ ಸ್ಪೀಕರ್‌ಗೆ ಸಮಯಾವಕಾಶ ಬೇಕಿದೆ' ಎಂದು ಕೋರಿದರು.

ಮೆಹ್ತಾ ವಾದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠವು, 'ಮಿಸ್ಟರ್ ಮೆಹ್ತಾ ಅವರೇ, ಈ ಕಾದಾಟದ ವಿಚಾರಣೆಯನ್ನು ವಿಧಾನಸಭೆ ಚುನಾವಣೆಯ ದಿನಾಂಕ ಘೋಷಣೆವರೆಗೂ ಮುಂದುವರಿಸಲು ನಮಗೆ ಇಷ್ಟವಿಲ್ಲ' ಎಂದು ಹೇಳಿತು.

ಅಜಿತ್ ಬಣದ ಪರ ಹಾಜರಾದ ಹಿರಿಯ ವಕೀಲ ಮುಕುಲ್ ರೋಹಟಗಿ, 'ಶಾಸಕರ ಅನರ್ಹತೆ ಸಂಬಂಧ ಜುಲೈ ಹಾಗೂ ಸೆಪ್ಟೆಂಬರ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳ ಇತ್ಯರ್ಥಕ್ಕೆ ಸಮಯಾವಕಾಶ ನಿಗದಿಪಡಿಸಬಾರದು' ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಶರದ್ ಬಣದ ಪರ ಹಿರಿಯ ವಕೀಲ ಕಪಿಲ್ ಸಿಬಲ್, 'ಎನ್‌ಸಿಪಿಯ ಒಂಬತ್ತು ಶಾಸಕರ ಅನರ್ಹತೆ ಬಗ್ಗೆ ಜುಲೈನಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ನ್ಯಾಯಪೀಠವು ಪರಿಗಣಿಸಿದೆ' ಎಂದರು.

'ಎರಡು ಬಣಗಳು ಸಲ್ಲಿಸಿರುವ ಅರ್ಜಿಗಳ ಬಗ್ಗೆ ಸ್ಪೀಕರ್ ಅವರು ತೀರ್ಮಾನಕೈಗೊಳ್ಳಲು ಸೂಕ್ತವಾದ ಸಮಯಾವಕಾಶ ನೀಡಲಾಗಿದೆ' ಎಂದು ನ್ಯಾಯಪೀಠ ಹೇಳಿತು.

ಶ್ರೀಕೃಷ್ಣ ಜನ್ಮಭೂಮಿ–ಈದ್ಗಾ ವಿವಾದ: ನ. 10ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದ ಪ್ರಕರಣದ ವಿಚಾರಣೆಯನ್ನು ಮಥುರಾ ಕೋರ್ಟ್‌ಗೆ ವರ್ಗಾಯಿಸಿರುವ ಅಲಹಾಬಾದ್ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನವೆಂಬರ್ 10ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್, ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಶಾಹಿ ಮಸೀದಿ ಈದ್ಗಾ ಟ್ರಸ್ಟ್‌ನ ನಿರ್ವಹಣಾ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿತು.

ಅಕ್ಟೋಬರ್ 3ರಂದು ನಡೆದ ವಿಚಾರಣೆ ವೇಳೆ, ವಿವಾದಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ದಾಖಲೆ ಪತ್ರಗಳನ್ನು ನ್ಯಾಯಪೀಠದ ಮುಂದೆ ಸಲ್ಲಿಸುವಂತೆ ಅಲಹಾಬಾದ್ ಹೈಕೋರ್ಟ್‌ನ ರಿಜಿಸ್ಟ್ರಾರ್‌ಗೆ ಸೂಚಿಸಿತ್ತು.

'ಛಡ್ಡಾ ಪ್ರಕರಣ: ಅನಿರ್ದಿಷ್ಟಾವಧಿ ಅಮಾನತು ಸರಿಯಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸದರೊಬ್ಬರನ್ನು ಅನಿರ್ದಿಷ್ಟಾವಧಿಗೆ ಅಮಾನತುಗೊಳಿಸುವುದರಿಂದ ಆತ ಪ್ರತಿನಿಧಿಸುವ ಕ್ಷೇತ್ರದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ. ಹೀಗಾಗಿ ಆಮ್ ಆದ್ಮಿ ಪಕ್ಷದ ಸಂಸದ ರಾಘವ ಛಡ್ಡಾ ವಿರುದ್ಧ ಕ್ರಮ ಕೈಗೊಂಡಿರುವುದಕ್ಕೆ ಕಾರಣವಾದ ಅಂಶಗಳ ಪರಿಶೀಲನೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಸಂಸತ್‌ನಲ್ಲಿ ಭಿನ್ನದನಿಗೆ ಅವಕಾಶ ಇರಲೇಬೇಕು. ಹೀಗಾಗಿ ವಿಪಕ್ಷದ ಸಂಸದನನ್ನು ಸದನದಿಂದ ಅನಿರ್ದಿಷ್ಟಾವಧಿಗೆ ಅಮಾನತು ಮಾಡುವುದು ಗಂಭೀರ ವಿಷಯ ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ಉದ್ದೇಶಿಸಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ, 'ನಾವು ಎಲ್ಲಿಯೇ ಇರಲಿ, ಯಾರೇ ಆಗಿರಲಿ ಎಲ್ಲರೂ ಸಂವಿಧಾನಕ್ಕೆ ತಲೆಬಾಗಲೇ ಬೇಕು' ಎಂದು ಪೀಠ ಹೇಳಿತು.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರೂ ಪೀಠದಲ್ಲಿ ಇದ್ದಾರೆ.

'ನನ್ನ ಕಕ್ಷಿದಾರ ನ್ಯಾಯಾಲಯದಲ್ಲಿ ಕ್ಷಮೆ ಯಾಚಿಸಲು ಇಚ್ಛಿಸುತ್ತಾರೆ' ಎಂದು ರಾಘವ ಛಡ್ಡಾ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ ನ್ಯಾಯಪೀಠಕ್ಕೆ ಹೇಳಿದರು.

'ಅವರು (ಛಡ್ಡಾ) ಸದನದ ಕ್ಷಮೆ ಕೋರಲು ಸಿದ್ಧರಿದ್ದಾರೆ. ರಾಜ್ಯಸಭೆ ಸಭಾಪತಿ ಅವರು ಕ್ಷಮೆಯನ್ನು ಒಪ್ಪಿಕೊಳ್ಳಲು ಸಿದ್ಧರಿದ್ದಾರೆಯೇ? ಕಾನೂನು ಪಾಲನೆಯಾಗುವಂತೆ ಸುಪ್ರೀಂ ಕೋರ್ಟ್ ಕ್ರಮ ಕೈಗೊಳ್ಳುವ ಅಗತ್ಯವಿದೆಯೇ' ಎಂದು ಕೇಳಿದ ಪೀಠ, ಈ ವಿಷಯದಲ್ಲಿ ನಿಮಗೇ ಆಯ್ಕೆ ನೀಡಲಾಗುವುದು ಎಂದು ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಅಟಾರ್ನಿ ಜನರಲ್ ವೆಂಕಟರಮಣಿ, 'ಈ ವಿಷಯದಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡಬಾರದು. ಅದು ಸಮರ್ಥನೀಯವೂ ಅಲ್ಲ' ಎಂದು ಹೇಳಿದರು.

ಎರಡೂ ಪಕ್ಷದವರ ವಾದಗಳನ್ನು ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

8ನೇ ವರ್ಷದ ಸವಿನೆನಪು



ಶ್ರೀ ಎನ್. ವೆಂಕಟೇಶ್‌ರವರು
(ಜಮೀನ್ದಾರರು)
ನಿಧನ : ತಾ॥ 31-10-2015
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ ಮತ್ತು ಸ್ಫೂರ್ತಿದಾಯಕ ನಿಮ್ಮ ಸವಿ ನೆನಪುಗಳು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ
ಇಂತಿ- ಶ್ರೀಮತಿ ಎನ್. ನಿರ್ಮಲ, ಮಕ್ಕಳಾದ ವಿ. ಧನಂಜಯ, ವಿ. ಧನಲಕ್ಷ್ಮಿ, ವಿ. ಗಜೇಂದ್ರ, ವಿ. ಪ್ರತಾಪ್ ಹಾಗೂ ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು

11ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಜಿ. ಚಂದ್ರಪ್ಪ
ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷವಾಗಿದೆ ನಿಮ್ಮ ಸವಿ ನೆನಪು, ನಮ್ಮ ಮನದಂಗಳದಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಕೋರುವ
ದುಃಖತಪ್ತ: ಪತ್ನಿ, ಪ್ರೇಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ರವೀಶ್ ಸಾರಥ್ಯದಲ್ಲಿ ಹಾಯ್ ಬೆಂಗಳೂರು
ನೇರ ಸಂದರ್ಶನ
ಸುದ್ದಿ ಆಧರಿಸಿ (ಸುದ್ದಿಗೆ ತಕ್ಕ) ಸಂಭಾವನೆ ನೀಡಲಾಗುವುದು. ಕರ್ನಾಟಕದಾದ್ಯಂತ ಸುದ್ದಿ ವರದಿಗಾರರ ಅಗತ್ಯವಿದೆ.
ಸಂಪರ್ಕಿಸಿ:
8884063460
9035085501

ಕನ್ನಡ ಟೆಲಿಕಾಲರ್ ಅಗತ್ಯವಿದೆ ಸಂಬಳ- ₹16200, 33 ಅಸೋಸಿಯೇಟ್ಸ್, ಶಂಕರ ಮಠ ರಸ್ತೆ, ಬಸವೇಶ್ವರ ನಗರ, ಬೆಂಗಳೂರು ಆಸಕ್ತಿ ಇದ್ದರೆ 7669250202 ಗೆ ಮಿಸ್ ಕಾಲ್ ಮಾಡಿ

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

Multiple Vacancy

REQUIRED EXPERIENCED Telecaller& Field Executive For BankLoan collection. Direct Recruitment to Company Contact:- 7899040499, 9620206756.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ, ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Call Centre

ಗಯಾ, ಬಿಹಾರದಲ್ಲಿ ಕೆಲಸ ಮಾಡಲು ಟೆಲಿಕಾಲರ್ ಗಳು ಬೇಕಾಗಿದ್ದಾರೆ.ವೇತನ ತಿಂಗಳಿಗೆ 12000/- ಊಟ -ವಸತಿ ಉಚಿತ. ಕನ್ನಡ, ಮಲಯಾಳಂ, ತೆಲುಗು, ತಮಿಳು ಭಾಷೆಗಳನ್ನು ತಿಳಿದಿರಬೇಕು. ಸಂಪರ್ಕಿಸಿ: ಮೊಬೈಲ್ - 09540509611

ಪ್ರವಾಸ

Travel

ಸುಸಜ್ಜಿತ ಊಟ, ವಸತಿಯೊಂದಿಗೆ 2/2ಲಕ್ಸುರಿ ಬಸ್ಸಿನಲ್ಲಿ 7ದಿನ ಶಿರಡಿ,ಕೊಲ್ಲಾಪುರ, ಪಂಡರಾಪುರ,ತ್ರಯಂಭಕೇಶ್ವರ, ಇತ್ಯಾದಿ. ಕಾಶಿಯಾತ್ರೆ 9ದಿನ ಏಸಿ`ಟ್ರೈನ್`ನಲ್ಲಿ/6ದಿನ ವಿಮಾನದಲ್ಲಿ ಕಾಶಿ,ಗಯಾ, ಅಯೋಧ್ಯ,ಪ್ರಯಾಗ್`ರಾಜ್, ಸಂಪರ್ಕಿಸಿ:ಕೆ.ಪಿ.ಟೂರ್ಸ್ ಅಂಡ್`ಟ್ರಾವೆಲ್ಸ್. 9740311411, 9741024122.

DH DECCAN HERALD Classifieds More value, more impact ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಆಂಧ್ರ ರೈಲು ದುರಂತ ಸಾವಿನ ಸಂಖ್ಯೆ 14ಕ್ಕೆ ಏರಿಕೆ

ವಿಶಾಖಪಟ್ಟಣ (ಪಿಟಿಐ): ಆಂಧ್ರಪ್ರದೇಶದ ವಿಜಯನಗರ ಜಿಲ್ಲೆಯ ಹೌರಾ–ಚೆನ್ನೈ ರೈಲು ಮಾರ್ಗದಲ್ಲಿ ಭಾನುವಾರ ಸಂಭವಿಸಿದ ರೈಲು ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದ್ದು, 50 ಮಂದಿ ಗಾಯಗೊಂಡಿದ್ದಾರೆ ಎಂದು ಜಂಟಿ ಜಿಲ್ಲಾಧಿಕಾರಿ ಮಯೂರ್ ಅಶೋಕ ತಿಳಿಸಿದ್ದಾರೆ.

ಸೋಮವಾರ ಮಾತನಾಡಿದ ಅವರು, 'ಘಟನೆ ನಡೆದ ಜಾಗದಲ್ಲೇ 13 ಮಂದಿ ಮೃತಪಟ್ಟಿದ್ದರು. ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಒಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದರು.

ಗಾಯಾಳುಗಳನ್ನು ವಿಶಾಖಪಟ್ಟಣ ಮತ್ತು ವಿಜಯನಗರ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ.

ರೈಲು ದುರಂತ ನಡೆದ ಸ್ಥಳ ಹಾಗೂ ವಿಜಯನಗರದ ಸರ್ಕಾರಿ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳಿಗೆ ಧೈರ್ಯ ತುಂಬಿದರು.

'ದುರಂತಕ್ಕೆ ರೈಲು ಸಿಬ್ಬಂದಿಯ ನಿರ್ಲಕ್ಷ್ಯ ಕಾರಣ'

ನವದೆಹಲಿ (ಪಿಟಿಐ): ಆಂಧ್ರಪ್ರದೇಶದ ವಿಜಯಪುರದಲ್ಲಿ ಭಾನುವಾರ ರಾತ್ರಿ ಎರಡು ರೈಲುಗಳ ನಡುವಿನ ಅಪಘಾತಕ್ಕೆ ರಾಯಗಢ ಪ್ಯಾಸೆಂಜರ್ ರೈಲಿನ ಚಾಲಕ ಮತ್ತು ಸಹಾಯಕ ಚಾಲಕರೇ ಕಾರಣ ಎಂಬುದು ರೈಲ್ವೆ ಇಲಾಖೆ ನಡೆಸಿದ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ರಾಯಗಢ ಪ್ಯಾಸೆಂಜರ್ ರೈಲು (08504) ದೋಷಪೂರಿತವಾಗಿದ್ದ ಎರಡು ಸ್ವಯಂ ಚಾಲಿತ ಸಿಗ್ನಲ್‌ಗಳನ್ನು ದಾಟಿ ವಿಶಾಖಪಟ್ಟಣ ಪಲಸಾ ಪ್ಯಾಸೆಂಜರ್ ರೈಲು (08532) ಗಾಡಿಗೆ ಹಿಂಭಾಗದಿಂದ ಗುದ್ದಿದೆ. ಹೀಗಾಗಿ ರಾಯಗಢ ಪ್ಯಾಸೆಂಜರ್ ರೈಲಿನ ಲೋಕೊ ಪೈಲಟ್ ಎಸ್.ಎಂ.ಎಸ್. ರಾವ್ ಮತ್ತು ಸಹಾಯಕ ಲೋಕೊ ಪೈಲಟ್ ಅವರೇ ಈ ದುರಂತಕ್ಕೆ ಕಾರಣವಾಗಿದ್ದಾರೆ ಎಂದು ಉಲ್ಲೇಖಿಸಿರುವ ವರದಿಯು 'ಪಿಟಿಐ' ಸುದ್ದಿಸಂಸ್ಥೆಗೆ ಲಭ್ಯವಾಗಿದೆ.

ದೋಷಪೂರಿತವಾಗಿರುವ ಸ್ವಯಂ ಚಾಲಿತ ಸಿಗ್ನಲ್‌ನಲ್ಲಿ ಯಾವುದೇ ರೈಲು ಎರಡು ನಿಮಿಷ ನಿಲ್ಲಬೇಕು. ಆ ಬಳಿಕ ಪ್ರತಿ ಗಂಟೆಗೆ 10 ಕಿ.ಮೀ ವೇಗವಾಗಿ ಚಲಿಸಬೇಕು ಎಂಬುದು ರೈಲ್ವೆ ನಿಯಮ. ಆದರೆ, ಇದನ್ನು ಪಾಲಿಸದೆ ಇದ್ದಿದ್ದರಿಂದಾಗಿ ಈ ದುರಂತ ಸಂಭವಿಸಿದೆ ಎಂದು ವರದಿ ಹೇಳಿದೆ. ರೈಲಿನಲ್ಲಿರುವ ಸ್ಪೀಡೊಮೀಟರ್ ಚಾರ್ಟ್, ದತ್ತಾಂಶ ದಿನಚರಿ ವರದಿ, ದುರಂತ ನಡೆದ ಸ್ಥಳವನ್ನು ಕೂಲಂಕಷವಾಗಿ ಪರಿಶೀಲಿಸಿ ಸಿದ್ಧಪಡಿಸಲಾಗಿರುವ ಪ್ರಾಥಮಿಕ ವರದಿಗೆ ಏಳು ಮಂದಿ ತಜ್ಞರು ಸಹಿ ಹಾಕಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸ್ವರ್ಣ ಬೆಳಗು

ಸಿಖ್ ಧರ್ಮಗುರು ಗುರು ರಾಮದಾಸ್ ಅವರ ಜಯಂತ್ಯುತ್ಸವದ ಅಂಗವಾಗಿ ಅಮೃತಸರದ ಸ್ವರ್ಣ ಮಂದಿರದಲ್ಲಿ ಯುವತಿಯೊಬ್ಬರು ಸೋಮವಾರ ಹಣತೆ ಬೆಳಗಿದರು –ಪಿಟಿಐ ಚಿತ್ರ

ಚಂದ್ರಯಾನ 'ತಪ್ಪು ಮಾಹಿತಿ'

ಎನ್‌ಸಿಇಆರ್‌ಟಿ ಕೈಪಿಡಿಗಳಿಗೆ ವಿಜ್ಞಾನಿಗಳ ಆಕ್ಷೇಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ್ದ ಕೈಪಿಡಿಗಳು
- ಕೇಂದ್ರ ಸರ್ಕಾರದ ಸಮರ್ಥನೆ ಬಳಿಕ ಆನ್‌ಲೈನ್‌ನಲ್ಲಿ ಬಿಡುಗಡೆ
- 40 ವಿಜ್ಞಾನ ಸಂಘಟನೆಗಳ ಒಕ್ಕೂಟ ಎಐಪಿಎಸ್‌ಎನ್ ವಿರೋಧ

ನವದೆಹಲಿ: ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) 'ಚಂದ್ರಯಾನ–3' ಕುರಿತು ಈಚೆಗೆ ವಿದ್ಯಾರ್ಥಿಗಳಿಗಾಗಿ ಬಿಡುಗಡೆ ಮಾಡಿದ್ದ 10 ಕೈಪಿಡಿಗಳನ್ನು ಹಿಂಪಡೆಯಬೇಕು ಎಂದು ಕೆಲ ವಿಜ್ಞಾನಿಗಳು ಆಗ್ರಹ ಪಡಿಸಿದ್ದಾರೆ.

'ಈ ಕೈಪಿಡಿಗಳಲ್ಲಿ ಸತ್ಯಕ್ಕೆ ದೂರವಾದ ವೈಜ್ಞಾನಿಕ ಮಾಹಿತಿಗಳಿವೆ. 'ಹಾರುವ ರಥ', 'ವಿಮಾನಗಳು', 'ವೈಮಾನಿಕ ಶಾಸ್ತ್ರ' ಇತ್ಯಾದಿ ವೈಜ್ಞಾನಿಕವಾಗಿ ತಪ್ಪುಗ್ರಹಿಕೆಗೆ ಕಾರಣವಾಗುವ ಅಂಶಗಳಿವೆ' ಎಂದೂ ಅವರು ಪ್ರತಿಪಾದಿಸಿದ್ದಾರೆ.

ಎನ್‌ಸಿಇಆರ್‌ಟಿ 'ಚಂದ್ರಯಾನ ಉತ್ಸವ' ಹೆಸರಿನಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ಹತ್ತು ಕೈಪಿಡಿಗಳನ್ನು ಅ.17ರಂದು ಬಿಡುಗಡೆ ಮಾಡಿತ್ತು. ಅವುಗಳಲ್ಲಿ ತಪ್ಪುಗ್ರಹಿಕೆಗೆ ಆಸ್ಪದವಾಗುವ ಪುರಾಣದ ಉಲ್ಲೇಖಗಳಿವೆ ಎಂಬ ಟೀಕೆಗಳು ಕೇಳಿಬಂದ ಬಳಿಕ ಹಿಂಪಡೆದು ಕೊಂಡಿತ್ತು.

'ಪುರಾಣ ಮತ್ತು ತತ್ವಶಾಸ್ತ್ರ ಈ ಚಿಂತನೆಗಳಿಗೆ ಮೂಲವಾಗಿದ್ದವು. ಇವು ಹೊಸ ಸಂಶೋಧನೆ, ನಾವಿನ್ಯತೆಗೆ ಪ್ರೇರೇಪಣೆಯಾಗಿದ್ದವು' ಎಂದು ಕೇಂದ್ರ ಸರ್ಕಾರವು ಕೈಪಿಡಿಗಳನ್ನು ಸಮರ್ಥನೆ ಮಾಡಿಕೊಂಡ ಮಂಡಳಿ ಅದನ್ನು ಮತ್ತೆ ಆನ್‌ಲೈನ್‌ನಲ್ಲಿ ಪ್ರಕಟಿಸಿತ್ತು.

'ವೈದಿಕ ಪಠ್ಯಗಳು, ಪುರಾಣಗಳಲ್ಲಿ ಉಲ್ಲೇಖವಾಗಿರುವ ಹಾರುವ ವಾಹನಗಳು ಕವಿಗಳ ಊಹೆಗಳಾಗಿದ್ದವು. ಬಹುತೇಕ ಎಲ್ಲ ಪುರಾಣಗಳಲ್ಲಿ ತಮ್ಮ ದೇವರು ಆಗಸದಲ್ಲಿ ಯಾನ ಮಾಡುತ್ತಿದ್ದರು ಎಂಬ ಉಲ್ಲೇಖ ಹೊಂದಿವೆ. ಆದರೆ, ಹಾರುವ ವಾಹನಗಳಿದ್ದವು ಎಂಬುದಕ್ಕೆ ಸಮರ್ಥನೆಯಾಗಿ ಯಾವುದೇ ಸಾಕ್ಷ್ಯಗಳಿಲ್ಲ' ಎಂದು ಅಖಿಲ ಭಾರತ ಜನವಿಜ್ಞಾನ ನೆಟ್‌ವರ್ಕ್ ಹೇಳಿಕೆಯನ್ನು ನೀಡಿದೆ.

'ಯೂರಿ ಗಾಗರಿನ್ 1961ರಲ್ಲಿ ಭೂಮಿಯಿಂದ ಅಂತರಿಕ್ಷಕ್ಕೆ ಯಾನ ಕೈಗೊಂಡಿದ್ದರು. ಅದಕ್ಕೆ ಮುನ್ನ ಮನುಷ್ಯ ಇಂತಹ ಯತ್ನ ನಡೆಸಿದ್ದಕ್ಕೆ ಸಾಕ್ಷ್ಯವಿಲ್ಲ' ಎಂದು ವಿಜ್ಞಾನಕ್ಕೆ ಸಂಬಂಧಿಸಿ ಸುಮಾರು 40 ಸಂಘಟನೆಗಳ ಒಕ್ಕೂಟ ಎಐಪಿಎಸ್‌ಎನ್ ಹೇಳಿದೆ.

ಹಿರಿಯ ವಿಜ್ಞಾನಿ, ಎಐಪಿಎಸ್‌ಎನ್ ಅಧ್ಯಕ್ಷರಾದ ಸತ್ಯಜಿತ್ ರಥ್ ಅವರು, 'ಇಂತಹ ಕೈಪಿಡಿಗಳ ವಿತರಣೆಯು ವಿದ್ಯಾರ್ಥಿಗಳ ಮೇಲೆ ಪ್ರತಿಕೂಲವಾದ ಪರಿಣಾಮಗಳನ್ನು ಉಂಟು ಮಾಡಲಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ವೈಮಾನಿಕ ಶಾಸ್ತ್ರ ಎಂಬ ಸಂಸ್ಕೃತ ಶೀರ್ಷಿಕೆಯ ಕೈಪಿಡಿಗೂ ಸಂಘಟನೆ ಆಕ್ಷೇಪ ವ್ಯಕ್ತಪಡಿಸಿದೆ. ಎನ್‌ಸಿಇಆರ್‌ಟಿ ಪ್ರಕಾರ, 'ಈ ಕೈಪಿಡಿಯಲ್ಲಿ ನಿರ್ಮಾಣ, ಎಂಜಿನ್‌ಗಳ ಕಾರ್ಯ ನಿರ್ವಹಣೆ ಮತ್ತು ಭ್ರಮಣದರ್ಶಕ ವ್ಯವಸ್ಥೆ ಕುರಿತ ಕುತೂಹಲಕಾರಿ ವಿವರಗಳಿವೆ'.

ಎನ್‌ಸಿಇಆರ್‌ಟಿಯ ಕೈಪಿಡಿಯೊಂದರಲ್ಲಿ 'ಚಂದ್ರನು ಸೌರಗಾಳಿಯಿಂದ ಭೂಮಿಯನ್ನು ರಕ್ಷಿಸುತ್ತಾನೆ' ಹಾಗೂ 'ಚಂದ್ರಯಾನ–2 ಚಂದ್ರನ ಅಂಗಳದಲ್ಲಿ ಮಂಜುಗಡ್ಡೆ ಪತ್ತೆಹಚ್ಚಿದೆ' ಎಂಬ ಉಲ್ಲೇಖಗಳಿವೆ. ಇವು ತಪ್ಪು ಮಾಹಿತಿಯಾಗಿದೆ ಎಂದು ಸಂಘಟನೆ ಹೇಳಿದೆ.

ಇದರ ಹೊರತಾಗಿಯೂ ವೈಜ್ಞಾನಿಕ ಹಾಗೂ ವ್ಯಾಕರಣದ ಹಲವು ತಪ್ಪುಗಳು ಈ ಕೈಪಿಡಿಗಳಲ್ಲಿವೆ. ಇವುಗಳನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಸಿದ್ಧಪಡಿಸಲಾಗಿದೆ ಎಂದು ಸಂಘಟನೆಯು ಹೇಳಿದೆ.

ಇಂಡೊ-ಪೆಸಿಫಿಕ್: ಚೀನಾ ಸವಾರಿ ನಡೆಯಲ್ಲ– ರಾಜನಾಥ

ನವದೆಹಲಿ/ ಪಣಜಿ (ಪಿಟಿಐ): 'ಸಮುದ್ರಯಾನದ ಸಹಯೋಗ ಹಾಗೂ ಅಭಿವೃದ್ಧಿಗೆ ಚಾಲ್ತಿಯಲ್ಲಿರುವ ನ್ಯಾಯೋಚಿತ ನಿಯಮಗಳೇ ನಿರ್ಣಾಯಕವಾಗಿದ್ದು, ಯಾವುದೇ ಒಂದು ದೇಶ ಪ್ರಾಬಲ್ಯ ಸಾಧಿಸಿ ಬೇರೆಯವರ ಮೇಲೆ ಸವಾರಿ ಮಾಡಲು ಸಾಧ್ಯವಿಲ್ಲ' ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.

ಗೋವಾದಲ್ಲಿ ಸೋಮವಾರ ನಡೆದ ಸಮುದ್ರಯಾನ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇಂಡೊ-ಪೆಸಿಫಿಕ್ ಪ್ರದೇಶದಲ್ಲಿ ಪ್ರಾಬಲ್ಯ ಸಾಧಿಸಲು ಹವಣಿಸುತ್ತಿರುವ ಚೀನಾದ ಹೆಸರು ಪ್ರಸ್ತಾಪಿಸದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

'ರಾಷ್ಟ್ರಗಳನ್ನು ಆಕರ್ಷಿಸುವ ಇಂತಹ ಸಂಕುಚಿತ ಆಸಕ್ತಿಗಳು ಅಂತರರಾಷ್ಟ್ರೀಯ ಕಾನೂನನ್ನು ಅಪಹಾಸ್ಯ ಅಥವಾ ಅಲಕ್ಷ್ಯ ಮಾಡಬಹುದು. ಆದರೆ, ಇದರಿಂದ ನಾಗರಿಕ ಸಮುದ್ರಯಾನ ಸಂಬಂಧಗಳು ಹಳಿ ತಪ್ಪುತ್ತವೆ' ಎಂದು ಎಚ್ಚರಿಸಿದರು.

ಸಮುದ್ರಯಾನ ವಿಷಯದಲ್ಲಿ ಸ್ವಾರ್ಥ ಇಣುಕಬಾರದು. ಪರಸ್ಪರ ಸಹಕಾರಕ್ಕೆ ಒತ್ತು ನೀಡಬೇಕು. ಸ್ಥಳೀಯ ಹಿತಾಸಕ್ತಿಗಳಿಗೆ ಪ್ರಾಧಾನ್ಯ ನೀಡಬಾರದು. ಅಂತರರಾಷ್ಟ್ರೀಯ ಕಾನೂನು ಹಾಗೂ ಒಪ್ಪಂದಗಳೇ ನಮಗೆ ಮಾರ್ಗದರ್ಶಕವಾಗಬೇಕಿದೆ ಎಂದು ಹೇಳಿದರು.

ಇಂಡೊ–ಫೆಸಿಪಿಕ್ ವಲಯದಲ್ಲಿನ ಸವಾಲುಗಳನ್ನು ಉಲ್ಲೇಖಿಸಿದ ಅವರು, 1982ರಲ್ಲಿ ವಿಶ್ವಸಂಸ್ಥೆಯಲ್ಲಿ ಸಮುದ್ರಯಾನ ಸಂಬಂಧ ನಿರೂಪಿಸಿರುವ ಕಾನೂನುಗಳನ್ನು ಗೌರವಿಸಬೇಕಿದೆ ಎಂದು ಒತ್ತಿ ಹೇಳಿದರು.

ಸಿಸೋಡಿಯಾ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರಾಗಿರುವ ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರಿದ್ದ ನ್ಯಾಯಪೀಠವು, ತನಿಖಾ ಸಂಸ್ಥೆಗಳ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ವಿಚಾರಣೆಯು ಆರರಿಂದ ಎಂಟು ತಿಂಗಳಲ್ಲಿ ಮುಕ್ತಾಯವಾಗಲಿದೆ. ಒಂದು ವೇಳೆ ಮೂರು ತಿಂಗಳಲ್ಲಿ ವಿಚಾರಣೆಯು ಮಂದಗತಿಯಲ್ಲಿ ನಡೆಯುತ್ತಿದೆ ಎಂದು ಅನಿಸಿದಾಗ ಸಿಸೋಡಿಯಾ ಅವರು ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿತು.

ಷೇರುಪೇಟೆ ವಹಿವಾಟು ▲329



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	19,047
ಇಂದಿನ ಅಂತ್ಯ	19,140
▲	93
ದಿನದ ಗರಿಷ್ಠ	19,158

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1560 (1550)
ಸೋಯಾ (ರಿಫೈಂಡ್)	₹920 (920)
ಸೂರ್ಯಕಾಂತಿ (ರಿಫೈಂಡ್)	₹915 (915)
ಪಾಮೋಲಿನ್	₹818 (822)

ವಿನಿಮಯ ದರ

$ ಡಾಲರ್	83.23
£ ಪೌಂಡ್	100.98
€ ಯುರೊ	88.10
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8350-8350
ಪುತ್ತೂರು	₹4500-7300
ತಿಪಟೂರು	₹8000-8730
ತುಮಕೂರು	₹4000-5600
ತುರುವೇಕೆರೆ	₹8500-8800

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹10800
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

ಜೀ ಪ್ರಕರಣ: ಗೋಯೆಂಕಾ ವಿರುದ್ಧದ ಸೆಬಿ ಆದೇಶ ರದ್ದು

ಮುಂಬೈ (ಪಿಟಿಐ): ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್‌ನ (ಜೆಡ್‌ಇಇಎಲ್) ಪ್ರವರ್ತಕ ಪುನಿತ್ ಗೋಯೆಂಕಾ ಅವರ ವಿರುದ್ಧದ ಆದೇಶವನ್ನು ಷೇರುಪೇಟೆ ಮೇಲ್ಮನವಿ ನ್ಯಾಯಮಂಡಳಿಯು (ಎಸ್‌ಎಟಿ) ಸೋಮವಾರ ರದ್ದುಪಡಿಸಿದೆ.

ಗೋಯೆಂಕಾ ಅವರು ಕಂಪನಿಯಲ್ಲಿ ಅಥವಾ ಯಾವುದೇ ಸಮೂಹ ಸಂಸ್ಥೆಗಳಲ್ಲಿ ಪ್ರಮುಖ ಹುದ್ದೆ ಹೊಂದುವಂತೆ ಇಲ್ಲ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಆಗಸ್ಟ್ 14ರಂದು ಆದೇಶ ನೀಡಿತ್ತು. ಜೀ ಮತ್ತು ಸೋನಿ ವಿಲೀನಗೊಂಡ ಬಳಿಕ ರೂಪಗೊಳ್ಳಲಿರುವ ಕಂಪನಿಯಲ್ಲಿಯೂ ಅವರು ಯಾವುದೇ ಉನ್ನತ ಸ್ಥಾನ ಹೊಂದುವಂತೆ ಇಲ್ಲ ಎಂದು ಸೆಬಿ ಆದೇಶದಲ್ಲಿ ತಿಳಿಸಿತ್ತು.

ಹಣ ದುರ್ಬಳಕೆ ಮಾಡಿಕೊಂಡಿರುವುದಕ್ಕೆ ಯಾವುದೇ ಸಾಕ್ಷ್ಯ ದೊರೆತಿಲ್ಲ. ಹೀಗಾಗಿ ಸೆಬಿ ನೀಡಿರುವ ಆದೇಶವು ನಿಷ್ಠುರವಾಗಿದ್ದು ಸಮರ್ಥಿಸಲಾಗದು ಎಂದು ಹೇಳುವ ಮೂಲಕ ಆದೇಶವನ್ನು ಎಸ್‌ಎಟಿ ರದ್ದುಪಡಿಸಿದೆ. ಸೆಬಿಯ ತನಿಖೆಗೆ ಸಹಕರಿಸುವಂತೆಯೂ ಗೋಯೆಂಕಾ ಅವರಿಗೆ ನಿರ್ದೇಶನ ನೀಡಿದೆ. ತನಿಖೆಯ ವೇಳೆ ಅವರ ವಿರುದ್ಧ ಯಾವುದೇ ಸಾಕ್ಷ್ಯ ದೊರೆತಲ್ಲಿ ಕಾನೂನಿನ ರಿತ್ಯಾ ಅಗತ್ಯ ಕ್ರಮ ತೆಗೆದುಕೊಳ್ಳಬಹುದು ಎಂದು ತಿಳಿಸಿದೆ.

ಜೆಡ್‌ಇಇಎಲ್‌ನ ಅಧ್ಯಕ್ಷ ಸುಭಾಷ್ ಚಂದ್ರ ಮತ್ತು ಪ್ರವರ್ತಕ ಗೋಯೆಂಕಾ ಅವರು ತಮ್ಮ ಹುದ್ದೆಯನ್ನು ದುರ್ಬಳಕೆ ಮಾಡಿಕೊಂಡು ಕಂಪನಿಯ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಿದ್ದಾರೆ ಎಂದು ಸೆಬಿ ತನ್ನ ಆದೇಶದಲ್ಲಿ ತಿಳಿಸಿತ್ತು.

ಜೆಡ್‌ಇಇಎಲ್‌ನ ಷೇರುದಾರರು ಗೋಯೆಂಕಾ ಅವರಲ್ಲಿ ವಿಶ್ವಾಸ ಹೊಂದಿದ್ದು, ವಿಲೀನದ ನಂತರವೂ ಅವರು ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ಮುಂದುವರಿಯಬೇಕು ಎಂದು ಬಯಸುತ್ತಿದ್ದಾರೆ ಎನ್ನುವುದನ್ನೂ ಎಸ್‌ಎಟಿ ಪರಿಗಣಿಸಿದೆ.

ಜನವರಿ 1ರಿಂದ ಪರಿಷ್ಕೃತ ಅರ್ಜಿ ನೀಡಿ: ಕಂಪನಿಗಳಿಗೆ ಐಆರ್‌ಡಿಎಐ ಸೂಚನೆ

‘ವಿಮೆ ಮಾಹಿತಿ ಅರ್ಥ ಆಗುವಂತಿರಲಿ’

ನವದೆಹಲಿ (ಪಿಟಿಐ): ವಿಮೆ ಯೋಜನೆಗೆ ಸಂಬಂಧಿಸಿದಂತೆ ಪ್ರಮುಖ ಮಾಹಿತಿಗಳನ್ನು 2024ರ ಜನವರಿ 1ರಿಂದ ಗ್ರಾಹಕರಿಗೆ ನೀಡಬೇಕು ಎಂದು ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ಎಲ್ಲ ವಿಮಾ ಕಂಪನಿಗಳಿಗೆ ಸೂಚನೆ ನೀಡಿದೆ.



ವಿಮಾ ಯೋಜನೆಯ ಕುರಿತು ಗ್ರಾಹಕರಿಗೆ ನೀಡಲು ಸದ್ಯ ಇರುವ ಮಾಹಿತಿ ಪುಟದಲ್ಲಿ ಪರಿಷ್ಕರಣೆ ಮಾಡಲಾಗಿದೆ. ಸಮ್ ಅಶೂರ್ಡ್, ಕ್ಲೇಮ್ ಪ್ರಕ್ರಿಯೆ, ಯೋಜನೆಯು ಏನನ್ನು ಒಳಗೊಳ್ಳಲಿದೆ ಮತ್ತು ಒಳಗೊಳ್ಳುವುದಿಲ್ಲ ಎನ್ನುವ ಮಾಹಿತಿಗಳನ್ನು ನೀಡಬೇಕು ಎಂದು ಪ್ರಾಧಿಕಾರವು ತಿಳಿಸಿದೆ.

ತಾವು ಖರೀದಿಸುವ ವಿಮಾ ಯೋಜನೆಯ ಷರತ್ತುಗಳ ಬಗ್ಗೆ ಗ್ರಾಹಕರು ತಿಳಿದುಕೊಂಡಿರುವುದು ಬಹಳ ಮುಖ್ಯ. ಗ್ರಾಹಕರಿಗೆ ಅರ್ಥ ಆಗುವಂತೆ ಸರಳವಾದ ಪದಗಳಲ್ಲಿ ಯೋಜನೆಗೆ ಸಂಬಂಧಿಸಿದ ವಿವರಗಳನ್ನು ಕಂಪನಿಗಳು ನೀಡುವುದು ಅಗತ್ಯವಾಗಿದೆ ಎಂದು ಪ್ರಾಧಿಕಾರವು ಸುತ್ತೋಲೆಯಲ್ಲಿ ಹೇಳಿದೆ.

ಮಾಹಿತಿಯ ಕೊರತೆಯ ಬಗ್ಗೆ ಹಲವು ದೂರುಗಳು ಬರುತ್ತಿವೆ. ಹೀಗಾಗಿ ಈ ಪರಿಷ್ಕರಣೆ ಮಾಡಲಾಗಿದೆ ಎಂದು ಹೇಳಿದೆ. ಈ ಪರಿಷ್ಕೃತ ಮಾಹಿತಿಯನ್ನು ಮಧ್ಯವರ್ತಿಗಳು ಮತ್ತು ಏಜೆಂಟ್‌ಗಳು ವಿಮಾದಾರರಿಗೆ ವಿತರಿಸಿ ಅವರಿಂದ ಒಪ್ಪಿಗೆ ಪಡೆದುಕೊಳ್ಳಬೇಕು. ಪಾಲಿಸಿದಾರರು ಬಯಸಿದರೆ ಸ್ಥಳೀಯ ಭಾಷೆಯಲ್ಲಿಯೂ ಮಾಹಿತಿ ಲಭ್ಯವಾಗುವಂತೆ ಮಾಡಬೇಕು ಎಂದಿದೆ.

ಯಾವೆಲ್ಲಾ ಮಾಹಿತಿ ನೀಡಬೇಕು?

- ವಿಮಾ ಯೋಜನೆಯ ಹೆಸರು; ಯೋಜನೆಯ ಸಂಖ್ಯೆ
- ಯಾವ ವಿಧದ ವಿಮೆ
- ಸಮ್ ಅಶೂರ್ಡ್
- ಯೋಜನೆಯು ಏನೆಲ್ಲಾ ಒಳಗೊಂಡಿದೆ ಮತ್ತು ಒಳಗೊಂಡಿಲ್ಲ
- ವಿಮೆ ಮೊತ್ತ ಕ್ಲೇಮ್ ಆಗುವ ಅವಧಿ
- ಕವರೇಜ್ ಮಿತಿ
- ಕ್ಲೇಮ್ ಪ್ರಕ್ರಿಯೆ
- ದೂರು/ವ್ಯಾಜ್ಯ ಪರಿಹರಿಸುವ ವ್ಯವಸ್ಥೆಯ ಮಾಹಿತಿ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹336-485
ದ್ವಿತಳಿ (ಬಿ.ವಿ)	₹346-610

ಮುಂಬೈ ಧಾರಣೆ

ಶೇಂಗಾ

30-10-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1560)
ಒಂದು ವಾರದ ಡೆಲಿವರಿ	1565 (1555)
ಸೋಯಾ ಕಚ್ಚಾ	865 (870)
ಪಾಮ್ ವಾರದ ಡೆಲಿವರಿ	822 (825)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (855)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,100 (61,350)
ಬೆಳ್ಳಿ ಕೆ.ಜಿ 72,400 (72,050)

ಆವರಣದಲ್ಲಿ ಶನಿವಾರ ದಿನದ ಧಾರಣೆ

ಸಿಂಗೂರು: ಟಾಟಾಗೆ ₹766 ಕೋಟಿ ಪರಿಹಾರ

ನವದೆಹಲಿ (ಪಿಟಿಐ): ಸಿಂಗೂರಿನಲ್ಲಿ ನ್ಯಾನೊ ಕಾರು ತಯಾರಿಕಾ ಘಟಕ ಸ್ಥಾಪನೆ ಸ್ಥಗಿತಗೊಂಡಿದ್ದಕ್ಕಾಗಿ ಟಾಟಾ ಮೋಟರ್ಸ್‌ಗೆ ₹766 ಕೋಟಿ ಪರಿಹಾರ ನೀಡುವಂತೆ ಮಧ್ಯಸ್ಥಿಕೆ ನ್ಯಾಯಮಂಡಳಿಯು ಪಶ್ಚಿಮ ಬಂಗಾಳ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ (ಡಬ್ಲ್ಯುಬಿಐಡಿಸಿ) ಸೂಚನೆ ನೀಡಿದೆ.

ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ನ್ಯಾನೊ ಘಟಕ ಸ್ಥಾಪನೆಗೆ ತೃಣಮೂಲ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಬಲವಂತದಿಂದ ರೈತರ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿತ್ತು. ಇದರಿಂದಾಗಿ ಅಲ್ಲಿ ಘಟಕ ಸ್ಥಾಪನೆಯನ್ನು ಕಂಪನಿ ಕೈಬಿಟ್ಟಿತ್ತು, 2008 ರ ಅಕ್ಟೋಬರ್‌ನಲ್ಲಿ ಗುಜರಾತ್‌ನ ಸಾನಂದದಲ್ಲಿ ಘಟಕ ಸ್ಥಾಪಿಸಿತು. ಆದರೆ ಅದಾಗಲೇ ಸಿಂಗೂರು ಘಟಕಕ್ಕಾಗಿ ಕಂಪನಿಯು ₹1 ಸಾವಿರ ಕೋಟಿ ಹೂಡಿಕೆ ಮಾಡಿತ್ತು.

ಘಟಕ ಸ್ಥಾಪನೆಗಾಗಿ ಬಂಡವಾಳ ಹೂಡಿಕೆ ಮಾಡಿದ್ದರಿಂದ ಆಗಿರುವ ನಷ್ಟವನ್ನೂ ಒಳಗೊಂಡು ಹಲವು ಕಾರಣಗಳನ್ನು ಇಟ್ಟುಕೊಂಡು ಟಾಟಾ ಮೋಟರ್ಸ್ ಕಂಪನಿಯು ಪರಿಹಾರಕ್ಕಾಗಿ ಮಧ್ಯಸ್ಥಿಕೆ ನ್ಯಾಯಮಂಡಳಿಯ ಮೆಟ್ಟಿಲೇರಿತ್ತು.

2016ರ ಸೆಪ್ಟೆಂಬರ್ 1ರಿಂದ ಈವರೆಗೆ ವಾರ್ಷಿಕ ಶೇ 11ರಷ್ಟು ಬಡ್ಡಿಯ ಜೊತೆಗೆ ₹765.78 ಕೋಟಿ ಪರಿಹಾರ ನೀಡುವಂತೆ ಈ ನ್ಯಾಯಮಂಡಳಿಯು ಸೋಮವಾರ ತೀರ್ಪು ನೀಡಿರುವುದಾಗಿ ಕಂಪನಿ ಷೇರುಪೇಟೆಗೆ ಮಾಹಿತಿ ನೀಡಿದೆ.

ಐಎಂಪಿಸಿಎಲ್ ಖರೀದಿ: ಹೂಡಿಕೆದಾರರ ಆಸಕ್ತಿ

ನವದೆಹಲಿ (ಪಿಟಿಐ): ಇಂಡಿಯನ್ ಮೆಡಿಸಿನ್ಸ್ ಫಾರ್ಮಾಸುಟಿಕಲ್ ಕಾರ್ಪೊರೇಷನ್ ಲಿಮಿಟೆಡ್ (ಐಎಂಪಿಸಿಎಲ್) ಅನ್ನು ಖರೀದಿಸುವ ಸಂಬಂಧ ಹಲವು ಹೂಡಿಕೆದಾರರು ಆಸಕ್ತಿ ವ್ಯಕ್ತಪಡಿಸಿದ್ದಾರೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಅವರು ಈ ಸಂಬಂಧ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದು, ಪ್ರಕ್ರಿಯೆಯು ಇದೀಗ ಎರಡನೇ ಹಂತಕ್ಕೆ ಬಂದಿದೆ. ಅರ್ಹ ಹೂಡಿಕೆದಾರರಿಂದ ಹಣಕಾಸಿನ ಬಿಡ್‌ಗೆ ಆಹ್ವಾನಿಸಲಾಗುವುದು ಎಂದಿದ್ದಾರೆ.

ಖರೀದಿ ಆಸಕ್ತಿ ವ್ಯಕ್ತಪಡಿಸುವಂತೆ ಇಲಾಖೆಯು ಆಗಸ್ಟ್ 31ರಂದು ಅರ್ಜಿ ಆಹ್ವಾನಿಸಿತ್ತು. ಅರ್ಜಿ ಸಲ್ಲಿಸಲು ಸೋಮವಾರ ಕಡೆಯ ದಿನವಾಗಿತ್ತು.

‘ಸ್ಥಿರ ಸರ್ಕಾರದಿಂದ ತ್ವರಿತ ಅಭಿವೃದ್ಧಿ’

ಗುಜರಾತ್‌ನಲ್ಲಿ ₹ 5,950 ಕೋಟಿ ವೆಚ್ಚದ ಕಾಮಗಾರಿಗಳಿಗೆ ಪ್ರಧಾನಿ ಚಾಲನೆ

ಮೆಹ್ಸಾನಾ (ಗುಜರಾತ್), (ಪಿಟಿಐ): ದೇಶದ ಜನರು ಸ್ಥಿರ ಸರ್ಕಾರ ರಚನೆಗೆ ಅವಕಾಶ ಮಾಡಿಕೊಟ್ಟಿರುವ ಕಾರಣ ಭಾರತವು ವಿಶ್ವದ ಮೆಚ್ಚುಗೆಗೆ ಪಾತ್ರವಾಗಿದೆ. ಅಲ್ಲದೆ ದೇಶದಲ್ಲಿ ತ್ವರಿತವಾಗಿ ಅಭಿವೃದ್ಧಿ ಕಂಡುಬರುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಸೋಮವಾರದಿಂದ ಗುಜರಾತ್‌ನಲ್ಲಿ ಪ್ರವಾಸ ಕೈಗೊಂಡಿರುವ ಅವರು, ಮೆಹ್ಸಾನಾ ಜಿಲ್ಲೆಯಲ್ಲಿ ಒಟ್ಟು ₹5,950 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಹಾಗೂ ಕೆಲವು ಯೋಜನೆಗಳ ಉದ್ಘಾಟನೆ ನೆರವೇರಿಸಿದ ಬಳಿಕ ಮಾತನಾಡಿದರು.

‘ರಾಜ್ಯದ ಅಭಿವೃದ್ಧಿಗೆ ಪೂರಕವಾಗುವ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಸ್ಥಿರ ಸರ್ಕಾರ ಹೇಗೆ ಅನುಕೂಲ ಮಾಡಿಕೊಡಲಿದೆ ಎಂಬ ಅನುಭವ ಗುಜರಾತ್‌ನ ಜನರಿಗೆ ಆಗಿದೆ. ಈಗ ಕೈಗೊಂಡಿರುವ ಬಹುದೊಡ್ಡ ಅಭಿವೃದ್ಧಿ ಯೋಜನೆಗಳ ಹಿಂದೆ ಹಲವು ವರ್ಷಗಳ ಕಠಿಣ ನಿಲುವುಗಳಿವೆ ಎಂಬುದು ಜನರಿಗೆ ಗೊತ್ತಿದೆ. ಗುಜರಾತ್ ಅಭಿವೃದ್ಧಿಯ ಹಿಂದೆ ಧೈರ್ಯದ ನಿಲುವುಗಳಿವೆ. ನೀವು ನನ್ನನ್ನು ಪ್ರಧಾನಿ ಎಂಬುದಕ್ಕಿಂತ, ನಿಮ್ಮವನನ್ನಾಗಿ ಕಾಣುತ್ತೀರಿ. ಈ ನಿಮ್ಮ ನರೇಂದ್ರಭಾಯ್ ವಾಗ್ದಾನ ನೀಡಿದರೆ, ಅದನ್ನು ಈಡೇರಿಸುತ್ತಾನೆ ಎಂಬುದು ನಿಮ್ಮಗೆ ಗೊತ್ತಿದೆ’ ಎಂದು ಹೇಳಿದರು.

ಗುಜರಾತ್‌ನ ಮೆಹ್ಸಾನಾ ಜಿಲ್ಲೆಯಲ್ಲಿ ಸೋಮವಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕು ಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೆನಪಿನ ಕಾಣಿಕೆ ನೀಡಿ, ಸನ್ಮಾನಿಸಲಾಯಿತು

ಇದಕ್ಕೂ ಮುನ್ನ ಬನಸ್ಕಾಂತಾ ಜಿಲ್ಲೆಯ ಅಂಬಾಜಿ ಪಟ್ಟಣದಲ್ಲಿರುವ ಪ್ರಸಿದ್ಧ ಅಂಬಾ ದೇವಸ್ಥಾನಕ್ಕೆ ಭೇಟಿ ನೀಡಿದ ಮೋದಿ ಅವರು ಪ್ರಾರ್ಥನೆ ಸಲ್ಲಿಸಿದರು.

ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಅಹಮದಾಬಾದ್‌ಗೆ ಬಂದಿಳಿದ ಅವರು, ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಅಂಬಾಜಿ ಪಟ್ಟಣದ ಬಳಿಯಿರುವ ಚಿಖ್ಲಾ ಗ್ರಾಮಕ್ಕೆ ಆಗಮಿಸಿದರು. ಈ ವೇಳೆ ರಸ್ತೆ ಬದಿಗಳಲ್ಲಿ ನಿಂತಿದ್ದ ಸಾವಿರಾರು ಜನರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಚಿಪ್ಪು	29099-34529	ಚಾಲಿ	37239-40339
ಕೋಕ	15000-27500	ಕೋಕ	19509-32009	ಕೋಕ	31019-33299
ಹೊಸತು	27500-36500	ಫ್ಯಾಕ್ಟರಿ	11019-25000	ಕೆಂಪುಗೋಟು	28089-32619
ಹಳತು	43000-48500	ಹಳೆಚಾಲಿ	39809-40239	ರಾಶಿ	43269-45749
ಬೆಂಗಳೂರು		ಹೊಸಚಾಲಿ	37509-40019	ತಟ್ಟಿಬೆಟ್ಟೆ	36209-43099
ಇತರೆ	55000-60000	**ಪುತ್ತೂರು**		**ಶಿರಸಿ**	
ಚಿತ್ರದುರ್ಗ		ಕೋಕ	11000-25000	ಬೆಟ್ಟೆ	38609-44939
ಅಪಿ	45109-45522	ಹೊಸತು	34000-43500	ಬಿಳಿಗೋಟು	27099-36122
ಬೆಟ್ಟೆ	36139-36559	**ಸಾಗರ**		ಚಾಲಿ	37199-41628
ಕೆಂಪುಗೋಟು	30119-30579	ಬಿಳಿಗೋಟು	27099-33499	ಕೆಂಪುಗೋಟು	27699-34431
ರಾಶಿ	44629-45069	ಚಾಲಿ	31999-38899	ರಾಶಿ	46109-47818
ಹೊನ್ನಾವರ		ಕೋಕ	22319-34929	**ಯಲ್ಲಾಪುರ**	
ಹಳೆಚಾಲಿ	37000-39000	ಕೆಂಪುಗೋಟು	31899-36599	ಬಿಳಿಗೋಟು	26969-35800
ಹೊಸಚಾಲಿ	25000-34000	ರಾಶಿ	34599-48110	ಚಾಲಿ	37800-41380
ಕಾರ್ಕಳ		ಸಿಪ್ಪೆಗೋಟು	12099-21201	ಕೋಕ	18011-32919
ಹಳತು	30000-58500	**ಸಿದ್ದಾಪುರ**		ಕೆಂಪುಗೋಟು	24899-34799
ಕುಮಟ		ಬಿಳಿಗೋಟು	32099-35109	ರಾಶಿ	45761-54209
				ತಟ್ಟಿಬೆಟ್ಟೆ	37410-44860

ಪೆಟ್ರೋಲ್ ಬಾಂಬ್ ರಾಜಭವನ ಸುಳ್ಳು ಪ್ರಚಾರ: ಆರೋಪ

ಮದುರೈ (ಪಿಟಿಐ): ಪೆಟ್ರೋಲ್ ಬಾಂಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಭವನ ಕಚೇರಿಯು ಸುಳ್ಳು ಸುದ್ದಿ ಹರಡುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೋಮವಾರ ಆರೋಪಿಸಿದ್ದಾರೆ.

ಎಂ.ಕೆ. ಸ್ಟಾಲಿನ್

ಸ್ವಾತಂತ್ರ್ಯ ಹೋರಾಟಗಾರ್ತಿ ಮುತ್ತುರಾಮಲಿಂಗಾ ಥೇವರ್ ಅವರ ಸ್ಮಾರಕಕ್ಕೆ ಗೌರವ ಸಲ್ಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರಸ್ತೆಯಲ್ಲಿ ಪೆಟ್ರೋಲ್ ಬಾಂಬ್ ಬಿದ್ದಿರುವುದನ್ನು ಸಾಬೀತುಪಡಿಸುವ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪೊಲೀಸ್ ಅಧಿಕಾರಿಗಳು ಇತ್ತೀಚೆಗೆ ಬಿಡುಗಡೆ ಮಾಡಿದ್ದರು.

ಆದರೆ, ಪೆಟ್ರೋಲ್ ಬಾಂಬ್ ಮೂಲಕ ರಾಜಭವನದ ಮೇಲೆ ದಾಳಿ ನಡೆಸಲಾಗಿದೆ ಎಂಬ ಈ ಸುಳ್ಳನ್ನು ರಾಜಭವನವೇ ಯೋಜಿತವಾಗಿ ಪ್ರಚಾರ ಮಾಡುತ್ತಿದೆ’ ಎಂದು ದೂರಿದರು.

ಇ.ಡಿ ವಿಚಾರಣೆಗೆ ಹಾಜರಾದ ಸಿ.ಎಂ ಗೆಹಲೋತ್ ಪುತ್ರ

ನವದೆಹಲಿ (ಪಿಟಿಐ): ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಪುತ್ರ ವೈಭವ್ ಗೆಹಲೋತ್ ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಜಾರಿ ನಿರ್ದೇಶನಾಲಯ (ಇ.ಡಿ) ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸಿದರು.

ಇ.ಡಿ ಕಳೆದ ವಾರ ಅವರಿಗೆ ಸಮನ್ಸ್ ಜಾರಿ ಮಾಡಿತ್ತು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ವೈಭವ್, ‘ತನಿಖಾ ಸಂಸ್ಥೆಯು 10–12 ವರ್ಷ ಹಳೆಯ ಸುಳ್ಳು ಆರೋಪ ನನ್ನ ಮೇಲೆ ಹೊರಿಸುತ್ತಿದೆ. ಅದೂ ಚುನಾವಣೆ ದಿನಾಂಕ ಘೋಷಣೆ ಬಳಿಕ’ ಎಂದು ಹೇಳಿದ್ದರು.

ಟ್ರೈಟನ್ ಹೋಟೆಲ್ ಮತ್ತು ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್, ವರ್ಧಾ ಎಂಟರ್‌ಪ್ರೈಸಸ್ ಪ್ರೈ. ಲಿ ಮೇಲೆ ಇತ್ತೀಚೆಗೆ ಇ.ಡಿ ದಾಳಿ ನಡೆಸಿದ್ದು, ಇದಕ್ಕೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿ ಜಾರಿ ನಿರ್ದೇಶನಾಲಯ ಸಮನ್ಸ್ ನೀಡಿತ್ತು.

ಇಸ್ರೇಲ್ ಪರ ಬೇಹುಗಾರಿಕೆ ನಡೆಸಿದ ಆರೋಪ

‘ಮರಣದಂಡನೆಗೆ ಗುರಿಯಾದ 8 ಮಂದಿ ಬಿಡುಗಡೆಗೆ ಪ್ರಯತ್ನ’

ನವದೆಹಲಿ: ಕತಾರ್‌ನಲ್ಲಿ ಮರಣದಂಡನೆಗೆ ಗುರಿಯಾಗಿರುವ ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಅಧಿಕಾರಿಗಳನ್ನು ಸ್ವದೇಶಕ್ಕೆ ಕರೆತರಲು ಸರ್ಕಾರವು ಹೆಚ್ಚಿನ ಪ್ರಾಮುಖ್ಯತೆ ನೀಡಲಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ.

ಇಸ್ರೇಲ್ ಪರ ಗೂಢಚರ್ಯೆ ನಡೆಸಿದ ಆರೋಪದ ಮೇಲೆ ಕಳೆದ ವಾರ ಕತಾರ್‌ನ ನ್ಯಾಯಾಲಯದಿಂದ ಮರಣದಂಡನೆ ಶಿಕ್ಷೆಗೆ ಗುರಿಯಾದ ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಅಧಿಕಾರಿಗಳ ಕುಟುಂಬದ ಸದಸ್ಯರನ್ನು ಸೋಮವಾರ ಅವರು ಭೇಟಿಯಾಗಿ ಮಾತುಕತೆ ನಡೆಸಿದರು.

‘ಬಂಧಿತರ ಕುಟುಂಬದವರ ಕಳವಳ ಮತ್ತು ನೋವನ್ನು ಸರ್ಕಾರ ಹಂಚಿಕೊಳ್ಳಲಿದೆ. ಬಂಧಿತರ ಬಿಡುಗಡೆಗೆ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮುಂದುವರಿಸಲಿದೆ. ಅವರನ್ನು ದೇಶಕ್ಕೆ ಮರಳಿ ಕರೆತರಲು ಸರ್ಕಾರವು ಆ ಕುಟುಂಬದವರೊಂದಿಗೆ ನಿಕಟ ಸಮನ್ವಯ ಸಾಧಿಸಲಿದೆ’ ಎಂದು ಜೈಶಂಕರ್ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎಸ್ ಜೈಶಂಕರ್

’ನಮ್ಮವರ ಬಿಡುಗಡೆಗೆ ಸರ್ಕಾರ ಕಾನೂನುಗಳ ಮೂಲಕ ಹೋರಾಟ ನಡೆಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ’ ಎಂದು ಭಾರತೀಯ ನೌಕಾಪಡೆಯ ಮುಖ್ಯಸ್ಥ ಆರ್. ಹರಿಕುಮಾರ್ ಸೋಮವಾರ ಹೇಳಿದ್ದಾರೆ.

ಭಾರತೀಯ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳ ವಿರುದ್ಧದ ಆರೋಪಗಳನ್ನು ಕತಾರ್ ಅಥವಾ ಕೇಂದ್ರ ಸರ್ಕಾರ ಅಧಿಕೃತವಾಗಿ ಬಹಿರಂಗಗೊಳಿಸಿಲ್ಲ. ಆದರೂ, ಕತಾರ್ ಸರ್ಕಾರವು ಬೇಹುಗಾರಿಕೆಯ ಆರೋಪ ಹೊರಿಸಿದೆ ಎಂದು ಮೂಲಗಳು ತಿಳಿಸಿವೆ.

ಕತಾರ್‌ಗೆ ಸುಧಾರಿತ ಸ್ಟೆಲ್ತ್ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸುವ ಯೋಜನೆಯ ಬಗ್ಗೆ ಇಸ್ರೇಲ್‌ಗೆ ರಹಸ್ಯ ಮಾಹಿತಿ ರವಾನಿಸಿದ ಆರೋಪವನ್ನು ಈ ಎಂಟು ಮಂದಿ ಮೇಲೆ ಹೊರಿಸಲಾಗಿದೆ.

ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿಗಳಾದ ಕ್ಯಾಪ್ಟನ್ ನವತೇಜ್ ಸಿಂಗ್ ಗಿಲ್, ಕ್ಯಾಪ್ಟನ್ ಬೀರೇಂದ್ರ ಕುಮಾರ್ ವರ್ಮಾ, ಕ್ಯಾಪ್ಟನ್ ಸೌರಭ್ ವಸಿಷ್ಠ, ಕಮಾಂಡರ್ ಅಮಿತ್ ನಾಗ್ಪಾಲ್, ಕಮಾಂಡರ್ ಪೂರ್ಣೇಂದು ತಿವಾರಿ, ಕಮಾಂಡರ್ ಸುಗುಣಾಕರ್ ಪಕಾಲ, ಕಮಾಂಡರ್ ಸಂಜೀವ್ ಗುಪ್ತಾ ಮತ್ತು ನಾವಿಕ ರಾಗೇಶ್ ಅವರನ್ನು 2022ರ ಆಗಸ್ಟ್ 30ರಂದು ಕತಾರ್ ಗುಪ್ತಚರ ಸೇವೆ ವಿಭಾಗವು ದೋಹಾದಲ್ಲಿ ಬಂಧಿಸಿದೆ. ಬಂಧಿತರೆಲ್ಲರೂ ಅಲ್ ದಹ್ರಾ ಕಂಪನಿಯಲ್ಲಿ ಉದ್ಯೋಗಿಗಳಾಗಿದ್ದರು. ಈ ಕಂಪನಿ ಭದ್ರತಾ ಏಜೆನ್ಸಿಗಳು ಮತ್ತು ಕತಾರ್‌ನ ರಕ್ಷಣಾ ಪಡೆಗಳಿಗೆ ತರಬೇತಿ ಮತ್ತು ಇತರ ಹಲವಾರು ಸೇವೆಗಳನ್ನು ಒದಗಿಸುತ್ತಿತ್ತು.

ಕಂಪನಿಯ ಸಿಬ್ಬಂದಿಯಲ್ಲಿ 70ಕ್ಕೂ ಹೆಚ್ಚು ಭಾರತೀಯರು ಇದ್ದಾರೆ. ಇವರಲ್ಲಿ ಹೆಚ್ಚಿನವರು ಭಾರತೀಯ ನೌಕಾಪಡೆಯ ಮಾಜಿ ಅಧಿಕಾರಿಗಳು. ತನ್ನ ಅಧಿಕಾರಿಗಳನ್ನು ಬಂಧಿಸಿ ಜೈಲಿನಲ್ಲಿಟ್ಟ ನಂತರ, ಕಳೆದ ಮೇ ತಿಂಗಳಿಂದ ಕಂಪನಿಯು ಕತಾರ್‌ನಲ್ಲಿ ತನ್ನ ಕಾರ್ಯಚಟುವಟಿಕೆ ಸ್ಥಗಿತಗೊಳಿಸಿದೆ.

ಸಂಕ್ಷಿಪ್ತ ಸುದ್ದಿ

ರಿಲಯನ್ಸ್ ಮೌಲ್ಯ ₹31 ಸಾವಿರ ಕೋಟಿ ಹೆಚ್ಚಳ

ನವದೆಹಲಿ(ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯ ಷೇರು ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ಶೇ 2ರಷ್ಟು ಹೆಚ್ಚಾಯಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಮೌಲ್ಯ ₹31,023 ಕೋಟಿಯಷ್ಟು ಏರಿಕೆ ಕಂಡು, ಒಟ್ಟು ಬಂಡವಾಳ ಮೌಲ್ಯವು ₹15,64 ಲಕ್ಷ ಕೋಟಿಗೆ ತಲುಪಿತು.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭ ಶೇ 27ರಷ್ಟು ಏರಿಕೆ ಕಂಡಿರುವುದು ಕಂಪನಿಯ ಷೇರುಗಳ ಮೌಲ್ಯ ಹೆಚ್ಚಳಕ್ಕೆ ಕಾರಣವಾಯಿತು.

ಆ್ಯಪಲ್ ಇಂಡಿಯಾ ವರಮಾನ ಶೇ 48ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಆ್ಯಪಲ್ ಇಂಡಿಯಾದ ವರಮಾನವು 2023ರ ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಶೇ 48ರಷ್ಟು ಹೆಚ್ಚಾಗಿ ₹49,322 ಕೋಟಿಗೆ ತಲುಪಿದೆ ಎಂದು ಬಿಸಿನೆಸ್ ಇಂಟಲಿಜೆನ್ಸ್ ಸಂಸ್ಥೆ ಟೋಫ್ಲರ್ ತಿಳಿಸಿದೆ.

2022ರ ಹಣಕಾಸು ವರ್ಷದಲ್ಲಿ ಕಂಪನಿ ₹33,381 ಕೋಟಿ ವರಮಾನ ಹೊಂದಿತ್ತು. ಕಂಪನಿಯ ಲಾಭವು 2022ರ ಹಣಕಾಸು ವರ್ಷದಲ್ಲಿ ₹1,263 ಕೋಟಿ ಇದ್ದಿದ್ದು 2023ರ ಹಣಕಾಸು ವರ್ಷದಲ್ಲಿ ₹2,230 ಕೋಟಿಗೆ ಏರಿಕೆಯಾಗಿದೆ. ಒಟ್ಟು ವೆಚ್ಚವು ₹31,693 ಕೋಟಿಯಿಂದ ₹46,444 ಕೋಟಿ ಏರಿಕೆ ಆಗಿದೆ ಎಂದು ಟೋಫ್ಲರ್ ತಿಳಿಸಿದೆ.

ಅದಾನಿ ಗ್ರೀನ್ ಎನರ್ಜಿ ಲಾಭ ಶೇ 149ರಷ್ಟು ಏರಿಕೆ

ನವದೆಹಲಿ (ಪಿಟಿಐ): ಅದಾನಿ ಗ್ರೀನ್ ಎನರ್ಜಿ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹371 ಕೋಟಿ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ (₹149 ಕೋಟಿ) ಶೇ 149ರಷ್ಟು ಏರಿಕೆ ಕಂಡಿದೆ.

ಒಟ್ಟು ವರಮಾನ ₹1,684 ಕೋಟಿಯಿಂದ ₹2,589 ಕೋಟಿಗೆ ಏರಿಕೆ ಆಗಿದೆ. ಇಂಧನ ಮಾರಾಟವು 306 ಕೋಟಿ ಯುನಿಟ್‌ನಿಂದ 573 ಯುನಿಟ್‌ಗೆ ಏರಿಕೆ ಕಂಡಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್

ಒಲಿಂಪಿಕ್ ಕೋಟಾ ಪಡೆದ ಅನೀಶ್

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ಅನೀಶ್ ಭಾನವಾಲಾ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 25 ಮೀ. ರ‍್ಯಾಪಿಡ್ ಪಿಸ್ತೂಲ್ ಫೈರ್ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದರು. ಜೊತೆಗೆ ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಸ್ಥಾನ ಗಿಟ್ಟಿಸಿದ ಭಾರತದ 12ನೇ ಶೂಟರ್ ಎನಿಸಿದರು.

ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಈ ಕೂಟದಲ್ಲಿ ಸೋಮವಾರ ಕರ್ನಾಲ್‌ನ 21 ವರ್ಷದ ಶೂಟರ್ ಫೈನಲ್‌ನಲ್ಲಿ 28 ಗುರಿಗಳೊಂದಿಗೆ ಮೂರನೇ ಸ್ಥಾನ ಪಡೆದರು. ಜಪಾನ್‌ನ ದೈ ಯೊಶಿಯೊಕಾ ಬೆಳ್ಳಿಯ ಪದಕ ಗೆದ್ದುಕೊಂಡರು. ಸ್ಥಳೀಯ ಫೆವರೀಟ್ ಲೀ ಗುನ್‌ಹಿಯೊಕ್ ಅವರು 34ರ ಸ್ಕೋರ್ ಗಳಿಸಿ ಚಿನ್ನ ಗೆದ್ದರು.

ಕ್ವಾಲಿಫಿಕೇಷನ್ ಹಂತದಲ್ಲೇ 3ನೇ ಸ್ಥಾನ ಪಡೆಯುವ ಮೂಲಕ ಭಾನವಾಲಾ ಅವರು ಪ್ಯಾರಿಸ್ ಕ್ರೀಡೆಗಳಿಗೆ ಸ್ಥಾನ ಖಚಿತಪಡಿಸಿಕೊಂಡರು.



ಅನೀಶ್ ಭಾನವಾಲಾ

6 ಮಂದಿಯ ಫೈನಲ್‌ನಲ್ಲಿ ಮೂವರು ಚೀನಾ ಶೂಟರ್‌ಗಳಿದ್ದರು. ಲೀ ಮತ್ತು ದೈ ಅವರು ಈ ಟೂರ್ನಿಗಿಂತ ಮೊದಲೇ ಬೇರೆ ಟೂರ್ನಿ ಗಳಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಕಾರಣ ಅನೀಶ್ ಹಾದಿ ಸುಗಮವಾಯಿತು. ವಿಜಯವೀರ್ ಸಿಧು ಒಟ್ಟಾರೆ 10ನೇ ಸ್ಥಾನ ಪಡೆದರೆ, ಆದರ್ಶ್ ಸಿಂಗ್ 25ನೇ ಸ್ಥಾನಕ್ಕೆ ಸರಿದರು.

ಪುರುಷರ ಟ್ರ್ಯಾಪ್ ತಂಡ ವಿಭಾಗದಲ್ಲಿ ಭಾರತ ಬೆಳ್ಳಿಯ ಪದಕ ಪಡೆಯಿತು. ಝೊರಾವರ್ ಸಿಂಗ್ ಸಂಧು (119), ಕಿನಾನ್ ಚೆನೈ (111), ಪೃಥ್ವಿರಾಜ್ ತೊಂಡೈಮನ್ (111) ಅವರಿದ್ದ ತಂಡ 341 ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನ ಪಡೆದರೆ, ಚಿನ್ನ ಕತಾರ್ ತಂಡದ ಪಾಲಾಯಿತು. ಇರಾನ್ ಕಂಚಿನ ಪದಕ ಗಳಿಸಿತು.

ಭಾರತ ಈ ಕೂಟದಲ್ಲಿ ಎಂಟು ಚಿನ್ನದ ಪದಕ ಒಳಗೊಂಡಂತೆ ಒಟ್ಟು 30 ಪದಕಗಳನ್ನು ಗೆದ್ದುಕೊಂಡಿದೆ. ಭಾನವಾಲಾ ಅವರು ಚಾಂಗ್ವಾನ್‌ನಲ್ಲಿ ಒಲಿಂಪಿಕ್ ಕೋಟಾ ಪಡೆದ ಭಾರತದ ಐದನೇ ಶೂಟರ್ ಎನಿಸಿದರು.

ಮಹಿಳೆಯರ ಟ್ರ್ಯಾಪ್ ಸ್ಪರ್ಧೆಯಲ್ಲಿ ರಾಜೇಶ್ವರಿ ಕುಮಾರಿ ಮತ್ತು ಶಗುನ್ ಚೌಧರಿ (ರ‍್ಯಾಂಕಿಂಗ್ ಪಾಯಿಂಟ್ಸ್‌ಗೆ ಸ್ಪರ್ಧಿಸಿದ್ದರು) ಕ್ರಮವಾಗಿ 108 ಮತ್ತು 107 ಸ್ಕೋರ್‌ನೊಡನೆ 7 ಮತ್ತು 8ನೇ ಸ್ಥಾನ ಪಡೆದರು. ಇವರು ಪದಕ ಆಕಾಂಕ್ಷಿಯಾಗಿರಲಿಲ್ಲ. ರ‍್ಯಾಂಕಿಂಗ್ ಪಾಯಿಂಟ್ಸ್ ಹೆಚ್ಚಿದಲು ಕಣಕ್ಕೆ ಇಳಿದಿದ್ದರು.

ಚುಂಬನ: ರುಬಿಯೇಲ್ಸ್‌ಗೆ ಮೂರು ವರ್ಷ ನಿಷೇಧ

ಜಿನೇವಾ (ಎಎಫ್‌ಪಿ): ಸ್ಪೇನ್ ಫುಟ್‌ಬಾಲ್ ತಂಡದ ಆಟಗಾರ್ತಿ ಜೆನ್ನಿ ಹೆರ್ಮೊಸೊ ಅವರ ತುಟಿಗೆ ಚುಂಬಿಸಿದ ಪ್ರಕರಣದಲ್ಲಿ ಸ್ಪೇನ್ ಫುಟ್‌ಬಾಲ್ ಫೆಡರೇಷನ್ ಮಾಜಿ ಅಧ್ಯಕ್ಷ ಲೂಯಿಸ್ ರುಬಿಯೇಲ್ಸ್ ಅವರ ಮೇಲೆ ಫಿಫಾ ಮೂರು ವರ್ಷಗಳ ನಿಷೇಧ ಹೇರಿದೆ.

ಆಗಸ್ಟ್‌ನಲ್ಲಿ ಸಿಡ್ನಿಯಲ್ಲಿ ನಡೆದಿದ್ದ ಫಿಫಾ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಸ್ಪೇನ್ ಚಾಂಪಿಯನ್ ಆಗಿತ್ತು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹೆರ್ಮೊಸೊ ತುಟಿಗೆ ಚುಂಬಿಸಿದ್ದ ರುಬಿಯೇಲ್ಸ್ ವ್ಯಾಪಕ ಟೀಕೆಗೆ ಒಳಗಾಗಿದ್ದರು.

ಈ ಘಟನೆಯ ಬೆನ್ನಲ್ಲೇ ಫಿಫಾ ಅವರನ್ನು 90 ದಿನಗಳ ಮಟ್ಟಿಗೆ ಅಮಾನತು ಮಾಡಿತ್ತು. ಇದೀಗ ‘ಫಿಫಾ ಶಿಸ್ತು ಸಮಿತಿಯು ರುಬಿಯೇಲ್ಸ್ ಮೇಲೆ ನಿಷೇಧ ಹೇರಿದೆ. ಮುಂದಿನ ಮೂರು ವರ್ಷಗಳ ಕಾಲ ಅವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಫುಟ್‌ಬಾಲ್ ಚಟುವಟಿಕೆಗಳಲ್ಲಿ ತೊಡಗುವಂತಿಲ್ಲ’ ಎಂದು ಫಿಫಾ ತಿಳಿಸಿದೆ.

‘ತಾವು ಉದ್ದೇಶಪೂರ್ವಕವಾಗಿ ಚುಂಬಿಸಿಲ್ಲ. ತಂಡದ ಗೆಲುವಿನ ಸಂಭ್ರಮದಲ್ಲಿ ಈ ರೀತಿ ಆಗಿದೆ’ ಎಂದು ರುಬಿಯೇಲ್ಸ್ ತಮ್ಮ ವರ್ತನೆಯನ್ನು ಸಮರ್ಥಿಸಿಕೊಂಡಿದ್ದರು. ಆರಂಭದಲ್ಲಿ ಹುದ್ದೆ ತ್ಯಜಿಸಲು ನಿರಾಕರಿಸಿದ್ದ ಅವರು ಒತ್ತಡಕ್ಕೆ ಮಣಿದು ಸೆಪ್ಟೆಂಬರ್‌ನಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿ

ಜಂಟಿ ಮುನ್ನಡೆಯಲ್ಲಿ ಅರ್ಜುನ್ ಇರಿಗೇಶಿ

ಐಲ್ ಆಫ್ ಮ್ಯಾನ್ (ಯುಕೆ), (ಪಿಟಿಐ): ಕಜಕಸ್ತಾನದ ರಿನತ್ ಜುಮಬಯೇವ್ ಅವರನ್ನು ಸೋಮವಾರ ಸೋಲಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಐದನೇ ಸುತ್ತಿನ ನಂತರ ಇತರ ಇಬ್ಬರು ಆಟಗಾರರ ಜೊತೆ ಜಂಟಿಯಾಗಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಯಶಸ್ಸಿನ ಓಟ ಮುಂದುವರಿಸಿರುವ ಇರಿಗೇಶಿ ಅವರು ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಮತ್ತು ಅಮೆರಿಕದ ಹಿಕಾರು ನಕಾಮುರಾ ಜೊತೆ ತಲಾ ನಾಲ್ಕು ಪಾಯಿಂಟ್ಸ್ ಹಂಚಿಕೊಂಡಿದ್ದಾರೆ. ಇಸಿಪೆಂಕೊ ಫಿಡೆ ಧ್ವಜದಡಿ ಆಡುತ್ತಿದ್ದಾರೆ.

ಇಸಿಪೆಂಕೊ ಅವರು ಮೊದಲ ಬೋರ್ಡ್‌ನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನಾ (3.5) ಸಂಗಡ ‘ಡ್ರಾ’ ಮಾಡಿಕೊಂಡರು. ನಕಾಮುರಾ ಎರಡನೇ ಬೋರ್ಡ್‌ನಲ್ಲಿ ಸರ್ಬಿಯಾದ ಅಲೆಕ್ಸಿ ಸರನಾ (3) ಅವರನ್ನು ಮಣಿಸಿದರು. ಇರಿಗೇಶಿ ಏಳನೇ ಬೋರ್ಡ್‌ನಲ್ಲಿ ಜುಮಬಯೇವ್ (3) ಅವರನ್ನು 69 ನಡೆಗಳಲ್ಲಿ ಸೋಲಿಸಿದರು.

ಓಪನ್ ವಿಭಾಗದಲ್ಲಿ ತುರುಸಿನ ಪೈಪೋಟಿ ಕಂಡುಬಂತು. ಭಾರತದ ವಿದಿತ್ ಗುಜರಾತಿ ಸೇರಿದಂತೆ 16 ಆಟಗಾರರು ತಲಾ 3.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಮೊದಲ 15 ಬೋರ್ಡ್‌ಗಳಲ್ಲಿ ಮೂರರಲ್ಲಿ ಮಾತ್ರ ನಿರ್ಣಾಯಕ ಫಲಿತಾಂಶಗಳು ಬಂದವು. ಉಳಿದ 12 ಪಂದ್ಯಗಳು ‘ಡ್ರಾ’ದಲ್ಲಿ ಅಂತ್ಯಕಂಡವು.

ಸತತ ಮೂರು ಪಂದ್ಯಗಳನ್ನು ಗೆದ್ದುಕೊಂಡಿದ್ದ ವಿದಿತ್ ಅವರ ಓಟಕ್ಕೆ ರಷ್ಯಾದ ಎವ್ಗೆನಿ ನಜೆರ್ ಅವರು ‘ಡ್ರಾ’ ಮೂಲಕ ಕಡಿವಾಣ ಹಾಕಿದರು.

ಗುಕೇಶ್‌ಗೆ ಹಿನ್ನಡೆ: ಭಾರತದ ಅಗ್ರಮಾನ್ಯ ಆಟಗಾರ ಡಿ.ಗುಕೇಶ್ ಅವರು ಮತ್ತೊಮ್ಮೆ ಹಿನ್ನಡೆ ಕಂಡು ಸ್ವದೇಶದ ಎಸ್.ಎಲ್. ನಾರಾಯಣನ್ ಎದುರು ಸೋಲನುಭವಿಸಿದರು. ಈ ಮೂಲಕ, ಮೊದಲ ಮೂರು ಸ್ಥಾನಗಳಲ್ಲಿ ಒಂದರಲ್ಲಿ ಕಾಣಿಸಿಕೊಳ್ಳುವ ಗುಕೇಶ್ ಆಸೆ ದೂರವಾಗಿದೆ.

ಅರ್ಜುನ್ ಇರಿಗೇಶಿ

ಇದು ಕೇರಳದ ಆಟಗಾರನ ಎದುರು ಗುಕೇಶ್‌ಗೆ ಎರಡು ವಾರಗಳಲ್ಲಿ ಎರಡನೇ ಸೋಲು. ಈ ಟೂರ್ನಿಗೆ ಮೊದಲು ಕತಾರ್ ಓಪನ್ ಟೂರ್ನಿಯಲ್ಲೂ ಗುಕೇಶ್, ಇದೇ ಆಟಗಾರನ ಎದುರು ಸೋಲನುಭವಿಸಿದ್ದರು.

ಪಿ.ಹರಿಕೃಷ್ಣ ಅವರು ಉಕ್ರೇನ್‌ನ ರಸ್ಲಾನ್ ಪೊಮೊಮರಿವ್ ಜೊತೆ ಡ್ರಾ ಮಾಡಿಕೊಂಡರೆ, ಭಾರತದ ಆಟಗಾರರ ನಡುವಿನ ಸೆಣಸಾಟದಲ್ಲಿ ಅರವಿಂದ ಚಿದಂಬರಮ್ ಮತ್ತು ನಿಹಾಲ್ ಸರಿನ್ ಸಹ ಪಾಯಿಂಟ್ ಹಂಚಿಕೊಂಡರು. ಇರಾನ್‌ನ ಪರ್ಹಾಮ್ ಮಘ್‌ಸೂಡ್ಲೂ ಇನ್ನೊಂದು ಪಂದ್ಯದಲ್ಲಿ ಭಾರತದ ರೌನಕ್ ಸಾಧ್ವಾನಿ ಅವರನ್ನು ಸೋಲಿಸಿದರು.

ಪ್ರಜ್ಞಾನಂದ, ಅಭಿಜಿತ್ ಗುಪ್ತಾ ಮತ್ತು ಮುರಳಿ ಕಾರ್ತಿಕೇಯನ್ ಅವರೂ ತಮ್ಮ ಎದುರಾಳಿಗಳ ಜೊತೆ ಪಾಯಿಂಟ್ ಹಂಚಿಕೊಂಡರು.

ವೈಶಾಲಿ ಮುನ್ನಡೆ

ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ ಯಶಸ್ಸಿನ ಓಟ ಮುಂದುವರಿಸಿ, ಎರಡನೇ ಬೋರ್ಡ್‌ನಲ್ಲಿ ತಮಗಿಂತ ಹೆಚ್ಚಿನ ರೇಟೆಡ್ ಆಟಗಾರ್ತಿ ಅನ್ನಾ ಮುಝಿಚುಕ್ ಎದುರು ಸುಲಭ ‘ಡ್ರಾ’ ಸಾಧಿಸಿದರು. ನಾಲ್ಕನೇ ಸುತ್ತಿನಲ್ಲಿ ಅವರು, ಅನ್ನಾ ಸೋದರಿ ಮರಿಯಾ ಅವರನ್ನು ಮಣಿಸಿದ್ದರು.

ವೈಶಾಲಿ ಸಂಭವನೀಯ ಐದರಲ್ಲಿ ನಾಲ್ಕು ಪಾಯಿಂಟ್ಸ್ ಕಲೆಹಾಕಿ ಅನ್ನಾ ಮತ್ತು ಅಗ್ರ ಶ್ರೇಯಾಂಕದ ರಷ್ಯಾ ಆಟಗಾರ್ತಿ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಅವರ ಜೊತೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಕಜಕಸ್ತಾನದ ಬಿಬಿಸಾರಾ ಅಸ್ಸುಬಯೇವಾ ಅವರು 4.5 ಅಂಕ ಸಂಗ್ರಹಿಸಿ ಏಕಾಂಗಿಯಾಗಿ ಮುನ್ನಡೆ ಸಾಧಿಸಿದ್ದಾರೆ. ಅವರಯ ಐದನೇ ಸುತ್ತಿನಲ್ಲಿ ಚೀನಾದ ತಾನ್ ಝೊಂಗ್‌ಯಿ ಅವರನ್ನು ಸೋಲಿಸಿದರು.

ಡಿ.ಹಾರಿಕಾ (2.5), ಸ್ವದೇಶದ ದಿವ್ಯಾ ದೇಶಮುಖ್ ಅವರನ್ನು ಸೋಲಿಸಿದರು. ಬಿ.ಸವಿತಾ ಶ್ರೀ ಮತ್ತು ವಂತಿಕಾ ಅಗರವಾಲ್ ಕ್ರಮವಾಗಿ ಮಾಯಿ ನರ್ವಾ (ಎಸ್ಟೋನಿಯಾ) ಮತ್ತು ಅಲೆಕ್ಸಾಂಡ್ರಾ ಕೊಸ್ಟೆನಿಯುಕ್ (ಸ್ವಿಜರ್ಲೆಂಡ್) ಜೊತೆ ಡ್ರಾ ಮಾಡಿಕೊಂಡರು.

ಕಣದಲ್ಲಿರುವ ಭಾರತದ ಆರನೇ ಆಟಗಾರ್ತಿ ತಾನಿಯಾ ಸಚ್‌ದೇವ್, ಪೋಲೆಂಡ್‌ನ ಒಲಿವಿಯಾ ಕಿಯೊಲ್ಬಸಾ ಮೇಲೆ ಜಯಗಳಿಸಿದರು.

ಬಿಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬಿಎಫ್‌ಸಿ ಕ್ಲಾರೆನ್ಸ್ ಫರ್ನಾಂಡಿಸ್, ಸೌರ್ವ ಗೋಪಾಲಕೃಷ್ಣನ್ ತಲಾ ಒಂದು ಗೋಲು ಗಳಿಸಿದರು. ಸ್ಟೂಡೆಂಟ್ಸ್ ಪರ ಪ್ರತೀಕ್ ಸ್ವಾಮಿ ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ತಂಡವು 1–1ರಿಂದ ಇಂಡಿಪೆಂಡೆಂಟ್ಸ್ ಎಫ್‌ಸಿ ಜತೆ ಡ್ರಾ ಸಾಧಿಸಿತು.

ಐಎಸ್‌ಎಲ್: ಬಿಎಫ್‌ಸಿಗೆ ಇಂದು ಒಡಿಶಾ ಸವಾಲು

ಭುವನೇಶ್ವರ: ಬೆಂಗಳೂರು ಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದ್ದು, ಗೆಲುವಿನ ವಿಶ್ವಾಸದಲ್ಲಿದ್ದಾರೆ.

ತವರು ಅಂಗಳದಲ್ಲಿ ಕಳೆದ ವಾರ ನಡೆದಿದ್ದ ಹಣಾಹಣಿಯಲ್ಲಿ ಎಫ್‌ಸಿ ಗೋವಾ ಜತೆ ಗೋಲುರಹಿತ ಡ್ರಾ ಮಾಡಿಕೊಂಡಿದ್ದ ಬಿಎಫ್‌ಸಿ ತಂಡ, ಕಳಿಂಗ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಪೂರ್ಣ ಮೂರು ಪಾಯಿಂಟ್ಸ್ ಕಲೆಹಾಕಲು ಪ್ರಯತ್ನಿಸಲಿದೆ. ಒಡಿಶಾ ತಂಡ ತನ್ನ ಹಿಂದಿನ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಕೈಯಲ್ಲಿ 1–2 ರಿಂದ ಸೋತಿತ್ತು.

ನಾಲ್ಕು ಪಂದ್ಯಗಳನ್ನು ಆಡಿರುವ ಸುನಿಲ್ ಚೆಟ್ರಿ ಬಳಗ ನಾಲ್ಕು ಪಾಯಿಂಟ್ಸ್‌ಗಳೊಂದಿಗೆ 10ನೇ ಸ್ಥಾನದಲ್ಲಿದೆ. ತಲಾ ಒಂದು ಗೆಲುವು ಮತ್ತು ಡ್ರಾ ಸಾಧಿಸಿರುವ ಬೆಂಗಳೂರಿನ ತಂಡ, ಎರಡು ಪಂದ್ಯಗಳನ್ನು ಸೋತಿದೆ. ಒಡಿಶಾ ಎಫ್‌ಸಿ ಕೂಡಾ ಇಷ್ಟೇ ಪಾಯಿಂಟ್ಸ್ ಕಲೆಹಾಕಿದೆ. ಆದರೆ ಉತ್ತಮ ಗೋಲು ವ್ಯತ್ಯಾಸದಲ್ಲಿ ಎಂಟನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ರಾತ್ರಿ 8, ನೇರ ಪ್ರಸಾರ: ಸ್ಪೋರ್ಟ್ಸ್ 18 ನೆಟ್‌ವರ್ಕ್, ಜಿಯೊ ಸಿನಿಮಾ

ಮಿಂಚಿದ ಫಜಲ್‌ಹಕ್, ಅಜ್ಮತ್‌ಉಲ್ಲಾ • ಪಾಯಿಂಟ್ ಪಟ್ಟಿಯಲ್ಲಿ 5ನೇ ಸ್ಥಾನಕ್ಕೆ ಏರಿಕೆ • ಶ್ರೀಲಂಕಾಕ್ಕೆ ಆಘಾತ

ಅಫ್ಗನ್‌ಗೆ ಮತ್ತೊಂದು ಅಚ್ಚರಿ ಜಯ

ಪುಣೆ (ಪಿಟಿಐ): ಅಫ್ಗಾನಿಸ್ತಾನ ತಂಡದವರು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮತ್ತೊಂದು ಅಚ್ಚರಿಯ ಫಲಿತಾಂಶ ನೀಡಿ ಅಭಿಮಾನಿಗಳ ಮನಗೆದ್ದರು.

ಪುಣೆಯ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಸೋಮವಾರ ಆಲ್‌ರೌಂಡ್ ಆಟವಾಡಿದ ಅಫ್ಗನ್ ತಂಡ, ಏಳು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೇರಿತು.

ಹಷ್ಮತ್‌ಉಲ್ಲಾ ಶಾಹಿದಿ ಬಳಗವು ಟೂರ್ನಿಯಲ್ಲಿ ಮೂರನೇ ಗೆಲುವಿನೊಂದಿಗೆ ಸೆಮಿಫೈನಲ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಕೊಂಡಿದೆ. ನಾಲ್ಕನೇ ಸೋಲು ಅನುಭವಿಸಿದ 1996ರ ಚಾಂಪಿಯನ್ ಲಂಕಾ ತಂಡದ ಸೆಮಿ ಸಾಧ್ಯತೆ ಕ್ಷೀಣಿಸಿದೆ.

ಮೊದಲು ಬ್ಯಾಟ್ ಮಾಡಿದ ಎದುರಾಳಿಗಳನ್ನು 241 ರನ್‌ಗಳಿಗೆ ನಿಯಂತ್ರಿಸಿದ ಅಫ್ಗನ್, 45.2 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ರಹಮತ್ ಶಾ (62; 74 ಎ., 7 ಬೌಂ), ಹಷ್ಮತ್‌ಉಲ್ಲಾ (ಔಟಾಗದೆ 58; 74 ಎ.) ಮತ್ತು ಅಜ್ಮತ್‌ಉಲ್ಲಾ ಒಮರ್‌ಝೈ (ಔಟಾಗದೆ 73; 63 ಎ.) ಅವರು ಗೆಲುವಿನ ಕಾವ್ಯ ರಚಿಸಿದರು.

ಅರ್ಧಶತಕ ಗಳಿಸಿದ ಸಂಭ್ರಮದಲ್ಲಿ ಅಜ್ಮತ್‌ಉಲ್ಲಾ ಒಮರ್‌ಝೈ –ಪಿಟಿಐ ಚಿತ್ರ

ಈ ಹಿಂದೆ ಹಾಲಿ ಚಾಂಪಿಯನ್ ಇಂಗ್ಲೆಂಡ್ ಮತ್ತು ನೆರೆಯ ಪಾಕಿಸ್ತಾನ ತಂಡಗಳಿಗೆ ಆಘಾತ ನೀಡಿದ್ದ ಅಫ್ಗನ್ ತಂಡ, ಟೂರ್ನಿಯನ್ನು ಈಗಾಗಲೇ ಸ್ಮರಣೀಯವನ್ನಾಗಿಸಿಕೊಂಡಿದೆ.

ಸಾಧಾರಣ ಗುರಿ ಬೆನ್ನಟ್ಟಿದ ಅಫ್ಗನ್, ಖಾತೆ ತೆರೆಯುವ ಮುನ್ನ ರಹ್ಮಾನುಲ್ಲಾ ಗುರ್ಬಾಜ್ (0) ಅವರನ್ನು ಕಳೆದುಕೊಂಡಿತು. ಆದರೆ ಇಬ್ರಾಹಿಂ ಜದ್ರಾನ್ (39) ಮತ್ತು ರಹಮತ್ ಶಾ ಅವರು ಎರಡನೇ ವಿಕೆಟ್‌ಗೆ 73 ರನ್ ಸೇರಿಸಿ, ಲಂಕಾ ಬೌಲರ್‌ಗಳು ಮೇಲುಗೈ ಸಾಧಿಸದಂತೆ ನೋಡಿಕೊಂಡರು.

ಇವರಿಬ್ಬರು ಔಟಾದ ಬಳಿಕ ಜತೆಯಾದ ಹಷ್ಮತ್‌ಉಲ್ಲಾ ಮತ್ತು ಒಮರ್‌ಝೈ ಮುರಿಯದ ನಾಲ್ಕನೇ ವಿಕೆಟ್‌ಗೆ 108 ಎಸೆತಗಳಲ್ಲಿ 111 ರನ್ ಸೇರಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು. ಪರಿಸ್ಥಿತಿಗೆ ತಕ್ಕಂತೆ ಆಡಿದ ಇವರು ಯಾವುದೇ ಒತ್ತಡಕ್ಕೆ ಒಳಗಾಗದೆ ಇನಿಂಗ್ಸ್ ಕಟ್ಟಿದರು. ಹಷ್ಮತ್ ತಾಳ್ಮೆಯ ಆಟದ ಮೊರೆಹೋದರೆ, ಒಮರ್‌ಝೈ ರನ್‌ರೇಟ್ ತಗ್ಗದಂತೆ ನೋಡಿಕೊಂಡರು. ಆರು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳನ್ನು ಹೊಡೆದರು.

ಫಜಲ್‌ಹಕ್ ಪರಿಣಾಮಕಾರಿ ದಾಳಿ: ಇದಕ್ಕೂ ಮುನ್ನ ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡ ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಕಳುಹಿಸಿತು. ವೇಗಿ ಫಜಲ್‌ಹಕ್ ಫರೂಕಿ (34ಕ್ಕೆ 4) ಮತ್ತು ಮುಜೀಬ್ ಉರ್ ರೆಹಮಾನ್ (38ಕ್ಕೆ 2) ಅವರು ಪರಿಣಾಮಕಾರಿ ದಾಳಿ ನಡೆಸಿ ಲಂಕಾ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದರು. 100ನೇ ಏಕದಿನ ಪಂದ್ಯವನ್ನಾಡಿದ ರಶೀದ್ ಖಾನ್ 50ಕ್ಕೆ 1 ವಿಕೆಟ್ ಪಡೆದರು.

ದಿಮುತ್ ಕರುಣರತ್ನೆ (15) ಅವರ ವಿಕೆಟ್ ಪಡೆದ ಫರೂಕಿ, ಅಫ್ಗನ್‌ಗೆ ಮೊದಲ ಯಶಸ್ಸು ತಂದಿತ್ತರು. ಇನ್ನೊಬ್ಬ ಆರಂಭಿಕ ಬ್ಯಾಟರ್ ಪಥುಮ್ ನಿಸಾಂಕ (46; 60 ಎ.) ಮತ್ತು ನಾಯಕ ಕುಶಾಲ್ ಮೆಂಡಿಸ್ (39; 50 ಎ.) ಎರಡನೇ ವಿಕೆಟ್‌ಗೆ 62 ರನ್ ಸೇರಿಸಿದರು. ಉತ್ತಮವಾಗಿ ಆಡುತ್ತಿದ್ದ ನಿಸಾಂಕ ವಿಕೆಟ್ ಪಡೆದ ಒಮರ್‌ಝೈ ಈ ಜತೆಯಾಟ ಮುರಿದರು.

ಅಫ್ಗನ್ ಬೌಲರ್‌ಗಳು ಬಿಗುವಾದ ದಾಳಿ ನಡೆಸಿದ್ದರಿಂದ ಲಂಕಾ ತಂಡದ ರನ್‌ರೇಟ್ ಐದರ ಆಸುಪಾಸಿನಲ್ಲೇ ಇತ್ತು. ಕುಶಾಲ್ ಮೆಂಡಿಸ್ (39; 50 ಎ.) ಮತ್ತು ಸದೀರ ಸಮರವಿಕ್ರಮ (36; 40 ಎ.) ಮೂರನೇ ವಿಕೆಟ್‌ಗೆ 50 ರನ್ ಸೇರಿಸಿದರು. ಆದರೆ ಐದು ರನ್‌ಗಳ ಅಂತರದಲ್ಲಿ ಇಬ್ಬರನ್ನೂ ಔಟ್ ಮಾಡಿದ ಮುಜೀಬ್, ಲಂಕಾ ತಂಡಕ್ಕೆ ಬಲವಾದ ಪೆಟ್ಟುಕೊಟ್ಟರು. 30ನೇ ಓವರ್‌ನಲ್ಲಿ ಸದೀರ ಔಟಾಗುವಾಗ ಸ್ಕೋರ್ 139 ಆಗಿತ್ತು. ಆ ಬಳಿಕ ನಿಯಮಿತವಾಗಿ ವಿಕೆಟ್‌ಗಳು ಬಿದ್ದವು.

ಏಂಜೆಲೊ ಮ್ಯಾಥ್ಯೂಸ್ ಮತ್ತು ಮಹೀಶ ತೀಕ್ಷಣ ಅವರು 8ನೇ ವಿಕೆಟ್‌ಗೆ 45 ರನ್ ಸೇರಿಸಿದ್ದರಿಂದ ತಂಡದ ಮೊತ್ತ 200ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 49.3 ಓವರ್‌ಗಳಲ್ಲಿ 241 (ಪಥುಮ್ ನಿಸಾಂಕ 46, ಕುಶಾಲ್ ಮೆಂಡಿಸ್ 39, ಸದೀರ ಸಮರವಿಕ್ರಮ 36, ಚರಿತ್ ಅಸಲಂಕಾ 22, ಏಂಜೆಲೊ ಮ್ಯಾಥ್ಯೂಸ್ 23, ಮಹೀಶ ತೀಕ್ಷಣ 29, ಮುಜೀಬ್ ಉರ್ ರೆಹಮಾನ್ 38ಕ್ಕೆ 2, ಫಜಲ್‌ಹಕ್ ಫರೂಕಿ 34ಕ್ಕೆ 4, ಅಜ್ಮತ್‌ಉಲ್ಲಾ ಒಮರ್‌ಝೈ 37ಕ್ಕೆ 1, ರಶೀದ್ ಖಾನ್ 50ಕ್ಕೆ 1)
ಅಫ್ಗಾನಿಸ್ತಾನ 45.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 242 (ಇಬ್ರಾಹಿಂ ಜದ್ರಾನ್ 39, ರಹಮತ್ ಶಾ 62, ಹಷ್ಮತ್‌ಉಲ್ಲಾ ಶಾಹಿದಿ ಔಟಾಗದೆ 58, ಅಜ್ಮತ್‌ಉಲ್ಲಾ ಒಮರ್‌ಝೈ ಔಟಾಗದೆ 73, ದಿಲ್ಶಾನ್ ಮಧುಶಂಕಾ 48ಕ್ಕೆ 2, ಕಸುನ್ ರಜಿತ 48ಕ್ಕೆ 1)
ಫಲಿತಾಂಶ: ಅಫ್ಗಾನಿಸ್ತಾನಕ್ಕೆ 7 ವಿಕೆಟ್ ಗೆಲುವು

ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಅಫ್ಗಾನಿಸ್ತಾನ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ						
ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	6	6	0	0	12	1.405
ದಕ್ಷಿಣ ಆಫ್ರಿಕಾ	6	5	1	0	10	2.032
ನ್ಯೂಜಿಲೆಂಡ್	6	4	2	0	8	1.232
ಆಸ್ಟ್ರೇಲಿಯಾ	6	4	2	0	8	0.970
ಅಫ್ಗಾನಿಸ್ತಾನ	6	3	3	0	6	-0.718
ಶ್ರೀಲಂಕಾ	6	2	4	0	4	-0.275
ಪಾಕಿಸ್ತಾನ	6	2	4	0	4	-0.387
ನೆದರ್ಲೆಂಡ್ಸ್	6	2	4	0	4	-1.277
ಬಾಂಗ್ಲಾದೇಶ	6	1	5	0	2	-1.338
ಇಂಗ್ಲೆಂಡ್	6	1	5	0	2	-1.652

ದಕ್ಷಿಣ ಆಫ್ರಿಕಾ ಮಧ್ಯಮ ಕ್ರಮಾಂಕದ ಪ್ರದರ್ಶನ: ಗ್ರೇಮ್ ಸ್ಮಿತ್ ಶ್ಲಾಘನೆ

ಮುಂಬೈ (ಪಿಟಿಐ): ಎದುರಾಳಿ ತಂಡವನ್ನು ಕಂಗೆಡಿಸಬಲ್ಲ ಪ್ರಬಲ ಮಧ್ಯಮ ಕ್ರಮಾಂಕವನ್ನು ಹೊಂದಿರುವುದು ದಕ್ಷಿಣ ಆಫ್ರಿಕಾ ತಂಡದ ಯಶಸ್ಸಿಗೆ ಕಾರಣ ಎಂದು ಆ ತಂಡದ ಮಾಜಿ ನಾಯಕ ಗ್ರೇಮ್ ಸ್ಮಿತ್ ಅಭಿಪ್ರಾಯಪಟ್ಟಿದ್ದಾರೆ. 'ನಾಯಕ ತೆಂಬಾ ಬವುಮಾ ಅವರೂ ತಮ್ಮ ಆಟದ ಮಟ್ಟ ಎತ್ತರಿಸಿ, ತಂಡಕ್ಕೆ ಇನ್ನಷ್ಟು ಬಲ ತುಂಬಬೇಕು' ಎಂದೂ ಹೇಳಿದ್ದಾರೆ.

ತಂಡ ಈ ರೀತಿ ನಿರ್ದಯದ ಆಟವಾಡುತ್ತದೆ ಎಂದು ನಿರೀಕ್ಷಿಸಿರಲಿಲ್ಲ ಎಂದು ಒಪ್ಪಿಕೊಂಡ ಸ್ಮಿತ್, ಈಗಿನ ಸ್ಥಿರ ಮತ್ತು ಪ್ರಾಬಲ್ಯಪೂರ್ಣ ಆಟದಿಂದ ದಕ್ಷಿಣ ಆಫ್ರಿಕಾವು ಪ್ರಶಸ್ತಿಗೆ ನೆಚ್ಚಿನ ತಂಡಗಳಲ್ಲಿ ಒಂದಾಗಿದೆ ಎಂದು ಸೋಮವಾರ ಹೇಳಿದರು.

'ದಕ್ಷಿಣ ಆಫ್ರಿಕಾವು ಬಲಿಷ್ಠ ಮಧ್ಯಮ ಕ್ರಮಾಂಕ ಹೊಂದಿದೆ. ಇಂಥ ಕ್ರಮಾಂಕವನ್ನು ತಂಡ ಹಿಂದೆಂದೂ ಹೊಂದಿರಲಿಲ್ಲ. ನಂ. 4, 5 ಮತ್ತು ಆರನೇ ಸ್ಥಾನದಲ್ಲಿ (ಏಡನ್) ಮರ್ಕರಂ, (ಹೆನ್ರಿಚ್) ಕ್ಲಾಸೆನ್ ಮತ್ತು (ಡೇವಿಡ್) ಮಿಲ್ಲರ್ ಇದ್ದಾರೆ. ಯಾವುದೇ ದಾಳಿಯನ್ನು ಪುಡಿಗಟ್ಟುವ ಸಾಮರ್ಥ್ಯವನ್ನು ಅವರು ಹೊಂದಿದ್ದಾರೆ. ಸ್ಪಿನ್ ಕೂಡ ಆಡುವುದರಿಂದ ತಂಡಕ್ಕೆ ದೊಡ್ಡ ಅನುಕೂಲ' ಎಂದು ಸ್ಮಿತ್ ವಿಶ್ಲೇಷಿಸಿದರು.

'ಬವುಮಾ ಸಾಕಷ್ಟು ದುಡಿದಿದ್ದಾರೆ. ಆಟದಲ್ಲಿ ಏರಿಳಿತ ಕಂಡಿದ್ದಾರೆ. ತಂಡದಲ್ಲಿ ಈಗ ಸ್ಫೂರ್ತಿ ನೆಲೆಸಿದೆ. ತಂಡ ಈ ವಾತಾವರಣ ಕಾಣಲು ಅವರ ಮತ್ತು ರಾಬ್ ವಾಲ್ಟರ್ (ಕೋಚ್) ಅವರ ಶ್ರಮವೂ ಇದೆ' ಎಂದು ತಿಳಿಸಿದರು.

ಹಿತಾಸಕ್ತಿ ಸಂಘರ್ಷ: ಪಾಕ್ ತಂಡದ ಆಯ್ಕೆ ಸಮಿತಿ ಅಧ್ಯಕ್ಷ ಇಂಜಮಾಮ್ ರಾಜೀನಾಮೆ

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ರಾಷ್ಟ್ರೀಯ ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಇಂಜಮಾಮ್ ಉಲ್ ಹಕ್ ಸೋಮವಾರ ರಾಜೀನಾಮೆ ನೀಡಿದ್ದಾರೆ. ಹಿತಾಸಕ್ತಿ ಸಂಘರ್ಷ ಆರೋಪ ಎದುರಿಸುತ್ತಿರುವ ಕೆಲವು ರಾಷ್ಟ್ರೀಯ ತಂಡದ ಆಟಗಾರರನ್ನು ನಿರ್ವಹಿಸುವ ಕಂಪನಿ ಜತೆ ಅವರ ಸಖ್ಯದ ಕುರಿತು ಪಾಕ್ ಕ್ರಿಕೆಟ್ ಮಂಡಳಿ (ಪಿಸಿಬಿ) ತನಿಖೆಗೆ ಸೂಚಿಸಿರುವುದರ ಬೆನ್ನಲ್ಲೇ ಇಂಜಮಾಮ್ ಈ ನಿರ್ಧಾರ ಕೈಗೊಂಡಿದ್ದಾರೆ.

ಯಾಝೂ ಇಂಟರ್‌ನ್ಯಾಷನಲ್ ಹೆಸರಿನ ಕಂಪನಿಯ ಜೊತೆ ಇಂಜಮಾಮ್ ಹೊಂದಿರುವ ಪಾತ್ರದ ಬಗ್ಗೆ ತನಿಖೆ ನಡೆಸಲು ಪಿಸಿಬಿ ಐವರು ಸದಸ್ಯರ ಸಮಿತಿ ರಚಿಸಿದೆ. ನಾಯಕ ಬಾಬರ್ ಆಜಂ, ವೇಗಿ ಶಹೀನ್ ಶಾ ಅಫ್ರಿದಿ ಮತ್ತು ವಿಕೆಟ್ ಕೀಪರ್ ಮೊಹಮ್ಮದ್ ರಿಜ್ವಾನ್ ಅವರನ್ನು ನಿರ್ವಹಿಸುವ ಈ ಕಂಪನಿಯ ಏಜಂಟ್ ಇಂಜಮಾಮ್ ಅವರಿಗೂ ಏಜಂಟ್ ಆಗಿದ್ದಾರೆ.

ವಿಶ್ವಕಪ್ ನಡೆಯುತ್ತಿರುವ ಮಧ್ಯದಲ್ಲೇ ಇಂಜಮಾಮ್ ರಾಜೀನಾಮೆ ಸಲ್ಲಿಸಬೇಕಾಗಿ ಬಂದಿದೆ.

ಏಜಂಟ್ ಮತ್ತು ಪಾಲುದಾರ ತಲ್ಹಾ ರೆಹಮಾನಿ ಅವರೊಂದಿಗಿನ ಸಂಬಂಧದಿಂದ, ಆಯ್ಕೆಗಾರನಾಗಿ ತಾವು ಕೈಗೊಂಡಿರುವ ಯಾವುದೇ ನಿರ್ಧಾರದಲ್ಲಿ ರಾಜಿಯಾಗಲಿ, ಪರಿಣಾಮವಾಗಲಿ ಆಗಿಲ್ಲ ಎಂದು ಇಂಜಮಾಮ್ ಸಮರ್ಥಿಸಿಕೊಂಡಿದ್ದಾರೆ.

ಆರೋಪ ಅಲ್ಲಗೆಳೆದ ಬ್ರಾಡ್‌ಬರ್ನ್

ಕೋಲ್ಕತ್ತ (ಎಎಫ್‌ಪಿ): ತಂಡದ ಆಟಗಾರರಿಗೆ ಐದು ತಿಂಗಳಿಂದ ವೇತನ ಪಾವತಿ ಮಾಡಿಲ್ಲ ಎಂಬ ಆರೋಪಗಳನ್ನು ಪಾಕಿಸ್ತಾನ ತಂಡದ ಕೋಚ್ ಗ್ರಾಂಟ್ ಬ್ರಾಡ್‌ಬರ್ನ್ ಅವರು ಸೋಮವಾರ ತಳ್ಳಿಹಾಕಿದ್ದಾರೆ.

ಆಟಗಾರರಿಗೆ ವೇತನ ಪಾವತಿ ವಿಷಯದಲ್ಲಿ ವಾದ– ವಿವಾದ ಮತ್ತು ಕೇಂದ್ರೀಯ ಗುತ್ತಿಗೆ ಒಪ್ಪಂದದಲ್ಲಿ ವಿಳಂಬ ವಿಷಯ ಗಳು ತಂಡದ ವಿಶ್ವಕಪ್ ಅಭಿಯಾನದ ವೇಳೆ ಚರ್ಚೆಯಾಗುತ್ತಿದೆ.

ತಮಗೆ ವೇತನ ಪಾವತಿಯಾಗಿಲ್ಲ ಎಂದು ಪಾಕಿಸ್ತಾನ ತಂಡದ ಮೂವರು ಆಟಗಾರರು ಎಎಫ್‌ಪಿಗೆ ಖಚಿತಪಡಿಸಿದ್ದಾರೆ. 'ತಂಡದ ಸುತ್ತ ಕೇಳಿಬರುತ್ತಿರುವ ಸದ್ದಿಗಿಂತ, ಪಾಕಿಸ್ತಾನ ತಂಡಕ್ಕೆ ಆಡುವುದು ಮತ್ತು ತಂಡದೊಳಗೆ ಕೆಲಸ ಮಾಡುವುದು ದೊಡ್ಡ ಅವಕಾಶ ಎಂದು ಎಲ್ಲರೂ ತಿಳಿದುಕೊಳ್ಳಬೇಕು' ಎಂದು ನ್ಯೂಜಿಲೆಂಡ್‌ನ ಮಾಜಿ ಆಲ್‌ರೌಂಡ್ ಆಟಗಾರ ಬ್ರಾಡ್‌ಬರ್ನ್ ಹೇಳಿದರು.

ಕೊಹ್ಲಿ ಹುಟ್ಟುಹಬ್ಬ: 70 ಸಾವಿರ ಮುಖವಾಡ ವಿತರಣೆ

ಕೋಲ್ಕತ್ತ (ಪಿಟಿಐ): ವಿರಾಟ್ ಕೊಹ್ಲಿ ಅವರು ನ.5 ರಂದು 35ನೇ ಹುಟ್ಟುಹಬ್ಬ ಆಚರಿಸಲಿದ್ದು, ಭಾರತ ತಂಡ ಅದೇ ದಿನ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಹಣಾಹಣಿ ನಡೆಸಲಿದೆ.

ಕೊಹ್ಲಿ ಹುಟ್ಟುಹಬ್ಬವನ್ನು ಸ್ಮರಣೀಯವಾಗಿಸಲು ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಭರ್ಜರಿ ಸಿದ್ಧತೆ ನಡೆಸಿದೆ. ಪಂದ್ಯ ವೀಕ್ಷಿಸಲು ಬರುವ 70 ಸಾವಿರ ಪ್ರೇಕ್ಷಕರಿಗೆ ಕೊಹ್ಲಿ ಚಿತ್ರವಿರುವ ಮುಖವಾಡವನ್ನು ಉಚಿತವಾಗಿ ನೀಡಲು ನಿರ್ಧರಿಸಿದೆ. ಈ ಪಂದ್ಯದ ಎಲ್ಲ ಟಿಕೆಟ್‌ಗಳು ಮಾರಾಟವಾಗಿದ್ದು, ಕ್ರೀಡಾಂಗಣವು ತುಂಬಿ ತುಳುಕಲಿದೆ.

ಮುಖವಾಡ ವಿತರಣೆ ಜತೆಯಲ್ಲೇ, ಪಂದ್ಯಕ್ಕೂ ಮುನ್ನ ಕೇಕ್ ಕತ್ತರಿಸಲು ಮತ್ತು ಕೊಹ್ಲಿ ಅವರಿಗೆ ಸ್ಮರಣಿಕೆ ನೀಡಿ ಗೌರವಿಸುವ ಯೋಜನೆಯನ್ನೂ ಹಾಕಿಕೊಂಡಿದೆ.

'ಇದಕ್ಕೆ ಐಸಿಸಿಯಿಂದ ಒಪ್ಪಿಗೆ ದೊರೆಯುವ ವಿಶ್ವಾಸವಿದೆ. ವಿರಾಟ್ ಕೊಹ್ಲಿ ಅವರಿಗೆ ಹುಟ್ಟುಹಬ್ಬ ದಿನವನ್ನು ಸ್ಮರಣೀಯವಾಗಿಸುವುದು ನಮ್ಮ ಬಯಕೆ' ಎಂದು ಸಿಎಬಿ ಅಧ್ಯಕ್ಷ ಸ್ನೇಹಶಿಶ್ ಗಂಗೂಲಿ ಅವರು ಹೇಳಿದ್ದಾರೆ.

ಬಾಂಗ್ಲಾದೇಶ ವಿರುದ್ಧ ಪಂದ್ಯ ಇಂದು • ಆರರಲ್ಲಿ ನಾಲ್ಕು ಪಂದ್ಯಗಳನ್ನು ಸೋತಿರುವ ಬಾಬರ್ ಬಳಗ

ಸೋಲಿನ ಸರಪಳಿ ಕಡಿಯಲು ಪಾಕ್ ಯತ್ನ

ಕೋಲ್ಕತ್ತ (ಪಿಟಿಐ): ಸೆಮಿಫೈನಲ್ ರೇಸ್‌ನಿಂದ ಬಹುತೇಕ ಹೊರಬಿದ್ದಿರುವ ಪಾಕಿಸ್ತಾನ ತಂಡ, ಹಾಲಿ ವಿಶ್ವಕಪ್ ಟೂರ್ನಿಯಲ್ಲಿ ಸೋಲುಗಳ ಸರಣಿಯಿಂದ ಹೊರಬರಲು ತನ್ನೆಲ್ಲಾ ಪ್ರಯತ್ನ ನಡೆಸುತ್ತಿದೆ. ಪಾಕ್ ತಂಡ ಈಡನ್ ಗಾರ್ಡನ್‌ನಲ್ಲಿ ಮಂಗಳವಾರ ನಡೆಯುವ ಪಂದ್ಯದಲ್ಲಿ ಇನ್ನೊಂದು ಸಮಾನದುಃಖಿ ತಂಡ ಬಾಂಗ್ಲಾದೇಶವನ್ನು ಎದುರಿಸಲಿದೆ.

ಪಾಕ್ ತಂಡ ಆರು ಪಂದ್ಯಗಳನ್ನಾಡಿದ್ದು ಎರಡರಲ್ಲಿ ಮಾತ್ರ ಜಯಗಳಿಸಿದ್ದು ಕೇವಲ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದೆ. ಇನ್ನು ಹೆಚ್ಚೆಂದರೆ ಆ ತಂಡ ಉಳಿದ ಮೂರೂ ಪಂದ್ಯ ಗೆದ್ದರೆ ಗರಿಷ್ಠ 10 ಪಾಯಿಂಟ್ಸ್‌ವರೆಗೆ ತಲುಪಬಹುದು. ಇದರ ಜೊತೆಗೆ, ಇತರ ತಂಡಗಳ ಫಲಿತಾಂಶದಲ್ಲಿ ಏರುಪೇರುಗಳಾಗಿ ಪಾಕ್ ಉತ್ತಮ ರನ್‌ರೇಟ್‌ನೊಡನೆ ಸೆಮಿಫೈನಲ್ ತಲುಪಿದಲ್ಲಿ ಅದು ಪವಾಡ ಆಗಬಲ್ಲದಷ್ಟೇ.

ಬಾಂಗ್ಲಾದೇಶ ತಂಡದ ನಾಯಕ ಶಕಿಬ್ ಅಲ್ ಹಸನ್

ಕೊಲ್ಕತ್ತಾದ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ಪಾಕಿಸ್ತಾನ ತಂಡದ ಆಟಗಾರರು– ಪಿಟಿಐ ಚಿತ್ರ

ಈಗಿನ ಸನ್ನಿವೇಶದಲ್ಲಿ ಭಾರತ, ದಕ್ಷಿಣ ಆಫ್ರಿಕಾ ತಂಡಗಳ ಹಾದಿ ಸುಗಮವಾಗಿದ್ದು, ಫಾರ್ಮ್ ಪ್ರಕಾರ ಮೇಲ್ನೋಟಕ್ಕೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಕೂಡ ಸೆಮಿಫೈನಲ್ ತಲುಪುವ ನೆಚ್ಚಿನ ತಂಡಗಳಾಗಿ ಕಾಣುತ್ತಿವೆ.

ಬಾಂಗ್ಲಾದೇಶ ಎದುರು ಸೋಲು ಎದುರಾದರೆ ಪಾಕ್ ತಂಡದ ಸೆಮಿಫೈನಲ್ ಬಾಗಿಲು ಅಕ್ಷರಶಃ ಮುಚ್ಚಿದಂತೆ. ಹೀಗಾಗಿ ಗೆಲುವಿಗೆ ಆ ತಂಡ ತನ್ನೆಲ್ಲಾ ಶ್ರಮಹಾಕುವುದು ಖಚಿತ.

ಪಾಕ್ ತಂಡಕ್ಕೆ ಕೈಕೊಟ್ಟಿರುವುದು ಬ್ಯಾಟಿಂಗ್. ಕೆಲವು ಪಂದ್ಯಗಳಲ್ಲಿ ಅದರ ಬೌಲಿಂಗ್ ಪರಿಣಾಮಕಾರಿ ಆಗಿದೆ. ಈಡನ್ ಗಾರ್ಡನ್ ಪಿಚ್ ವೇಗಿಗಳಿಗೆ ನೆರವು ನೀಡುವ ನಿರೀಕ್ಷೆಯಿದ್ದು, ಶಹೀನ್ ಶಾ ಅಫ್ರೀದಿ, ಹ್ಯಾರಿಸ್ ರವೂಫ್ ಮತ್ತು ಹೊಸಬ ಮೊಹಮ್ಮದ್ ವಾಸಿಂ ಜೂನಿಯರ್ ಅವರಿಂದ ತಂಡ ಉತ್ತಮ ಪ್ರದರ್ಶನ ನಿರೀಕ್ಷಿಸಿದೆ.

ವೇಗದ ಬೌಲರ್ ಹಸನ್ ಅಲಿ ಬದಲು ಅವಕಾಶ ಪಡೆದ ವಾಸಿಂ ಜೂನಿಯರ್ ದಕ್ಷಿಣ ಆಫ್ರಿಕಾ ವಿರುದ್ಧ ಈ ಹಿಂದಿನ ಪಂದ್ಯದಲ್ಲಿ ಗಮನ ಸೆಳೆದಿದ್ದಾರೆ.

ಆದರೆ ಬ್ಯಾಟರ್‌ಗಳಿಂದ ಸಾಂಘಿಕ ಪ್ರದರ್ಶನ ಬರುತ್ತಿಲ್ಲ. ಹೆಚ್ಚಿನ ಪಂದ್ಯಗಳಲ್ಲಿ ಆ ತಂಡ ಪೂರ್ಣ 50 ಓವರುಗಳನ್ನು ಆಡಲೂ ವಿಫಲವಾಗಿದೆ. ನಾಯಕ ಬಾಬರ್ ಆಜಂ ಸ್ವತಃ ಉತ್ತಮ ಆರಂಭ ಪಡೆದರೂ, ಅವುಗಳನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುತ್ತಿಲ್ಲ. ಅವರು ಮೂರು ಅರ್ಧ ಶತಕ ಹೊಡೆದಿದ್ದಾರೆ.

ಇನ್ನೊಂದೆಡೆ, ಬಾಂಗ್ಲಾ ತಂಡದಲ್ಲಿ ಎಲ್ಲವೂ ಸರಿಯಿಲ್ಲ. ಆ ತಂಡದ ಬ್ಯಾಟರ್‌ಗಳು ದೊಡ್ಡ ಮೊತ್ತ ಗಳಿಸುತ್ತಿಲ್ಲ. ಕ್ರಿಕೆಟ್ ಶಿಶುಗಳಾದ ನೆದರ್ಲೆಂಡ್ಸ್ ವಿರುದ್ಧ ಪಂದ್ಯದಲ್ಲಿ ಅದರ ಅಗ್ರ ಆರು ಬ್ಯಾಟರ್‌ಗಳು ಎರಡಂಕಿ ಮೊತ್ತವನ್ನೂ ಗಳಿಸಲು ವಿಫಲರಾಗಿದ್ದರು. 230 ರನ್‌ಗಳ ಗುರಿ ಬೆಂಬತ್ತಿದ್ದ ಬಾಂಗ್ಲಾ ಹುಲಿಗಳು ಬೆಕ್ಕಿನಂತೆ ಆಗಿ 142 ರನ್‌ಗಳಿಗೆ ಉರುಳಿದ್ದರು. ಅದು ತಂಡಕ್ಕೆ ಸತತ ಐದನೇ ಸೋಲು ಆಗಿತ್ತು.

ಆರು ಪಂದ್ಯಗಳಿಂದ ಎರಡು ಪಾಯಿಂಟ್ಸ್ ಸಂಗ್ರಹಿಸಿರುವ ಶಕಿಬ್ ಅಲ್ ಹಸನ್ ಪಡೆ 10 ತಂಡಗಳ ಪಟ್ಟಿಯಲ್ಲಿ ಕೊನೆಯಿಂದ ಎರಡನೇ ಸ್ಥಾನದಲ್ಲಿದೆ.

ಮುಖಾಮುಖಿ	
ಒಟ್ಟು ಪಂದ್ಯಗಳು	38
ಪಾಕಿಸ್ತಾನ ಗೆಲುವು	33
ಬಾಂಗ್ಲಾದೇಶ ಗೆಲುವು	5

● ಕೊನೆಯ 10 ಪಂದ್ಯಗಳಲ್ಲಿ ಆರರಲ್ಲಿ ಪಾಕಿಸ್ತಾನ ತಂಡ ಜಯಗಳಿಸಿದರೆ, ನಾಲ್ಕು ಬಾರಿ ಬಾಂಗ್ಲಾದೇಶ ಜಯಗಳಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.00
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹಾಕಿ: ಚೀನಾ ಮಣಿಸಿದ ಭಾರತ

ರಾಂಚಿ (ಪಿಟಿಐ): ಭಾರತ ಮಹಿಳಾ ತಂಡದವರು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ 2–1 ಗೋಲುಗಳಿಂದ ಚೀನಾ ತಂಡವನ್ನು ಮಣಿಸಿದರು. ಈ ಮೂಲಕ ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದ ಸೆಮಿಫೈನಲ್‌ನಲ್ಲಿ ಎದುರಾಗಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡರು.

ಸೋಮವಾರ ನಡೆದ ಪಂದ್ಯದಲ್ಲಿ ಗೋಲು ಗಳಿಸಿದ ದೀಪಿಕಾ (15 ನೇ ನಿ.) ಮತ್ತು ಸಲೀಮಾ ಟೇಟೆ (26) ಅವರು ಗೆಲುವಿಗೆ ಕಾರಣರಾದರು. ಚೀನಾ ತಂಡದ ಗೋಲನ್ನು ಝೊಂಗ್ ಕಿಯಾಕಿ ತಂದಿತ್ತರು.

ಸೆಮಿಗೆ ಭಾರತ (ಜೋಹೊರ್ ಬಹ್ರು, ಮಲೇಷ್ಯಾ): ಅಮನ್‌ದೀಪ್ ಲಾಕ್ರಾ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ಜೂನಿಯರ್ ಪುರುಷರ ಹಾಕಿ ತಂಡ ಸೋಮವಾರ 6–2 ಗೋಲುಗಳಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಮಲೇಷ್ಯಾದಲ್ಲಿ ನಡೆಯುತ್ತಿರುವ ಸುಲ್ತಾನ್ ಆಫ್ ಜೋಹೊರ್ ಕಪ್ ಟೂರ್ನಿಯ ಸೆಮಿಫೈನಲ್ ತಲುಪಿತು.

ರಾಷ್ಟ್ರೀಯ ಕ್ರೀಡಾಕೂಟದ ಈಜು: ಲಿನೇಶಾಗೆ ಬೆಳ್ಳಿ

ಮಹಿಳಾ ರಿಲೇ ತಂಡ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮಹಿಳಾ 4X100 ಮೆಡ್ಲೆ ರಿಲೇ ತಂಡವು ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡಿತು.

ರಿಧಿಮಾ ವೀರೇಂದ್ರ ಕುಮಾರ್, ಎ.ಕೆ.ಲಿನೇಶಾ, ನೀನಾ ವೆಂಕಟೇಶ್ ಮತ್ತು ಧೀನಿಧಿ ದೇಸಿಂಗು ಅವರನ್ನೊಳಗೊಂಡ ರಾಜ್ಯ ತಂಡ 4 ನಿ. 25.82 ಸೆ.ಗಳಲ್ಲಿ ಗುರಿ ತಲುಪಿತು. ಬಂಗಾಳ (4 ನಿ. 27.73 ಸೆ.) ಮತ್ತು ಒಡಿಶಾ (4 ನಿ. 28.88 ಸೆ.) ತಂಡಗಳು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡವು.

ಇದೇ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಕರ್ನಾಟಕ ತಂಡ ಕಂಚು ಜಯಿಸಿತು. ಶ್ರೀಹರಿ ನಟರಾಜ್, ವಿದಿತ್ ಎಸ್.ಶಂಕರ್, ಕಾರ್ತಿಕೇಯನ್ ನಾಯರ್ ಮತ್ತು ಅನೀಶ್ ಎಸ್. ಗೌಡ ಅವರು 3 ನಿ. 47.43 ಸೆ.ಗಳಲ್ಲಿ ಕ್ರಮಿಸಿದರು. ಎಸ್‌ಎಸ್‌ಸಿಬಿ (3 ನಿ. 46.81 ಸೆ.) ತಂಡ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ಬೆಳ್ಳಿ ಪದಕ ತಮಿಳುನಾಡು ತಂಡದ ಪಾಲಾಯಿತು.

ಮಹಿಳೆಯರ 4X100 ಮೆಡ್ಲೆ ರಿಲೇ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕರ್ನಾಟಕ ತಂಡದ ರಿಧಿಮಾ, ಲಿನೇಶಾ, ನೀನಾ ಹಾಗೂ ಧೀನಿಧಿ

ಲಿನೇಶಾಗೆ ಬೆಳ್ಳಿ: ಮಹಿಳೆಯರ 200 ಮೀ. ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಲಿನೇಶಾ (2 ನಿ. 41.64 ಸೆ.) ಮತ್ತು ಎಸ್.ಲಕ್ಷ್ಯಾ (2 ನಿ. 43.40 ಸೆ.) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಂದುಕೊಟ್ಟರು. ಈ ವಿಭಾಗದ ಚಿನ್ನದ ಪದಕವನ್ನು ಕೇರಳದ ಹರ್ಷಿತಾ ಜಯರಾಮ್ (2 ನಿ. 40.62 ಸೆ.) ಅವರು ಕೂಟ ದಾಖಲೆಯೊಂದಿಗೆ ತಮ್ಮದಾಗಿಸಿಕೊಂಡರು.

ಮಹಿಳೆಯರ 800 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಶಿರಿನ್ (9 ನಿ. 29.08 ಸೆ.) ಅವರು ಕಂಚು ತಂದಿತ್ತರೆ, ಮೀನಾಕ್ಷಿ ಮೆನನ್ ನಾಲ್ಕನೇ ಸ್ಥಾನ ಪಡೆದರು.

ಲಾಂಗ್‌ಜಂಪ್: ಆರ್ಯಗೆ ಬೆಳ್ಳಿ

ಅಥ್ಲೆಟಿಕ್ಸ್‌ನ ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಕರ್ನಾಟಕದ ಎಸ್.ಆರ್ಯ ಅವರು 7.89 ಮೀ. ಸಾಧನೆಯೊಂದಿಗೆ ಬೆಳ್ಳಿ ಗೆದ್ದುಕೊಂಡರು. 8.15 ಮೀ. ಜಿಗಿದ ಕೇರಳದ ಮೊಹಮ್ಮದ್ ಅನೀಸ್ ಯಹ್ಯಾ ಅಗ್ರಸ್ಥಾನ ಪಡೆದರೆ, ಕಂಚಿನ ಪದಕ ತಮಿಳುನಾಡಿನ ಪಿ.ಡೇವಿಡ್ (7.76 ಮೀ.) ಅವರ ಪಾಲಾಯಿತು.

ಪುರುಷರ 1,500 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅನೀಶ್ ಎಸ್.ಗೌಡ ಪದಕ ಗೆಲ್ಲುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡು ನಾಲ್ಕನೇ ಸ್ಥಾನ ಪಡೆದರು.